ಬಳ್ಳಾರಿ ಜಿಲ್ಲೆಯ ದುರುಗಮುರಗಿಯರು : ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಸಮಾಜಶಾಸ್ತ್ರದಲ್ಲಿ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ

ಸಂಶೋಧಕ
ದೊಡ್ಡಮನಿ ಲೋಕರಾಜ.ಎ.ಕೆ

ಮಾರ್ಗದರ್ಶಕರು
ಡಾ.ಕೆ.ಎಂ.ಮೈತ್ರಿ
ಪ್ರವಾಚಕರು
ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೨

13

ಬಳ್ಳಾರಿ ಜಿಲ್ಲೆಯ ದುರುಗಮುರಗಿಯರು : ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಸಮಾಜಶಾಸ್ತ್ರದಲ್ಲಿ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ

ಸಂಶೋಧಕ
ದೊಡ್ಡಮನಿ ಲೋಕರಾಜ.ಎ.ಕೆ

ಮಾರ್ಗದರ್ಶಕರು
ಡಾ.ಕೆ.ಎಂ.ಮೈತ್ರಿ
ಪ್ರವಾಚಕರು
ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೨

ದೃಡೀಕರಣ ಪತ್ರ

'ಬಳ್ಳಾರಿ ಜಿಲ್ಲೆಯ ದುರುಗ ಮುರಗಿಯರು : ಒಂದು ಸಮಾಜಶಾಸ್ತ್ರೀಯ ಅಧ್ಯಯನ' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಶ್ರೀ ದೊಡ್ಡಮನಿ ಲೋಕರಾಜ ಎ.ಕೆ. ರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಈ ಸಂಪ್ರಬಂಧವನ್ನು ಅಥವಾ ಇದರ ಇತರೆ ಭಾಗಗಳನ್ನು ಯಾವುದೇ ಪದವಿಗೆ ಅವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

೨೦.೪.೦೯

ದಿನಾಂಕ : ೨೦.೪.೨೦೦೯

ಸ್ಥಳ : ವಿದ್ಯಾರಣ್ಯ

ಡಾ. ಕೆ.ಎಂ. ಮೈತ್ರಿ
ಪ್ರವಾಚಕರು ಮತ್ತು ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

'ಬಳ್ಳಾರಿ ಜಿಲ್ಲೆಯ ದುರುಗ ಮುರಗಿಯರು : ಒಂದು ಸಮಾಜಶಾಸ್ತ್ರೀಯ ಅಧ್ಯಯನ' ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ಸಮಾಜಶಾಸ್ತ್ರದಲ್ಲಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಯಲಕ್ಕೆ ಡಾ. ಕೆ.ಎಂ.ಮೈತ್ರಿ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಲಾಗಿದೆ. ಈ ಪ್ರೌಢ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ದೊಡ್ಡಮನಿ ಲೋಕರಾಜ. ಎ.ಕೆ.

ದಿನಾಂಕ : ೨೦-೪-೨೦೦೨

ಸ್ಥಳ : ವಿದ್ಯಾರಣ್ಯ

ದೊಡ್ಡಮನಿ ಲೋಕರಾಜ. ಎ.ಕೆ. ೨೦-೪-೨

ಎಂ.ಫಿಲ್. ಸಂಶೋಧನಾ ವಿದ್ಯಾರ್ಥಿ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಿ ಕೊಟ್ಟ ಮಾನ್ಯ ಕುಲಪತಿಗಳಾದ ಡಾ.ಎಚ್.ಜೆ. ಲಕ್ಕಪ್ಪಗೌಡರಿಗೆ, ಮಾನ್ಯ ಕುಲಸಚಿವರಾದ ಡಾ. ಕೆ.ವಿ. ನಾರಾಯಣ, ಅಧ್ಯಯನಾಂಗದ ನಿರ್ದೇಶಕರು ಹಾಗೂ ವಿಭಾಗದ ಮುಖ್ಯಸ್ಥರು ಆದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರಿಗೆ ತುಂಬು ಹೃದಯದ ಕೃತಜ್ಞತೆಗಳು ಅರ್ಪಿಸುವೆನು.

ನನಗೆ ದುರುಗ ಮುರಗಿ ಸಮುದಾಯದ ಬಗ್ಗೆ ಆಸಕ್ತಿ ಮೂಡಿಸಿ, ನನ್ನ ಎಳಸುತನದ ಬರಹವನ್ನು ತಿದ್ದಿ, ಹೀಗಲ್ಲಾ- ಹೀಗೆ ಎಂದು ಅಧ್ಯಯನ ಮಾಡಲು ಕಾರಣೀಭೂತರಾದ ಡಾ. ಕೆ.ಎಂ.ಮೈತ್ರಿ ಅವರಿಗೆ ನನ್ನ ಕೃತಜ್ಞತೆಗಳು.

ಎಂ.ಫಿಲ್. ಅಧ್ಯಯನಕ್ಕೆ ಶಕ್ತಿಯಾಗಿ ಬೆನ್ನುತಟ್ಟಿ ಕಳುಹಿಸಿದ ಪೂಜ್ಯ ನನ್ನ ತಂದೆ-ತಾಯಿಗಳಾದ ಶ್ರೀಮತಿ.ಬಸಮ್ಮ, ಶ್ರೀ ಜೆ. ಲಿಂಗಪ್ಪ ಬಣವಿಕಲ್ಲು ಅವರುಗಳಿಗೆ ಈ ಮೂಲಕ ಅನಂತ ನಮನ ಸಲ್ಲಿಸುವೆ.

ನನ್ನ ಅಧ್ಯಯನದಲ್ಲಿ ಪ್ರೀತಿಯಿಂದ ಮಾರ್ಗದರ್ಶನ ಮಾಡಿದ ಡಾ. ಕೇಶವನ್ ಪ್ರಸಾದ್, ಶ್ರೀ ಗಂಗಾಧರ ದೈವಜ್ಞ, ಶ್ರೀ ಎ.ಎಸ್. ಪ್ರಭಾಕರ್, ಶ್ರೀ ಚಲುವರಾಜು ಸಿಬ್ಬಂದಿ ಹಾಗೂ ವರ್ಗದವರಿಗೂ ನನ್ನ ಕೃತಜ್ಞತೆಗಳು.

ಅಧ್ಯಯನದ ಅವಧಿಯಲ್ಲಿ ವಿವಿಧ ರೀತಿಯಲ್ಲಿ ಸಹಕರಿಸಿದ ಅಧ್ಯಾಪಕರುಗಳಾದ ಪ್ರೊ. ಲಕ್ಷ್ಮಣ ತೆಲಗಾವಿ, ಡಾ. ವಿರುಪಾಕ್ಷ ಪೂಜಾರಹಳ್ಳಿ, ಡಾ. ರಹಮತ್ ತರೀಕೆರೆ, ಡಾ. ಸ.ಚಿ. ರಮೇಶ್ , ಡಾ. ಕೆ.. ರವೀಂದ್ರನಾಥ, ಪ್ರೊ ಎಸ್ .ಎಲ್ . ಹಿರೇಮಠ ಡಾ. ಮೇಟಿ ಶೇಷನ್, ಡಾ. ನುಷರತ್ ಫಾತೀಮ ಬೇಗಂ, ಸಿಂದ್ಯೆ ಜಗನ್ನಾಥ, ಹಾಗೂ ಶ್ರೀ.ಎಂ.ಟಿ. ಕಟ್ಟೀಮನಿ ಸಹಾಯಕ ಗ್ರಂಥಪಾಲಕರು ಗುಲ್ಬರ್ಗಾ ವಿ.ವಿ. ಅವರಿಗೆ ನನ್ನ ಕೃತಜ್ಞತೆಗಳು.

ನನ್ನ ಅಭ್ಯಾಸಕ್ಕೆ ಸದಾ ಪ್ರೋತ್ಸಾಹ ನೀಡುತ್ತಿರುವ ಶ್ರೀ ಬಿ. ವೀರಭದ್ರಪ್ಪ, ಡಾ. ಎಸ್ .ಕೋಟ್ರೇಶ್, ಶ್ರೀ ಬಿ. ಶ್ರೀನಿವಾಸ, ಶ್ರೀ ಡಿ.ವಿ. ನಯಾನೂರು, ಶ್ರೀ ಶೇಕ್ ಅಕ್ಬರ್ ಭಾಷಾ, ಶ್ರೀಎಸ್.ಕೆ. ಗೌಡರ್, ಶ್ರೀ ಯು.ನಾಗರಾಜ, ಶ್ರೀ ಚಿತ್ತರಂಜನ್, ಶ್ರೀ ಎಸ್.ಕೆ. ಬಸವರಾಜ , ಶ್ರೀ ಶಿವಕುಮಾರ ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಸರಕಾರಿ ಪದವಿ ಪೂರ್ವ ಕಾಲೇಜ್ ಚಿಕ್ಕಜೋಗಿಹಳ್ಳಿ ಯ ಪೂಜ್ಯ ಗುರುವೃಂದದವರಿಗೂ ನನ್ನ ಕೃತಜ್ಞತೆಗಳು. ಮುಖ್ಯವಾಗಿ ನಾನು ನೆನೆಯಬೇಕಾದ ಮಹಾನೀಯರುಗಳಾದ ಶ್ರೀ ಜಿ.ಜಿ. ಸಿದ್ದಪ್ಪ ಬಣವಿಕಲ್ಲು, ಶ್ರೀ ಜಿ.ಎಂ.ಲಿಂಗನಗೌಡ್ರು, ಶ್ರೀ ಚೆನ್ನನಗೌಡ್ರು ಎ.ಪಿ.ಎಂ.ಸಿ, ದಿವಂಗತ ಶ್ರೀ ಚಂದ್ರಮೌಳಿಸ್ವಾಮಿ, ಶ್ರೀ ಎಂ. ಶರಣಪ್ಪ, ಶ್ರೀ ಬಿ.ಎಚ್. ಜುನಾಂಗ ಮೂರ್ತಿ, ಶ್ರೀ ಜಿ.ಜಯಪ್ಪಗೌಡ್, ಶ್ರೀ. ಎ.ಎಂ. ಲೋಕವಿಜಯ, ಶ್ರೀ ಕೆ. ಜಯಪ್ಪ, ಶ್ರೀ ಎಚ್.ಎಂ. ವೀರಯ್ಯ, ಶ್ರೀ. ಎ. ಸಿದ್ದಪ್ಪ, ಶ್ರೀ ಕೊಟ್ರೇಶ್ ಶ್ರೀ ಎಂ. ಶಿವಣ್ಣ, ಸಾಲುಮನಿ ಶ್ರೀ.ಎಸ್.ದುರುಗೇಶ್, ಶ್ರೀ. ಎಸ್.ನಾಗರಾಜ, ಶ್ರೀ ಮಾರಣ್ಣ, ಶ್ರೀ.ಡಾ. ಕೆ.ಎಚ್.ಎಂ. ರುದ್ರೇಶ್, ಶ್ರೀ. ಭೀಮಪ್ಪ, ಶ್ರೀ. ಎಸ್. ಕೊಟ್ರೇಶ್, ಶ್ರೀ ಕಾವಲ್ಲಿ ಶಿವಪ್ಪ, ಶ್ರೀಮತಿ ಕೆ. ಮೀನಾಕ್ಷಿ, ಶ್ರೀ ಐ. ಅಯ್ಯಣ್ಣ, ಶ್ರೀ ನಾಗರಾಜ, ಶ್ರೀ ಶ್ರೀಪಾದರಾವ್, ಶ್ರೀ ಬಿ. ಮಾರಣ್ಣ ಶ್ರೀ ವಿ.ಸಿ. ಮಾರುತಿ, ಎ.ಪ್ರಕಾಶ್ ಇವರಿಗೆಲ್ಲ ನನ್ನ ಪ್ರೀತಿ ಪೂರ್ವಕ ಕೃತಜ್ಞತೆಗಳು.

ಅಧ್ಯಯನಕ್ಕೆ ಧನಸಹಾಯ ಮಾಡಿದ ಶ್ರೀಮತಿ ಭಾಗೀರಥಿ ಮರುಳ ಸಿದ್ದನಗೌಡ ಶಾಸಕರು ಕೊಟ್ಟೂರು, ಶ್ರೀಮತಿ ಟಿ. ಮೀನಾಕ್ಷಮ್ಮ, ಶ್ರೀ ಹನುಮಂತಪ್ಪ ಹಾಗೂ ಜಿ. ಶಿವ ಪ್ರಸಾದ್ ಗುಡೇಕೋಟೆ ಇವರಿಗೆ ನನ್ನ ಕೃತಜ್ಞತೆ ಸಲ್ಲಿಸುವೆ.

ನನ್ನ ವಿದ್ಯಾಭ್ಯಾಸದಿಂದ ಎಂ.ಫಿಲ್ ಅಧ್ಯಯನವರೆಗೆ ಸೂಕ್ತ ಸಲಹೆ ನೀಡಿದ ನನ್ನ ಸಂಬಂಧಿಕರಾದ ದಿವಂಗತ ಶ್ರೀ ಪೂವಾಲಿ ಹುರಳಿಹಾಳ್, ಶ್ರೀಮತಿ ಚಂದ್ರಮ್ಮ, ಓದ ದುರಗಪ್ಪ, ಶ್ರೀಮತಿ ವನಜಾಕ್ಷಿ, ಕುಮಾರಪ್ಪ, ಶ್ರೀ ಎಂ. ಬಸಪ್ಪ, ಶ್ರೀ ಎಂ.ಬಿ. ಸಿದ್ದಪ್ಪ ಕಂಚೋಬನಹಳ್ಳಿ, ಶ್ರೀಮತಿ ಭಾಗ್ಯಲಕ್ಷ್ಮಿ, ಎ.ಕೆ.ದುರುಗಪ್ಪ, ಶ್ರೀಮತಿ ವಿಶಾಲ, ಎಚ್. ಬಸವರಾಜ ಶ್ರೀಮತಿ ಶಂಕ್ರಮ್ಮ ರಾಮಪ್ಪ , ಶ್ರೀ ವೀರಣ್ಣ, ಶ್ರೀ. ತಿಪ್ಪೇರುದ್ರಪ್ಪ ಇವರಿಗೂ ನನ್ನ ಪ್ರೀತಿ ಪೂರ್ವಕ ಕೃತಜ್ಞತೆಗಳು.

ಸರ್ವರೀತಿಯಿಂದ ಈ ಪ್ರಬಂಧದ ಅಧ್ಯಯನಕ್ಕೆ ಪ್ರೋತ್ಸಾಹಿಸಿದ ಹಿರಿಯ ಸಹಪಾಠಿಗಳಿಗೆ, ಸ್ನೇಹಿತರು, ಸಹೋದರಿಯರಿಗೆ ಕೃತಜ್ಞತೆಗಳು. ನನ್ನ ಈ ಅಧ್ಯಯನದ ಸಮಯದಲ್ಲಿ ಸರ್ವರೀತಿಯಿಂದಲೂ ಸಹಾಯ ಮಾಡಿದ ಹಾಗು ಅಧ್ಯಯನದ ವಿಷಯ ಪುಟ ಪುಟದ ಅಕ್ಷರಗಳನ್ನು ತಿದ್ದಿ ಸಲಹೆ ನೀಡಿದ ಶ್ರೀ ಡಿ.ಪಿ. ತಿಪ್ಪೇಸ್ವಾಮಿ ಇವರಿಗೆ ವಂದನೆಗಳನ್ನು ಈ ಮೂಲಕ ತಿಳಿಸುತ್ತೇನೆ.


ಎಂ.ಫಿಲ್ ಅಧ್ಯಯನಕ್ಕೆ ಪೂರಕ ಗ್ರಂಥಗಳನ್ನು ಒದಗಿಸಿದ ಶ್ರೀ ರಾಮಣ್ಣ, ಶ್ರೀ ನಾಗರಾಜ ತಳವಾರ, ಶ್ರೀ ಪಂಚಾಕ್ಷರಿ ಇವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುವೆ.

ಅಧ್ಯಯನ ವಿಷಯದ ಕ್ಷೇತ್ರಕಾರ್ಯಕ್ಕೆ ಹೋದಾಗ ನನಗೆ ಮಾಹಿತಿಯನ್ನು ನೀಡಿರುವ ದುರುಗ ಮುರಗಿ ಸಮುದಾಯದ ಜನರ ಭಾಂದವ್ಯದವರಿಗೆಲ್ಲರಿಗೂ ಹಾಗೂ ಕುರಿಹಟ್ಟಿ ಗ್ರಾಮದ ಗಣ್ಯ ವ್ಯಕ್ತಿಗಳಿಗೆ, ನನ್ನ ಕೃತಜ್ಞತೆಗಳು.

ಈ ಪ್ರಬಂಧವನ್ನು ನನ್ನ ಒತ್ತಡಕ್ಕೆ ಮಣಿದು ಅಂದವಾಗಿ ಅಕ್ಷರ ಸಂಯೋಜಿಸಿ ಗಣಕಯಂತ್ರದ ಮೂಲಕ ಮುದ್ರಿಸಿ ಕೊಟ್ಟ ಶರಣ ಇವರಿಗೆ ತುಂಬ ಹೃದಯದ ಕೃತಜ್ಞತೆಗಳನ್ನು ಅರ್ಪಿಸುವೆ.

ದೊಡ್ಡಮನಿ ಲೋಕರಾಜ ಎ.ಕೆ.

ಬಳ್ಳಾರಿ ಜಿಲ್ಲೆಯ ದುರುಗ ಮುರಗಿಯರ ನೆಲೆಗಳು



ವಿವರ : ಕಂಸದಲ್ಲಿರುವ ಅಂಕಿಗಳು ಕುಟುಂಬಗಳಾಗಿವೆ

ಪರಿವಿಡಿ

ಅಧ್ಯಾಯ ೧ : ಪ್ರಸ್ತಾವನೆ [illegible]

೧. ಅಧ್ಯಯನದ ಉದ್ದೇಶ

೨. [illegible]

೩. [illegible]

೪. [illegible]

ಅಧ್ಯಾಯ ೨ : ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಆರ್ಥಿಕ ಸ್ಥಿತಿಗತಿಗಳು [illegible]

೧. ಸಾಮಾಜಿಕ ಜೀವನ

೨. ಶೈಕ್ಷಣಿಕ ಜೀವನ

೩. ಧಾರ್ಮಿಕ ಜೀವನ

೪. ಆರ್ಥಿಕ ಜೀವನ

ಅಧ್ಯಾಯ ೩ : ಆಚರಣೆಗಳು [illegible]

೧. [illegible] ಆಚರಣೆಗಳು

೨. [illegible] ಆಚರಣೆಗಳು

೩. [illegible]

ಅಧ್ಯಾಯ ೪ : ಭಾಷೆ, ಸಾಹಿತ್ಯ, [illegible] [illegible]

೧. ಭಾಷೆ

೨. [illegible] ಸಾಹಿತ್ಯ

೩. [illegible]

ಅಧ್ಯಾಯ ೫ : [illegible] [illegible]

೧. [illegible]

೨. [illegible]

೩. [illegible]

ಅಧ್ಯಾಯ ೬ : [illegible] [illegible]

[illegible] [illegible]

[illegible]

[illegible]

[illegible]

[illegible]

ಅಧ್ಯಾಯ ೧

ಪ್ರಸ್ತಾವನೆ

ಅ. ಅಧ್ಯಯನದ ಉದ್ದೇಶ

ಆ. ದುರುಗಮುರಗಿ ಸಮುದಾಯದ ಹಿನ್ನೆಲೆ

ಇ. ವಲಸೆ

ಈ. ದುರುಗಮುರಗಿ ಸಂಸ್ಕೃತಿ

ಪ್ರಸ್ತಾವನೆ

ಮಾನವ ಸಮಾಜದ ಚರಿತ್ರೆ ತುಂಬಾ ದೀರ್ಘವಾದುದು. ಒಂದು ಕಾಲದ ಅನಾಗರಿಕ ಮಾನವ ಸಮುದಾಯ ಬೆಳೆದು, ಆಧುನಿಕರಣಗೊಂಡಿದೆ, ನಾಗರೀಕತೆಯನ್ನು ಹೊಂದಿದೆ ಎಂದು ಹೇಳಬಹುದು. ಆದರೆ ಸೂಕ್ಷ್ಮವಾಗಿ ನೋಡಿದಾಗ ಈ ಮಾತು ಅರ್ಧ ಸತ್ಯವೆಂಬಂತೆ ಗೋಚರಿಸಲಾರಂಭಿಸುತ್ತದೆ. ಮಾನವರೆಲ್ಲಾ ಈ ದೇಶದಲ್ಲಿ ಗೆರೆ-ಕೊರೆದಂತೆ ಬದಲಾಗಿಲ್ಲ. ಜನ ಸಮುದಾಯಗಳು ಹರಿಯುವ ನೀರಿನಂತೆ ಪ್ರಧಾನ ಧಾರೆ, ಕಿರುಧಾರೆಗಳಾಗಿವೆ.

ಒಂದೆಡೆ ಬೆಳೆದು ನಿಂತ ಮಾನವರ ಚರಿತ್ರೆಯನ್ನ ನಾಗರೀಕ ಚರಿತ್ರೆಯೆಂದೂ, ಮತ್ತೊಂದೆಡೆ ಮೂಲ ಸ್ಥಿತಿಯನ್ನು ಉಳಿಸಿಕೊಂಡ ಮಾನವ ಚರಿತ್ರೆಯನ್ನು ಮೂಲ ನಿವಾಸಿಗಳ ಚರಿತ್ರೆ ಅಥವಾ ಬುಡಕಟ್ಟು ಸಮುದಾಯಗಳ ಚರಿತ್ರೆ ಎಂದು ಕರೆಯಬಹುದು. ಬುಡಕಟ್ಟು ಸಮುದಾಯಗಳು ಇಂದಿನ ಅತ್ಯಾಧುನಿಕ ನಾಗರಿಕ ಪರಿಸರದಲ್ಲೂ ತಮ್ಮ ಮೂಲ ಸಂಸ್ಕೃತಿಯ ಅಂಶಗಳನ್ನು ಇನ್ನೂ ಉಳಿಸಿಕೊಂಡಿವೆ. ಕೆಲವು ಅಪ್ರತ್ಯಕ್ಷವಾಗಿ ಅನುಸರಿಸುತ್ತಿವೆ. ಹೀಗಾಗಿ ಚರಿತ್ರೆ ಎಂದೊಡನೆ ಅಭಿವೃದ್ಧಿಯಾವ ಗುಂಪನ್ನ ಲಕ್ಷಿಸುವುದಲ್ಲ. ಅಲಕ್ಷಿತ ಪರಂಪರೆಗಳನ್ನು ದಾಖಲಿಸುವುದು ಮತ್ತು ಅಧ್ಯಯನ ಮಾಡುವುದು ಆಗಿದೆ.

ಬುಡಕಟ್ಟು ಸಮುದಾಯಗಳ ಮೂಲ ಸಂಸ್ಕೃತಿಯನ್ನು ನಮ್ಮ ಪೂರ್ವಜರು ತಕ್ಕಮಟ್ಟಿಗೆ ಉಳಿಸಿಕೊಂಡಿದ್ದಾರೆ. ನಾಗರಿಕ ಸಮುದಾಯಗಳು ತೀವ್ರ ಪ್ರಭಾವದಿಂದ ಹೊಸ ತಲೆಮಾರಿನಲ್ಲಿ ಅವು ನಿಧಾನವಾಗಿ ಮರೆಯಾಗುತ್ತಿವೆ. ಆದ್ದರಿಂದ ಅವು ಸಂಪೂರ್ಣ ಮರೆಯಾಗುವ ಮೊದಲು ಅವನ್ನು ದಾಖಲಿಸುವ, ವಿಶ್ಲೇಷಿಸುವ ಕಾರ್ಯ ನಡೆಯಬೇಕು, ಅಂದಾಗ ಮಾತ್ರ ಮಾನವ ಸಮುದಾಯಗಳ ಅಧ್ಯಯನ ಅರ್ಥಪೂರ್ಣವಾದಿತು. ಬುಡಕಟ್ಟು ಸಮುದಾಯಗಳು ನಿಸರ್ಗದೊಂದಿಗೆ ಬೆಳೆಯುತ್ತ ತಮ್ಮದೇ ಆದ ಆರಾಧನೆ, ಆಚರಣೆ ಹಾಗು ನಿಯಮಗಳನ್ನು ಹೊಂದಿವೆ. ಗ್ರಾಮಾಂತರಗಳಲ್ಲಿ ಇನ್ನು ಕೆಲವು ಹರಮಾರಿತನ, ದೇಹದಂಡನೆಯು,

ಭಯವೆನ್ನಿಸುವ ಕ್ರೌರ್ಯದ ಪ್ರದರ್ಶನಗಳು ಕಾಣುತ್ತವೆ. ಈ ಎಲ್ಲಾ ಪ್ರದರ್ಶನಗಳು ಆಯಾ ಸಮುದಾಯಗಳಲ್ಲಿ ಸಹಜವಾಗಿ ಇದ್ದವು.

ಕರ್ನಾಟಕದಲ್ಲಿ ೪೯ ಪರಿಶಿಷ್ಟ ಬುಡಕಟ್ಟುಗಳಿವೆ. ಸಂವಿಧಾನಬದ್ಧವಾಗಿ ಉಳಿದ ಕೆಲವು ಬುಡಕಟ್ಟುಗಳನ್ನು ಅಲೆಮಾರಿ ಬುಡಕಟ್ಟುಗಳೆಂದು (Nomadic Tribes.) ಇನ್ನೂ ಕೆಲವು ಬುಡಕಟ್ಟುಗಳನ್ನೂ ಅರೆ ಅಲೆಮಾರಿ ಬುಡಕಟ್ಟುಗಳು (Semi-Nomadic Tribes) ಎಂದು ಪರಿಗಣಿಸಿ, ಮೀಸಲಾತಿಯ ಹಿಂದುಳಿದ ವರ್ಗಗಳ (Back ward Class) ಪಟ್ಟಿಗೆ ಸೇರಿಸಲಾಗಿದೆ.

ಭಾರತದಲ್ಲಿ ನೂರಾರು ಬುಡಕಟ್ಟುಗಳು ಇವೆ. ಕಾಡು-ಗುಡ್ಡ-ಬೆಟ್ಟಗಳಲ್ಲಿಯೇ ವಾಸಿಸುತ್ತಾ ತಮ್ಮ ಉಪವೃತ್ತಿಯನ್ನು ಪೋಷಿಸಿಕೊಂಡು ಬರುತ್ತಿವೆ. ಒಂದು ಬುಡಕಟ್ಟಿನ ಉಪ ವೃತ್ತಿ ಇನ್ನೊಂದು ಬುಡಕಟ್ಟಿನ ಇಲ್ಲವೆ ಜಾತಿಯ ವೃತ್ತಿಗಿಂತಲೂ ತೀರ ಭಿನ್ನವಾಗಿರುವ ರೀತಿಯಲ್ಲಿಯೇ ಕಾಣಿಸಿಕೊಳ್ಳುತ್ತದೆ. ಯಾವಾಗಲೂ ಸಂಚಾರದಲ್ಲಿಯೇ ತೊಡಗಿ ಭಿಕ್ಷೆ ಬೇಡುತ್ತಾ ಬದುಕುತ್ತಿರುವ ಅಲೆಮಾರಿ ಬುಡಕಟ್ಟುಗಳು ಇನ್ನು ಮನೆ ಕಟ್ಟಿಕೊಂಡು ನೆಲೆ ನಿಲ್ಲುವುದರ ಕಡೆಗೆ ಮನಸ್ಸು ಮಾಡಿದಂತೆ ಕಂಡುಬರುವುದಿಲ್ಲ. ಅವರದೇ ಆಗಿರುವ ವಿಶಿಷ್ಟ ರೀತಿಯ ಗುಡಾರಗಳಲ್ಲಿ ವಾಸಿಸುತ್ತಾ, ಸಂಚರಿಸುತ್ತಾರೆ.

ಇಂತಹ ಬುಡಕಟ್ಟು ಸಮುದಾಯಗಳು, ಅರೆ ಅಲೆಮಾರಿ, ಪೂರ್ಣ ಪ್ರಮಾಣದ ಅಲೆಮಾರಿ, ಅಲೆಮಾರಿ ಬುಡಕಟ್ಟು ಸಮುದಾಯಗಳ ಬಗ್ಗೆ, ಅಧ್ಯಯನ ಹಾಗೂ ಸಂಶೋಧನೆ ನಡೆಯಬೇಕಾದುದು ಅಗತ್ಯವಾಗಿದೆ. ಪ್ರಸ್ತುತ 'ಬಳ್ಳಾರಿ ಜಿಲ್ಲೆಯ ದುರುಗ ಮುರುಗಿ ಸಮುದಾಯದ ಅಧ್ಯಯನ' ನನ್ನ ವಿಷಯವಾಗಿದೆ. ಸಾಮಾಜಿಕವಾಗಿ ಅತ್ಯಂತ ಶೋಚನೀಯ ಸ್ಥಿತಿಯಲ್ಲಿ ಬದುಕುತ್ತಿರುವ ಈ ಸಮುದಾಯನದ ಸ್ಥಿತಿಗತಿ, ಇವರ ಆಚರಣೆ, ಚರಿತ್ರೆ, ಸಾಮಾಜಿಕ ಸ್ಥಿತಿಗತಿ ಮತ್ತು ಸಾಹಿತ್ಯಿಕವಾಗಿ ಇವರ ಕೊಡುಗೆ, ಭಾಷಿಕವಾಗಿ ಇವರ ವಿಶೇಷತೆಗಳೇನು ಇತ್ಯಾದಿ ಪ್ರಶ್ನೆಗಳನ್ನು ಹಾಕಿಕೊಂಡು ಈ ಅಧ್ಯಯನ ಕೈಗೊಳ್ಳಲಾಗಿದೆ.

ನನ್ನ ಅಧ್ಯಯನ ಕಂಡುಕೊಂಡ ಉತ್ತರಗಳೇ ಅಂತಿಮವಲ್ಲ, ಅವು ಇನ್ನೂ ಆಳವಾಗುವ, ವಿಸ್ತಾರವಾಗುವ, ಸೂಕ್ಷ್ಮಗೊಳ್ಳುವ ಸಾಧ್ಯತೆಯೂ ಇದೆ. ಸಂಶೋಧನೆ ಚುರುಕಾದಷ್ಟು ಉತ್ತರಗಳು ಖಚಿತವಾಗುತ್ತವೆ. ಈ ದೃಷ್ಟಿಯಲ್ಲಿ ನನ್ನ ಅಧ್ಯಯನ ಒಂದು ಪ್ರಯತ್ನವೆನ್ನಬಹುದು.

ಅಧ್ಯಯನದ ಉದ್ದೇಶ

ಎಲ್ಲಾ ಅಧ್ಯಯನಗಳಿಗಿಂತ ಇಂದು ಸಂಸ್ಕೃತಿ ಅಧ್ಯಯನಗಳು ಹೆಚ್ಚು ಮಹತ್ವ ಪಡೆಯುತ್ತಿವೆ. ನಮ್ಮ ಬದುಕನ್ನು ಆಮದು ಮಾನದಂಡಗಳಿಂದ ಗ್ರಹಿಸುವುದಕ್ಕಿಂತ, ನಮ್ಮ ಒಳಗಿನ ಆಯಾಮಗಳ ಮೂಲಕವೇ ಗ್ರಹಿಸುವುದು ಹೆಚ್ಚು ಮುಖ್ಯ. ಆದ್ದರಿಂದ ಇಂದು ದೇಶವನ್ನು ಮತ್ತು ದೇಶಿಯ ಬದುಕನ್ನು ಪಾಶ್ಚಾತ್ಯ ಮಾನದಂಡಗಳಿಂದ ಗ್ರಹಿಸುವುದಕ್ಕಿಂತ ದೇಶಿಯ ನೆಲೆಯಲ್ಲೇ ಗ್ರಹಿಸುವುದು ಹೆಚ್ಚು ಸೂಕ್ತ. ನಮ್ಮ ದೇಶ,

ನಮ್ಮ ಸಂಸ್ಕೃತಿ ಎಂಬ ಮಾತುಗಳು ಮೇಲ್ನೋಟಕ್ಕೆ ಒಂದೇ ಅನ್ನಿಸಿದರೂ ಸೂಕ್ಷ್ಮವಾಗಿ ನೋಡಿದಾಗ ಅವು ಒಂದೇ ಅಲ್ಲ. ಹಗ್ಗ ರಚನೆಯಾದಂತೆ ಹಲವು ಎಳೆಗಳಿಂದ ಅದು ಒಂದೇ ಎನ್ನಿಸುತ್ತದೆ. ಹಾಗೆ ನೋಡಿದರೆ ಪ್ರಧಾನ ಧಾರೆಯ ಅಧ್ಯಯನವೇ ಬಹುಮುಖ್ಯವಾಗಿದ್ದ ಈ ನೆಲದಲ್ಲಿ, ಉಪಧಾರೆಗಳ ಕುರಿತ ಅಧ್ಯಯನಗಳು ನಡೆದಿರಲಿಲ್ಲ. ಅಲಕ್ಷಿತ ಗುಂಪುಗಳು ಬುಡಕಟ್ಟುಗಳು ಅಕ್ಷರ ಲೋಕದಿಂದ ಬಹುದೂರ ಉಳಿದಿದ್ದ ಕಾಲ ಒಂದಿತ್ತು. ಆದರೆ ಈಗ ಆ ಸ್ಥಿತಿ ಬದಲಾಗಿ ಅಲ್ಲಿನ ಲೋಕಗಳೂ ಶ್ರೇಷ್ಠ ಅನ್ನಿಸಿಕೊಂಡ ಸಮಾಜಗಳಿಗೆ ಸವಾಲಾಗತೊಡಗಿವೆ. ಉಪಸಂಸ್ಕೃತಿ, ಪರ್ಯಾಯ ಸಂಸ್ಕೃತಿ, ಪ್ರತಿ ಸಂಸ್ಕೃತಿ ಎಂದೆಲ್ಲಾ ಕರೆಯಿಸಿಕೊಂಡ ಈ ಬದುಕುಗಳು ಕೂಡ ಹತ್ತು ಹಲವು ದೃಷ್ಟಿಯಿಂದ ಮಹತ್ವ ಪಡೆದಿದೆ.

ಒಮ್ಮೆ ನೆರಳಂತೆ ಮತ್ತೊಮ್ಮೆ ಬೆಳಕಿನಂತೆ ಕಾಣುವ ಈ ಬಗೆಯ ಸಮುದಾಯಗಳ, ನೀತಿ-ನಿಯಮಗಳು ನಮ್ಮ ನಾಗರಿಕ ಅಥವಾ 'ಆಧುನಿಕ' ಲೋಕಕ್ಕೆ ಅನಗತ್ಯ ಅನ್ನಿಸಿದರೂ ಅವು ಹಳ್ಳಿಯ ಜೀವನಗಳಿಗೆ ಅವಿನಾಭಾವವಾಗಿ ಹೆಣೆದುಕೊಂಡಿವೆ. ಸಂಪ್ರದಾಯಗಳು, ಜಾತ್ರೆಗಳು, ಹಬ್ಬಗಳು, ಆಚರಣೆಗಳು ಬಂದಾಗಲೆಲ್ಲಾ ಇಂತಹ ಸಮುದಾಯಗಳ ಮೌಲ್ಯಗಳು ಬೆಳಕಿಗೆ ಬರುತ್ತವೆ. ಹಾಗೆ ನೋಡಿದರೆ ಈ ಗುಂಪುಗಳು ಇಂದು ಜಾಹಿರಾತುಗಳಂತಹ ಮಾಧ್ಯಮಗಳಿಗೂ ಒಂದರ್ಥದಲ್ಲಿ ವಸ್ತುಗಳಾಗಿ 'ಆಧುನಿಕ' ಲೋಕಕ್ಕೆ ಬೇಕಾಗಿವೆ. ಆದರೆ 'ಆಧುನಿಕ' ಲೋಕ ಬಯಸುವ ಕ್ರಮಕ್ಕೂ ಸಮುದಾಯ ಬಯಸುವ ಕ್ರಮಕ್ಕೂ ವ್ಯತ್ಯಾಸ ಬಹಳಷ್ಟಿದೆ.

ಬುಡಕಟ್ಟು ಸಂಸ್ಕೃತಿಗಳು ಈ ಹೊತ್ತಿನಲ್ಲಿ ರೂಪಾಂತರಗೊಳ್ಳುತ್ತಿವೆ. ತಲತಲಾಂತರದ ವೃತ್ತಿಗಳು ಕ್ರಮೇಣ ಮರೆಯಾಗುತ್ತಿವೆ. ಈ ಸಂದರ್ಭದಲ್ಲಿ ಆಯಾ ಸಮುದಾಯಗಳ ಕಸುಬು ಮತ್ತು ಆಚರಣೆಗಳ ಅಧ್ಯಯನ ಅವಶ್ಯವಾಗಿ ನಡೆಯಬೇಕಿದೆ. ಈ ದಿಸೆಯಲ್ಲಿ ಅವರ ಸಮಾಜ ರಚನಾಕ್ರಮ, ಆರ್ಥಿಕ ಚಟುವಟಿಕೆಗಳು, ರೂಢಿ ಪದ್ಧತಿಗಳು ಮತ್ತು ಇತರ ಬುಡಕಟ್ಟು ಸಮುದಾಯ-ಜಾತಿಗಳ ಜೊತೆಗೆ ಅವರು ವ್ಯವಹರಿಸುವ ರೀತಿ-ನೀತಿಗಳು ಕುರಿತು ಅಧ್ಯಯನ ಮಾಡಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಗಾಗಿ ಈಗ ದುರುಗಮುರಗಿಯರ ಕುರಿತು ಅಧ್ಯಯನ ಮಾಡಲೆಣ್ಣಿಸಿದ್ದೇನೆ. ದುರುಗಮುರಗಿಯರ ಪರಂಪರೆ, ಅವರ ಬದುಕಿನ ಚಹರೆ, ಸ್ಥಿತ್ಯಂತರಗೊಳ್ಳುತ್ತಿರುವ ಅವರ ಸ್ಥಿತಿಗತಿಗಳು ನಾಗರಿಕ ಲೋಕದಲ್ಲಿ ಅವರಿಗೆ ಸಿಗುತ್ತಿರುವ ಸ್ಥಾನ ಮತ್ತು ಅವರ ಜನಸಂಖ್ಯೆ, ವೃತ್ತಿ, ಅಲೆಮಾರಿ ಬದುಕಿನ ನಿತ್ಯ ಸಂಘರ್ಷಗಳ ಕುರಿತು ವಿವರಗಳನ್ನು ಒಂದೆಡೆ ಕಲೆ ಹಾಕಿ ಇಲ್ಲಿ ವ್ಯಾಖ್ಯಾನ ಒಡ್ಡುವುದು ನನ್ನ ಮುಖ್ಯ ಉದ್ದೇಶವಾಗಿದೆ.

ದುರುಗ ಮುರುಗಿ ಸಮುದಾಯದಲ್ಲಿ ಭಿಕ್ಷಾಟನೆ ಪ್ರಮುಖ ವೃತ್ತಿಯಾಗಿದೆ. ಇವರು ದುರುಗಮ್ಮ, ಮಾರಮ್ಮರನ್ನ ಪೆಟ್ಟಿಗೆಗಳಲ್ಲಿ ಹೊತ್ತುಕೊಂಡು, ಮಂಗಳವಾರ, ಶುಕ್ರವಾರಗಳಲ್ಲಿ ಸಂತೆ, ಓಣಿಗಳಲ್ಲಿ ಸುತ್ತುತ್ತಾ ಹತ್ತಾರು ಖಾಯಿಲೆಗಳನ್ನು ಓಡಿಸುವಳೆನ್ನು, ಪೂಜೆ ಮಾಡುತ್ತ, ಮೈಯಿಗೆ ಲಡ್ಡಿನಿಂದ ಹೊಡೆದುಕೊಳ್ಳುತ್ತಾ, ಮುತ್ತೈದೆಯರಿಂದ ಹಿರಿಯವರಿಗೆ ಧಾನ್ಯ, ಪೂಜಾ ಸಾಮಾಗ್ರಿಗಳನ್ನು ಪಡೆಯುವ ಬಗೆ ಒಂದಾದರೆ, ಸಂತೆ ಮತ್ತು ಜಾತ್ರೆಗಳಲ್ಲಿ ಹಠವಾದಿಗಳಂತೆ ಭಿಕ್ಷೆ ನೀಡುವವರೆಗೂ ಕೈಗಳನ್ನು ಕೊಯ್ದುಕೊಳ್ಳುತ್ತಾ ಹೋಗುವ ಮಾದರಿ ಇನ್ನೊಂದು.

ಹಾಗೇ ಜಾತ್ರೆಗಳಲ್ಲಿ ತನ್ನ ವಿಚಿತ್ರ ಆವೇಶಗಳಿಂದ ಕೇವಲ ಬಾಯಿಯಿಂದಲೇ ಮೇಕೆ ಮರಿಯನ್ನು ಸಿಗಿಯುವ ಕ್ರಮ ಇಲ್ಲಿನ ಮತ್ತೊಂದು ವಿಶೇಷ. ಪಾರ್ವತಿಯ ದುರ್ಗೆಯ ಅಧೀನ ಗುಂಪಾಗಿ ಬರುವ ಇಲ್ಲಿನ ದುರುಗಮುರಗಿ ಆಚರಣೆಯ ವಿವರಗಳನ್ನು ಕ್ಷೇತ್ರಾಧ್ಯಯನದ ಮೂಲಕವೇ ವಿವರಿಸಲು ಸಾಧ್ಯ. ಈ ಕೆಳಗಿನಂತೆ ಪ್ರಸ್ತುತ ಅಧ್ಯಯನವನ್ನು ವಿಂಗಡಿಸಿಕೊಳ್ಳಲಾಗಿದೆ.

- ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಆರ್ಥಿಕ ಸ್ಥಿತಿಗತಿಗಳು
- ದುರುಗಮುರಗಿಯವರ ಆಚರಣೆಗಳು
- ಭಾಷೆ, ಸಾಹಿತ್ಯ, ಜನಪದ ಕಲೆ
- ಪ್ರಸ್ತುತ ಕಾಲಘಟ್ಟದಲ್ಲಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು

ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ದುರುಗಮುರಗಿ ಸಮುದಾಯದ ಸಮಗ್ರ ಸಾಮಾಜಿಕ ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಎಂ.ಫಿಲ್ ಸಂಶೋಧನಾ ಕಿರುಪ್ರಬಂಧದಲ್ಲಿ ಬಳ್ಳಾರಿ ಜಿಲ್ಲೆಯ ದುರುಗಮುರಗಿಯರ ಸಮಾಜಶಾಸ್ತ್ರೀಯ ದೃಷ್ಟಿಕೋನದ ಮೂಲಕ ನೋಡಲು ಯತ್ನಿಸಲಾಗಿದೆ. ಸಾಹಿತ್ಯ ಅಕಾಡೆಮಿ ೧೯೯೩ರಲ್ಲಿ ಪ್ರಕಟಿಸಿದ ಉಪಸಂಸ್ಕೃತಿ ಮಾಲೆಯಲ್ಲಿ ಗೀತಾ ನಾಗಭೂಷಣರವರು ದುರುಗಮುರಗಿ ಸಂಸ್ಕೃತಿಯ ಕುರಿತು ಬರೆದಿದ್ದಾರೆ. ಹಾಗೂ ಸಾಹಿತ್ಯ ಮತ್ತು ಸಂಸ್ಕೃತಿ ಕುರಿತು ಒಂದೆರಡು ಬಿಡಿ ಲೇಖನಗಳು ಮತ್ತು ಕಿರು ಹೊತ್ತಿಗೆಗಳು ಪ್ರಕಟವಾಗಿವೆ. ಆದರೂ ಇವೆಲ್ಲ ಸಂಗ್ರಹ ರೂಪದಲ್ಲಿಯೇ ಇವೆ. ದುರುಗಮುರಗಿ ಸಮುದಾಯ ಕುರಿತು ಇಲ್ಲಿಯವರೆಗೂ ಯಾವುದೇ ಭಾಷೆಯಲ್ಲಿ ಸಂಶೋಧನೆ ನಡೆದಿರುವುದಿಲ್ಲ. ಈ ಪ್ರಮುಖ ಕೊರತೆಯು ಇಲ್ಲಿ ಕಂಡು ಬಂದಿರುವುದರಿಂದ ಮತ್ತು ಅವರ ಸಂಸ್ಕೃತಿಯನ್ನು ವಿಶ್ಲೇಷಿಸುವ ಉದ್ದೇಶದಿಂದ ಬಳ್ಳಾರಿ ಜಿಲ್ಲೆಯ ದುರುಗ ಮುರಿಗಿಯರು ಒಂದು ಸಾಮಾಜ ಶಾಸ್ತ್ರೀಯ ಅಧ್ಯಯನ ಎಂಬ ವಿಷಯ ಕೈಗೆತ್ತಿಕೊಂಡು ಕ್ಷೇತ್ರ ಕಾರ್ಯದ ಮೂಲಕ ಅಗತ್ಯ ಮಾಹಿತಿಗಳನ್ನ ಪಡೆದು ಈ ಕಿರು ಪ್ರಬಂಧವನ್ನು ರಚಿಸಲಾಗಿದೆ.

ದುರುಗಮುರಗಿ ಐತಿಹಾಸಿಕ ಹಿನ್ನೆಲೆ

ದುರುಗಮುರಗಿಯರು ಮೂಲತಃ ಅಲೆಮಾರಿ ಬುಡಕಟ್ಟು ಸಮುದಾಯವಾಗಿದ್ದು, ಮಾನವಶಾಸ್ತ್ರದ ದೃಷ್ಟಿಯಿಂದ ಒಂದು ಬುಡಕಟ್ಟು. ಆದರೆ ಪರಿಶಿಷ್ಟ ಬುಡಕಟ್ಟುಗಳಲ್ಲಿ ಸೇರಬೇಕಾದವರು. ಈ ಸಮುದಾಯ ಹಿಂದಿನ ತಲೆಮಾರುಗಳಿಂದ ಅಲೆಮಾರಿಯಂತೆ ವಾಸಿಸುತ್ತಾ ತಮ್ಮದೇ ವೃತ್ತಿಯನ್ನು ಅವಲಂಬಿಸಿಕೊಂಡಿರುತ್ತದೆ. ಸಾಮಾಜಿಕ ಶ್ರೇಣೀಕರಣದಲ್ಲಿ ಅತ್ಯಂತ ಅಂಚಿನಲ್ಲಿರುವ ಈ ಸಮುದಾಯ, ಭಿಕ್ಷಾಟನೆಯನ್ನ ನಂಬಿಯೇ ಬದುಕುತ್ತಿದೆ.

ಶಕ್ತಿಯನ್ನ ಆರಾಧಿಸುವ ಈ ಸಮುದಾಯು, ಒಂದು ಕಾಲಕ್ಕೆ ರಾಜಾಶ್ರಯದಲ್ಲಿ ಬದುಕಿ, ಆಧುನಿಕ ಜಗತ್ತಿನಲ್ಲಿ ನಿಶ್ಚಿತ ವರಮಾನವಿಲ್ಲ ಇದೆ, ಭಿಕ್ಷಾಟನೆ ಅನಿವಾರ್ಯವಾಯಿತು. ಶರಣ ಸಂಪ್ರದಾಯದ ಪ್ರಕಾರ

ಸಾರುವಯ್ಯನವರು ಧರ್ಮ ತತ್ವಗಳು ಪ್ರಚಾರ ಕೈಕೊಳ್ಳುವಂತೆ ಕೆಳವರ್ಗದ ಜನ ತಾವು ನಂಬಿದ್ದ ಶಕ್ತಿ ದೇವತೆಯ ಪ್ರಚಾರವನ್ನು ಮಾಡುತ್ತಿರುವುದು ನಾವು ದುರುಗಮುರಗಿರಲ್ಲಿ ಕಾಣಬಹುದಾಗಿದೆ.[೧]

ಹಿನ್ನೆಲೆ : ದುರುಗಮ್ಮ, ಮಾರೆಮ್ಮ (ಮರಗಮ್ಮ) ಇವರಿಬ್ಬರೂ ಕರ್ನಾಟಕದಲ್ಲಿ ಕೆಳಜಾತಿ ಸಮುದಾಯಗಳ ಗ್ರಾಮದೇವತೆಗಳಾಗಿ ದುರ್ಗಮ್ಮ, ದುರ್ಗೆಯ ಗ್ರಾಮ್ಯ ರೂಪವಾಗಿದ್ದರೆ. ಮರಗಮ್ಮ ಮಾರಿ ದೇವತೆಯ ಗ್ರಾಮ್ಯ ರೂಪವಾಗಿದ್ದಾಳೆ. ದುರುಗಮ್ಮ ಆಂಧ್ರ, ಕರ್ನಾಟಕ ಗಡಿ ಭಾಗದಲ್ಲಿ ತುಂಬಾ ಪ್ರಸಿದ್ಧ ದೇವತೆ. ಬಳ್ಳಾರಿ ದುರುಗಮ್ಮ. ಗುಡೇಕೋಟೆಯ, ಕೋಡಿ ದುರುಗಮ್ಮ, ಬಣವಿಕಲ್ಲು ಗ್ರಾಮದ ದುರುಗಮ್ಮಳಂತೂ ಸುಪ್ರಸಿದ್ಧ ದೇವತೆಯಾಗಿದ್ದಾಳೆ. ಬೀದರ್, ಗುಲಬರ್ಗಾ, ವಿಜಾಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಮಾರೆಮ್ಮ ದೇವತೆಯ ಪ್ರಭಾವವಿದೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಕುರಿಹಟ್ಟಿಯ ಮಾರೆಮ್ಮ ದೇವತೆಯ ಮುಂದೆ ಪೋತರಾಜ ಗಾಬ ಜಿಗಿಯುವ ಸಂಪ್ರದಾಯವಿದೆ. ಹಳೇ ಮೈಸೂರು ಭಾಗದಲ್ಲಿ ನಡೆಯುವ ಮಾರಿ ಜಾತ್ರೆ, ಸಿರ್ಸಿ ಮಾರಿಕಾಂಬೆ ಜಾತ್ರೆ ತುಂಬಾ ಪ್ರಸಿದ್ಧಿಯಾಗಿದೆ. ದುರುಗಮುರಗಿ ಸಮುದಾಯವರು ಗ್ರಾಮದೇವತೆಗಳ ಆರಾಧಕರು. ಒಂದು ಊರಿನಿಂದ ಇನ್ನೊಂದು ಊರಿಗೆ ಅಲೆಮಾರಿಯಂತೆ ಪ್ರಯಾಣ ಮಾಡುವ ಜನ ಸಮುದಾಯ. ಇತ್ತೀಚಿನ ದಿನಗಳಲ್ಲಿ ಗ್ರಾಮದ ಮುಖಂಡರ ಹತ್ತಿರ ಜಾಗವನ್ನು ಕೇಳಿಕೊಂಡು ಅಲ್ಲಿ ಗುಡಾರ ಹಾಕಿಕೊಂಡಿರುತ್ತಾರೆ.

ಪುರಾಣ ನೆಲೆ : ವಿಶ್ವದ ಒಬ್ಬಳು ದೇವತೆ ದುರ್ಗೆ, ಆಕೆ ವಿವಿಧ ಆಕಾರ ಹಾಗೂ ಲಕ್ಷಣಗಳನ್ನು ಹೊಂದಿರುವಳು. ಶಿವನ ಹೆಂಡತಿ ಪಾರ್ವತಿಯು ದುರ್ಗೆಯ ಒಂದು ಅವತಾರ. ಭಕ್ತರ ಪ್ರಾರ್ಥನೆಯಂತೆ ಈ ದೇವಿಯ ನಾನಾ ಅವತಾರಗಳನ್ನು ತಳೆದಿರುವಳು. ಈಕೆಯನ್ನು ಆರ್ಯ ದುರ್ಗಾ, ವೇದಗರ್ಭಾ, ಅಂಬಿಕಾ, ಭದ್ರಾಕಾಳಿ, ಭದ್ರಾಕ್ಷೇಮಾಚೂರಿ, ನೈಕು ಬಾಹು, ದೇವಿ ಮುಂತಾದ ಅರವತ್ತನಾಲ್ಕು ಅವತಾರಗಳಲ್ಲಿ ಪೂಜಿಸಲಾಗುತ್ತದೆ. ದಕ್ಷಿಣ ಭಾರತದಲ್ಲಿ ಈಕೆಯನ್ನು ಭಯಂಕರವಾದ ಆಕಾರಗಳಲ್ಲಿ ಪೂಜಿಸಲಾಗುತ್ತದೆ.

ದೇವಿ ತನ್ನ ಉತ್ತಮವಾದ ಲಕ್ಷಣಗಳಿಂದ ಕನ್ಯಾ, ಕಾಮಾಕ್ಷಿ, ಮೂಕಾಂಬಾ ಎಂಬ ರೂಪಗಳನ್ನು ತಳೆದಿದ್ದಾಳೆ. ಕೇರಳದಲ್ಲಿ ಈಕೆಯನ್ನು ಭಗವತೀ ಎಂದು ಆರಾಧಿಸಲಾಗುತ್ತದೆ. ಆಂಧ್ರಪ್ರದೇಶದಲ್ಲಿ ಜೋಕುಲಾಂಬಿಕಾ ಎಂದು, ತಮಿಳುನಾಡಿನಲ್ಲಿ ಕಣ್ಣಕೀ ಎಂದು ಕರೆಯಲಾಗಿದೆ. ಭಾರತದಲ್ಲಿ ದೇವಿಯನ್ನು ಆರಾಧಿಸುವುದು ಸುಮಾರು ನಾಲ್ಕು ಸಾವಿರ ವರ್ಷಗಳಿಂದ ನಡೆದು ಬಂದಿದೆ. ವೇದಗಳ ಕಾಲದಿಂದ ಇಂದಿನವರೆಗೂ ನಮ್ಮ ಸಮಾಜದಲ್ಲಿ ದೇವಿಯು ಬಹುಮುಖ್ಯವಾದ ಸ್ಥಾನವನ್ನು ಪಡೆದಿದ್ದಾಳೆ. ಆಧುನಿಕ ಭಾರತದಲ್ಲಿ ಸ್ವಾಮಿ ವಿವೇಕಾನಂದರ ಗುರುವಾದ ರಾಮಕೃಷ್ಣ ಪರಮಹಂಸರು ದೇವಿಯ ಮಹಾಭಕ್ತರಾಗಿದ್ದರು.

ಮಹಾಭಾರತದಲ್ಲಿ ದೇವಿಯ ಬಗೆಗೆ ಅನೇಕ ಉಲ್ಲೇಖಗಳಿವೆ. ಪಾಂಡವರು ತಮ್ಮ ಅಜ್ಞಾತವಾಸದ ಸಮಯದಲ್ಲಿ ವಿರಾಟನ ರಾಜಧಾನಿಗೆ ಬಂದಾಗ ದುರ್ಗೆಯನ್ನು ಪೂಜಿಸಿದರು. ದುರ್ಗೆ ಪ್ರತ್ಯಕ್ಷಳಾಗಿ ವರಗಳನ್ನು ಕೊಟ್ಟಳು. ಭಾರತದಲ್ಲಿ ಕೃಷ್ಣನ ಸೂಚನೆಯ ಮೇರೆಗೆ ಅರ್ಜುನ ದುರ್ಗೆಯನ್ನು ಪ್ರಾರ್ಥಿಸಿದಾಗ

ಆಕಾಶದಲ್ಲಿ ದುರ್ಗೆಯು ಪ್ರತ್ಯಕ್ಷವಾಗಿ ಯುದ್ಧದಲ್ಲಿ ಜಯ ಲಭಿಸುವಂತೆ ವರಗಳನ್ನು ನೀಡಿದಳು.[೨] ದೇವಿಯ ಈ ಹಿನ್ನೆಲೆಯಿಂದ ಪೂಜಾರಿ ಗಂಡಸು ಲಡ್ಡಿನಿಂದ ತನ್ನ ದೇಹ ದಂಡಿಸಿಕೊಳ್ಳುತ್ತಾ ದೇವಿಯನ್ನು ಆರಾಧಿಸುವುದಕ್ಕೆ ಚಾಲನೆ ದೊರಕಿರಬೇಕು. ಲಡ್ಡಿನಿಂದ ಹೊಡೆದುಕೊಳ್ಳುವುದು ಮಾತ್ರವಲ್ಲ ಮುಂಗೈ ಈತ ಮೇಲೆ ಚೂಪಾದ ಕತ್ತಿ ಆಡಿಸಿ ರಕ್ತ ಚಿಮ್ಮಿಸುವುದರಿಂದ ದೇವಿ ತೃಪ್ತಿಪಡುತ್ತಾಳೆ ಎಂದು ನಂಬಲಾಗಿದೆ. ದುರುಗಮುರಗಿಯರ ಪೂಜಾರಿ ಹೀಗೆ ಲಡ್ಡಿನಿಂದ ಹೊಡೆದುಕೊಳ್ಳುವುದೂ, ಮತ್ತು ರಕ್ತ ಚಿಮ್ಮುಸುವುದರಿಂದ ತಾಯಿ ಶಕ್ತಿ ಉಳ್ಳಾಕೆ ನಮಗೆ ಯಾವ ರೀತಿಯ ನೋವು ಉಂಟು ಮಾಡುವುದಿಲ್ಲವೆಂಬುದು ಈ ಸಮುದಾಯದ ನಂಬುಗೆಯಾಗಿದೆ. ದೇಹದಂಡನೆಯ ಮೂಲಕ ತಾವು ಆರಾಧಿಸುವ ದೇವರನ್ನು ಒಲಿಸಿಕೊಳ್ಳಬಹುದೆಂಬ ಭಾವನೆ ತುಂಬಾ ಪ್ರಾಚೀನವಾದುದಾಗಿದೆ.

ವಕ್ತೃ ಪ್ರಕಾರ : ಈ ಸಮುದಾಯದ ಜನರುಗಳು ಅಲೆಮಾರಿಯಂತೆ ವಾಸಿಸುತ್ತಾ ಬಂದಿದ್ದಾರೆ. ತಮ್ಮ ಭಿಕ್ಷಾಟನೆ ವೃತ್ತಿಯನ್ನು ಅವಲಂಬಿಸಿದ ಅತಿ ಕೆಳವರ್ಗದ ಸಮುದಾಯ ಎಂದು ಹೇಳಬಹುದು.

ಈ ಹಿನ್ನೆಲೆಯಲ್ಲಿ ನೋಡಿದಾಗ ದುರುಗಮುರಗಿ ಸಮುದಾಯದ ಇತರೆ ಗುಂಪುಗಳ ಜೊತೆ ಹೋಲಿಕೆ ಮಾಡಿದಾಗ ಜೀವನಾವರ್ತನ ಆಚರಣೆಗಳು ಮತ್ತು ವಾರ್ಷಿಕಾವರ್ತನ ಆಚರಣೆಗಳು ಒಂದು ರೀತಿಯಲ್ಲಿ ಕಂಡುಬಂದರೆ, ಆದರೆ ಕೂಡ್ಲಿಗಿಯಲ್ಲಿರುವ ದುರುಗಮುರಗಿ ಸಮುದಾಯದವರಿಗೆ ಸಾಮ್ಯತೆಗಳಿಲ್ಲ. ಕಂಪ್ಲಿಯಲ್ಲಿರುವವರ ಪ್ರಕಾರ ದುರುಗಮುರಗಿ ಎಂದರೆ ನಮ್ಮಲ್ಲಿ ಎರಡು ಒಳ ಪಂಗಡಗಳು ಕಂಡುಬರುವುದು. ನಮ್ಮನ್ನ ಅಡವಿ ಪೋತರಾಜ ಎಂದು ಕರೆಯುವರು. ಊರು ಪೋತರಾಜ ಎಂದರೆ ಊರಿನ ಮುಖಂಡರು ಸೇರಿಕೊಂಡು ಮಾರಮ್ಮನ ಜಾತ್ರೆಯನ್ನು ನಡೆಸುವುದು. ಈ ಜಾತ್ರೆಯಲ್ಲಿ ಪೋತರಾಜ ಬಂದು ಮಾರಮ್ಮಗುಡಿಯ ಎದುರಿಗೆ ಮೇಕೆ ಮರಿಯ ಗಾಬಸಿಗಿಯುವುದು ಅವರ ಕೆಲಸ. ಬುಟ್ಟಿಯಲ್ಲಿ ದೇವರನ್ನು ಹೊತ್ತುಕೊಂಡು ಭಿಕ್ಷಾಟನೆ ಮಾಡುವುದು ನಮ್ಮ ಕೆಲಸ ಎಂದು ಹೇಳುತ್ತಾರೆ. ಬಳ್ಳಾರಿ ಜಿಲ್ಲೆಯ ಪ್ರಮುಖ ವಕ್ತೃಗಳ ಪ್ರಕಾರ ಪೋತರಾಜ ಹುಟ್ಟಿದ್ದು ನಮ್ಮ ಗುಡಾರದಲ್ಲಿ. ಪೋತರಾಜನ ಜಾತಿಗೂ, ನಮ್ಮ ಜಾತಿಗೂ ಗಂಡು ಹೆಣ್ಣು ನಡೆಯುವುದಿಲ್ಲ. ಒಂದು ಕಾಲದಲ್ಲಿ ಅಡವಿ ಪೋತರಾಜ ಮತ್ತು ಊರು ಪೋತರಾಜ ಅಣ್ಣ-ತಮ್ಮ ಇದ್ದಿರಬಹುದು? ಅಡವಿಯಲ್ಲಿ, ಬಯಲು ಸೀಮೆಯಲ್ಲಿ, ಗುಡ್ಡಗಾಡುಗಳಲ್ಲಿ ಅಲೆಮಾರಿಯಂತೆ ವಾಸಿಸುವುದರಿಂದ ನಮ್ಮನ್ನು ದುರುಗಮ್ಮನ ಆಡಿಸುವವರು, ಮಾರಮ್ಮನ ಆಡಿಸುವವರು ಎಂದು ಕರೆಯುತ್ತಾರೆ. ಊರಿನ ಪ್ರಮುಖ ಮುಖಂಡರು ಮಾರಮ್ಮನ ಜಾತ್ರೆಯನ್ನು ಹಮ್ಮಿಕೊಂಡಾಗ ಇಲ್ಲಿ ಪೋತರಾಜನ ಮುಖ್ಯ ಕೆಲಸ ಗಾಬ ಸಿಗಿಯುವುದಾಗಿರುತ್ತದೆ.

ಪೋತರಾಜನು ದಿನಾಲೂ ಭಿಕ್ಷಾಟನೆಗೆ ಹೋಗುವಂತಿಲ್ಲ. ವರ್ಷದಲ್ಲಿ ಮಾರಮ್ಮ, ದುರುಗಮ್ಮ, ಕೋಡಿ ದುರ್ಗಮ್ಮ ಇತ್ಯಾದಿ ದೇವತೆಗಳ ಹಬ್ಬದಲ್ಲಿ ಊರಿನ ಪ್ರಮುಖರ ಕಾಣಿಕೆ, ಜನರು ನೀಡುವ ಕಾಣಿಕೆಯನ್ನು ಸ್ವೀಕರಿಸಿಕೊಂಡು ಜೀವನ ಸಾಗಿಸುತ್ತಾನೆ. ಸ್ವಾಮಿ ನಮ್ಮನ್ನು ಅಲೆಮಾರಿ ಪೋತರಾಜ, ಅಡವಿ ಪೋತರಾಜ

ದುರುಗಮ್ಮ ಆಡಿಸುವರು, ಮಾರಮ್ಮ ಆಡಿಸುವರು ಎಂದು ಕರೆಯುತ್ತಾರೆ ಎಂದು ಸಿಂಗಾರಪ್ಪ ಎಂಬಾತನ ಅಭಿಪ್ರಾಯವಾಗಿದೆ. ದುರುಗಮುರಗಿ ಸಮುದಾಯದವರು ಹಿಂದಿನ ಕಾಲದಲ್ಲಿ ಸಂಸಾರ ಸಮೇತವಾಗಿ ಭಿಕ್ಷಾಟನೆಗಾಗಿ ಊರೂರು ಅಲೆಯುತ್ತಿದ್ದಾರೆ. ಈ ಸಮುದಾಯದಲ್ಲಿ ಹನ್ನೆರಡು ದೇವರುಗಳು ಕಂಡುಬರುವವು. ಅವುಗಳೆಂದರೆ : ೧. ದುರುಗಮ್ಮ, ೨. ಮಾರಮ್ಮ, ೩. ಸುಂಕಲಮ್ಮ, ೪. ಗಾಳೆಮ್ಮ, ೫. ಜಂಬಲಮ್ಮ, ೬. ರೇಣುಕ ಎಲ್ಲಮ್ಮ, ೭. ಕೂಗಮ್ಮ, ೮. ಹುಲಿಗೆಮ್ಮ, ೯. ಪೋತರಾಜ, ೧೦. ಈರನಾಗಮ್ಮ, ೧೧. ಗಾಳಿ ದುರುಗಮ್ಮ ೧೨. ಮೊರದಲ್ಲಿ ಕಣಿ ಮಾರಮ್ಮ.

ದುರುಗಮುರಗಿ ಸಮುದಾಯ ಮೂರು ವೃತ್ತಿಗಳನ್ನು ಒಳಗೊಂಡಿರುವುದು, ಅವುಗಳೆಂದರೆ :

೧. ಬುಟ್ಟಿ ದುರ್ಗಾ ಮುರಗಿಯವರು: ಇವರು ದುರ್ಗಾ ದೇವಿಯನ್ನು ಬುಟ್ಟಿಯಲ್ಲಿಟ್ಟುಕೊಂಡು ಬೇಡಲು ಹೊರಡುವರು.

೨. ಪೆಟ್ಟಿಗೆ ದುರ್ಗಾ ಮುರಗಿ: ಇವರು ದುರ್ಗಾ ದೇವಿಯನ್ನು ಪೆಟ್ಟಿಗೆಯಲ್ಲಿಟ್ಟುಕೊಂಡು ಭಿಕ್ಷೆ ಓಣಿ ಓಣಿ ತಿರುಗುವರು.

೩. ಗಾಡಿ ದುರ್ಗಾ ಮುರಗಿಯವರು: ಇವರು ಮಕ್ಕಳಾಡುವಂತಿರುವ ಸಣ್ಣ ಕೈಬಂಡಿಯಲ್ಲಿ ದುರ್ಗಾ ದೇವಿಯನ್ನು ಕೂಡಿಸಿಕೊಂಡು ಊರಿಗೆ ಬಂದ ರೋಗರುಜಿನಿಗಳು ಹೋಗಲೆಂಬ ಸದುದ್ದೇಶದಿಂದ ಊರಲ್ಲಿ ಸುತ್ತಾಡಿಸಿ, ಊರ ಹೊರಗಿನ ಗಡಿಯವರೆಗೆ ಹೋಗಿ ಬರುತ್ತಾರೆ.

ದುರುಗಮುರಗಿ ಸಮುದಾಯ ಊರ ಹೊರಗಿನ ಬಯಲು ಪ್ರದೇಶ ಇಲ್ಲವೇ ಶಾಲೆಯ ಆವರಣದಲ್ಲಿ ತಮ್ಮ ಗುಡಾರಗಳನ್ನು ಹಾಕಿಕೊಂಡಿರುತ್ತಾರೆ. ಬೆಳಗಿನ ಸಮಯದಲ್ಲಿ ಊರಾಡಲು ಹೋಗುವಾಗ ಬುರ್ರ ಬುರ್ರ ವಾದ್ಯ ಹಾಗೂ ಲಡ್ಡು ಸದ್ದು ಮಾಡುತ್ತಾ ಮನೆ ಮನೆಗೂ ಹೋಗುತ್ತಾರೆ. ಪೂಜಾರಿಯ ಒಂದು ಕೈಯಲ್ಲಿ ಗಂಟೆ ಎಡಗೈಯಲ್ಲಿ ಮೊರ ಇರುವುದು, ಮೊರದಲ್ಲಿ ಕುಂಕುಮ ಭಂಡಾರ. ಹಾಗೂ ಕೈ ಕೊಯ್ಯುವ ಗಾಜಿನ ಬೆಳೆಗಳು ಇರುವವು. ಅವನ ಹೆಂಡತಿ ಉರುಮೆ ವಾದ್ಯವನ್ನು ನುಡಿಸುವಳು, ಹಿಂದಿನ ಕಾಲದಲ್ಲಿ ಪೋತರಾಜರು ಮುಖಕ್ಕೊಂದು ಕೆಂಪು ಬಣ್ಣದ ಮುಖವಾಡ ಹಾಕಿಕೊಳ್ಳುತ್ತಿದ್ದರು. ಈಗ ಈ ಪದ್ಧತಿ ಕಂಡುಬರುವುದಿಲ್ಲ.

ಪೋತರಾಜ ತಮ್ಮ ಕುಲದೇವತೆಯನ್ನು ನಮಸ್ಕರಿಸಿ ಊರಲ್ಲಿ ಭಿಕ್ಷೆಯನ್ನು ಬೇಡುವುದಕ್ಕೆ ಹೋಗುವನು. ಇದರ ಜೊತೆಯಲ್ಲಿ ದೇವರ ಪೆಟ್ಟಿಗೆಯನ್ನು ಹೊತ್ತುಕೊಂಡು, ಊರಿಗೆ ಬರುವ ರೋಗರುಜನಿಗಳು ದೂರವಾಗಲಿ ಎಂದು ಬಯಸುವನು. ಭಕ್ತರ ಮೊರದಲ್ಲಿ ತಂದಿರುವ ಕಾಳು, ಧಾನ್ಯಗಳನ್ನು ಸ್ವೀಕಾರ ಮಾಡಿ, ಮತ್ತೆ ಮೂರು ಹಿಡಿ ಜೋಳ, ಅರಿಶಿಣ ಕುಂಕುಮವನ್ನು ಮೊರದಲ್ಲಿ ಹಾಕಿ ಕೊಡುವನು. ಇದನ್ನು ಭಕ್ತರು ಪ್ರಸಾದವೆಂದು ಸ್ವೀಕಾರ ಮಾಡುವರು. ಈ ಪ್ರಸಾದವನ್ನು ಶುಭ ಸಂದರ್ಭದಲ್ಲಿ ಬಳಸುವರು. ಪೂಜಾರಿ ಭಿಕ್ಷಾಟನೆಗೆ ಮನೆ ಹತ್ತಿರ ಬಂದಾಗ ತನ್ನ ಮೈಯಿಗೆ ಲಡ್ಡು ಬಾರಿಸಿಕೊಂಡು ತನ್ನ ಹೆಂಡತಿಯೊಂದಿಗೆ ಬುರ್ರ ಬುರ್ರ ವಾದ್ಯವನ್ನು ನುಡಿಸುತ್ತಾ,

"ಮಾರಮ್ಮ ಬಂದಾಳೆ
ದಾನಮ್ಮ ಬಂದಾಳೆ
ಸುಂಕಲಮ್ಮ ಬಂದಾಳೆ
ಸೀತಾಳಮ್ಮ ಬಂದಾಳೆ
ದಡಾರಮ್ಮ ಬಂದಾಳೆ
ಇಷ್ಟು ಬಂದೂ, ನಿಮ್ಮನ್ನು ಹರಕೆ ಹೊತ್ತವರು
ಹಣವನ್ನಾಗಲಿ, ಕಾಳಕಡಿಯಾಗಲಿ ಕೊಡಬೇಕು
ಇಲ್ಲದಿದ್ದರೆ ಬಹಳ ಹೊಗೆಯಾಗುವುದು
ಹರಕೆ ಮುಡುಪು ಹೊಂದಿದವರು
ನಿಮ್ಮ ಮುಡುಪು ಕೊಡಬೇಕು." ಎಂದು ಓಣಿಯಲ್ಲಿ ಹೇಳುತ್ತಾ ಹೋಗುತ್ತಾನೆ. ಊರಿನ ಭಕ್ತರು ಇವರಿಗೆ ಸೀರೆ, ಕುಪ್ಪಸ, ದಾನ ರೂಪದಲ್ಲಿ ಕೊಡುವರು. ಮತ್ತೆ ಹಳೆ ಅರಿವೆಗಳನ್ನು ಇವರೇ ಕೇಳಿಪಡೆಯುತ್ತಾರೆ. ದುರುಗಮುರಗಿ ಸಮುದಾಯದ ಮುಖ್ಯ ಕಸುಬು ಭಿಕ್ಷಾಟನೆಯಾಗಿದೆ. ದೇವಿಯ ಮಹಿಮೆಯನ್ನು ಬಿತ್ತರಿಸುತ್ತಾ, ಜನರ ಒಳತಿಗಾಗಿ ದೇವರನ್ನ ಬೇಡುತ್ತಾ ಹೊಟ್ಟೆ ತುಂಬಿಸಿಕೊಳ್ಳುವ ಜನ ಸಮುದಾಯ ಇದು.

ಊರ ಪೋತರಾಜ : ಪೋತರಾಜ ಸರಿಯಾದ ವ್ಯಕ್ತಿ, ಆಸ್ತಿವಂತನೇನೂ ಅಲ್ಲ. ಇವರನ್ನು ಕೂಡ್ಲಿಗಿ ತಾಲ್ಲೂಕಿನಲ್ಲಿ ಕುರಿಹಟ್ಟಿ ಗ್ರಾಮದ ಮಾರಮ್ಮ ಹಬ್ಬದಲ್ಲಿ ಊರಿನ ಗಣ್ಯವ್ಯಕ್ತಿಗಳು ಆಹ್ವಾನಿಸುತ್ತಾರೆ. ಪೋತರಾಜರಾದ ಶ್ರೀನಿಂಗಪ್ಪ ತಮ್ಮಲಹಳ್ಳಿ ಗ್ರಾಮ, ಜಗಳೂರು ತಾಲ್ಲೂಕು, ಇವರು ಮ್ಯಾಸನಾಯಕ ಸಮುದಾಯದವರು. ಪ್ರತಿಯೊಂದು ಜಾತ್ರೆಯಲ್ಲಿ ಗಾಬಸಿಗಿಯುವ ಕೆಲಸ ಇವರದಾಗಿದೆ. ಗ್ರಾಮೀಣ ಪ್ರದೇಶಗಳಿಗೆ, ೫೦೦ ರೂಪಾಯಿಗಳು, ಒಂದು ಚೀಲ ಜೋಳ, ಅಂಗಿ, ಉಡುಗೊರೆಯನ್ನು ಸ್ವೀಕರಿಸುತ್ತಾರೆ. ಕುರಿಹಟ್ಟಿ ಗ್ರಾಮದಲ್ಲಿ ನಾಯಕ ಸಮುದಾಯದವರು ವರ್ಷಕ್ಕೊಮ್ಮೆ ಮಾರಮ್ಮ ಹಬ್ಬವನ್ನು ಆಚರಿಸುತ್ತಾರೆ. ಮಾರಮ್ಮ ಹಬ್ಬದಲ್ಲಿ ಕೋಣ ಬಲಿಯನ್ನು ಕೊಡುವ ಪದ್ಧತಿ ಇದೆ.

ಗಾಬ ಸಿಗಿಯುವ ಪೋತರಾಜನ ಮುಖಕ್ಕೆ ಕೆಂಪು, ಹಳದಿ, ಕುಂಕುಮ, ಮೈಯಿಗೆ ವಿಭೂತಿ ಹಚ್ಚಿಕೊಂಡು ಕೆಂಪು ಚಡ್ಡಿಯಲ್ಲಿ ಎದ್ದು ಕಾಣುತ್ತಾನೆ. ಕಾಲಲ್ಲಿ ಗೆಜ್ಜೆಗಳನ್ನು ಕಟ್ಟಿಕೊಂಡಿರುತ್ತಾನೆ. ಕೈಯಲ್ಲಿ ಲಡ್ಡು ಹಿಡಿದಿರುತ್ತಾನೆ. ಪೋತರಾಜನ ಹಿನ್ನೆಲೆ ಕುರಿತು ವಿವೇಚಿಸಿದಾಗ ಯಾವುದೇ ಜಾನಪದ ಕಥೆಯಾಗಲಿ, ಐತಿಹಾಸಿಕ ದಾಖಲೆಗಳಾಗಲಿ ದೊರೆಯಲಾರವು. ದೇವತೆಯ ಪೂಜೆಯನ್ನು ಮಾಡುವ ಸಲುವಾಗಿ ಪೂಜಾರಿಯ ಈ ವೇಷ ಹಾಕಿದನೆಂದು ತೋರುತ್ತದೆ. ಅಲ್ಲದೇ ಕ್ರಮೇಣ ಇದನ್ನೇ ವೃತ್ತಿಯನ್ನಾಗಿ ಮಾಡಿಕೊಂಡು ಜೀವನ ನಡೆಸಿದನೆಂದು ಊಹಿಸಬಹುದಾಗಿದೆ.

ಪೋತರಾಜನು ಉದ್ದನೆಯ ಕೂದಲುಗಳನ್ನು ಬಿಟ್ಟಿರುತ್ತಾನೆ. ಮುಖಕ್ಕೆ ವಿವಿಧ ಬಣ್ಣಗಳನ್ನು ಬಳಿದುಕೊಂಡಿರುತ್ತಾನೆ. ಈ ಪೋತರಾಜ ಹರಿಜನರು ಬಾರಿಸುವ ಹಲಗೆ ನಾದದೊಂದಿಗೆ, ಲಡ್ಡು

ಹೊಡೆದುಕೊಳ್ಳುತ್ತಾ, ಇವರ ಜೊತೆಯಲ್ಲಿ ಹೊಲೆಯರ ಸಮುದಾಯದ ಉರುಮೆ ವಾದ್ಯದೊಂದಿಗೆ ಕಲಾಪ್ರದರ್ಶನ ನೀಡುತ್ತಾನೆ. ಊರಿನಲ್ಲಿ ಗೌಡ್ರು, ಬಣಕಾರ, ತಳವಾರ, ಊರಿನ ಆಯಾಗಾರರ ಮೂಲಕ ಭಿಕ್ಷೆಯನ್ನು ಬೇಡಿಕೊಂಡು ಜೀವನ ಮಾಡುತ್ತಾನೆ.

ಗಾಬ ಸಿಗಿಯುವುದು : ವರ್ಷದಲ್ಲಿ ನಡೆಯುವ ಜಾತ್ರೆಯಲ್ಲಿ ಊರಿನ ಗೌಡ್ರು, ಬಣಕಾರ, ತಳವಾರ, ಮಾರಮ್ಮ ಹಬ್ಬದಲ್ಲಿ ಹರಕೆಯನ್ನು ನೀಡುತ್ತಾರೆ. ಊರಿನ ಮಾರಮ್ಮ ಹಬ್ಬದಲ್ಲಿ ಊರ ಹೊರಗಡೆ ಮುಳ್ಳಿನ ಬೇಲಿಯನ್ನು ಹಾಕಲಾಗುವುದು, ಮಂಗಳವಾರ ದಿವಸ ಕೋಣ ಬಲಿಯನ್ನು ಕೊಡಲಾಗುವುದು.

ಮೂರನೇ ದಿವಸದಲ್ಲಿ ಸಾಯಂಕಾಲ ಸಮಯದಲ್ಲಿ ಗಂಗಮ್ಮನ ಪೂಜೆ ಮಾಡುವುದರ ಸಲುವಾಗಿ ಹೊಳೆಗೆ ಪೋತರಾಜ ಹೋಗುತ್ತಾರೆ. ಪೋತರಾಜ ಅಲ್ಲಿ ಸ್ನಾನ ಮಾಡಿಕೊಂಡು, ತನ್ನ ಮುಖಕ್ಕೆ ಕುಂಕುಮ, ಅರಿಶಿಣ ಹಚ್ಚಿಕೊಳ್ಳುತ್ತಾನೆ. ಅದರಲ್ಲಿ ಹಿರಿಯ ವ್ಯಕ್ತಿಯು ಗಂಗಾಮಗಿಗೆ ಪೂಜೆ ಮಾಡುತ್ತಾರೆ. ಅದರ ಎದುರುಗಡೆಯಲ್ಲಿ ಕಳಸದ ಆರತಿ ಇರುವುದು. ಮಾರಮ್ಮ ಪೂಜಾರಿಯು ಗಂಗಾಮಗಿಯನ್ನು ತಲೆಮೇಲೆ ಹೊತ್ತುಕೊಂಡು ಬರುತ್ತಾನೆ ಹಾಗೂ ಹಿರಿಯ ವ್ಯಕ್ತಿಯಾದ ಪೋತರಾಜ ಉರುಮೆ, ಹಲಗೆ ವಾದ್ಯಕ್ಕೆ ತಕ್ಕಂತೆ ಮೈಗೆ ಲಡ್ಡುನಿಂದ ಬಾರಿಸಿಕೊಳ್ಳುವನು.

ಗಂಗಾ ಹೊಳೆಗೆ ಬಂದ ನಂತರ ಗಾಬ ಸಿಗಿಯುವ ಕಾರ್ಯಕ್ರಮ. ಇದಕ್ಕಾಗಿ ಕರಿಹೋತ ಒಂದನ್ನ ಗೊಲ್ಲ ಸಮುದಾಯದವರು ಕಾಣಿಕೆಯಾಗಿ ನೀಡುತ್ತಾರೆ. ಗೌಡ್ರ ಮನೆಯಲ್ಲಿ ಕಪ್ಪು ಮೇಕೆಯನ್ನು ಬಚ್ಚಿಡಲಾಗುವುದು. ಈ ಕಪ್ಪು ಹೋತುವಿಗೆ ಬಾಳೆಹಣ್ಣು, ಹಾಲು ಮಾತ್ರ ನೀಡಲಾಗುವುದು. ಮೇವನ್ನು ಕೊಡಲಾಗುವುದಿಲ್ಲ. ಪೋತರಾಜನು ಊರಿನ ಪ್ರಮುಖ ಸ್ಥಳಗಳಲ್ಲಿ ಉರುಮೆ, ಹಲಗೆ ವಾದ್ಯದೊಂದಿಗೆ ಕುಣಿಯುತ್ತಾನೆ. ಬಾಯಿ ಮಾತಿನ ಮೂಲಕ ಪಿಟಿ, ಪಿಟಿ ಮಂತ್ರಗಳನ್ನು ಹೇಳುತ್ತಾ, ಹಾಹೂಹೂ ಅನ್ನುತ್ತಾ ಗೌಡ್ರ ಮೇಕೆಯನ್ನು ಹುಡುಕಿಕೊಂಡು ದೇವಸ್ಥಾನ ಹತ್ತಿರ ಬರುವನು.

ಪೋತರಾಜ ಕಪ್ಪು ಮೇಕೆಯನ್ನು ಹೊತ್ತುಕೊಂಡು ಮಾರಮ್ಮನ ಗುಡಿಯ ಸುತ್ತಾ ಸುತ್ತಿದ ನಂತರ, ಆತ ಕಪ್ಪು ಮೇಕೆಯ ಕಿವಿಯಲ್ಲಿ ಗಾಳಿಯನ್ನು ತುಂಬುವುದರ ಅದನ್ನ ಎಚ್ಚರ ತಪ್ಪಿಸಿ ಮಲಗಿಸುತ್ತಾನೆ. ಪೋತರಾಜನು ಜನರ ಹತ್ತಿರ ಕಾಣಿಕೆಯನ್ನು ಸ್ವೀಕರಿಸುತ್ತಾನೆ. ಅವರ ಎದುರುಗಡೆಯಲ್ಲಿ ಒಂದು ಸಣ್ಣ ಕುಣಿಯನ್ನು ತೆಗೆಯಲಾಗುವುದು. ಅದಕ್ಕೆ ಸಗಣಿ ನೀರಿನಿಂದ ಸಾರಿಸಲಾಗುವುದು ಮತ್ತು ರಂಗೋಲಿಯನ್ನು ಹಾಕಲಾಗುವುದು. ಪೋತರಾಜನು ಕಪ್ಪು ಮೇಕೆಯನ್ನು ಎರಡು ಕಾಲುಗಳಿಂದ ಹಿಡಿದುಕೊಂಡು, ತನ್ನ ಹಲ್ಲಿನಿಂದ ಮೇಕೆಯ ಕೊರಳ ಚರ್ಮವನ್ನು ಮೊದಲು ಜಿಗಿಯುತ್ತಾನೆ. ಈ ಸಂದರ್ಭದಲ್ಲಿ ಹಲಗೆಗಳು, ಉರುಮೆಗಳು, ವಾದ್ಯಗಳು ಅರ್ಭಟಿಸುವುದರಿಂದ ತನ್ನ ರೋಷವನ್ನು ಕಪ್ಪು ಮೇಕೆಯ ಮೇಲೆ ತೋರಿಸುತ್ತಾ, ಹಲ್ಲಿನಿಂದ ಸಂಪೂರ್ಣ ಸಿಗಿದು, ತನ್ನ ಪಕ್ಕದಲ್ಲಿ ಇಬ್ಬರು ವ್ಯಕ್ತಿಗಳು ಬಿಳಿ ವಸ್ತ್ರವನ್ನು ಹಿಡಿದುಕೊಂಡಿರುವುದು ಕಂಡು ಆ ಬಟ್ಟೆ ಮೇಲೆ ಜಿಗಿದ ಹಸಿ ಮಾಂಸವನ್ನು ಪೋತರಾಜನು ಉಗುಳುವನು. ನಂತರ ಗಡಿಗೆಯಲ್ಲಿನ ಹಾಲಿನ ರಸವನ್ನು ಗಾಬ ಸಿಗಿಯುವ ವ್ಯಕ್ತಿಗೆ ಕುಡಿಸುತ್ತಾರೆ. ಈ ಸಂಪ್ರದಾಯ ಇಂದಿನ ದಿನಗಳಲ್ಲಿ ಕುರಿಪಟ್ಟಿ,

ಗ್ರಾಮ, ಕೂಡ್ಲಿಗಿ ತಾಲ್ಲೂಕು, ಕೋಡಿ ದುರ್ಗಾಮ್ಮ ಗುಡೇಕೋಟೆ, ಮುಂತಾದ ಸ್ಥಳಗಳಲ್ಲಿ ಇಂದಿನವರೆಗೂ ಕಂಡುಬರುತ್ತದೆ. ಈ ಗ್ರಾಮಗಳಲ್ಲಿ ಈ ಆಚರಣೆಯನ್ನು ಚಾಚೂ ತಪ್ಪದೆ ಅನುಸರಿಸಿಕೊಂಡು ಬಂದಿದ್ದಾರೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಈ ಸಂಪ್ರದಾಯಕ್ಕೆ ಅಷ್ಟೇನೂ ಮಹತ್ವ ಕೊಡುತ್ತಿಲ್ಲ. ಇದೊಂದು ಅನಿಷ್ಠ ಸಂಪ್ರದಾಯವೆಂದು ಸಮಾಜ ಇದನ್ನು ಗುರುತಿಸಿದೆ. ದೈವರಾಧನೆಯ ಹಿನ್ನೆಲೆಯಲ್ಲಿ ಹುಟ್ಟಿದರೂ ಇದರಲ್ಲಿ ಕಲಾ ವೈಶಿಷ್ಠತೆಯೇನೂ ದೊರೆಯಲಾರದು. ಇಂದು ಈ ಪೋತರಾಜ ಗಾಬಸಿಗಿಯುವುದರ ಮೂಲಕ ತನ್ನ ಕುಟುಂಬದವರನ್ನು ಬದುಕಿಸುತ್ತಾನೆ. ಅಲೆಮಾರಿಯಾಗಿದ್ದ ಈ ಪೋತರಾಜ ಇಂದಿನ ದಿನದಲ್ಲಿ ನಿಶ್ಚಿತ ಮನೆ ಮಾಡಿಕೊಂಡು ಗೈರಾಣ ಆಸ್ತಿಯನ್ನು ಹೊಂದಿರುತ್ತಾನೆ.

ವಲಸೆ

ವಲಸೆ ಒಂದು ಸಾಮಾಜಿಕ ಪ್ರಕ್ರಿಯೆ. ದುರುಗಮುರಗಿ ಸಮುದಾಯ ಮೂಲತಃವಾಗಿ ಆಂಧ್ರದಿಂದ ಬಳ್ಳಾರಿಗೆ ಅಲೆಮಾರಿಯಂತೆ ಬಂದಿದೆ. ಬಳ್ಳಾರಿ ಜಿಲ್ಲೆಯಲ್ಲಿ ವಾಸ ಮಾಡುತ್ತಿರುವ ಈ ಸಮುದಾಯದ ವೃತ್ತಿ ಭಿಕ್ಷಾಟನೆಯಾಗಿದೆ. ಹಿಂದಿನಿಂದಲೂ ಜನರು ಒಂದಲ್ಲ ಒಂದು ಕಾರಣಕ್ಕಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗಿದ್ದಾರೆ. ಮಾನವ ಸಂಘಜೀವಿ ಹುಟ್ಟಿನಿಂದ ಮುಪ್ಪಿನವರೆಗೆ ನೆರೆ ಹೊರೆಯವರ ಸಂಪರ್ಕ ಇಟ್ಟುಕೊಂಡು ಬದುಕುಬೇಕಾಗುತ್ತದೆ. ಮನುಷ್ಯ ತನ್ನ ಅನುಕೂಲಕ್ಕೆ ತಕ್ಕಂತೆ ಬದುಕುತ್ತ ಮತ್ತು ಮಾತನಾಡುವ ಚಾತುರ್ಯ ಉಳ್ಳವನಾದ್ದರಿಂದ ಕೆಲವು ಸಂದರ್ಭಗಳಲ್ಲಿ ತನ್ನ ಹುಟ್ಟೂರನ್ನು ತ್ಯಜಿಸಬಹುದು. ಅಥವಾ ಪ್ರಬಲವಾದ ಒತ್ತಡಗಳಿಂದ ಸ್ವಂತ ನೆಲೆಯನ್ನು ಬಿಡಬಹುದು. ಅಥವಾ ಆಕರ್ಷಕ ಅಂಶಗಳಿಗೆ ಮಾರು ಹೋಗಿ ವಲಸೆ ಹೋಗಬಹುದು. ದುರುಗಮುರಗಿ ಸಮುದಾಯ ವಲಸೆ ಬರಲು ಕಾರಣ

೧. ತಮ್ಮ ಹುಟ್ಟೂರಿನಲ್ಲಿ ಸಂಭವಿಸುವ ಬರಗಾಲ ಮತ್ತು ಕೋಮು ಗಲಭೆಗಳಿಂದ
೨. ಬಳ್ಳಾರಿ ಜಿಲ್ಲೆಯ ತಾಲ್ಲೂಕುಗಳಲ್ಲಿ ಯತೇಚ್ಛವಾಗಿ ಕಡಿಮೆ ದರದಲ್ಲಿ ಸಿಕ್ಕುತ್ತಿರುವ ಜೀವನಾವ್ಯಶಕ ವಸ್ತುಗಳು.
೩. ಹೊಸ ಪರಿಸರದಲ್ಲಿ ಜೀವಿಸುವ, ಹೊಸ ಜನರೊಡನೆ ಬೆರೆಯುವ, ಹೊಸದನ್ನು, ಸ್ವೀಕರಿಸುವ ಹಂಬಲ.
೪. ದುರುಗಮುರಗಿ ಸಮುದಾಯದವರು ತಮ್ಮ ಜೀವನದಲ್ಲಿ ಸುಖಿಗಳಾಗಿ ಬದುಕುವ ಉತ್ಕಟತೆ.
೫. ಈ ಜಿಲ್ಲೆಯಲ್ಲಿ ಆಧುನೀಕರಣದಿಂದ ಸೃಷ್ಟಿಯಾದ ವಿವಿಧ ಚಾಕರಿಗಳು.
೬. ಇತರೆ ಸಮುದಾಯಗಳೊಂದಿಗೆ ಸಹ ಜೀವನದಿಂದ ದೊರೆತ ಪ್ರೋತ್ಸಾಹ.

ಈ ಅಂಶಗಳಿಂದ ದುರುಗಮುರಗಿ ಸಮುದಾಯದವರು ಬಳ್ಳಾರಿ ಜಿಲ್ಲೆಗೆ ವಲಸೆ ಬಂದಿರಬಹುದು.

ದುರುಗಮುರಗಿ ಸಮುದಾಯದಲ್ಲಿ ದ್ವಿಭಾಷಿಕತೆ : ಮನುಷ್ಯ ಸಂಘ ಜೀವಿ ಆಗಿರುವುದರಿಂದ, ಸಮಾಜದಿಂದ, ವ್ಯಕ್ತಿಯಿಂದ ಭಾಷೆಯನ್ನು ಬೇರ್ಪಡಿಸಲು ಸಾಧ್ಯವಿಲ್ಲ. ತಮ್ಮ ಸಮುದಾಯದ ಭಾಷೆ ಸಮಾಜದ ಬೆಳವಣಿಗೆಗೆ ಬಹು ಸಹಾಯಕವಾಗಿದೆ. ಸಮಾಜದ ಎಲ್ಲಾ ಅಂಶಗಳೊಡನೆ ಭಾಷೆಯು ಬೆರೆತುಕೊಂಡಿದೆ. ಹೀಗಾಗಿ ಭಾಷೆ ಸಮಾಜದ ಪ್ರತಿನಿಧಿ. ವ್ಯಕ್ತಿ ಯಾವ ಸಾಮಾಜಿಕ ಪರಿಸರದಲ್ಲಿ

ವಾಸಿಸುವನೋ ಆಯಾ ಸಾಮಾಜಿಕ ಪರಿಸರದ ಭಾಷೆಯನ್ನು ತಮ್ಮ ವ್ಯವಹಾರಿಕ ಭಾಷೆಯನ್ನಾಗಿ ಸ್ವೀಕರಿಸಬೇಕಾಗುತ್ತದೆ.

ಸಮಾಜದಲ್ಲಿ ಯಾವುದೇ ಸಾಮಾಜಿಕ ವರ್ಗದವರ ಸಂಖ್ಯೆ ಹೆಚ್ಚಿರಲಿ, ಕಡಿಮೆ ಇರಲಿ, ಅವರ ಆಚಾರವಿಚಾರ, ನಡೆ ನುಡಿ ಇತ್ಯಾದಿಗಳಿಗೆ ಸಂಬಂಧಿಸದಂತೆ ಅವರದೇ ಭಾಷೆ ರೂಪಿತವಾಗಿರುತ್ತದೆ.[೩] ದುರುಗಮುರಗಿ ಸಮುದಾಯದವರು ತೆಲುಗು ಭಾಷೆಯನ್ನು ಮಾತಾಡುತ್ತಾರೆ. ಇವರು ವಾಸಿಸುವ ಗುಡಾರಗಳಲ್ಲಿ ತೆಲುಗು ಭಾಷೆಯನ್ನು ವ್ಯಾವಾಹರಿಕವಾಗಿ ಬಳಸುತ್ತಾರೆ. ಹೊರಗಡೆ ಭಿಕ್ಷಾಟನೆಗೆ ಹೋದಾಗ ಕನ್ನಡವನ್ನು ಮಾತನಾಡುತ್ತಾರೆ.

ದುರುಗಮುರಗಿ ಸಮುದಾಯದವರು ಎರಡು ಭಾಷೆಗಳ ಮೇಲೆ ಸಮಾನ ಪ್ರಭುತ್ವವುಳ್ಳವರು. ಮನರಂಜನಾ ಕಾರ್ಯಕ್ರಮಗಳು ತೆಲುಗು ಭಾಷೆಗಳಲ್ಲಿದ್ದರೆ ಕೇವಲೂ ಹೆಚ್ಚಾಗಿ ಜನ ಇಷ್ಟಪಡುತ್ತಾರೆ. ಇವರ ಆಚರಣೆಗಳಾದ ನ್ಯಾಯ ಪಂಚಾಯಿತಿ, ವಿವಾಹ ಸಂದರ್ಭಗಳು ಮತ್ತು ಇನ್ನಿತರೆ ಶುಭ ಕಾರ್ಯಗಳ ಸಂದರ್ಭಗಳಲ್ಲಿ ತೆಲುಗು ಭಾಷೆಯನ್ನು ಕಡ್ಡಾಯವಾಗಿ ಮಾತನಾಡುತ್ತಾರೆ.

ದುರುಗಮುರಗಿ ಸಂಸ್ಕೃತಿ

ಜನರು ಸಂಸ್ಕೃತಿ ಎಂಬ ಪದವನ್ನು ಬಹಳ ಶಿಥಲವಾದ ಅರ್ಥದಲ್ಲಿ ಉಪಯೋಗಿಸುತ್ತಾರೆ. ಕೆಲವೊಮ್ಮೆ ನಾಗರೀಕತೆಯನ್ನು ಸೂಚಿಸಲು ಇದೇ ಪದವನ್ನು ಬಳಸುವರು. ಆದರೆ 'ಸಂಸ್ಕೃತಿ' ಎಂಬ ಪದಕ್ಕೆ ವಿಶೇಷ ಅರ್ಥವಿದೆ. ಸಂಸ್ಕಾರದಿಂದ ಸಂಸ್ಕೃತಿ ಬಂದಿದೆ.

ಸಂಸ್ಕಾರವೆಂದರೆ ಸುಧಾರಿಸುವುದು, ಅಂದವಾಗಿಸುವುದು, ಚೆನ್ನಾಗಿರುವಂತೆ ಮಾಡುವುದು, ಉತ್ತಮ ಪಡಿಸುವುದು, ಸುಸಂಸ್ಕೃತಗೊಳಿಸುವುದು ಎಂದರ್ಥ. ಸಾಮಾನ್ಯವಾಗಿ, ಉತ್ತಮ ಆದರ್ಶಗಳಿಂದ ಮಾನವನ ಜೀವನವನ್ನು ಅಂದವಾಗಿಸಿಕೊಳ್ಳುವ, ಉತ್ತಮ ಪಡಿಸುವ ಮತ್ತು ಮೌಲ್ಯಗಳನ್ನಾಧರಿಸುವಂತೆ ಮಾಡಿಕೊಳ್ಳುವ ವಿಧಾನವನ್ನು ಸಂಸ್ಕೃತಿ ಎನ್ನುತ್ತೇವೆ. ಸಂಸ್ಕೃತಿ ಎಂಬ ಶಬ್ದವನ್ನು ಇಂಗ್ಲೀಷಿನ 'Culture' ಎಂಬುದಕ್ಕೆ ಸಂವಾದಿಯಾಗಿ ಉಪಯೋಗಿಸಲಾಗುತ್ತದೆ.

ಈ ಮಾತು ನಮಗೆ ಹೊಸತು. ಆದರೆ ಇದರ ಹಿಂದಿರುವ ಅರ್ಥ ಹೊಸದಲ್ಲ. Culture ಎಂಬುದರ Cult ಅಥವಾ Cultus ಎಂಬುದು. ಗೌರವಿಸು, ಆರಾಧಿಸು, ಸೇವೆ ಮಾಡು ಮೊದಲಾದ ಅರ್ಥಗಳನ್ನು ಇದು ಕೊಡುತ್ತದೆ. ದೈವ ಭಕ್ತಿ ಎಂಬ ಅರ್ಥವನ್ನು ಒಂದು ಕಡೆ ಇದು ಪಡೆದರೆ, ಇನ್ನೊಂದು ಕಡೆ ಭೂದೇವಿ ಆರಾಧನೆ ಅಂದರೆ ಕೃಷಿ ಎಂಬ ಅರ್ಥವನ್ನು ಪಡೆದಿದೆ. ಯಾವುದೇ ವಸ್ತುವನ್ನು, ವ್ಯಕ್ತಿಯನ್ನು ಅಥವಾ ಹಿರಿಯರನ್ನು, ಹೆತ್ತವರನ್ನು ಅನ್ನ ನೀಡುವ ಭೂಮಿಯನ್ನು ಇಲ್ಲವೇ ಕೃಷಿಕಾಲದಲ್ಲಿ ಸಹಾಯ ಮಾಡಿದವರನ್ನು ನೆನೆಯುವುದು ಸಂಸ್ಕೃತಿಯಾಗುತ್ತದೆ.

ಸಂಸ್ಕೃತಿ ಎಂಬ ಪದ ಇತ್ತೀಚಿಗೆ ಬಳಕೆಗೆ ಬಂದದ್ದು, ಆದರೆ ಸಂಸ್ಕಾರ ಎಂಬ ಪರ್ಯಾಯ ಪದ ಪೂರ್ವದಿಂದಲೂ ಬಳಕೆಯಲ್ಲಿದೆ. ಸಂಸ್ಕಾರ ಅಥವಾ ಸಂಸ್ಕರಣಾ ಎಂದರೆ ಸಮ್ಯುಕ್ ಕರಣ-ಸಮ್ಯುಕ್ ಕೃತಿ-

ಸಂಸ್ಕೃತಿ ಎಂಬುದು ಡಿ.ವಿ.ಜಿಯವರ ಅಭಿಪ್ರಾಯ-ಸಂಸ್ಕೃತಿ Agriculture ಪದವನ್ನು ನಾವು ಕನ್ನಡದಲ್ಲಿ ವ್ಯವಸಾಯವೆಂದು ಕರೆಯುತ್ತೇವೆ.[೪] ೧. ಭೂಮಿಯನ್ನು ಹದಗೊಳಿಸಿ ಉತ್ತಿ-ಭಿತ್ತಿ, ನೀರು ಗೊಬ್ಬರ ಹಾಕಿ ಬೆಳೆಯನ್ನು ಬೆಳೆಯಲಾಗುತ್ತದೆ. ಅದೇ ರೀತಿ ಮನುಷ್ಯನಲ್ಲಿರುವ ವಿಶೇಷವಾದ ಶಕ್ತಿಗಳ ಮೊಳಕೆಯೊಡೆದು ಬೆಳೆಯುವುದಕ್ಕಾಗಿ ಮಾಡಬೇಕಾದ ಕ್ರಿಯೆ ಮತ್ತು ಅಂತರಂಗವನ್ನು ವಿಶಾಲಗೊಳಿಸುವುದೇ ಸಂಸ್ಕೃತಿ ಎಂದು ಹೇಳುತ್ತಾರೆ.

ಪ್ರಕೃತಿಯ ಪರಿಷ್ಕೃತ ರೂಪವೇ ಸಂಸ್ಕೃತಿ. ಪ್ರಕೃತಿ ಶಿವಮಯವಾದರೆ ಸಂಸ್ಕೃತಿ ವ್ಯಕ್ತಿತ್ವಮಯ. ವ್ಯಕ್ತಿಯೋರ್ವ ಹುಟ್ಟಿನೊಡನೆ ತನ್ನೊಂದಿಗೆ ಬಂದ ಪಶುತ್ವವನ್ನು ಹೋಗಲಾಡಿಸಿ ವ್ಯಕ್ತಿತ್ವವನ್ನು ಸಾಧಿಸುವುದೇ ಸಂಸ್ಕೃತಿ. ವಿಶಾಲಾರ್ಥದಲ್ಲಿ ಸಂಸ್ಕೃತಿಯೆಂಬುದು ವ್ಯಕ್ತಿಯ ಒಳಿತು ಕೆಡಕು, ಮನಸ್ಸು ದಾಹ, ಭೌತಿಕ ಅಭೌತಿಕಗಳನ್ನೊಳಗೊಂಡ ಅವಿರತ ಸಂಘರ್ಷದ ಫಲವೆನ್ನಬಹುದು. ಸಂಸ್ಕೃತಿಯು ಕೇವಲ ವ್ಯಕ್ತಿಯ ಸೊತ್ತು ಮಾತ್ರವಲ್ಲದೆ ಉಳಿದೆಲ್ಲ ಪ್ರಾಣಿ ಮಾರ್ಗದಿಂದ ಬೇರ್ಪಡಿಸುವ ವಿಶಿಷ್ಟಾಂಶವು ಆಗಿದೆ.[೫]

ಸಂಸ್ಕೃತಿ ಮತ್ತು ನಾಗರೀಕತೆಗಳನ್ನು ಸಾಮಾನ್ಯವಾಗಿ ಒಂದೇ ಅರ್ಥದಲ್ಲಿ ಬಳಸಲಾಗುತ್ತದೆ. ಇವೆರಡು ವ್ಯಕ್ತಿ ಜೀವನಕ್ಕೆ ಸಂಬಂಧಿಸಿದವೇ, ಆದರೂ ಅವುಗಳಲ್ಲಿ ಸೂಕ್ಷ್ಮವಾದ ವ್ಯತ್ಯಾಸವಿದೆ. 'ನಾಗರಿಕತೆ' ವ್ಯಕ್ತಿಯ ಬಹಿರಂಗ ಜೀವನಕ್ಕೆ ಸಹಾಯಕಾರಿಯಾದ ಅಂಶಗಳನ್ನು ನಿರ್ದೇಶಿಸಿದರೆ, ಸಂಸ್ಕೃತಿ ಆತನ ಅಂತರಂಗ ಜೀವನಕ್ಕೆ ಕನ್ನಡಿಯಾಗಿ ಪರಿಣಮಿಸುತ್ತದೆ. ಮಾನವ ಜೀವನದ ಈ ಎರಡು ರಂಗಗಳ ಉದ್ದೇಶ ಸಂತೋಷವನ್ನೊದಗಿಸುವುದು. ನಾಗರಿಕತೆ, ದೈಹಿಕ ಸಂತೋಷದ ಕಡೆಗೆ ಹೆಚ್ಚು ಗಮನವನ್ನು ಕೊಡುತ್ತದೆ.

ನಾಗರಿಕತೆಗೆ ಎಟುಕಲಾರದ ಸಂತೋಷವನ್ನು ಸಾಧಿಸಲು ಸಂಸ್ಕೃತಿ ಪ್ರಯತ್ನಿಸುತ್ತದೆ. ಈ ದೃಷ್ಟಿಯಲ್ಲಿ ಸಂಸ್ಕೃತಿ ಎಂಬುದು ಪರಿಪೂರ್ಣತೆ, ಸಂತೋಷವನ್ನು ಹುಡುಕುವ ಸಾಹಸದ ಫಲ ಎಂದು ಹೇಳಬಹುದು. Cult ಅಥವಾ Cultus, Culture ಪದಕ್ಕೆ ಸಮನಾಗಿ ಸಂಸ್ಕೃತಿ ಎಂಬುದಕ್ಕೆ ಒಪ್ಪಿಕೊಂಡ ನಾವುಗಳು, ಭೂ ದೇವಿಯ ಆರಾಧನೆ, ಗೌರವಿಸುವುದು, ದೈವಭಕ್ತಿ, ಎಲ್ಲವನ್ನು ಸಂಸ್ಕೃತಿ ಎಂದು ಕರೆದರೆ, ಜನಪದರಲ್ಲಿ ಜೀವನದ ಸುತ್ತ ಮುತ್ತಲಿನ ಪರಿಸರ, ಅಲಂಕಾರಿಕ ವಸ್ತುಗಳೆಲ್ಲವನ್ನು ಸಂಸ್ಕೃತಿ ಎಂದು ಬಹು ಹಿಂದೆಯೇ ಒಪ್ಪಿಕೊಂಡಿದ್ದೇವೆ.

ಇತ್ತೀಚಿಗೆ ಸಂಸ್ಕೃತಿಯೆಂದು ಗುರುತಿಸಿ ಹಲವಾರು ಸಮಾಜಶಾಸ್ತ್ರಜ್ಞರು, ಮನಶಾಸ್ತ್ರಜ್ಞರು ಇದರ ಬಗ್ಗೆ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅವುಗಳ ಕೆಲವನ್ನು ಮಾತ್ರ ಉದಾಹರಣೆ ನೀಡುತ್ತೇನೆ.

ಮ್ಯಾಥ್ಯೂ ಅರ್ನಾಲ್ಡ್‌ರು ... "ಪರಿಪೂರ್ಣತೆಯ ಬಯಕೆಯೇ ಸಂಸ್ಕೃತಿಯ ಉಗಮಸ್ಥಾನ ವೈಜ್ಞಾನಿಕ ಕುತೂಹಲವು ಸಂಸ್ಕೃತಿಯ ಉಗಮ ಸ್ಥಾನವಲ್ಲ. ಸಂಸ್ಕೃತಿಯ ಮೂಲಭೂತ ಸಾಮಾಗ್ರಿ ಪೂರ್ಣತೆಯ ಪ್ರೇಮ ಮತ್ತು ಪೂರ್ಣತೆಯ ಅಧ್ಯಯನ. ಈ ಅಧ್ಯಯನ ಬುದ್ಧಿಯನ್ನು ಶ್ರೀಮಂತಗೊಳಿಸುವುದಷ್ಟೇ ಸಂಸ್ಕೃತಿಯಾಗಬಾರದು. ಅದು ಹೃದಯದ ಪರಿಪಕ್ವತೆಗೆ ಸಹಕಾರಿಯಾಗಬೇಕು. ಅದು ಸಂಸ್ಕೃತಿ ಎನಿಸಿಕೊಳ್ಳುತ್ತದೆ.

ತನ್ನ ಸಂಸ್ಕೃತಿಯ ಬೆಳಕಿನಿಂದ ಪ್ರಪಂಚವನ್ನು ಸುಖಮಯವನ್ನಾಗಿ ಮಾಡುವ ಬಯಕೆ ಆತನದು ಈ ಉದಾತ್ತ ಬಯಕೆಯೇ ಸಂಸ್ಕೃತಿ ಎಂಬ ಅರ್ನಾಲ್ಡ್‌ನ ಹೇಳಿಕೆ ಅರ್ಥಪೂರ್ಣವಾಗಿದೆ.[೬]

ಮಾನವಶಾಸ್ತ್ರಜ್ಞನಾದ ಎಡ್ವರ್ಡ್ ಟೈಲರ್ ನಾಗರಿಕತೆ ಹಾಗೂ ಸಂಸ್ಕೃತಿಗಳನ್ನು ಪರ್ಯಾಯ ಪದಗಳೆಂಬಂತೆ ಬಳಸಿ "ಮಾನವನ ತಿಳುವಳಿಕೆ, ನಂಬಿಕೆ, ಕಲೆ, ನೀತಿ ನಿಯಮಗಳು, ಕಾನೂನು, ಸಂಪ್ರದಾಯ ಇತ್ಯಾದಿಯಿಂದ ಸಮಾಜದ ಸದಸ್ಯನಾದ ಮಾನವನ ಎಲ್ಲಾ ಶಕ್ತಿ ಸಾಮರ್ಥಗಳನ್ನು, ಹವ್ಯಾಸಗಳನ್ನು ಒಳಗೊಳ್ಳುವುದೆಂದು ಹೇಳುತ್ತಾನೆ.[೭] ಇವನ ವ್ಯಾಖ್ಯೆಯ ಪ್ರಕಾರ ಮಾನವನ ವೈಜ್ಞಾನಿಕ ತಾಂತ್ರಿಕ ತಿಳುವಳಿಕೆಯ ಅವುಗಳ ನೆರವಿನಿಂದ ಸೃಷ್ಟಿಯಾದ ಸಾಮಗ್ರಿಗಳು ಸಂಸ್ಕೃತಿಯ ವ್ಯಾಪ್ತಿಯಲ್ಲಿಯೇ ಸೇರುತ್ತವೆ. ಟೈಲರ್ ಅವರ ಈ ವ್ಯಾಪಕ ವ್ಯಾಖ್ಯೆಯು ಈಗಲೂ ಆಧುನಿಕ ಮಾನವಶಾಸ್ತ್ರದಲ್ಲಿ ಆಧಾರ ಭೂತವಾದ ಸಿದ್ಧಾಂತವಾಗಿದೆ. "ಪೂರ್ವಿಕರಿಂದ ಹೊಂದಿದ ಕಲಾಪ್ರತೀಕಗಳು, ವಸ್ತು ವಿಶೇಷಗಳು, ಯಂತ್ರ ತಂತ್ರಗಳು, ವಿಧಾನಗಳೂ, ರೂಢಿ ಮೌಲ್ಯಗಳೆಲ್ಲವೂ ಸಂಸ್ಕೃತಿಯ ಅಂಶಗಳೇ ಎಂಬ ಹೇಳಿಕೆಯೂ ಇದೆ.[೮] ಒಟ್ಟಿನಲ್ಲಿ ಸಂಸ್ಕೃತಿ ಎಂದರೆ ಸಮಾಜದಲ್ಲಿ ಬದುಕುತ್ತಿರುವ ವ್ಯಕ್ತಿ ಇತರ ವ್ಯಕ್ತಿಗಳೊಂದಿಗೆ, ನಡೆಸುವ ಎಲ್ಲಾ ವ್ಯವಹಾರಗಳೂ ಕೊಡುವ ಪಡೆಯುವ ಎಲ್ಲಾ ವಸ್ತು, ವಿಚಾರಗಳು ಸಂಸ್ಕೃತಿಗೆ ಸೇರಿದವುಗಳಾಗಿವೆ.

ಹೆಚ್ಚಾಗಿ ಮಾನವಶಾಸ್ತ್ರಜ್ಞರನ್ನು ಅನುಸರಿಸಿದ ಈಲಿಯಟ್‌ನ "Culture if not merely a jum of Sevvel Activity But a way of Life"[೯] ಎಂದು ವಿಶಾಲಾರ್ಥದಲ್ಲಿ ಸಂಸ್ಕೃತಿಯನ್ನು ಪ್ರತಿಪಾದಿಸಿದ್ದಾರೆ. ಹೀಗೆ ವ್ಯಷ್ಟಿ-ಸಮಷ್ಟಿಗಳೆರಡನ್ನು ಅದರ ಸಮಸ್ತ ಜೀವನ ವಿಧಾನವನ್ನು ಒಳಗೊಂಡಿರುವ ಈಲಿಯಟ್‌ನ ಹೇಳಿಕೆಯನ್ನು ನಾವು ಹೆಚ್ಚು ಸೂಕ್ತವೆಂದು ತಿಳಿದಿದ್ದೇವೆ.

ಮೇಲಿನ ವ್ಯಾಖ್ಯೆಗಳು ಸಂಸ್ಕೃತಿಯ ಅರ್ಥ ಮತ್ತು ಸ್ವರೂಪಗಳ ಬಗ್ಗೆ ಸಾಕಷ್ಟು ಸಮರ್ಪಕ ಬೆಳಕು ಚೆಲ್ಲುತ್ತವೆ. ಸಂಸ್ಕೃತಿಯು, ಮಾನವನು ಈವರೆಗಿನ ತನ್ನ ಜೀವನದಲ್ಲಿ ರೂಢಿಸಿಕೊಂಡು ಬಂದಿರುವ ಸ್ವಯಂ ನಿರ್ಮಿತ ವ್ಯವಸ್ಥೆಗಳನ್ನು ಒಳಗೊಂಡಿರುತ್ತದೆ. ಅವನ ಸಮಸ್ತ ಸಾಧನೆಗಳನ್ನು, ಸಂಪೂರ್ಣ ಸಾಮಾಜಿಕ ಬಳುವಳಿಯನ್ನು ಪ್ರತಿಬಿಂಬಿಸುತ್ತದೆ. ಅದು ನಿರ್ದಿಷ್ಟ ಸಮಾಜದ ಜನರ ವರ್ತನೆಯಿಂದ ಬೇರೆಯಾಗಿರಬಹುದು. ಅಂತೆಯೇ ವಿಭಿನ್ನವಾದ ಸಂಸ್ಕೃತಿಗಳನ್ನು ಜಗತ್ತಿನಲ್ಲಿ ಕಾಣಬಹುದಾಗಿದೆ. ಬೇರೆ ಬೇರೆ ಸಂಸ್ಕೃತಿಯ ಜನರ ಪ್ರಕಾರಗಳು ಬದಲಾದರೂ, ಅವುಗಳೆಲ್ಲವೂ ಮಾನವ ಸಹಜವಾದ ಗುಣಗಳಿಂದ ತುಂಬಿರುತ್ತವೆ.

ಮಾನವ ನಿಸರ್ಗದ ಮಡಿಲಲ್ಲಿ ವಾಸ ಮಾಡುತ್ತಾ, ಜೀವನವನ್ನ ಪ್ರಗತಿ ಪಥದತ್ತ ಬೆಳೆಸಿಕೊಂಡನು. ಪ್ರಕೃತಿಯಲ್ಲಿರುವ ಪ್ರಬಲ ಶಕ್ತಿಗಳಾದ ಮಳೆ, ಗುಡುಗ, ಮಿಂಚು, ಬೆಳಕು ನೀಡುವ ಸೂರ್ಯ, ಚಂದ್ರ, ಅಲ್ಲದೇ ತಾನು ಪ್ರಯತ್ನಮಾಡಿ ದುಡಿದ ಭೂಮಿ ತಾಯಿಯ ಮಡಿಲಲ್ಲಿ ಬೆಳೆದ ಬೆಳೆಗಳನ್ನು ಪ್ರೀತಿಯಿಂದ ಪೂಜಿಸಿ ಶ್ರದ್ಧೆಯಿಂದ ಗೌರವಿಸಿದ. ಈ ಹಿನ್ನೆಲೆಯಲ್ಲಿ ಮಾನವ ಪ್ರಬಲ ಶಕ್ತಿಗಳನ್ನು ಒಲಿಸಿಕೊಳ್ಳುವುದಕ್ಕಾಗಿ ಹಲವಾರು ರೀತಿಯಲ್ಲಿ ಪ್ರಯತ್ನ ಮಾಡಿದ.

ಅವನ ಮೂಲಕವೇ ಈ ಪ್ರಕೃತಿಯ ಪ್ರಬಲ ಶಕ್ತಿಗಳೆಲ್ಲವೂ ದೈವತ್ವವನ್ನು ಪಡೆದುಕೊಂಡವು. ಹೀಗೆ ಪ್ರಕೃತಿ ಆರಾಧನೆ ಬಹುಮುಖ ರೀತಿಯಲ್ಲಿ ನಡೆದುಬಂದಿತು. ದುರುಗಮುರಗಿಯರು ಒಂದು ಅಲೆಮಾರಿ ಧಾರ್ಮಿಕ ಸಮುದಾಯ. ಇವರು ಹಾಡು, ಭಿಕ್ಷಾಟನೆ ಕುಣಿತಗಳು, ಹಳೆಯ ಸಂಪ್ರದಾಯ ಆಚರಣೆಗಳ ಮೂಲಕ ಪ್ರಕೃತಿಯ ಆರಾಧನೆ ಮಾಡುತ್ತಾರೆ. ದೃಷ್ಟ ಶಕ್ತಿಗಳ ವರ್ಗೀಕರಣ, ಅಪದ್ಬಾಂಧವ ಶಕ್ತಿಗಳನ್ನು ಸಂತೃಪ್ತಪಡಿಸುವುದು ಅವರ ಪ್ರಮುಖ ಕೆಲಸಗಳಲ್ಲಿ ಒಂದು. ಈ ಹಿನ್ನೆಲೆಯಲ್ಲಿ ದುರುಗಮುರಗಿಯರ ಸಾಹಿತ್ಯ, ಕಲೆಗಳು, ದೈವೀ ಆರಾಧನೆಯನ್ನೇ ಅವಲಂಬಿಸಿವೆ.

ದುರುಗಮುರಗಿಯವರ ಆರಾಧನೆ ಕಲೆಗಳು, ಸಾಹಿತ್ಯ, ಆಚರಣೆಗಳು ಮೂಲದಲ್ಲಿ ವೈಯುಕ್ತಿಕ ಸೃಷ್ಟಿಯಾಗಿದ್ದರೂ ತದನಂತರದಲ್ಲಿ ಮಾನವನಿಗೆ ಮಾನಸಿಕ ನೆಮ್ಮದಿಯನ್ನು ನೀಡಿದ್ದಲ್ಲದೆ, ಮನರಂಜನೆಯ ಮಾಧ್ಯಮಗಳಾಗಿವೆ. ಅಲ್ಲದೇ ಅವರ ಬದುಕಿನಲ್ಲಿ ಅಪೂರ್ವ ಸತ್ವಯುತ ಶಕ್ತಿಯ ಚೈತನ್ಯವನ್ನು ತಂದುಕೊಟ್ಟಿವೆ.

ಇವು ಆಚರಣೆಯ ಕಾಲದಲ್ಲಿ ಆತ್ಮ ಸಂತೋಷಕ್ಕಾಗಿ ದೈವ ತೃಪ್ತಿಗಾಗಿ, ಮೂಡಿ ಬಂದರೂ ಅನಂತರ ದಿನಗಳಲ್ಲಿ ಅವು ನಿಯಮ ಬದ್ಧವಾಗಿ ಸಂಪ್ರದಾಯವಾಗಿ, ಪರಂಪರೆಯಾಗಿ ಮಡುಗಟ್ಟಿವೆ. ಇವು ಲೌಕಿಕ ಪ್ರಯೋಜನಗಳಿಗಾಗಿ ಬಳಕೆಯಾಗುತ್ತಿರುವುದು, ಎಂದಿನಿಂದಲೂ ನಡೆದು ಬಂದಿದೆ. ಆದಿಮಾನವರಲ್ಲಿ ಬೆಳೆದುಕೊಂಡು ಬಂದಿರುವ ದುರುಗಮುರಗಿ ಸಮುದಾಯ ಸಾಮಾಜಿಕ ಜೀವನದ ಸಾಮಾನ್ಯ ಗೂಡಾರವೊಂದರಲ್ಲಿ ಕಂಡುಬರುವ ಅಡುಗೆ ಸಾಮಾನುಗಳು, ದೇವಿಯ ಮೂರ್ತಿ, ಮಲುಗುವ ಸಾಮಾನುಗಳು, ಕೆಲವೊಂದು ಉಪಕರಣಗಳು, ಕುಲದೇವತಾ ಚಿತ್ರಗಳು ಕಂಡುಬರುವುದು ಆರಾಧನೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡು ಸಂಪ್ರದಾಯಗಳು, ಹರಕೆಗಳು, ಜಾತ್ರಾ ಮಹೋತ್ಸವಗಳ ಭಾಗವಹಿಸುವಿಕೆ, ಮದುವೆ ಆಚರಣೆಗಳು ತಮ್ಮ ಚೌಕಟ್ಟಿನಲ್ಲಿ ನಡೆಯುವ ವಿಧಿ ಕ್ರಿಯೆಗಳಲ್ಲಿಯೂ ಸಾಮಾಜಿಕ ಜೀವನಕ್ಕೆ ಕುರುಹುಗಳಾಗಿವೆ ಎಂದು ಹೇಳಿದರೆ ಅತಿಶಯೋಕ್ತಿಯೇನಲ್ಲ.

ಆಧುನಿಕ ಸಮಾಜದ ಅಧ್ಯಯನಕ್ಕೆ ಕಾಲಾವಕಾಶವಿದೆಯಾದ್ದರಿಂದ ಅವುಗಳ ಅಧ್ಯಯನವನ್ನು ನಿಧಾನವಾಗಿ ಮಾಡಿದರೂ ನಡೆಯುತ್ತದೆ ಎಂದು ಭಾವಿಸಿ, ಆರಂಭ ಕಾಲದಲ್ಲಿ ಈ ಅಧ್ಯಯನಕ್ಕೆ ಹೆಚ್ಚುಗಮನ ಕೊಡದೆ, ಆದಿವಾಸಿಗಳ ಸಂಸ್ಕೃತಿಯ ಅಧ್ಯಯನಕ್ಕೆ ಗಮನಕೊಟ್ಟಿರುವುದು ತೀರ ಸಹಜವಾಗಿದೆ. ಇಷ್ಟಾದರೂ ಇಂದಿಗೂ ಅಧ್ಯಯನಕಾರರು ಮುಟ್ಟದ ಹಲವಾರು ಆದಿವಾಸಿ ಸಮಾಜಗಳಿವೆ. ಅವುಗಳ ಅಧ್ಯಯನ ಇತ್ತೀಚಿನ ದಿನದಲ್ಲಿ ನಡೆಯುತ್ತಿದೆ.

ಸಾಮಾಜಿಕ ಚಿಂತಕರಾದ ರ್‍ಯಾಡ್‌ಕ್ಲಿಪ್‌ಬ್ರೌನ್, ರಿವರ್ಸ್, ಸೆಲಿಗ್‌ಮನ್, ಪ್ರಾಂಟ್‌ಬೋಲಿಸ್, ಪೋರ್ಟಸ್, ಲೋವಿ, ಐಸಾರಂ ಸೆಪೇರಾ, ಮ್ಯಾಲಿನೋಸ್ಕಿ ಎವಾನ್ಸ್ ಪ್ರಿಚರ್ಡ್ಸ್, ರೇಮಂಡ್ ಫರ್ಟ್, ನಾಡೆಲ್ ಮೊದಲಾದ ಹಲವಾರು ಜನ ಮಾನವಶಾಸ್ತ್ರಜ್ಞರು ಆದಿವಾಸಿ ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನಗಳ

ಶ್ರೇಷ್ಠ ಮಾದರಿಗಳನ್ನು ಒದಗಿಸುತ್ತಾರೆ. ಇಂದು ಯಾವುದೇ ಬುಡಕಟ್ಟಿನ ಸಾಂಸ್ಕೃತಿಕ ಅಧ್ಯಯನ ಮಾಡಲು ತೊಡಗುವ ಸಂಶೋಧಕನೂ ಇವರ ಕೃತಿಗಳನ್ನುಅಗತ್ಯವಾಗಿ ಅಧ್ಯಯನ ಮಾಡಬೇಕಾಗುತ್ತದೆ.

"ಜನಪದ ಕಲೆಗಳು ಒಂದು ಪ್ರದೇಶ ಅಥವಾ ನಾಡಿನ ಭವ್ಯ ಪರಂಪರೆಯ ಅಪೂರ್ವ ಸ್ವತ್ತು. ಜನತೆಯ ಜೀವನ ವಿಧಾನ ಮೇಲೆ ಸಾಂಸ್ಕೃತಿಕ ಪರಂಪರೆಯ ಮೇಲೆ ಈ ಕಲೆಗಳು ಬೆಳಕು ಚೆಲ್ಲುತ್ತವೆ. ಹೀಗಾಗಿ ಕಲೆಗಳು ಮಾನವನ ಸಾಂಸ್ಕೃತಿಕ ಇತಿಹಾಸವನ್ನು ಅರಿತುಕೊಳ್ಳುವಲ್ಲಿ ತುಂಬಾ ಅರ್ಥಪೂರ್ಣ ಆಕರಗಳಿವೆ."[೧೦] ಎನ್ನುವ ಮಾತು, ಕಲೆ ಮತ್ತು ಸಂಸ್ಕೃತಿಯ ಮಹತ್ವವನ್ನು ಎತ್ತಿಹಿಡಿಯುತ್ತದೆ.

"ಜನಪದದಂತೆಯೇ ಜನಪದ ಸಂಸ್ಕೃತಿ, ಜನಪದ ಕಲೆ ಕೂಡ ಸಾಮಾನ್ಯ ಜನತೆಯ ಕಲೆಯಾದುದರಿಂದ ಅದು ಸರಳವಾಗಿ, ನೇರವಾಗಿ ಹಲವೊಮ್ಮೆ ಬದಲಾಗಿ ಇರುವುದು ಸಹಜ. ಜನಪದ ಕಲೆಗಳು ಸ್ವರೂಪ, ಉಗಮ, ವಿಕಾಸವೇ ಆದಿಯಾದ ಅನೇಕ ಮುಖ್ಯ ಸಂಗತಿಗಳನ್ನು ಸರಳ ರೀತಿಯಲ್ಲಿ ಸುಲಭವಾಗಿ ಪ್ರಸ್ತಾಪಿಸಿದ್ದಾರೆ. ಡಾ ಶಿವರಾಮಕಾರಂತರು "ಜನಪದ ಕಲೆಗಳು ಒಟ್ಟು ಸಮಾಜದಲ್ಲಿ ಜಾನಪದ ಕಲೆಗಳು ಇಲ್ಲದೆ ಹೋದರೆ, ಮಾರ್ಗವಾಗಿ ಕಲೆಗಳು ಹುಟ್ಟಲಾರವು. ಜಾನಪದ ಕಲೆಗಳು ಮೇಲ್ನೋಟಕ್ಕೆ ತೀರ ಸರಳವಾದವು. ಅವುಗಳಲ್ಲಿ ತಂತ್ರಶಾಸ್ತ್ರ ಸರಳವಾದುದು ನಮ್ಮ ಅನೇಕ ಜಾನಪದ ಕಲೆಗಳು ತಮ್ಮ ಸರಳ ಶಕ್ತಿಯಿಂದ ಸುತ್ತಲಿನ ಜನಪದರ ಮನಸ್ಸನ್ನು ಮುಟ್ಟಿಸಬಲ್ಲವು. ಸಂಸ್ಕರಿಸಬಲ್ಲವು."[೧೧] ಸಂಸ್ಕೃತಿ ಕೇವಲ ನಾಗರಿಕ ಸಮಾಜದಲ್ಲಿ ಅಷ್ಟೇ ಇದೆ ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು, ಶಿಲಾಯುಗದ ಕಾಲದಲ್ಲಿ ಕಲ್ಲಿನೊಂದಿಗೆ ಒಡನಾಟ ಇಟ್ಟುಕೊಂಡು ಜೀವನ ನಡೆಸಿದ ಬೆತ್ತಲೆ ಮಾನವನತ್ತ ನಾವು ಗಮನ ಹರಿಸಿದಾಗ ಅವರಲ್ಲಿಯೂ ಸಹ ಅವರದೇ ಆದ ಸಂಸ್ಕೃತಿಯ ಕುರುಹುಗಳನ್ನು ಕಂಡುಕೊಳ್ಳುತ್ತೇವೆ.

ದುರುಗಮುರಗಿ ಸಮುದಾಯವು ಅಲೆಮಾರಿಯಾಗಿ ವಾಸಿಸುವ ಪ್ರದೇಶಗಳಲ್ಲಿ ಗುಡಾರ ಹಾಕಿಕೊಂಡು, ಇತರ ಜನಸಮುದಾಯಗಳ ಜೊತೆಯಲ್ಲಿ ಸಂಪರ್ಕಗಳನ್ನಿಟ್ಟುಕೊಡಿದೆ. ಸಮುದಾಯದಲ್ಲಿನ ತಮ್ಮದೇ ಆಚರಣೆಗಳು, ನಂಬುಗೆಗಳು, ದೇವತಾರಾಧನೆ ಪದ್ದತಿ, ಸಾಮಾಜಿಕ ಕಟ್ಟುಕಟ್ಟಳೆ ಮುಂತಾದವುಗಳು ದುರುಗಮುರಗಿ ಸಮುದಾಯ ಸಂಸ್ಕೃತಿಯನ್ನು ರೂಪಿಸುವ ಅಂಶಗಳಾಗಿವೆ. ಅವರಲ್ಲಿ ಬಂದ ಜನಪದ ಕಲೆ, ಸಾಹಿತ್ಯ, ಸಂಗೀತ, ಉಡುಗೆ ತೊಡಿಗೆಗಳು ಇತ್ಯಾದಿಗಳು ಒಂದು ಕಾಲದಿಂದ ಮತ್ತೊಂದು ಕಾಲಕ್ಕೆ ಬಳುವಳಿಯಾಗಿ ಉಳಿದುಕೊಂಡಿರುವುದರಿಂದ ಅವು ಅವರದೇ ಆದ ಕೊಡುಗೆ ಎಂದೆನಿಸುತ್ತವೆ. ದುರುಗಮುರಗಿ ಸಮುದಾಯದಲ್ಲಿ ಹಿಂದಿನಿಂದಲೂ ಉಳಿದುಕೊಂಡು ಬಂದಿರುವ ಕಲಾ ಪ್ರದರ್ಶನಗಳು ಶಿಷ್ಟರಿಂದ ಅವಹೇಳನಕ್ಕೊಳಗಾದರೂ, ಇಂದು ನಮ್ಮ ಸಮಾಜದ ಮಧ್ಯೆ ಜೀವಂತವಾಗಿ ಉಳಿಯಲು ಕಾರಣವಾಗಿದೆ. ಪುರಾಣ, ಮಹಾಕಥೆಗಳನ್ನು ಹೇಳುವುದು, ಮದುವೆಯ ಸಂದರ್ಭದಲ್ಲಿ ಹಿತವಚನಗಳು ಹೇಳುವದು. ಹಾಡಿನ ಮುಖಾಂತರ ತಮ್ಮ ಕುಲ ದೇವರನ್ನು ಪೂಜಿಸುವುದು, ಅವರು ವೃತ್ತಾಂತವನ್ನು ಹಾಡಿಹೊಗಳುವುದು ಇವರ ಸಂಪ್ರದಾಯವಾಗಿದೆ.

ಅಡಿಟಿಪ್ಪಣೆಗಳು

೧. ಗೀತಾ ನಾಗಭೂಷಣ, ದುರಗಮುರಗಿಯರ ಸಂಸ್ಕೃತಿ, ಪುಟ: ೫

೨. ಡಾ. ಚಂದ್ರಶೇಖರ್ ಕಂಬಾರ, ಕರ್ನಾಟಕ ಜಾನಪದ ವಿಶ್ವಕೋಶ, ಪುಟ: ೧೦೩೮-೧೯೮೫

೩. ಟಿ. ಮಹದೇವಯ್ಯ, ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ, ಪುಟ: ೯

೪. ಡಿ.ವಿ.ಜಿ. ಸಂಸ್ಕೃತಿ, ಪುಟ: ೫

೫. Kingsley Davis, Human Societ - 1959

೬. Mathew Arnold, Culture and Anarchy

೭. Edword B. Tyore, Primitive Culture, vol-I

೮. B. Malinowosky, Encyclopaedie of social science. p: 691

೯. T.S. Eliot, Notes to wards the Defination of culture, p: 120

೧೦. ಪಿ.ಕೆ. ಖಂಡೋಬ, ಕರ್ನಾಟಕದ ಲಂಬಾಣಿಗಳು, ಪುಟ: ೧೭೨-೭೩

೧೧. ಶಿವರಾಮ ಕಾರಂತ್, ಕರ್ನಾಟಕ ಜಾನಪದ ಕಲೆಗಳು, ಪುಟ: ೩೬

❖❖❖❖❖

ಅಧ್ಯಾಯ ೨

ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಆರ್ಥಿಕ ಸ್ಥಿತಿಗತಿಗಳು

ಅ. ಸಾಮಾಜಿಕ ಜೀವನ

ಆ. ಶೈಕ್ಷಣಿಕ ಜೀವನ

ಇ. ಧಾರ್ಮಿಕ ಜೀವನ

ಈ. ಆರ್ಥಿಕ ಜೀವನ

ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಆರ್ಥಿಕ ಸ್ಥಿತಿಗತಿಗಳು

ಸಾಮಾಜಿಕ ಜೀವನ

ದುರುಗಮುರಗಿಯರು ಶತಮಾನಗಳಿಂದ ಒಂದು ಬಗೆಯ ಸಂಚಾರಿ ಜೀವನವನ್ನು ಕಳೆಯುತ್ತ ಬಂದಿದ್ದಾರೆ. ಸಾಮಾನ್ಯವಾಗಿ ದುರುಗಮುರಗಿಯರು ಊರುಗಳಿಂದ ದೂರದಲ್ಲಿ, ಕಾಡುಮೇಡುಗಳಲ್ಲಿ ಜೀವನ ಸಾಗಿಸುತ್ತಾರೆ. ತಮ್ಮ ಕುರಿ, ಮೇಕೆಗಳು ಹಾಗೂ ದನಕರುಗಳಿಗೆ ಗ್ರಾಮ ಸಮುದಾಯದಿಂದ ಹುಲ್ಲು, ನೀರಿನ ಸಮಸ್ಯೆ ಉಂಟಾಗದಿರಲೆಂದು, ತಮ್ಮ ಬದುಕಿಗೆ ಗ್ರಾಮ ಸಮುದಾಯದ ನಿರ್ಬಂಧನೆಗಳು, ಕಟ್ಟುಕಟ್ಟಳೆಗಳು ಅನ್ವಯವಾಗದಂತೆ ಸಾಮಾನ್ಯವಾಗಿ ಊರು ಹೊರಗೆ ಗುಡಾರಗಳನ್ನು ಪ್ರತ್ಯೇಕವಾಗಿ ನಿರ್ಮಿಸಿಕೊಂಡು, ಹೊಟ್ಟೆ ಪಾಡಿಗಾಗಿ ಪಟ್ಟಣಗಳಿಗೆ ವಲಸೆ ಹೋಗಿ ಅಲ್ಲಿಯೂ ದುರುಗಮುರಗಿಯರು ತಮ್ಮದೇ ಆದ ಜನ ಸಮುದಾಯದಲ್ಲಿ ಹೊಂದಿಕೊಂಡು ಬದುಕುತ್ತಿರುವುದನ್ನು ಕಾಣುತ್ತೇವೆ.

ಮೂಲತಃವಾಗಿ ದುರುಗಮುರಗಿಯರು ಆಂಧ್ರದಿಂದ ಕರ್ನಾಟಕಕ್ಕೆ ಭಿಕ್ಷಾಟನೆಯಿಂದ ವಲಸೆ ಬಂದಿರಬಹುದು. ಆಂಧ್ರದಲ್ಲಿ ದುರುಗಮುರಗಿ ಸಮುದಾಯದವರನ್ನು ಸಿಂದೊಳ್ಳು ಸಮುದಾಯ ಎಂದು ಕರೆಯಲಾಗುತ್ತದೆ. ದುರುಗಮುರಗಿ ಸಮುದಾಯದಲ್ಲಿ ಸಿಂದ್ಯಾಲೋಳ್ ಬೆಡಗು ಕಂಡುಬರುವುದು. ಈ ಸಿಂದೊಳ್ಳು ಸಮುದಾಯ (ದುರುಗಮುರಗಿಯರು) ಕಾಲಾಂತರದಲ್ಲಿ ಅಲ್ಲಲ್ಲಿ ತಂಡೋಪತಂಡವಾಗಿ ತನ್ನದೇ ಆದ ಜನ ಸಮುದಾಯದ ಗುಡಾರಗಳನ್ನು ನಿರ್ಮಿಸಿಕೊಂಡು ಸಾವಿರಾರು ವರ್ಷಗಳಿಂದ ತಮ್ಮ ಸಂಸ್ಕೃತಿ, ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದೆ. ಈಗೀಗ ನವ ನಾಗರಿಕತೆಯ ಪ್ರಭಾವ ಅವರ ಮೇಲೆ ಆಗಿದ್ದರೂ ಸಹ ಅವರಲ್ಲಿ ಅಷ್ಟಾಗಿ ಬದಲಾವಣೆ ಕಂಡುಬರುವುದಿಲ್ಲ.

ಜನಸಂಖ್ಯೆ : ಬಳ್ಳಾರಿ ಜಿಲ್ಲೆಯಲ್ಲಿ ಕೇವಲ ಐದು ತಾಲ್ಲೂಕುಗಳಲ್ಲಿ ದುರುಗಮುರಗಿಯರು ವಾಸಿಸುತ್ತಾರೆ. ಬಳ್ಳಾರಿ ತಾಲ್ಲೂಕಿನಲ್ಲಿ ೧೮ ಕುಟುಂಬಗಳು ಇದ್ದು, ೭೦ ಜನಸಂಖ್ಯೆ ಹೊಂದಿ, ಹಗರಿಬೊಮ್ಮನ ಹಳ್ಳಿಯಲ್ಲಿ

ಕೇವಲ ೨ ಕುಟುಂಬಗಳು ೧೧ ಜನ ವಾಸಿಸುವರು. ಹೊಸಪೇಟೆ ತಾಲ್ಲೂಕಿನ ಕಂಪ್ಲಿ ಮತ್ತು ಕಮಲಾಪುರದಲ್ಲಿ ೩೯ ಕುಟುಂಬಗಳು ವಾಸವಾಗಿದ್ದು, ೧೬೪ ಜನಸಂಖ್ಯೆ ಕಂಡು ಬರುವುದು. ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರು ಹಾಗೂ ಕೂಡ್ಲಿಗಿಯಲ್ಲಿ ೭ ಕುಟುಂಬಗಳು ಸೇರಿ ೩೮ ಜನಸಂಖ್ಯೆ ಹೊಂದಿದೆ. ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆಯಲ್ಲಿ ೨೮, ಸಿರಗೇರಿಯಲ್ಲಿ ೧೧ ಕುಟುಂಬಗಳು ವಾಸಿಸುತ್ತಾರೆ. ಜಿಲ್ಲೆಯಲ್ಲಿ ೧೦೮ ಕುಟುಂಬಗಳು ೪೨೮ ಜನಸಂಖ್ಯೆ ಅದರಲ್ಲಿ ೨೨೮ ಪುರುಷರು. ೨೦೦ ಜನ ಸ್ತ್ರೀಯರು ವಾಸಿಸುತ್ತಾರೆ. ಇವುಗಳಲ್ಲಿ ಐದರಿಂದ ನಲವತ್ತು ವಯೋಗುಂಪಿನವರು ಸುಮಾರು ೮೦ ಪ್ರತಿಶತ ಜನ ಇರುವರು. ಇದು ಆರ್ಥಿಕಾಭಿವೃದ್ಧಿ ಸಾಮಾಜಿಕ ಬದಲಾವಣೆ ಸೂಚ್ಯಾಂಕ ಇವರಲ್ಲಿ ಲಿಂಗ ಪ್ರಮಾಣ ೧೦೦೦ ಪುರುಷರಿಗೆ ೯೯೧ ಸ್ತ್ರೀಯರು ಇರುವರು. ಇದು ಕರ್ನಾಟಕ ಲಿಂಗ ಪ್ರಮಾಣಕ್ಕೆ ಹೋಲಿಸಿದರೆ ಹೆಚ್ಚು ಕಡಿಮೆ ಸಮವಾಗಿ ಇರುವುದು ಎಂದು ಹೇಳಬಹುದು. ಬಳ್ಳಾರಿ ಜಿಲ್ಲೆಯ ಕೊಟ್ಟೂರುನಲ್ಲಿಯ ೮ ಕುಟುಂಬ ಹಾಗೂ ಸಿರಗೇರಿಯಲ್ಲಿನ ೧೧ ಕುಟುಂಬಗಳು ಹೊರತುಪಡಿಸಿದರೆ, ಉಳಿದ ೯೩ ಕುಟುಂಬಗಳು ಪಟ್ಟಣ ಪ್ರದೇಶಗಳಲ್ಲಿ ಅಲ್ಲದೇ ನಗರ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಮಾರ್ಚ್ ೨೦೦೦ನಲ್ಲಿ ತೆಕ್ಕಲಕೋಟೆಯಲ್ಲಿನ ಕುಟುಂಬಗಳಿಗೆ ಅಲ್ಲಿನ ಪಟ್ಟಣ ಪಂಚಾಯಿತಿ ಹಕ್ಕು ಪತ್ರಗಳನ್ನು ನೀಡಿದೆ. ಕಳೆದೆರಡು ವರ್ಷಗಳಿಂದ ಕಂಪ್ಲಿಯಲ್ಲಿ ಮೀನುಗಾರ ಸಹಕಾರ ಸಂಘದ ಆಶ್ರಯದಿಂದ ೨೮ ಕುಟುಂಬಗಳು ಆಶ್ರಮ ಮನೆಗಳು ಕಂಡುಕೊಂಡು, ಉಳಿದೆಡೆ ಜಿಲ್ಲೆಯ ಯಾವ ಭಾಗದಲ್ಲಿಯೂ ದುರುಗಮುರಗಿಯವರಿಗೆ ತಲೆಗೊಂದು ಸೂರು ಕಾಣದ ನಿರಾಶ್ರಿತರಾಗಿರುವುದು ಬಹಿರಂಗಗೊಳ್ಳುತ್ತದೆ. (ಕೋಷ್ಟಕ ೧ ರಲ್ಲಿ ನೋಡಬಹುದು)

ವೈವಾಹಿಕ ಸ್ಥಾನಮಾನ : ಬಳ್ಳಾರಿಯಲ್ಲಿನ ದುರುಗಮುರಗಿಯರು ಅವಿವಾಹಿತರು ೩೬ ಇದ್ದು, ವಿವಾಹಿತರು ೩೨, ವಿಧವೆ ಹಾಗೂ ವಿದುರರು ೨, ಹಗರಿಬೊಮ್ಮನಹಳ್ಳಿಯಲ್ಲಿ ಅವಿವಾಹಿತರು ೫, ವಿವಾಹಿತರು ೬, ವಿಧವೆ ಹಾಗೂ ವಿದುರರು ಇಲ್ಲ. ಹೊಸಪೇಟೆ ತಾಲ್ಲೂಕಿನ ಕಂಪ್ಲಿ ಮತ್ತು ಕಮಲಾಪುರ ಗ್ರಾಮದಲ್ಲಿ ಅವಿವಾಹಿತರು ೨೫, ವಿವಾಹಿತರು ೬೦ ಇದ್ದು, ವಿಧವೆ ಹಾಗೂ ವಿದುರರ ಸಂಖ್ಯೆ ೭ ಇದೆ. ಕೂಡ್ಲಿಗೆ ತಾಲ್ಲೂಕಿನ ಅವಿವಾಹಿತರು ೧೯, ವಿವಾಹಿತರು ೩೦, ವಿಧವೆ ಹಾಗೂ ವಿದುರರ ಇಲ್ಲ. ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆ ಹಾಗೂ ಸಿರಗೇರಿಯಲ್ಲಿ ಅವಿವಾಹಿತರು ೬೭, ವಿವಾಹಿತರು ೭೬ ಇದ್ದು, ವಿಧವೆ ಹಾಗೂ ವಿದುರರು ೩, ಅವಿವಾಹಿತರ ಸಂಖ್ಯೆ ಜಿಲ್ಲೆಯಲ್ಲಿ ಒಟ್ಟು ೨೧೯, ವಿವಾಹಿತರ ಸಂಖ್ಯೆ ೧೯೬, ಮತ್ತು ವಿಧವೆ, ವಿದುರರ ಸಂಖ್ಯೆ ೧೨ ಕಂಡು ಬರುವುದು. (ಕೋಷ್ಟಕ ೨ ರಲ್ಲಿ ನೋಡಬಹುದು)

ಊರ ಹೊರಗೆ ವಾಸಿಸುವ ದುರುಗಮುರಗಿಯರು ತುಂಬಾ ಬಡತನದಲ್ಲಿ ಬದುಕನ್ನು ಸಾಗಿಸುತ್ತಾರೆ. ಅವರ ಜೀವನ ವಿಧಾನ, ಬದುಕುವ ರೀತಿನೀತಿಗಳು ತುಂಬಾ ವಿಚಿತ್ರವಾಗಿವೆ. ಗುಡಾರಗಳಲ್ಲಿ ಮಡಿಕೆಗಳು, ಲೋಟ, ತಟ್ಟೆ, ಸವುಟು, ಕಬ್ಬಿಣದ ರೊಟ್ಟಿಮಾಡುವ ಹಂಚು, ಕುರುಪಿಗಳು, ಕುಡಗೋಲುಗಳು ಇಟ್ಟಿರುತ್ತಾರೆ. ಮಲಗಲು ಈಚಲ ಮರದ ಚಾಪೆ, ಹಳೆ ಗೋಣಿಚೀಲಗಳು, ಹಾಸಿಗೆಗಳನ್ನಾಗಿ ಬಳಸುತ್ತಾರೆ. ಹೊದೆಯಲು ಸಾಮಾನ್ಯವಾಗಿ ಹೆಂಗಸರ ಹಳೇ ಸೀರೆಗಳನ್ನು ಮುಸುಕು ಹಾಕಿಕೊಳ್ಳುತ್ತಾರೆ. ಗಂಡಸರು ತಮ್ಮ

ಲುಂಗಿ, ಧೋತಿಗಳನ್ನು ಬಳಸುತ್ತಾರೆ. ಕೆಲವರು ಕವುದಿ, ಕಂಬಳಿ, ಹಾಗೂ ಚಾದರುಗಳನ್ನು ಉಪಯೋಗಿಸುತ್ತಾರೆ. ಚಿಕ್ಕದಾಗಿ ಇರುವ ಗುಡಾರದಲ್ಲಿ ಸಣ್ಣ ಮಕ್ಕಳು ನಿದ್ರೆ ಮಾಡುತ್ತಾರೆ. ವಯಸ್ಕರು ಹೊರಗಡೆಯಲ್ಲಿ ಮಲಗಿಕೊಳ್ಳುತ್ತಾರೆ. ಗುಡಾರದಲ್ಲಿ ಕುಟುಂಬದ ಸದಸ್ಯರೆಲ್ಲ ವಾಸಮಾಡುತ್ತಾರೆ. ಸ್ನಾನಕ್ಕಾಗಿ ಮನೆಯ ಮುಂದೆ ಒಂದಿಷ್ಟು ಆಸರೆ ಮಾಡಿಕೊಂಡಿರುತ್ತಾರೆ. ಕುರಿ, ಮೇಕೆಗಳನ್ನು ಗುಡಾರದ ಅಂಗಳದಲ್ಲಿ ಕಟ್ಟುತ್ತಾರೆ. ಕೋಳಿಗಳನ್ನು ಬುಟ್ಟಿಯಲ್ಲಿ ಕೂಡಿಹಾಕುತ್ತಾರೆ. ಇವರು ವಾಸಿಸುವ ಗುಡಾರಗಳ ಮಧ್ಯದಲ್ಲಿ ತಮ್ಮ ದೇವರಿಗಾಗಿ ಪ್ರತ್ಯೇಕವಾಗಿ ಚಿಕ್ಕ ಗುಡಾರಗಳನ್ನು ಕಟ್ಟಿಕೊಳ್ಳುತ್ತಾರೆ. ಈ ಗುಡಾರಗಳಲ್ಲಿ ಮನೆ ದೇವರಾದ ಈರನಾಗಮ್ಮ, ಮುನಿಸ್ವಾಮಿ, ದುರುಗಮ್ಮ, ಮಾರಮ್ಮ ಇತ್ಯಾದಿ ಹೆಣ್ಣು ದೇವತೆಗಳನ್ನು ಪೋತರಾಜ ಪೂಜೆ ಮಾಡುತ್ತಾನೆ. ಜನರು ಹಬ್ಬದಲ್ಲಿ ದೇವರ ಮೂರ್ತಿಯನ್ನು ಹೊರತೆಗೆದು ಅಕ್ಕಸಾಲಿಗ, ಜಿನಗಾರ ಹತ್ತಿರ ದೇವಿ ಮುಖ ತೊಳಿಸಿಕೊಂಡು, ಗುಡಾರಗಳಲ್ಲಿ ಪೂಜಿಸುತ್ತಾರೆ. ಅಂದಿನ ದಿನಗಳಲ್ಲಿ ಕೋಳಿ, ಕುರಿಯನ್ನು ಬಲಿಯಾಗಿ ಅರ್ಪಿಸುತ್ತಾರೆ. ದುರುಗಮುರಗಿಯರ ಸಾಮಾಜಿಕ ಸಂಘಟನೆಯಲ್ಲಿ ಹಿರಿಯ ಪೋತರಾಜ, ಅಥವಾ ನ್ಯಾಯ ಪಂಚಾಯ್ತಿ ಹೇಳುವ ಅಧಿಕಾರ ಹೊಂದಿರುತ್ತಾನೆ. ಸಮುದಾಯದಲ್ಲಿ ನಡೆಯುವ ಪ್ರತಿಯೊಂದು ಪೂಜೆ ಪುನಸ್ಕಾರ, ಮದುವೆ-ಮುಂಜಿ ಹಾಗೂ ಇನ್ನುಳಿದ ಯಾವುದೇ ಮಹತ್ವದ ಕಾರ್ಯಗಳಲ್ಲಿ ಪೋತರಾಜ ಪೂಜಾರಿಗೆ ಮಹತ್ತರವಾದ ಸ್ಥಾನವಿರುತ್ತದೆ. ಏಕೆಂದರೆ ಅವನು ಆ ಜನ ಸಮೂಹದ ಗುರುವಾಗಿದ್ದಾನೆ. ಹೀಗಾಗಿ ದುರುಗಮುರಗಿಯರು ಆಯಾ ಸಂದರ್ಭ ಸನ್ನಿವೇಶಗಳಲ್ಲಿ ಪೂಜಾರಿಯ ಸಲಹೆ ಸೂಚನೆಗಳನ್ನು ಉಪದೇಶಗಳನ್ನು ಪಡೆದು ಮುಂದಿನ ಕೆಲಸಕ್ಕಾಗಿ ತೊಡಗುತ್ತಾರೆ.

ದುರುಗಮುರಗಿಯರ ಸಮಾಜದಲ್ಲಿ ನ್ಯಾಯ ಪಂಚಾಯತಿ ಹೇಳುವ ನಾಯಕನ ಪಾತ್ರವೂ ಕೂಡ ಅಸಾಧಾರಣವಾಗಿದೆ. ಪ್ರತಿಯೊಂದು ಕಟ್ಟಳೆಯನ್ನು ಪಾಲಿಸಿ, ತಪ್ಪುಮಾಡಿರುವ ವ್ಯಕ್ತಿಗೆ ದಂಡ ಹಾಕುತ್ತಾರೆ, ಹಾಗೂ ಸತ್ಯವನ್ನ ಪಾಲಿಸಿಕೊಂಡು ಹೋಗುತ್ತಾರೆ. ಒಂದು ರೀತಿಯಲ್ಲಿ ಸಾಮಾಜಿಕ ಉತ್ತರದಾಯಿತ್ವದ ಭಾವನೆ ನ್ಯಾಯ ಹೇಳುವ ನಾಯಕರಲ್ಲಿ ನಿಚ್ಚಳವಾಗಿ ಕಾಣಬಹುದು. ಸಮುದಾಯದ ಯಾವುದೇ ಒಬ್ಬ ವ್ಯಕ್ತಿಯೂ ಸುಖ ದುಃಖಗಳಲ್ಲಿ ಕಾರ್ಯಕಲಾಪಗಳಲ್ಲಿ, ಮದುವೆ ಮುಂಜಿಗಳಲ್ಲಿ ಹಾಗೂ ಸಂಸ್ಕಾರಾದಿಗಳಲ್ಲಿ ಸಮುದಾಯದ ಪ್ರತಿಯೊಬ್ಬ ವ್ಯಕ್ತಿ ಪಾಲ್ಗೊಳ್ಳುವಲ್ಲಿ ಅವರ ಸಾಮಾಜಿಕ ಜೀವನದ ಸಂಘಟನಾ ಮನೋಭಾವ ಎದ್ದು ಕಾಣಿಸುತ್ತದೆ.

ಕೌಟುಂಬಿಕ ಜೀವನ : ದುರುಗಮುರಗಿಯರಲ್ಲಿ ವಿಭಕ್ತ ಕುಟುಂಬ ಪದ್ಧತಿ ಕಂಡುಬರುವುದು. ಸಾಮಾನ್ಯವಾಗಿ ಅವರಲ್ಲಿ ಅವಿಭಕ್ತ ಕುಟುಂಬ ಜೀವನ ಕ್ರಮ ಕಡಿಮೆ. ಗಂಡು ಮಕ್ಕಳು ಸಾಮಾನ್ಯವಾಗಿ ತಮ್ಮ ಮದುವೆಯಾಗುವರೆಗೆ ಮಾತ್ರ ತಮ್ಮ ತಂದೆ ತಾಯಿಗಳ ಹತ್ತಿರ ಜೀವನ ಮಾಡುತ್ತಾರೆ. ಆನಂತರ ಪ್ರತ್ಯೇಕವಾಗಿ ಗುಡಾರಗಳ ಹಾಕಿಕೊಂಡು ಬದುಕುವುದೇ ಹೆಚ್ಚು. ಕುಟುಂಬದ ಪ್ರತಿಯೊಬ್ಬ ಸದಸ್ಯರೂ ವ್ಯಾವಹಾರಿಕ ಜ್ಞಾನವನ್ನು ಪಡೆದಿರುತ್ತಾರೆ ದುರುಗಮುರಗಿಯರಲ್ಲಿ ಪಿತೃ ಪ್ರಧಾನ ಕುಟುಂಬಗಳು ಕಂಡುಬರುತ್ತವೆ.

ಕೌಟುಂಬಿಕ ಜೀವನದಲ್ಲಿ ಸ್ತ್ರೀಯರಿಗಿಂತ ಪುರುಷರ ಸ್ಥಾನಮಾನಗಳು ಗೌರವಯುತವಾಗಿರುತ್ತವೆ. ಸಮಾಜದ ಬಹುಮುಖ್ಯವಾದ ಸ್ಥಾನಗಳನ್ನು ಪುರುಷರು ಹೊಂದಿದ್ದಾರೆ. ಕುಟುಂಬದ ಪ್ರತಿಯೊಂದು ಆಗುಹೋಗುಗಳನ್ನು ಪುರುಷರೇ ನಿರ್ವಹಿಸುತ್ತಾರೆ. ಹೀಗಾಗಿ ಈ ಸಮಾಜದಲ್ಲಿ ಸ್ತ್ರೀಯರು ಪುರುಷರಿಗೆ ಅಧೀನರಾಗಿ ಬಾಳುತ್ತಾರೆ. ವಂಶದ ಕೀರ್ತಿಗೆ ಕುಟುಂಬದ ಹಿರಿಯ ಮಗನೇ ಹಕ್ಕುದಾರ. ಈ ಬಗೆಯಾದ ಹಕ್ಕು ತಂದೆಯಿಂದ ಮಗುನಿಗೆ ಹಸ್ತಾಂತರವಾಗುತ್ತದೆ. ಕುಟುಂಬದಲ್ಲಿ ತಂದೆಯ ನಂತರ ಹಿರಿಯ ಮಗನಿಗೆ ಹೆಚ್ಚಿನ ಜವಬ್ದಾರಿ. ತಂದೆ ವಯಸ್ಸಾದಲ್ಲಿ ಅಥವಾ ಕುಟುಂಬವನ್ನು ನೋಡಿಕೊಳ್ಳುವ ತಂದೆಯು ಅಸಮರ್ಥನಾಗಿದ್ದರೆ ಹಿರಿಯ ಮಗನು ಕುಟುಂಬದ ಎಲ್ಲಾ ಆಗು ಹೋಗುಗಳನ್ನು ನೋಡಿಕೊಳ್ಳಬೇಕಾಗುತ್ತದೆ.

ದುರುಗ ಮರಗಿಯರಲ್ಲಿ ಏಕ ಪತಿತ್ವ ಹಾಗೂ ಏಕ ಪತ್ನಿತ್ವ ಕುಟುಂಬಗಳೇ ಜಾಸ್ತಿ. ಬಹು ಪತ್ನಿತ್ವ ಕುಟುಂಬದ ಪದ್ಧತಿಯೂ ಅವರಲ್ಲಿದೆ. ಹೆಂಡತಿಯು ಬಂಜೆಯೆಂದು ಕಂಡು ಬಂದಲ್ಲಿ ಅವರ ಸಂಬಂಧಿಕರಲ್ಲಿ ಮದುವೆಯಾಗಬಹುದು. ಅವರಲ್ಲಿ ಬಹು ಪತ್ನಿತ್ವಕ್ಕೆ ಅವಕಾಶವಿದೆ. ಆದರೆ ಇಂತಹ ಮರು ಮದುವೆಯಿಂದ ಯಾವುದೇ ರೀತಿಯಿಂದ ಸುಖವಿಲ್ಲವೆಂಬುದನ್ನೂ ಮೊದಲಿನ ದಾಂಪತ್ಯ ಸುಖವೇ ಸರ್ವಶ್ರೇಷ್ಠವೆಂದೂ, ಅದೇ ಸ್ಥಿರವಾದುದು ಎಂದು ನಂಬಿದವರೂ ಇದ್ದಾರೆ.

ಇತರೆ ಸಮುದಾಯಗಳೊಂದಿಗೆ ಸಾಮಾಜಿಕ ಸಂಪರ್ಕ : ದುರುಗಮುರಗಿಯರು ಭಾರತದ ಜಾತಿ ವ್ಯವಸ್ಥೆಯಲ್ಲಿ ಅತ್ಯಂತ ಕೆಳಜಾತಿಯಾಗಿದ್ದರೂ, ಇತರೆ ಸಮುದಾಯಗಳೊಂದಿಗೆ ಹೊಂದಿಕೊಂಡಿದ್ದಾರೆ. ಡಿ.ಎನ್.ಮಜುಂದಾರ್ ಭಾರತದಲ್ಲಿರುವ ಆದಿವಾಸಿಗಳ ಆಧುನಿಕ ನಾಗರಿಕತೆಯೊಂದಿಗೆ ಹೊಂದಿರುವ ಸಂಪರ್ಕದ ಬಗ್ಗೆ ಈ ರೀತಿ ಹೇಳಿದ್ದಾರೆ. "ನಾಗರಿಕ ಜನಾಂಗಗಳ ಮುಖವನ್ನೇ ನೋಡದೆ ಮತ್ತು ನಾಗರಿಕರ ಅಡ್ಡಿ ಆತಂಕಗಳಿಂದ ಭಾದಿತರಾಗದೆ ಆದಿವಾಸಿಗಳು ಓಡಾಡಿಕೊಂಡಿರಬಹುದಾಗಿದ್ದ ಕಾಲವೊಂದಿತ್ತು. ರಕ್ಷಿತವಾದ ಆಶ್ರಯಧಾಮಗಳಂತಿದ್ದ ಗುಡ್ಡಗಾಡುಗಳಲ್ಲಿ, ಕಾಡುಮೇಡುಗಳಲ್ಲಿ ಓಡಾಡಿಕೊಂಡು ಹಣ್ಣುಹಂಪಲುಗಳನ್ನು ತಿಂದುಕೊಂಡು ತಮ್ಮ ಸೊಂಟದ ಸುತ್ತ ಸೊಪ್ಪಿನ ಮಾಲೆ ಸುತ್ತಿಕೊಂಡು ಕುಣಿದಾಡುತ್ತಿದ್ದ ಹಲವಾರು ಆದಿವಾಸಿ ಸಮೂಹಗಳು ಭಾರತದಲ್ಲಿದ್ದವು. ಆದರಿಂದ ಅಂತಹ ಬಹುತೇಕ ಸಮುದಾಯಗಳು ನಾಗರಿಕ ಸಮುದಾಯಗಳ ಸಂಪರ್ಕಕ್ಕೆ ಬಂದಿವೆ. ಅಂತಹ ನೆರೆಹೊರೆಯ ಸಮುದಾಯದ ಜನರ ನಡತೆಯ ಲಕ್ಷಣಗಳನ್ನು ಕಲಿತುಕೊಂಡಿವೆ ಅವರ ಉಡುಪಿನ ಮಾದರಿಗಳನ್ನು ಮತ್ತು ಅರ್ಥವ್ಯವಸ್ಥೆಯ ಅಂಶಗಳನ್ನು ತಮ್ಮಲ್ಲಿ ಅಳವಡಿಸಿಕೊಂಡಿವೆ. ಅಂತಹ ಕೆಲವು ಸಮುದಾಯಗಳಂತೂ, ಇನ್ನಿತರು ಪ್ರದೇಶಗಳಲ್ಲಿ ಶತಮಾನದಷ್ಟು ಸಮಯದಲ್ಲಿ ಉಂಟಾಗಬಹುದಾಂತಹ ಪ್ರಗತಿಯನ್ನು ಕೆಲವೇ ವರ್ಷಗಳಲ್ಲಿ ಸಾಧಿಸಿವೆ."[೧] ಎನ್ನುತ್ತಾರೆ.

ದುರುಗಮುರಗಿ ಸಮುದಾಯದವರು ಕಿನ್ನರಿ ಜೋಗಿಗಳು, ಮೊಂಡರು, ಕೊರವರು, ಗೋಸಂಗಿ ಚಾಲಗಾರರು, ಪಕ್ಕಿಪಿಕ್ಕಿ, ಬುಡುಗ ಜಂಗಮರು, ಸುಡ್ಡಗಾಡು ಸಿದ್ದರು, ಇತ್ಯಾದಿ ಸಮುದಾಯಗಳೊಂದಿಗೆ ಸೌಹಾರ್ದಯುತ ಸಂಬಂಧವನ್ನು ಹೊಂದಿರುತ್ತಾರೆ.

ಹಂದಿ ಜೋಗಿಗಳು ಮತ್ತು ದುರುಗ ಮುರುಗಿಯರ ಸಂಬಂಧ : ಬಳ್ಳಾರಿ ಜಿಲ್ಲೆಯ ಜನಪದ ಲೌಕಿಕ ವೃತ್ತಿಗಾಯಕ ಪರಂಪರೆಗಳಲ್ಲಿ ಕಿನ್ನರಿ ಮೇಳವು ಒಂದು ವಿಶಿಷ್ಟ ಪ್ರಕಾರವಾಗಿದೆ. 'ನಾಥ' ಸಂಪ್ರದಾಯಕ್ಕೆ ಸೇರಿದ ಈ ಕಿನ್ನರಿ ಜೋಗಿಗಳು ತಲೆಗೆ ಮಣಿಯುಕ್ತ ಬಣ್ಣದ ಮುಂಡಾಸು, ಮೈಗೆ ಬಣ್ಣದ ಬಟ್ಟೆಗಳಿಂದ ಕೂಡಿದ ಇಳಿಬಟ್ಟೆ ನಿಲುವಂಗಿ, ನಡುವಿಗೆ ಕಾವಿ ಬಣ್ಣದ ಅಥವಾ ಕಪ್ಪು ನೂಲಿನ ಪಟ್ಟಿ, ಹಣೆಗೆ ವಿಭೂತಿ. ಕೊರಳಿಗೆ ಮಣಿಯುಕ್ತ ಮಾಲೆಗಳು, ಹೆಗಲಿಗೆ ಜೋಳಿಗೆ ಬಗಲಿಗೆ ನಾಗಬೆತ್ತ ಅಥವಾ ಬಿದಿರಿನ ಉದ್ದವಾದ ಕೋಲು, ಕೈಯಲ್ಲಿ ಕಿನ್ನರಿ ಹಿಡಿದು ನುಡಿಸುತ್ತಾ, ಮಹಾಭಾರತದ ಕಥಾ ಭಾಗಗಳನ್ನು ಹಾಡುತ್ತಾ ಮನೆ ಮನೆ ಸಂಚರಿಸಿ ಭಿಕ್ಷಾಟನೆ ಮಾಡುವ ಇವರನ್ನು 'ಕಿನ್ನರಿಜೋಗಿ'ಗಳೆಂದು ಕರೆಯುವುದು ವಾಡಿಕೆಯಾಗಿದೆ. ವಾಸ್ತವದಲ್ಲಿ ಇವರು ಹಂದಿಜೋಗಿಗಳು ಬರುವುದುಂಟು. ಇವರು ಹಗಲಿನಲ್ಲಿ ಭಿಕ್ಷಾಟನೆ ಮಾಡಿದರೆ ರಾತ್ರಿ ಸಮಯದಲ್ಲಿ ಕಥಾಮೇಳಗಳನ್ನು ನಡೆಸಿ ಜನರನ್ನು ರಂಜಿಸುವುದುಂಟು. ಎಲ್ಲಾ ವೃತ್ತಿಗಾಯಕರಂತೆ ಕಿನ್ನರಿ ಜೋಗಿಗಳು ಮೇಳವನ್ನು ನಡೆಸಿ ಜನಪದರನ್ನು ರಂಜಿಸುವುದುಂಟು.

ನಾಥಪಂಥ ಕರ್ನಾಟಕದಲ್ಲಿ ಶೈವ ಹಾಗೂ ವೀರಶೈವರ ಪ್ರಭಾವದಿಂದ ಮುಕ್ತವಾದ ಮೇಲೆ ಕಿನ್ನರಿ ಜೋಗಿಗಳು ತಮ್ಮ ಧಾರ್ಮಿಕ ಸಂಪ್ರದಾಯಗಳನ್ನು ಸಡಿಲಗೊಳಿಸಿ ಲೌಕಿಕ ವೃತ್ತಿಗಾಯಕರಾಗಿ ಪರಿವರ್ತನೆಗೊಂಡಂತೆ ತಿಳಿದುಬರುತ್ತದೆ. ಹೀಗಾಗಿ ಹೊರನಾಡುಗಳಿಂದ ತಂದ ಪೌರಾಣಿಕ, ಲೌಕಿಕ ಹಾಗೂ ಕಾಲ್ಪನಿಕ ಕಥೆಗಳನ್ನು ಯಾವುದೇ ಪ್ರದೇಶಗಳಿಗೆ ಹೋಗಿ ಹಾಡಬಹುದಾದ ಮುಕ್ತ ಸಂಪ್ರದಾಯವನ್ನು ಅಳವಡಿಸಿಕೊಂಡಿರುವುದರಿಂದ ಇವರನ್ನು ಲೌಕಿಕ ವೃತ್ತಿಗಾಯಕರೆಂದೇ ಕರೆಯುವುದು ವಾಡಿಕೆಯಾಗಿದೆ. ಕೂಡ್ಲಿಗಿಯ ದರ್ಗಾದಲ್ಲಿ ವಾಸ ಮಾಡುತ್ತಿರುವ ಶ್ರೀ ವೆಂಕಟಪ್ಪ ದುರುಗಮುರಗಿ ಇವರ ಪಕ್ಕದಲ್ಲಿ ಗುಡಾರ ಹಾಕಿಕೊಂಡಿರುವ ಐವತ್ತು ವರ್ಷದ ಹಂದಿ ಜೋಗಿ ಸಮುದಾಯ ಇವರ ರುದ್ರಪ್ಪ ಸಂಬಂಧಗಳು ಅಣ್ಣತಮ್ಮಂದಿರಂತೆ ಇವೆ. ರುದ್ರಪ್ಪನವರ ಮೂಲ ಕಸುಬು ಬಲ್ಲಿ ವ್ಯಾಪಾರ ಮಾಡುವುದು. ವೆಂಕಟಪ್ಪ ಸಮುದಾಯದಲ್ಲಿ ಮದುವೆ ಆದರೆ, ಹಂದಿ ಜೋಗಿ ಸಮುದಾಯದವರು ಭಾಗವಹಿಸಿ ಕೆಲಸ ಮಾಡುತ್ತಾರೆ. ಆದರೆ ಮತ್ತೊಂದು ವಿಶೇಷವೇನೆಂದರೆ ಮದುವೆಯಲ್ಲಿ ಊಟ ಮಾಡುವುದಿಲ್ಲ.

ಹಂದಿ ಜೋಗಿ ಸಮುದಾಯದವರ ವೃತ್ತಿಗಳು ಬೇರೆ. ಅವರ ಆಚರಣೆಗಳೇ ಬೇರೆ. ಬೆಳಗ್ಗೆಯಿಂದ ತಮ್ಮ ವೃತ್ತಿಗಳನ್ನು ಮುಗಿಸಿಕೊಂಡು ದಿನದ ಸಾಯಂಕಾಲ ಸಮಯದಲ್ಲಿ ತಮ್ಮ ವ್ಯಾಪಾರದ ಬಗ್ಗೆ ಊರಿನ ಭಿಕ್ಷಾಟನೆ ಬಗ್ಗೆ, ಯೋಗಕ್ಷೇಮದ ಬಗ್ಗೆ ಮಾತನಾಡುತ್ತಾರೆ. ಹಂದಿ ಜೋಗಿ ಸಮುದಾಯವು ದುರುಗಮುರಗಿ ಸಮುದಾಯಕ್ಕೆ ಆಸರೆಯಾಗಿದೆ. ಈಚೆಗೆ ಎಲ್ಲಾ ಸಮುದಾಯದಂತೆ ಹಂದಿಜೋಗಿಗಳು ಕೂಡ ಆಧುನೀಕರಣಕ್ಕೆ ಒಳಗಾಗುತ್ತಿದ್ದಾರೆ. ಜೊತೆಗೆ ಇತರೇ ಸಮುದಾಯಗಳೊಂದಿಗೆ ಹೊಂದಿಕೊಂಡು ಹೋಗುತ್ತಿದ್ದಾರೆ. ಒಟ್ಟಿನಲ್ಲಿ ಹಂದಿಜೋಗಿಗಳು ಮತ್ತು ದುರುಗಮುರಗಿ ಸಮುದಾಯದವರು ಅತ್ಯಂತ ನಿಕಟ ಸಂಬಂಧ ಹೊಂದಿದ್ದಾರೆ. ಆದರೂ ಸಹ ಹಂದಿ ಜೋಗಿ ಸಮುದಾಯದ ಸಾಂಸ್ಕೃತಿಕ ವಿವರಗಳು ಇನ್ನೂ ಅನಾವರಣಗೊಂಡಿಲ್ಲ. ಈ

ಸಮುದಾಯ ಸಾಂಸ್ಕೃತಿಕ ವಿವರಗಳು ಇನ್ನು ಅಕ್ಷರಲೋಕವನ್ನು ಪ್ರವೇಶಿಸಿಲ್ಲ. ಜೋಗಿಗಳಲ್ಲಿ ಮೌಖಿಕ ಸಾಹಿತ್ಯದದೊಂದಿಗೆ ಉಳಿದಿರುವ ಜ್ಞಾನದ ಸಂಗ್ರಹ ವಿಸ್ತೃತವಾಗಿ ನಡೆಯಬೇಕಾಗಿದೆ.

ಮೊಂಡರ ದುರುಗ ಮುರುಗಿಯರ ಸಂಬಂಧ : ದುರುಗಮುರಗಿ ಸಮುದಾಯದವರು ಮೊಂಡರ ಜೊತೆ ಸೌಹಾರ್ದಯುತ ಸಂಬಂಧವನ್ನು ಹೊಂದಿದ್ದಾರೆ. ಇವರು ಕಂಪ್ಲಿಯ ವಾಸ ಮಾಡುತ್ತಾರೆ. ಮೊಂಡರ ಮುಖ್ಯಸ್ಥನ ರಂಗಪ್ಪ ಹೇಳಿಕೆ ಪ್ರಕಾರ "ಸ್ವಾಮಿ ನಾವು ೫೦ ವರ್ಷಗಳಿಂದ ಅಲೆಮಾರಿಯಂತೆ ಅಲೆಯುತ್ತಿದೆ. ನಮ್ಮ ವಾಸ ಸ್ಥಳ ಹೈದ್ರಾಬಾದ್, ನಮ್ಮ ಸಂಬಂಧಿಕರು ಅಲ್ಲಿ ಇರುವರು. ನಮ್ಮ ಜಾತಿಗೂ ಮತ್ತು ಬೇಡರ ಜಾತಿಗೆ ಸಂಬಂಧವಿದೆ. ನಮ್ಮ ವೃತ್ತಿಗಳು ಭಿಕ್ಷಾಟನೆ, ಭಿಕ್ಷಾಟನೆಗಾಗಿ ಮನೆ ಮುಂದುಗಡೆಯಲ್ಲಿ ಕುಳಿತುಕೊಳ್ಳುವ ಸ್ವಭಾವ ನಮ್ಮದು." ಭಿಕ್ಷೆಯನ್ನು ನೀಡುವವರಿಗೂ ನಾವು ಮುಂದಕ್ಕೆ ಹೋಗುವುದಿಲ್ಲ. ಆದಕಾರಣ ಮೊಂಡರು ಎಂದು ಜನ ಕರೆದರು. ನಮ್ಮ ಬೆಡಗುಗಳು ಇಮ್ಮಳನೂರು, ಮಮ್ಮಳನೂರು, ಕುಲಮನೂರ, ೨೨ ಗೋತ್ರಗಳು ಕಂಡುಬರುತ್ತವೆ. ಹಾಗೂ ಮೀನು ಬೇಟೆ, ಅಡವಿ ಇಲಿ, ಅಡವಿ ಬೆಕ್ಕು, ಹಂದಿ ಬೇಟೆಗೆ ಹೋಗುತ್ತೇವೆ. ನಾವು ದುರುಗಮುರಗಿ ವಾಸ ಸ್ಥಳದ ಮನೆಗಳ ಸಮೀಪ ಇರುತ್ತೇವೆ. ನಮ್ಮ ಸಮಸ್ಯೆಗಳ ಬಗ್ಗೆ ದುರುಗಮುರಗಿ ಸಮುದಾಯದವರ ಸ್ಪಂದಿಸುತ್ತಾರೆ ಎಂದು ರಂಗಪ್ಪ ಹೇಳುತ್ತಾರೆ.

ಕೊರವರ ಜೊತೆ ದುರುಗ ಮುರುಗಿಯರ ಸಂಬಂಧ : ಬುಡಕಟ್ಟು ಸಮುದಾಯಗಳಾದ ಕೊರಚ ಅಥವಾ ಕೊರವರನ್ನ ಪರಿಶಿಷ್ಟ ಜಾತಿಯಲ್ಲಿ ಪರಿಗಣಿಸಲಾಗಿದೆ. ತಮ್ಮ ತಮ್ಮ ಸಾಂಸ್ಕೃತಿಕ ಚಹರೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದರೂ, ಇತ್ತೀಚಿನ ದಿನಗಳಲ್ಲಿ ನಾಗರೀಕತೆಯ ಪ್ರಭಾವದಿಂದ ಅವರಲ್ಲಿರುವ ಮೂಲದ ಎಷ್ಟೋ ಅಂಶಗಳು ಮರೆಯಾಗುವ ಸ್ಥಿತಿಯಲ್ಲಿವೆ.

ಕೊರವರು ಹಲವು ರೀತಿಯ ವೃತ್ತಿಗಳನ್ನು ಮಾಡುತ್ತಾ ಬಂದಿದ್ದಾರೆ. ಬುಟ್ಟಿ ಹೆಣೆಯುವುದು, ತಡಿಕೆ ಹೆಣೆಯುವುದು, ಹಂದಿಯ ಕೂದಲು ಕಿತ್ತು ಮಾರುವುದು, ಸನಾದಿ ಊದುವುದು, ಬಾರಿಗೆ ಕಟ್ಟುವುದು, ಸಿಂಬೆ ಕಟ್ಟುವುದು, ನೆಲವು ಕಟ್ಟುವುದು, ಚುಕ್ಕ ಮಾಡುವುದು, ಚಾಪೆ ಹೆಣೆಯುವುದು, ಹಂದಿ ಸಾಕುವುದು, ಗೊಬ್ಬರ ಸಂಗ್ರಹಣೆ ಹೀಗೆ ಹಲವಾರು ಕೆಲಸಗಳಲ್ಲಿ ತಮ್ಮನ್ನ ತಾವು ತೊಡಗಿಸಿಕೊಂಡಿದ್ದಾರೆ.

ಈ ಸಮುದಾಯದವರಿಗೂ ಹಾಗೂ ದುರುಗಮುರಗಿ ಸಮುದಾಯದವರು ತುಂಬಾ ಪರಿಚಯವನ್ನು ಹೊಂದಿದ್ದಾರೆ. ದುರುಗಮುರಗಿಯರನ್ನ ಕೊರವರು ಕೆಲವು ಸಮಯಗಳಲ್ಲಿ ಬೇಟೆಯಾಗುತ್ತಾರೆ. ಕೊರವರ ಆಚರಣೆಗಳು, ಸಂಪ್ರದಾಯಗಳು ವಿಬಿನ್ನ ರೀತಿಯಲ್ಲಿ ಕಂಡುಬರುತ್ತವೆ.

ಗೋಸಂಗಿ ಸಮುದಾಯದ ಜೊತೆ ದುರುಗ ಮುರುಗಿಯರ ಸಂಬಂಧ : ಗೋಸಂಗಿ ಸಮುದಾಯ ಒಂದು ಅಲೆಮಾರಿ ಬುಡಕಟ್ಟು ಸಮುದಾಯವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಪ್ರಗತಿಯನ್ನು ಸಾಧಿಸಿರುವುದು, ಆಧುನಿಕ ಕಾಲದಲ್ಲಿ ಇವರು ಸ್ಥಿತಿ ಭಾಗಶಃ ಸುಧಾರಿಸಿ ಇತರೆ ಸಮುದಾಯಗಳೊಂದಿಗೆ, ತಾವು ಸಹ ಶ್ಲಾಘನೀಯ ಸ್ಥಾನಮಾನಗಳನ್ನು ಗಿಟ್ಟಿಸಿಕೊಂಡಿದ್ದಾರೆ. ಅಲ್ಲದೇ ಅವರು ಸಮಾಜದಲ್ಲಿ ಸರಿಸಮಾನತೆ

ಹೊಂದಿದ್ದಾರೆ. ಉದಾಹರಣೆಗೆ ಬಳ್ಳಾರಿಯ ರಾಜೇಶ್ವರಿ ನಗರದಲ್ಲಿ ವಾಸಮಾಡುತ್ತಿರುವ ಗೋಸಂಗಿ ಸಮುದಾಯದವರು ದುರುಗಮುರಗಿ ಸಮುದಾಯದವರೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದ್ದಾರೆ.

ದುರುಗಮುರಗಿ ಸಮುದಾಯದವರು ಪತ್ರ ಬರೆಸಲು, ಓದಿಸಲು ಗೋಸಂಗಿ ಸಮುದಾಯದವರನ್ನು ಭೇಟಿ ಮಾಡುತ್ತಾರೆ. ಗೋಸಂಗಿ ಸಮುದಾಯದವರು ದುರುಗಮುರಗಿಯರಿಗೆ ಹಲವಾರು ವಿಷಯಗಳನ್ನು ತಿಳಿಸುತ್ತಾ, ಸಮಸ್ಯೆಗಳ ಬಗ್ಗೆ ಹೋರಾಟ ಮಾಡಬೇಕೆಂದು ಅವರನ್ನ ಹುರಿದುಂಬಿಸುತ್ತಾರೆ. ದುರುಗಮುರಗಿ ಸಮುದಾಯದಲ್ಲಿ ಯಾವುದೇ ಶುಭ ಕಾರ್ಯಕ್ರಮಗಳು ನಡೆದರೆ ಗೋಸಂಗಿ ಸಮುದಾಯದವರು ಭಾಗವಹಿಸಿರುತ್ತಾರೆ. ಗೋಸಂಗಿಗಳ ಜೊತೆ ಸೇರಿಕೊಂಡು ಇವರೂ ಪ್ಲಾಸ್ಟಿಕ್ ಕೊಡಪಾನ ವ್ಯಾಪಾರಕ್ಕೆ ಇಳಿದಿದ್ದಾರೆ.

ಬುಡುಗ ಜಂಗಮರ ಜೊತೆ ದುರುಗ ಮುರುಗಿಯರ ಸಂಬಂಧ : ಇದೇ ಜಿಲ್ಲೆಯಲ್ಲಿ ಲೌಕಿಕ ವೃತ್ತಿಗಾಯಕ ಅಥವಾ ಕಥೋಪಜೀವಿಗಳ ಗುಂಪಿನಲ್ಲಿ ಗುರುತಿಸಬಹುದಾದಂತೆ ಒಂದು ವಿಶಿಷ್ಟ ಗಾಯಕ ಸಮುದಾಯವೆಂದರೆ ಬುಡುಗ ಜಂಗಮರು ತಂತಿ ವಾದ್ಯ ತಂಬೂರಿಯ ಜೊತೆಗೆ 'ಬಡಿಗ' ಎನ್ನುವ ಚರ್ಮ-ವಾದ್ಯವನ್ನು ಬಳಿಸಿ ಪ್ರಾಚೀನ ಕಾಲದಿಂದ ತೆಲುಗು ಮೂಲದಲ್ಲಿ ಪ್ರಚಲಿತವಿದ್ದ ದೀರ್ಘ ಕಥನ ಕಾವ್ಯಗಳನ್ನು ಹಾಡುತ್ತಾ ಸಂಚರಿಸಿ, ಭಿಕ್ಷಾಟನೆ ಮಾಡುವ ಹಾಗೆಯೇ ಆಹ್ವಾನದ ಮೇರೆಗೆ ಆಗಾಗ ಕಥಾಮೇಳಗಳನ್ನು ನಡೆಸಿ ಉಪಜೀವಿಸುವ ಅಲೆಮಾರಿ ಗುಂಪಿಗೆ ಸೇರಿದ ಬುರ್ರ ಕಥೆಯವರೆಂದು ಕರೆಯಲಾಗಿದೆ.

ಇವರನ್ನು ಬಳ್ಳಾರಿ ಜಿಲ್ಲೆಯಲ್ಲಿ 'ಬಾಲನಾಗಮ್ಮನ ಕಥೆ ಹೇಳೊರು' ಎಂದು ಕರೆಯುವುದು ವಾಡಿಕೆಯಿದೆ. ಹಾಗೆಯೇ 'ಕಥೆ ಹೇಳೋರು' ಎಂಬ ಸಂಕ್ಷಿಪ್ತ ಹೆಸರಿನಿಂದಲೂ ಕರೆಯುವುದುಂಟು. ಬುರ್ರಕಥಾ ಸಂಪ್ರದಾಯ ಆಂಧ್ರ ಮೂಲದಿಂದ ಬಂದ ಕಲಾ ಪ್ರಕಾರವಾಗಿದ್ದು, ತೆಲುಗಿನಲ್ಲಿ ಇವರಿಗೆ 'ಬುರ್ರೆ ಕಥಾಲು ಚೆಪ್ಪೆ ವಾಳ್ಳಿ', 'ತಂದಾನ ಕಥಾಲು ಚಪ್ಪೆವಾಳು', 'ಜಂಗಮ ಕಥಾಲು ಚಪ್ಪಾವಾಳು', 'ಕಥಾಲು ಚಪ್ಪೆವಾಳ್ಳು' ಎಂಬ ಹೆಸರುಗಳಿಂದ ಕರೆಯುತ್ತಾರೆ.

ಜಾತಿ ಪರಿಶೋಧನಾ ಕಾರ್ಯದಲ್ಲಿ ತೊಡಗಿದ್ದ ಆಂಧ್ರಪ್ರಭುತ್ವ ಇವರ ಬಗ್ಗೆ ಕೆಲವು ಅಭಿಪ್ರಾಯಗಳನ್ನು ಕ್ರೋಡೀಕರಿಸಿದ್ದು. ಶ್ರೀ ಮರಪೂರು ಕೋದಂಡ ರಾಮರೆಡ್ಡಿಯವರ ಪ್ರಕಾರ "ತಂದಾನ ಕಥಾಲು ಚೆಪ್ಪಿ ಜೀವಿಂಚು ಜಂಗಮುಲು ಬುರ್ರ ಕಥಾಲು ವಾಂಡ್ರು, ಬುಡಿಗೇಲು ವಾದ್ಯಮುಚೇಯಚು ಭಿಕ್ಷೆ ಮತ್ತುವಾರು"[೨] ಎಂದು ಹೇಳಿದ್ದಾರೆ. ಶ್ರೀ ಮಿಕ್ಕಲಿನೇನಿ ರಾಧಕೃಷ್ಣ ಮೂರ್ತಿಯವರ ತಮ್ಮ 'ಆಂಧ್ರ ನಾಟಕ ರಂಗ ಚರಿತ್ರೆ' ಎಂಬ ಗ್ರಂಥದಲ್ಲಿ "ಪೂರ್ವ ಕಾಲಂನುಂಚಿ ತೆಲುಗು ದೇಶಂಲೋ ಬಹೂಳ ಪ್ರಚಾರಂ ಪೊಂದಿನ ಕಥಲನೆ ಇಪ್ಪುಡು ಬುರ್ರ ಕಥಾಲು ಅಂಟುನಾಂ"[೩] ಎಂದಿದ್ದಾರೆ.

ಹಾಗೆಯೇ ಆಂಧ್ರದ ಸಂಶೋಧನಾ ತಜ್ಞರಾದ ಪ್ರೊ ಬಿ. ರಾಮರಾಜುರವರು ತಮ್ಮ ಪರಿಶೋಧನೆ ಗ್ರಂಥವಾದ 'ತೆಲುಗು ಜಾನಪದಗೇಯ ಸಾಹಿತ್ಯಂ'ನಲ್ಲಿ "ಬುಡಿಗ ಅನುವಾದ್ಯಮನ ವಾಯಿಸ್ತು ಕಥಲು

ಚಪ್ಪವಾರನಿ ಬುಡಿಗಿ ಜಂಗಮುಲು ಅಂಟಾರು[೪] ಎಂಬ ಅಭಿಪ್ರಾಯವನ್ನು ಉಲ್ಲೇಖಿಸಿದ್ದಾರೆ. ಈ ಮೇಲಿನ ಎಲ್ಲಾ ಅಭಿಪ್ರಾಯಗಳನ್ನು ಪರಿಶೀಲಿಸಿ ನೋಡಿದಾಗ ಬುಡಿಗ ಎಂಬ ವಾದ್ಯವನ್ನು ಬಾರಿಸುತ್ತಾ ತಂದಾನ ಅಥವಾ ಜಂಗಮ ಕಥೆಗಳನ್ನು ಹೇಳುತ್ತಾ ಉಪಜೀವಿಸುವವರಿಗೆ ಬುರ್ರ ಕಥೆಯವರು ಹಾಗೂ ಬುಡಿಗ ಜಂಗಮರೆಂದು ಕರೆಯುವ ವಾಡಿಕೆಯಿರುವಂತೆ ತಿಳಿದುಬರುತ್ತದೆ.

ಬುಡಿಗ ಎಂಬ ವಾದ್ಯಕ್ಕೆ 'ಬುರ್ರ' ಎಂಬ ಹೆಸರನ್ನು ಬಳ್ಳಾರಿ ಜಿಲ್ಲೆಯ ಕಲಾವಿದರು ಹೇಳುವುದರಿಂದ ಅವರು ಬುರ್ರವೆಂಬ ವಾದ್ಯವನ್ನು ಬಳಸಿ ಕಥಾಮೇಳವನ್ನು ನಡೆಸುವುದರಿಂದ ಅವರಿಗೆ ಬುರ್ರ ಕಥೆಯವರು ಎಂದು ಕರೆಯುವುದಾಗಿ ಹೇಳುತ್ತಾರೆ. ಈ ಸಮುದಾಯದವರಿಗೂ ಹಾಗೂ ದುರುಗಮುರಗಿಯರಿಗೂ ಅನೇಕ ಸಂಪರ್ಕಗಳಿವೆ. ಎರಡು ಸಮುದಾಯಗಳು ಬಹು ಹಿಂದುಳಿದಿದ್ದು, ಆಧುನಿಕತೆಯ ಕಾಲದಲ್ಲಿ ಬಹಳ ದೂರ ಉಳಿದು ಬಿಟ್ಟಿವೆ.

ದುರುಗಮುರಗಿಯರು ಇತರೇ ಸಮುದಾಯದವರೊಂದಿಗೆ ಪ್ರೀತಿ, ನಂಬಿಕೆಗಳಿಗೆ ಪಾತ್ರರಾಗಿದ್ದಾರೆ. ಇವರೆಲ್ಲರೂ ಆಧುನಿಕತೆಗೆ ಈಗೀಗ ತಮ್ಮನ್ನ ಒಡ್ಡಿಕೊಳ್ಳುತ್ತಿದ್ದಾರೆ. ಆದರೂ ಈ ಎಲ್ಲಾ ಬುಡಕಟ್ಟು ಸಮುದಾಯಗಳು ಎಷ್ಟು ಆಧುನಿಕತೆಯನ್ನು ಅಳವಡಿಸಿಕೊಳ್ಳುತ್ತಿದ್ದರು, ತಮ್ಮ ಮೂಲವನ್ನು ಮರೆಯಲು ಸಿದ್ಧರಿಲ್ಲ. ಆದರೆ ಕೆಲವರು ಅದನ್ನು ಬಿಟ್ಟು ಮುಂದೆ ನಡೆದು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿದ್ದಾರೆ.

ಶೈಕ್ಷಣಿಕ ಜೀವನ

"ನಹೀ ಜ್ಞಾನೇನ ಸದೃಶಂ" ಎಂದರೆ ಜ್ಞಾನಕ್ಕೆ ಸಮಾನವಾದದು ಯಾವುದೂ ಇಲ್ಲ.[೫] ಅಂತಹ ಜ್ಞಾನವನ್ನು ನೀಡುವುದೇ ಶಿಕ್ಷಣ. ಮಾನವನ ಮೂಲಭೂತ ಅಗತ್ಯಗಳೆಂದರೆ ಆಹಾರ, ಉಡುಪು ಮತ್ತು ವಸತಿ ಇವುಗಳ ಜೊತೆಗೆ ಶಿಕ್ಷಣ, ಆರೋಗ್ಯ ಮನರಂಜನೆ ಮೊದಲಾದವು ಸಹ ಮುಖ್ಯವಾದವುಗಳು. ಮಾನವನಿಗೆ ಅಗಾಧ ಬುದ್ಧಿಶಕ್ತಿಯಿದೆ. ಅವನು ಆ ಬುದ್ಧಿ ಶಕ್ತಿಯ ಸಹಾಯದಿಂದ ಏನೆಲ್ಲಾ ಸಾಧಿಸಲು ಶಕ್ತನಾಗಿದ್ದಾನೆ.

ಒಂದೇ ದಿನದಲ್ಲಿ ಭೂ ಪ್ರದಕ್ಷಿಣೆ ಮಾಡಬಲ್ಲವನಾಗಿದ್ದಾನೆ. ಪಕ್ಷಿಯಂತೆ ಗಗನದಲ್ಲಿ ಹಾರಾಡಬಲ್ಲವನಾಗಿದ್ದಾನೆ. ಮೀನಿನಂತೆ ನೀರಿನಲ್ಲಿ ಈಜ ಬಲ್ಲವನಾಗಿದ್ದಾನೆ. ಇವೇ ಮೊದಲಾದ ಎಲ್ಲಾ ಸಾಧನೆಗಳಿಗೆ ಪ್ರಮುಖ ಸಾಧನ ಶಿಕ್ಷಣ. ಶಿಕ್ಷಣವು ಮಾನವನ ಬುದ್ದಿ ಶಕ್ತಿಯನ್ನು ಹೆಚ್ಚಿಸುತ್ತದೆ. ಅವನನ್ನು ಕ್ರಿಯಾಶೀಲನನ್ನಾಗಿ ಮಾಡುತ್ತದೆ. ಅವನ ಸರ್ವತೋಮುಖ ಪ್ರಗತಿಗೆ ಹಾದಿಮಾಡಿಕೊಡುತ್ತದೆ. ಇದರಿಂದ ಮಾನವ ಮತ್ತು ಮಾನವರಿಂದ ಕೂಡಿದ ಸಮಾಜವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಸಮಾಜ ಶಾಸ್ತ್ರವು ಶಿಕ್ಷಣದೊಡನೆ, ನಿಕಟ ಬಾಂಧವ್ಯವನ್ನು ಹೊಂದಿದೆ.[೬]

ದುರುಗಮುರಗಿ ಸಮುದಾಯದಲ್ಲಿ ಶಿಕ್ಷಣದ ಮಾಹಿತಿ ಗೊತ್ತಿಲ್ಲ. ತಂದೆ ತಾಯಿಗಳು ಹಾಕಿದ ಹೆಜ್ಜೆಯಲ್ಲಿ ನಡೆಯುವಂತಹ ಮುಗ್ಧ ಮಕ್ಕಳು. ಇಂದಿಗೂ ಭಿಕ್ಷಾಟನೆಯಲ್ಲಿ ಕಂಡುಬರುತ್ತಾರೆ. ಪ್ರತಿಯೊಬ್ಬನು

ತನ್ನ ಜೀವನೋಪಾಯಕ್ಕಾಗಿ ಯಾವುದಾದರೂ ಒಂದು ಉದ್ಯೋಗ ಅಥವಾ ವೃತ್ತಿ ಅವಲಂಬಿಸಿ ಜೀವನ ನಡೆಸಬೇಕು. ಶಿಕ್ಷಣವು ಪ್ರತಿಯೊಂದು ಮಗುವಿಗೂ ತನ್ನ ಜೀವಿತದಲ್ಲಿ ತನಗೆ ಇಷ್ಟ ಬಂದ ವೃತ್ತಿಯನ್ನು ಗೊತ್ತು ಮಾಡಿಕೊಂಡು, ಅಥವಾ ಆಯ್ಕೆಮಾಡಿಕೊಂಡು ಜೀವನ ನಡೆಸಲು ಮಾರ್ಗವನ್ನು ತೋರಿಸಿಕೊಡುತ್ತದೆ

ಶಿಕ್ಷಣ ಪಡೆಯಲಾಗದಂತೆ ಮಾಡಿರುವ ಸಾಮಾಜಿಕ ಅನಿವಾರ್ಯಗಳು

೧. ಬಡತನ
೨. ಪರಿಸರ
೩. ಕುಟುಂಬದ ಪ್ರೋತ್ಸಾಹ ಇಲ್ಲದಿರುವುದು
೪. ಸಮುದಾಯ ವಾಸಿಸುತ್ತಿರುವ ಕಡೆ ಶಾಲೆಗಳು ಇಲ್ಲದೇ ಇರುವುದು.
೫. ಸರ್ಕಾರದ ಸೌಲಭ್ಯಗಳ ಕೊರತೆ
೬. ಶಾಲೆಗಳಲ್ಲಿ ಭೋದನೆಯ ಗುಣಮಟ್ಟದ ಕೊರತೆ.

ದುರುಗಮುರಗಿ ಸಮುದಾಯ ಶಿಕ್ಷಣದಿಂದ ಹಿಂದಿನಿಂದಲೂ ವಂಚಿತರಾಗಿದ್ದಾರೆ. ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಮಸ್ಯೆಗಳನ್ನು ಎದುರಿಸಿಕೊಳ್ಳುತ್ತಾ ಬಂದಿರುವ ಇವರು ಶಿಕ್ಷಣದಿಂದ ದೂರವೇ ಉಳಿದಿದ್ದಾರೆ. ಇಂದಿನ ದಿನಗಳಲ್ಲಿ ಮೇಲ್ವರ್ಗದವರಿಗೆ ಮಾತ್ರ ಶಿಕ್ಷಣದ ಸೌಲಭ್ಯಗಳಿದ್ದು, ಸಮಾಜದಲ್ಲಿ ಇರುವ ಎಲ್ಲಾ ಸೌಲಭ್ಯಗಳನ್ನು ಮೇಲು ಜಾತಿಯವರು ಹಾಗೂ ಶ್ರೀಮಂತರು ಪಡೆದುಕೊಳ್ಳುತ್ತಾರೆ.

ಇಂತಹ ಸನ್ನಿವೇಶದಲ್ಲಿ ಈ ಸಮುದಾಯದವರು ತಮ್ಮ ಮಕ್ಕಳ ಬಗ್ಗೆ ಕಾಳಜಿ ಮಾಡುವುದಿಲ್ಲ. ಓದುವ ಹಂಬಲ ಮಕ್ಕಳಿಗೆ ಇದ್ದರೆ, ಶಾಲೆಗೆ ಶುಲ್ಕ ಪಾವತಿ ಮಾಡುವುದರ ಸಲುವಾಗಿ ಹಣ ಬೇಕು. ಶಿಕ್ಷಣ ಇಲ್ಲದೆ ಹೋದರು ಸಹ ನಮ್ಮ ಮಕ್ಕಳು ನಮ್ಮ ವೃತ್ತಿಯನ್ನು ಕಲಿತರೆ ಸಾಕು ಎಂಬ ಭಾವನೆ ಸಮುದಾಯದ ಜನರಲ್ಲಿ ಆಳವಾಗಿ ನೆಲೆಗೊಂಡಿದೆ.

ವೇದ, ಉಪನಿಷತ್ತು ಓದು ಬರಹ ಕೇವಲ ಬ್ರಾಹ್ಮಣರಿಗೆ ಮತ್ತು ರಾಜ ಮಹಾರಾಜರ ಮಕ್ಕಳಿಗೆ ಕಲ್ಪಿಸಲಾಗಿದ್ದು, ಬುಡಕಟ್ಟು ಸಮುದಾಯಗಳಿಗೆ ಯಾವ ಸೌಲಭ್ಯಗಳನ್ನು ನೀಡದೇ, ವಂಚಿಸುತ್ತಾ ಬಂದಿದ್ದಾರೆ. ಸಮಾಜದ ಕಾನೂನುಗಳ ಪ್ರಕಾರ ಇವರು ಅಲೆಮಾರಿಯಂತೆ ವಾಸಿಸಬೇಕು, ಭಿಕ್ಷಾಟನೆ ಮಾಡಬೇಕು, ಇತರರ ಸೇವೆ ಮಾಡಬೇಕು. ತಮ್ಮ ಕಾಯಕದಲ್ಲಿ ಮರಣ ಹೊಂದಬೇಕು. ಇದರಿಂದಾಗಿ ಇವರು ಕುಡಿತವನ್ನು ಕಲಿತರು. ಪರರ ಎಂಜಲಿಗೆ ಕಾದು ಕುಳಿತುಕೊಳ್ಳುವ ದಾಸ್ಯ ಬೆಳೆಸಿಕೊಂಡು ಹೊಸ ಶಿಕ್ಷಣದ ಯಾವ ಸೌಲಭ್ಯಗಳನ್ನೂ ಪಡೆದುಕೊಳ್ಳಲಿಲ್ಲ.

ಸರ್ಕಾರ ಪ್ರತಿ ಗ್ರಾಮದಲ್ಲಿ ಒಂದು ಹಾಗೂ ಎರಡು ಶಾಲೆಗಳನ್ನು ತೆರೆದಿರುವುದನ್ನು ಕಾಣಬಹುದು. ಆದರೆ ದುರುಗಮುರಗಿ ಸಮುದಾಯ ಇರುವ ಕಡೆ ಶಾಲೆ ಕಟ್ಟಡಗಳು ಇಲ್ಲ. ಆದರೆ ಬಳ್ಳಾರಿ ಜಿಲ್ಲೆಯ ಕಂಪ್ಲಿಯ ಎಂ.ಡಿ. ಕ್ಯಾಂಪ್‌ನಲ್ಲಿ ಜನತಾ ಆಶ್ರಯ ಮನೆಯಲ್ಲಿ ಒಂದು ಶಾಲೆಯನ್ನು ನಡೆಸಲಾಗುವುದು.

ಇದು ಸರ್ಕಾರ ಕೊಟ್ಟ ಬಹುದೊಡ್ಡ ಕೊಡುಗೆ. ಮಕ್ಕಳು ಈ ಶಾಲೆಗೆ ಪ್ರವೇಶ ಪಡೆಯಬೇಕಾದರೆ ಮೀಸಲಾತಿ ಪ್ರಮಾಣ ಪತ್ರಬೇಕು. ಆದರೆ ಸರ್ಕಾರ ಈ ಸಮುದಾಯ ಮಕ್ಕಳಿಗೆ ಮೀಸಲಾತಿ ಪ್ರಮಾಣ ಪತ್ರ ನೀಡಿಲ್ಲ. ಹಾಗೂ ಸರ್ಕಾರದಿಂದ ಶಿಷ್ಯವೇತನ ಸಹ ಮಂಜೂರಾತಿ ಆಗಿಲ್ಲ. ಆದಕಾರಣ ಮಕ್ಕಳನ್ನು ಶಾಲೆಗೆ ಸೇರಿಸಲು ಸಮುದಾಯದ ಜನರು ಹಿಂಜರಿಯುತ್ತಾರೆ.

ದುರುಗಮುರಗಿಯರು ಕಲ್ಯಾಣವನ್ನು ಬಯಸುವ ಸರಕಾರ, ಇವರಿಗೆ ಕಲ್ಪಿಸಿರುವ ಯೋಜನೆಗಳನ್ನು ಪರಿಣಾಮಕಾರಿಯಾಗಿ ತಲುಪಿಸಲಾಗುತ್ತಿಲ್ಲ. ಇಂತಹ ಸಮುದಾಯಗಳಿಗೆ ಕಲ್ಪಿತ ಸೌಲಭ್ಯಗಳು ತಲುಪಬೇಕಾದರೆ, ಹೊಸಬಗೆಯ ಸಂಶೋಧನೆ ಮತ್ತು ಸಮೀಕ್ಷೆಗಳ ಅಗತ್ಯವಿದೆ. ಆದರೆ ಸರಕಾರ ಕೇವಲ ನೆಪ ಮಾತ್ರಕ್ಕೆ ಯೋಜನೆಗಳನ್ನು ಹಾಕಿಕೊಂಡಿತು. ಮತ್ತು ಪಂಚವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟು ಸಮುದಾಯಗಳು ಶಿಕ್ಷಣ ಅಭಿವೃದ್ಧಿ ಪಡಿಸಬೇಕೆಂದು ತೀರ್ಮಾನಿಸಿದರೂ, ಅನುಷ್ಠಾನದಲ್ಲಿ ವಿಫಲಗೊಂಡಿರುವುದನ್ನು ಕಾಣುತ್ತಿದ್ದೇವೆ. ಇನ್ನೊಂದು ಕಡೆಯಲ್ಲಿ ಸಂಪ್ರದಾಯಗಳು ಭೂತಾಕಾರವಾಗಿ ಸಮುದಾಯಗಳ ತಲೆಯಲ್ಲಿ ತುಂಬಿಕೊಂಡಿರುವುದು, ಎಷ್ಟೇ ಸೌಲಭ್ಯಗಳು ಒದಗಿಸಿಕೊಟ್ಟರೂ ಅವುಗಳ ಅನುಕೂಲತೆ ಪಡೆದುಕೊಳ್ಳುವುದರಲ್ಲಿ ಹಿಂಜರಿಯುತ್ತಿದ್ದಾರೆ. ಕಾರಣ ಅವರ ಜೀವನದ ಜಂಜಾಟ, ಬಡತನ, ಅಜ್ಞಾನ, ಭಿಕ್ಷಾಟನೆಯಲ್ಲಿ ತಲ್ಲೀನತೆ, ಇತ್ಯಾದಿ ಅಂಶಗಳು ದಿನೇ ದಿನೇ ಕಿತ್ತು ತಿನ್ನುತ್ತಿವೆ. ಈ ಸಮುದಾಯದ ಜನರು ಶಿಕ್ಷಣದಿಂದ ವಂಚಿತರಾಗಿ ಶಿಕ್ಷಣದ ಅನುಕೂಲಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳದಿರುವುದು ವಿಷಾದನೀಯ.

ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಎಮ್.ಡಿ. ಕ್ಯಾಂಪ್ ಕಂಪ್ಲಿಯಲ್ಲಿ ದುರುಗಮುರಗಿ ಸಮುದಾಯದ ವಿದ್ಯಾರ್ಥಿಗಳು

ವಿದ್ಯಾರ್ಥಿಗಳ ವಿವರ / ದಾಖಲಾತಿ

ಕ್ರಮಸಂಖ್ಯೆ	ದಾಖಲಾತಿ ಸಂಖ್ಯೆ	ವಿದ್ಯಾರ್ಥಿ ಹೆಸರು	ತಂದೆತಾಯಿ/ಪಾಲಕರು ಹೆಸರು	ತರಗತಿ
೧	೨/೦೧-೦೨	ಡಿ. ಗಾಳೆಮ್ಮ	ದುರುಗಪ್ಪ	೧
೨	೩/೦೧-೦೨	ಡಿ. ಯಲ್ಲಮ್ಮ	ದುರುಗಪ್ಪ	೧
೩	೪/೦೧-೦೨	ಎಚ್.ಯಲ್ಲಮ್ಮ	ಹುಲಿನಾಗಪ್ಪ	೧
೪	೫/೦೧-೦೨	ಹುಚ್ಚಮ್ಮ	ಆರ್.ಮಾರೆಪ್ಪ	೧
೫	೧/೦೧-೦೨	ಡಿ. ಲಕ್ಷ್ಮಣ	ದುರುಗಪ್ಪ	೧
೬	೬/೦೧-೦೨	ಮಾರೆಪ್ಪ	ಆರ್.ಮಾರೆಪ್ಪ	೧
೭	೮/೦೦-೦೧	ಕೆ.ಅಂಜಿನಪ್ಪ	ಕೇಶಪ್ಪ	೧
೮	೩/೦೦-೦೨	ಎನ್. ಮಾರೆಪ್ಪ	ಹುಲಿ ನಾಗಪ್ಪ	೧
೯	೨/೦೦-೦೧	ಎಂ. ಯಲ್ಲಮ್ಮ	ಮುನಿಯಪ್ಪ	೨
೧೦	೩/೦೦-೦೧	ಎಂ. ನಾಗಮ್ಮ	ಡೊಂಕು ಮಾರೆಪ್ಪ	೨

೧೧	೨/೦೦-೦೧	ಎಂ.ಮಾರೆಕ್ಕ	ಡೊಂಕು ಮಾರೆಪ್ಪ	೨
೧೨	೫/೦೦-೦೧	ಜಿ. ಮಾರೆಕ್ಕ	ಗಾಳೆಪ್ಪ	೨
೧೩	೬/೦೦-೦೧	ಜಿ. ಮಾರೆಕ್ಕ	ಗಾಳೆಪ್ಪ	೨
೧೪	೬/೦೦-೦೧	ಜೆ. ಗಾಳೆಪ್ಪ	ಆರ್. ಮಾರೆಪ್ಪ	೨
೧೫	೯/೦೦-೦೧	ಜೆ. ಜಂಬಣ್ಣ	ಈರಣ್ಣ	೨
೧೬	೧೦/೦೦-೦೧	ಈ. ಎರ್ರಿಸ್ವಾಮಿ	ಈರಣ್ಣ	೨
೧೭	೧೨/೦೦-೦೧	ಈ. ಮಾರೆಣ್ಣ	ಈರಣ್ಣ	೨
೧೮	೧೩/೦೦-೦೧	ಈ. ದುರುಗಣ್ಣ	ಈರಣ್ಣ	೨
೧೯	೧೪/೦೦-೦೧	ಈ. ಜಂಬಣ್ಣ	ಈರಣ್ಣ	೨
೨೦	೧೫/೦-೦೧	ಎಂ. ಮಾರೆಣ್ಣ	ಬುಸು ಬುಸು ನಾಗಪ್ಪ	೨
೨೧	೧೬/೦೦-೦೧	ಪಿ. ಮಾರೆಪ್ಪ	ಡಿ. ನಾಗಪ್ಪ	೨
೨೨	೧೯/೦೦-೦೧	ಎನ್. ಲಕ್ಷ್ಮಣ	ಡಿ. ನಾಗಪ್ಪ	೨
೨೩.	೨೧/೦೦-೦೧	ಮಾರೆಪ್ಪ	ಮಾರೆಪ್ಪ	೨
೨೪.	೪೨/೦೦-೦೧	ಕಾಟೆಪ್ಪ	ಬುಸು ಬುಸು ನಾಗಪ್ಪ	೨

ಈ ಮೇಲಿನ ವಿದ್ಯಾರ್ಥಿಗಳು ಶಾಲೆಯಲ್ಲಿ ದಾಖಲಾತಿಯಾಗಿ ವಿದ್ಯಾಭ್ಯಾಸ ನಡೆಸುತ್ತಿದ್ದಾರೆ.

ಶೈಕ್ಷಣಿಕ ಮಟ್ಟ : ಹೊಸಪೇಟೆ ತಾಲ್ಲೂಕಿನ ಕಂಪ್ಲಿಯಲ್ಲಿ ೨೪, ಕಮಲಾಪುರದಲ್ಲಿ ೨, ಹೀಗೆ ಒಟ್ಟು ೨೬ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣಕ್ಕೆ ಪಾದಾರ್ಪಣೆ ಮಾಡಿದ್ದಾರೆ. (ಕೋಷ್ಟಕ ೩ ರಲ್ಲಿ ನೋಡಬಹುದು)

ಸಾಕ್ಷರತೆಯ ಪ್ರಮಾಣ : ಬಳ್ಳಾರಿ ಜಿಲ್ಲೆಯ ದುರುಗಮುರಗಿಯಲ್ಲಿ ಸಾಕ್ಷರತೆ ಕಡಿಮೆ. ಇವರ ಒಟ್ಟು ಜನಸಂಖ್ಯೆ ೪೨೮ ರಲ್ಲಿ ೩೫೭ ರಷ್ಟು ಜನ ಸಾಕ್ಷರಹನ ಅದರಲ್ಲಿ ಕೇವಲ ೨೬ ಜನರು ಸಾಕ್ಷರಿರುವರು. ಈ ೨೬ ಜನರು ಕಳೆದು ಸಾಲಿನಲ್ಲಷ್ಟೇ ಶಾಲೆಯ ದರ್ಶನ ಪಡೆದವರಾಗಿದ್ದಾರೆ. ಈಗ ಕಂಪ್ಲಿಯಲ್ಲಿ ಪ್ರಾಥಮಿಕ ಶಾಳೆಯಲ್ಲಿ ಅಭ್ಯಾಸ ಮಾಡುವವರಾಗದಿದಾರೆ. ಇದರಲ್ಲಿ ಕೇವಲ ೧೧ ಹೆಣ್ಣು ಮಕ್ಕಳಿದ್ದಾರೆ. ಒಟ್ಟು ಸಾಕ್ಷರಹನರಲ್ಲಿ ೨೬೨ ಜನ ನಿರಕ್ಷರಾಗಿರುವರು. (ಕೋಷ್ಟಕ ೪ ರಲ್ಲಿ ನೋಡಬಹುದು)

ಶೈಕ್ಷಣಿಕ ಸಮಸ್ಯೆಗಳು : ಇವರು ಶ್ರಮರಹಿತ ದುಡಿಮೆ ಹಾಗೂ ಭಿಕ್ಷಾಟನೆಯಿಂದ ಹೊಟ್ಟೆ ತುಂಬಿಸಿಕೊಳ್ಳುವವರಾದ್ದರಿಂದ ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡದೆ ಇರುವುದು, ಮತ್ತು ಬಡತನದಿಂದಾಗಿ ಮಕ್ಕಳಿಗೆ ಬೇಕಾಗಿರುವ ಅವಶ್ಯಕತೆಗಳನ್ನು ಒದಗಿಸಿಕೊಡದೆ, ತಮ್ಮ ತಮ್ಮ ಕಸುಬು ಮತ್ತು ಕೆಲಸಗಳಲ್ಲಿ ತೊಡಗಿಸಿಕೊಂಡು ಜೀವನ ಹೊರೆಯಲು ಮಕ್ಕಳನ್ನು ಶಾಲೆಯಿಂದ ಅರ್ಧಕ್ಕೆ ಬಿಡಿಸುವುದನ್ನು ಕಾಣುತ್ತಿದ್ದೇವೆ.

ಮಕ್ಕಳು ನಾಲ್ಕು ಅಕ್ಷರಗಳನ್ನು ಕಲಿತು ವಿಷಯ ತಿಳಿದುಕೊಂಡು ಜ್ಞಾನಿಗಳಾದರೆ ದೇಶಕ್ಕೆ ಮತ್ತು ಸಮುದಾಯದ ತಂದೆತಾಯಿಗಳಿಗೆ ಒಳಿತಾಗುತ್ತದೆಂಬ ತಿಳುವಳಿಕೆ ಇಲ್ಲದೆ ಇರುವುದು ಮತ್ತು ಪ್ರತಿ ದಿನ

ಪಾಠ ಪ್ರವಚನಗಳು ಮನೆಯಲ್ಲಿ ಹೇಳಿ ಕೊಡುವ ತಿಳುವಳಿಕೆ ಇಲ್ಲದಿರುವುದರಿಂದ ಮಕ್ಕಳಿಗೆ ಪ್ರೋತ್ಸಾಹ ದೊರಕದೆ, ಓದಿನ ಬಗ್ಗೆ ಕಾಳಜಿ ವಹಿಸದೆ ಮಧ್ಯದಲ್ಲಿಯೇ ಬಿಟ್ಟು ಹೋಗುವುದಕ್ಕೆ ಕಾರಣಗಳಾಗಿವೆ.

ಬಡತನ ಮತ್ತು ಅಲೆಮಾರಿತನದ ಕಾರಣಗಳಿಂದ ತಮ್ಮ ಮಕ್ಕಳನ್ನು ಸರಿಯಾಗಿ ಶಾಲೆಗೆ ಕಳಿಸುವುದಿಲ್ಲ. ಇವರು ಭಿಕ್ಷಾಟನೆ ವೃತ್ತಿಯಲ್ಲಿ ಹೋದಾಗ ತಟ್ಟೆಯಲ್ಲಿ ಬರೀ ೧೦ ಪೈಸೆ ೨೦ ಪೈಸೆ ೫೦ ಪೈಸೆಗಳು ಕೂಡಿ ಬಿದ್ದರೆ ಸಾಕು. ಇದನ್ನು ಸೇರಿಸಿದರೆ ೧೦ ರೂಪಾಯಿಗಳು ಆಗಬಹುದು? ೧೦ ರೂಪಾಯಿಗಳಿಂದ ತಮ್ಮ ದಿನದ ಖರ್ಚನ್ನು ನೋಡಿಕೊಳ್ಳಬೇಕು. ೧೦ ರೂಪಾಯಿಗಳಿಂದ ಹೊಟ್ಟೆ ತುಂಬಿಸಿಕೊಳ್ಳಬೇಕಾದರೆ ಮಕ್ಕಳನ್ನು ಶಾಲೆಯಿಂದ ಬಿಡಿಸಬೇಕು. ಈ ಕಾರಣದಿಂದ ನಮ್ಮನ್ನು ಶಾಲೆಗೆ ಕಳಿಸಿಲ್ಲ ಎಂದು ಕಂಪ್ಲಿಯಲ್ಲಿರುವ ಶಾಲೆ ಬಿಟ್ಟ ಹುಡುಗನೊಬ್ಬ ಹೇಳಿದ.

ಗಂಡಸರೇ ಅನಕ್ಷರಸ್ಥರಾಗಿರುವ ಈ ಸಮುದಾಯದಲ್ಲಿ ಮಹಿಳೆಯರ ಶಿಕ್ಷಣದ ಪಾಡೇನು? ಇದಕ್ಕೆ ಮೂಲ ಸಮಸ್ಯೆ ಎಂದರೆ ಚಿಕ್ಕ ವಯಸ್ಸಿನಲ್ಲಿ ವಿವಾಹ ಮಾಡುವುದು. ಬಳ್ಳಾರಿ ಜಿಲ್ಲೆಯಲ್ಲಿ ದುರುಗಮುರಗಿ ಸಮುದಾಯದ ಹೆಣ್ಣು ಮಕ್ಕಳು ಶಾಲೆಯಲ್ಲಿ ವ್ಯಾಸಂಗ ಮಾಡಿರುವುದಿಲ್ಲ. ಇನ್ನು ಸಂಘ ಸಂಸ್ಥೆಗಳು ಪಾತ್ರವನ್ನು ನೋಡಬೇಕಾದರೆ ಕೇವಲ ನೆಪಕ್ಕೆ ಮಾತ್ರ ಸಂಘ-ಸಂಸ್ಥೆಗಳು ಇದ್ದು, ಗುಡಾರದಲ್ಲಿ ವಾಸಿಸುತ್ತಿರುವ ಜನ ಸಮುದಾಯದ ಬಗ್ಗೆ ಯೋಚನೆ ಮಾಡುವುದಿಲ್ಲ. ಸಂಘಸಂಸ್ಥೆಗಳಿಗೆ ಹೊರ ದೇಶಗಳಿಂದ ನಳದಲ್ಲಿ ನೀರು ಹರಿಯುವಂತೆ ಸಾಕಷ್ಟು ಹಣ ಬರುತ್ತಿದೆ. ಅಭಿವೃದ್ಧಿ ಕಾರ್ಯಗಳನ್ನು ಒಂದು ದೊಡ್ಡದಾದ ಅಂಕಿಸಂಖ್ಯೆಗಳ ಫಲಕ ಹಾಕಿಕೊಂಡು "ನಮ್ಮ ಸಂಸ್ಥೆ ಅಭಿವೃದ್ಧಿ ಪಥದಲ್ಲಿದೆ" ಎಂಬ ಉದ್ದವಾದ ಭಾಷಣಗಳನ್ನು ಬೀಗುವ ನಿರ್ದೇಶಕರಗಳು ಇಂದಿಗೂ ಕಂಡುಬರುತ್ತಾರೆ.

ಏನೇ ಆಗಲಿ ದುರುಗಮುರಗಿ ಸಮುದಾಯದವರು ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇಷ್ಟೆಲ್ಲಾ ತಿಳಿದಾಗ ನಮಗನಿಸುವುದು ಈ ಎಲ್ಲಾ ಸಮಸ್ಯೆಗಳಿಗೂ ಪರಿಹಾರವಿದೆ. ಆದರೆ ಸಮುದಾಯದ ಪ್ರತಿಯೊಬ್ಬ ಪ್ರಜೆಯೂ ಉತ್ತಮ ಪ್ರಜ್ಞಾವಂತ ನಾಗರಿಕನಾಗಿರಬೇಕು. ಇವರು ಪ್ರಾಥಮಿಕ ಶಾಲೆಯಿಂದ ಹಿಡಿದು ಪದವಿ ಪೂರ್ವ ಕಾಲೇಜ್‌ಗಳಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಡ್ಡಾಯವಾಗಿ ಕಳುಹಿಸಬೇಕು.

ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ, ಪುಸ್ತಕಗಳಿಗೆ ಗ್ರಾಮ ಪಂಚಾಯ್ತಿ ಕಾರ್ಯಾಲಯದಲ್ಲಿ ಶೇ ೨೦ ಪುಸ್ತಕ ರಿಯಾಯಿತಿ ದರದಲ್ಲಿ ಹಣಮುಂಜೂರಾತಿ ಮತ್ತು ಬ್ಯಾಂಕ್‌ನಲ್ಲಿ ಶಿಕ್ಷಣ ಸಾಲ ಸೌಲಭ್ಯವನ್ನು ಒದಗಿಸಲಾಗುವದು. ಈ ಎಲ್ಲಾ ಸೌಲಭ್ಯಗಳನ್ನು ಸಮುದಾಯದವರು ಪಡೆಯುವಂತಾಗಬೇಕು. ದುರುಗಮುರಗಿ ಸಮುದಾಯದಲ್ಲಿ ಭಾವೈಕ್ಯತೆಯನ್ನು ಬೆಳೆಸಬೇಕು. ಅವರಲ್ಲಿ ಕಂಡುಬರುವ ಅಜ್ಞಾನ ಮೂಡನಂಬಿಕೆಗಳ ನಿರ್ಮೂಲನೆಗಾಗಿ ಸ್ವಪ್ರಜ್ಞೆ ಬೆಳೆಸಬೇಕು. ಇಂತಹ ವಿಷಯಗಳ ಬಗ್ಗೆ ಗುಡಾರದಲ್ಲಿ ವಾಸಮಾಡುತ್ತಿರುವ ಇವರು ಸುದ್ದಿ ಮಾಧ್ಯಮಗಳನ್ನು ಹೆಚ್ಚಿನ ರೀತಿಯಲ್ಲಿ ಪ್ರಕಟಣೆಯಾಗಬೇಕು. ಹಾಗೂ ಜಾಗೃತಿಯನ್ನು ಮಾಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ಸಮುದಾಯ ಜನರುಗಳು ಸುಖವಾಗಿ ಬದುಕಲು ತಮ್ಮ ತಮ್ಮ ಕುಟುಂಬಗಳಲ್ಲಿ ಸಾಕಷ್ಟು ಸೌಲಭ್ಯಗಳನ್ನು ಪಡೆದುಕೊಂಡು, ನೆಮ್ಮದಿಯಿಂದ ಬಾಳುವಂತಾಗಬೇಕು.

ಧಾರ್ಮಿಕ ಜೀವನ

ಈ ನೆಲದ ಸಂಸ್ಕೃತಿ ಮತ್ತು ಪರಂಪರೆಗೆ ತಮ್ಮದೇ ಆದ ಕೊಡುಗೆ ನೀಡಿರುವ ದುರುಗಮುರಗಿಯರ ತಾವು ಎಲ್ಲೆಲ್ಲಿ ನೆಲೆಸಿದ್ದಾರೊ ಅಲ್ಲಲ್ಲಿಯ ದೇವರುಗಳನ್ನು ಅವಲಂಬಿಸಿ ಅವುಗಳಿಗೆ ನಡೆದುಕೊಳ್ಳುತ್ತಾ ತಮ್ಮ ಧಾರ್ಮಿಕ ಜೀವನವನ್ನು ವೈವಿಧ್ಯಮವಾಗಿಸಿದ್ದಾರೆ. ಪರಂಪರೆಯಿಂದ ಬಂದ ಧಾರ್ಮಿಕ ಶ್ರದ್ಧೆಯೇ ತಮ್ಮ ಬಾಳಿಗೆ ಆಧಾರ ಎಂದೂ ನಂಬಿದ್ದಾರೆ. ಹೀಗಾಗಿ ಜೀವನದುದ್ದಕ್ಕೂ ಎದುರಾಗುವ ಎಲ್ಲಾ ತೊಡಕು ತೊಂದರೆಗಳಿಗೂ ಕಾರಣವಾದ ಶಕ್ತಿಯೊಂದಿದೆ ಎಂದು ಧೃಡವಾಗಿ ನಂಬುತ್ತಾರೆ. ಜೀವನದಲ್ಲಿ ಬರುವ ಕಷ್ಟ ಸುಖಗಳಿಗೂ, ಒಳಿತು ಕೆಡಕುಗಳಿಗೂ ಮೂಲಭೂತವಾದ ಅಗೋಚರವಾದ ಶಕ್ತಿಯೊಂದಿದೆ. ಅದರ ಇಚ್ಛೆಯ ಮೇರೆಗೆ ಅವೆಲ್ಲವುಗಳು ನಡೆಯುತ್ತವೆ. ಆ ಶಕ್ತಿಯ ವಿರುದ್ಧ ಹೋಗುವುದು ಅಸಾಧ್ಯ ಎಂಬುದನ್ನು ದುರುಗಮುರಗಿಯರು ಕಂಡುಕೊಂಡಿದ್ದಾರೆ. ನಿತ್ಯದ ಭಿಕ್ಷಾಟನೆ ಕಸಬುನ್ನು, ದೈವದ ಜೊತೆ ಅನುಸಂಧಾನ ಮಾಡುವ ಮಹತ್ವದ ವೃತ್ತಿಯೆಂದು ಪರಿಗಣಿಸಿದ್ದಾರೆ. ಈ ಜನರ ನೆಚ್ಚಿನ ಕುಲದೇವರುಗಳೆಂದರೆ ಈರನಾಗಮ್ಮ, ಮುನಿಸ್ವಾಮಿ, ದ್ಯಾವಮ್ಮ, ಮಾರಮ್ಮ, ದುರುಗಮ್ಮ ಇತ್ಯಾದಿ. ಈ ದೇವರುಗಳಿಗೆ ಪ್ರತಿ ಮಂಗಳವಾರ, ಶುಕ್ರವಾರ ತಪ್ಪದೇ ಪೂಜೆ ನಡೆಸುವುದು ರೂಢಿ. ವಿಶೇಷವಾಗಿ ಕುರಿ, ಕೋಳಿಗಳ ಬಲಿಯನ್ನು ಕೊಡಲಾಗುವುದು.

ಸಹಸ್ರಾರು ವರ್ಷಗಳಿಂದ ತಮ್ಮದೇ ಧಾರ್ಮಿಕ ವಿಧಿವಿಧಾನಗಳನ್ನು ದುರುಗಮುರಗಿಯರು ಕಾಪಾಡಿಕೊಂಡು ಬಂದಿದ್ದಾರೆ. ಧಾರ್ಮಿಕ ಜೀವನದಲ್ಲಿ ಸ್ವರ್ಗ, ನರಕ, ಪಾಪ, ಪುಣ್ಯಗಳಲ್ಲಿ ಅವರಿಗೆ ಬಲವಾದ ನಂಬಿಕೆ ಇದೆ. ಮತ್ತೊಂದು ಮುಖ್ಯವಾದ ಧಾರ್ಮಿಕ ಪದ್ಧತಿಯೆಂದರೆ ತಮ್ಮ ಆಶ್ರಿತರಾವ ಈರನಾಗಮ್ಮ, ಮುನಿಸ್ವಾಮಿಯರನ್ನು ಉದ್ಧರಿಸುವ ಶಕ್ತಿ ದೇವತೆಗಳೆಂದು ಇವರು ನಂಬುತ್ತಾರೆ.

ದುರುಗಮ್ಮ ಹಾಗೂ ಮಾರಮ್ಮನ ಮೂರ್ತಿಗಳನ್ನು ಬುಟ್ಟಿಯಲ್ಲಿಟ್ಟುಕೊಂಡು ಅವುಗಳ ಪೂಜೆಯನ್ನು ಪೋತರಾಜನು ಮಾಡುತ್ತಾನೆ. ಆದ್ದರಿಂದಲೇ ಈ ಪೂಜೆಯನ್ನು ವಿಶೇಷವಾಗಿ ದಸರಾ ಹಬ್ಬ, ಮದುವೆ ಸಂದರ್ಭಗಳಲ್ಲಿ ಮಾಡುತ್ತಾರೆ. ಇವುಗಳಲ್ಲದೆ ದುರುಗ ಮುರುಗಿಯರು ಹಲವಾರು ಗ್ರಾಮದೇವತೆಗಳನ್ನು ಪೂಜಿಸುತ್ತಾರೆ. ಅವುಗಳಲ್ಲಿ ಮುಖ್ಯವಾದವುಗಳು ದ್ಯಾವಮ್ಮ, ಮಾರಮ್ಮ, ಸುಂಕಲಮ್ಮ, ಎಲ್ಲಮ್ಮ, ಗಾಳೆಮ್ಮ, ಹುಲಿಗೆಮ್ಮ, ಕೂಗಮ್ಮ ಮುಂತಾದವು.

ಮುಗ್ಧರೂ, ಭಾವುಕರೂ, ದೇವರ ವಿಷಯದಲ್ಲಿ ಭಯಭೀತಿಯುಳ್ಳವರಾದ ದುರುಗಮುರಗಿಯರ ಈ ಶಕ್ತಿ ದೇವತೆಗಳಿಗೆ (ಉಗ್ರ ದೇವತೆ) ತಪ್ಪದೇ ನಡೆದುಕೊಳ್ಳುತ್ತಾರೆ. ಸಮುದಾಯದ ವ್ಯಕ್ತಿಗೆ ಖಾಯಿಲೆಗಳ ಬಂದರೆ ಉಗ್ರ ದೇವತೆಯ ಶಾಪದಿಂದಲೇ ಬರುತ್ತವೆಂದೂ, ಇವುಗಳು ಬರದಂತೆ ಕೋಳಿಯನ್ನೋ, ಕುರಿಯನ್ನೋ

ಬಲಿಕೊಡುತ್ತಾರೆ. ಅಥವ ಸತ್ತವರ ಕಾರ್ಯಗಳಲ್ಲಿ ಅಪಶಕುನ ಉಂಟಾಗಿದ್ದರೆ, ಮುಂತಾದ ಹರಕೆಗಳನ್ನು ಹೊತ್ತು, ಸಲ್ಲಿಸಿ ದೇವತೆಗಳನ್ನು ಸಂತೃಪ್ತಿಗೊಳಿಸುತ್ತಾ ಬಂದಿದ್ದಾರೆ.

ದುರುಗಮುರಗಿ ಸಮುದಾಯದ ದೇವರುಗಳು : ದುರುಗಮುರಗಿ ಸಮುದಾಯದವರ ಕುಲದೇವತೆಗಳು ಹೆಚ್ಚಾಗಿ ದ್ರಾವಿಡ ಶಕ್ತಿ ದೇವತೆಗಳು. ಈ ದೇವತೆಗಳ ಕುರಿತು ಇವರ ಬಳಿ ಅಪಾರ ಮೌಖಿಕ ಸಾಹಿತ್ಯವಿದೆ. ಅವೆಲ್ಲ ಮೌಖಿಕ ರೂಪದಲ್ಲಿಯೇ ಇರುವುದು. ಆದ್ದರಿಂದ ಇವರ ದೇವತೆಗಳಾದ ಈರನಾಗಮ್ಮ, ಮುನಿಸ್ವಾಮಿ, ದ್ಯಾಪಮ್ಮ, ದುರುಗಮ್ಮ, ಮಾರಮ್ಮ, ಸುಂಕಲಮ್ಮ, ಪಾಲಕಮ್ಮ, ಎಲ್ಲಮ್ಮ, ಗಾಳೆಮ್ಮ, ಹುಲಿಗೆಮ್ಮ, ಕೂಗಮ್ಮ, ಪೋತರಾಜ ಜನಪದ ಪರಿಕಲ್ಪನೆಯ ದೇವತೆಗಳೆನ್ನಬಹುದು.

ಕುಲದೇವರುಗಳು ದುರುಗಮುರಗಿ ನೆಲೆಗಳ ವಾರುನ ತಮ್ಮ ಕುಲದೈವಗಳಾದ ಜಂಬಲಮ್ಮ ೩೧, ಈರನಾಗಮ್ಮ ೪೨, ಮುನಿಸ್ವಾಮಿ ೨೬, ಮಾರಮ್ಮ ೯ ಇವೆಲ್ಲವುಗಳು ಸಮುದಾಯದಲ್ಲಿ ಕಂಡುಬರುವುದು. (ಕೋಷ್ಟಕ ೫ ರಲ್ಲಿ ನೋಡಬಹುದು)

ಕುಲದೇವರ ಬಗೆಗಿನ ನಂಬಿಕೆಗಳು ಮತ್ತು ಆಚರಣೆಗಳು : ದುರುಗಮುರಗಿ ಸಮುದಾಯದ ಕುಲದೇವತೆಗಳ ಮೂರ್ತಿಗಳು ಹೆಚ್ಚಾಗಿ ಬೇವಿನ ಕಟ್ಟಿಗೆಯಿಂದ ಮಾಡಲ್ಪಟ್ಟಿವೆ. ಈ ಮೂರ್ತಿಗಳನ್ನು ಮಂಗಳವಾರ ಇಲ್ಲವೇ ಶುಕ್ರವಾರ ದಿವಸ ಹಾಗೂ ವರ್ಷದ ಸಣ್ಣ ಗೌರಮ್ಮ, ದೊಡ್ಡ ಗೌರಮ್ಮ ಹಬ್ಬಗಳಲ್ಲಿ ತಯಾರುಮಾಡುತ್ತಾರೆ. ಜಿನಗಾರರು ಶುಭ ಸಮಯ ನೋಡಿ ತಾನೂ ಜಳಕಮಾಡಿ ನಿಷ್ಠೆಯಿಂದ ಇವುಗಳನ್ನು ತಯಾರು ಮಾಡುತ್ತಾರೆ. ಮೂರ್ತಿಗಳನ್ನು ಮಾಡಲು ಎರಡು ತಿಂಗಳ ಕಾಲ ಹಿಡಿಯಬಹುದು. ಜಿನಗಾರರು ತಮ್ಮಲ್ಲಿರುವ ಸುತ್ತಳತೆಯ ದಾರಬಂದ ಮೂರ್ತಿ ಮಾಡುವರು. ಸುತ್ತಳತೆ ದಾರದಿಂದ ಮಾನ (ಉದ್ದ ಅಳತೆ) ಪ್ರಮಾಣ (ಅಗಲದ ಅಳತೆ) ದಪ್ಪದ ಅಳತೆ ಪರಿಮಾಣ ಸುತ್ತಳತೆ ಉಪಮಾನ (ಅಂಗಗಳ ಮಧ್ಯ ಅಂತರೆ) ಲಂಬಮಾನ (ಬ್ರಹ್ಮ ಸೂತ್ರ ಅಳತೆ) ಎಷ್ಟೆಂಬುದು ತೆಗೆದುಕೊಂಡು ಅಲ್ಲಲ್ಲಿ ಚಾಜದಿಂದ ಗುರುತು ಹಾಕಿಕೊಂಡು ಮೊದಲು ಬಾಚಿಯಿಂದ ಒರಟಾಗಿ ಮೂರ್ತಿಯನ್ನು ಕೆತ್ತಿ ಕೊಳ್ಳುವರು. ಅನಂತರ ಉಳಿಯಿಂದ ದೇಹದ ಒಂದೊಂದು ಭಾಗವನ್ನು ತಿದ್ದಿ ತೀಡಿ ನುಣುಪಾಗಿ ಮಾಡುವರು. ಮೂರ್ತಿಗಳನ್ನು ಮಾಡಿದ ಬಳಿಕ ಆಯಾ ದೇವಿಗೆ ತಕ್ಕಂತೆ ತರತರದ ಬಣ್ಣ ಹಚ್ಚುವರು. (ಕೆಂಪು ಹಳದಿ, ನೀಲಿ ಬಣ್ಣ) ಸೀರೆ ಪತ್ತಲನ್ನು ಉಡಿಸುವರು. ಕೆಲವೊಂದು ದೇವಿಯ ಮೂರ್ತಿಗಳು ಎರಡಡಿಯಿಂದ ಒಡಿದು ಆರಡಿಯವರೆಗೆ ಇರುವುದು, ಆಯಾ ದೇವಿಯ ಮೂರ್ತಿಗೆ ತಕ್ಕಂತೆ ವಾಹನಗಳನ್ನು ಮಾಡುವರು. ಬಡಿಗೇರರಿಗೆ ೨೧ ಸೇರು ಜೋಳ, ೨೧ ರೂಪಾಯಿ ಕೊಡುವರು. ಇತ್ತೀಚಿನ ದಿನಗಳಲ್ಲಿ ಆರ್ಥಿಕ ಬಲದ ಮೇಲೆ ಬಡಿಗೇರ ಮೂರ್ತಿಗಳ ತಯಾರು ಮಾಡುವುದಿಂದ ಬಹಳ ಖರ್ಚು ಬರುವುದು.

ಈರನಾಗಮ್ಮ ಮೂರ್ತಿ ಅಳತೆ

ದೊಡ್ಡ ಪೆಟ್ಟಿಗೆಯ ಹೊರಗಡೆ ಸುತ್ತಳತೆ ೮೧.೯ ಸೆಂ.ಮಿ.

ಇದರ ಎತ್ತರ ೨೧.೭ ಸೆಂ.ಮಿ.

ಒಳಗಡೆಯಲ್ಲಿ ಈರನಾಗಮ್ಮ ಮೂರ್ತಿ ೨೪ ಸೆಂ.ಮಿ. ಎತ್ತರ, ಬೇವಿನ ಕಟ್ಟಿಗೆ

ಸಣ್ಣ ಪೆಟ್ಟಿಗೆ ಈರನಾಗಮ್ಮ ಮೂರ್ತಿ ಅಳತೆ

ಈರ ನಾಗಮ್ಮ ಮೂರ್ತಿ ಉದ್ದ ೧೮.೯ ಸೆಂ.ಮಿ.

ಒಟ್ಟು ಸುತ್ತಳತೆ ೫೨.೮ ಸೆಂ.ಮಿ

ಮುಖವಾಡಗಳು

ಪೋತರಾಜನು ಮುಖಕ್ಕೆ ಮುಖವಾಡ ಹಾಕಿಕೊಳ್ಳುವನು, ಅದನ್ನು ದೇವಿಯ ಪಕ್ಕದಲ್ಲಿಯೇ ಮುಖವಾಡಗಳನ್ನು ಇಡಲಾಗುವುದು. ಮುಖವಾಡಗಳಲ್ಲಿ ೨ ವಿಧಗಳಿವೆ. ಒಂದು ಜನರಲ್ಲಿ ಭಯ ಭಕ್ತಿ ಉಂಟುಮಾಡಿ ದೇವಿಯ ಮಹಿಮೆಯನ್ನು ಸಾರಲು ಮುಖವಾಡಗಳನ್ನು ಮಾಡುವರು. ಇನ್ನೊಂದು ಉತ್ಸವ ಕಾಲದಲ್ಲಿ, ವಿಶೇಷ ಪೂಜಾ ಸಮಾರಂಭಗಳಲ್ಲಿ ಪೋತರಾಜ ಮುಖವಾಡ ಮುಖಕ್ಕೆ ಹಾಕಿಕೊಂಡು ಬುರ್ರ ಬುರ್ರ ವಾದ್ಯದಲ್ಲಿ ಕುಣಿಯುವನು. ಇತ್ತೀಚಿನ ದಿನಗಳಲ್ಲಿ ಭಿಕ್ಷಾಟನೆ ಸಮಯದಲ್ಲಿ ಮುಖವಾಡಗಳನ್ನು ಹಾಕಿಕೊಳ್ಳುವುದಿಲ್ಲ.

ದೇವಿಯ ಉಡುಪು ಹಾಗೂ ಆಯುಧ, ಆಭರಣಗಳು : ಸಾಮಾನ್ಯವಾಗಿ ಎಲ್ಲಾ ದೇವಿಯರಿಗೂ ಬಿಳಿ ಪತ್ತಲ ಎಲ್ಲ ದಿವಸಗಳಲ್ಲಿ ಉಡಿಸುವರು. ಇವರು ಮಂಗಳವಾರ ಹಾಗೂ ಶುಕ್ರವಾರ ದಿವಸಗಳಲ್ಲಿ ಸೀರೆಯನ್ನು ಉಡಿಸುವರು. ದೇವಿ ಮೈಯಲ್ಲಿ (ಕೊರಳನಲ್ಲಿ) ಕರಿಮಣಿ, ಪಾದ, ಬಂಗಾರದ ಆಭರಣ, (ಹಿಂದೆ ಇತ್ತು, ಆದರೆ ಇತ್ತೀಚಿನ ದಿನಗಳಲ್ಲಿ ಇಲ್ಲ) ಟೊಂಕದಲ್ಲಿ ಡಾಬ, ಮೂಗಿನಲ್ಲಿ ನತ್ತು, ಕೈಯಲ್ಲಿ ಬಲೆ, ಕಾಲಲ್ಲಿ ರುಳಿ, ಜೈನ ಹಾಕುವರು. ಉಗ್ರ ದೇವತೆಗೆ ಕಣ್ಣುಬಟ್ಟುಕ್ವಾರ ಮೀಸೆಯನ್ನು ಮಾಡಿಸಿ ಇಡುವರು. ಸರ್ವೇ ಸಾಮಾನ್ಯವಾಗಿ ಎಲ್ಲಾ ದೇವಿಯರು ಪಾರ್ವತಿ, ಜಗದಾಂಬೆಯ ಅವತಾರಿಗಳಾದ ಕಾರಣ ಖಡ್ಗ, ಕೊಡಲಿ, ತ್ರಿಶೂಲ, ಚಕ್ರ, ಗದೆ, ಹಗ್ಗ, ಭಲ್ಲೆ, ಶಂಖಗಳು ಇವರ ಆಯುಧಗಳಾಗಿರುವವು.

ವಾದ್ಯ : ಮೇಲ್ವರ್ಗದ ಜನ ಪೂಜಿಸುವ ದೇವತೆಗಳಾದ ಕಾಳಮ್ಮ ಚೌಡಮ್ಮರ ವಾದ್ಯಗಳು ಡೋಲು, ಜಾಗಟೆ ತಾಳಗಳಾದರೆ, ಕೆಳವರ್ಗದ ಜನರ ದೇವತೆಗಳಾದ ಮರಗಮ್ಮ, ದುರುಗಮ್ಮ, ಎಲ್ಲಮ್ಮ ದ್ಯಾವಮ್ಮರ ವಾದ್ಯಗಳು, ಹಲಗೆ, ಡೊಳ್ಳು, ಕೊಂಬು, ಉರುಮೆ, ಅಥವಾ ಬುರ್ರ ಬುರ್ರ ವಾದ್ಯ. ದುರುಗಮುರಗಿ ಸಮುದಾಯದ ಜನರು ಬುರ್ರ ಬುರ್ರ ವಾದ್ಯವನ್ನು ತಾವೇ ತಯಾರು ಮಾಡಿಕೊಳ್ಳುತ್ತಾರೆ. ಈ ವಾದ್ಯವನ್ನು ಮೇಕೆ ಚರ್ಮದಿಂದ ಮಾಡಿಕೊಳ್ಳುತ್ತಾರೆ. ಮೊದಲಿಗೆ ಚರ್ಮ ತೆಗೆದುಕೊಂಡು ಉಪ್ಪಿನಿಂದ ಸವರಿ, ಕೆಲವು ದಿವಸಗಳ ಕಾಲ ಬಿಸಿಲಿಗೆ ಒಣಗಿಸುತ್ತಾರೆ.

ಚರ್ಮವನ್ನು ಎರಡು ಕಡೆಯಲ್ಲಿ ಪ್ಲಾಸ್ಟಿಕ್ ದಾರದಿಂದ ಕಟ್ಟುತ್ತಾರೆ. ಚರ್ಮ ಎಡೆಗಡೆಯಲ್ಲಿ ಔಡಲು ಎಣ್ಣೆಯನ್ನು ಹಚ್ಚಿ ಬಿಸಿಲಿಗೆ ಒಣಗಿಸುತ್ತಾರೆ. ಈಚಲು ಮರದ ತೆಳ್ಳನೆಯ ಕಟ್ಟಿಗೆಯಿಂದ ಬಾರಿಸಿದರೆ ಜಿರ್, ಜಿರ್‌ಗೀರ್........ ಶಬ್ದ ಬರುವುದು. ಬಲಗಡೆಯಲ್ಲಿ ಕುಗಡ ಕಟ್ಟಿಗೆ ಅಥವಾ ತಂಗಡಿ ಕಟ್ಟಿಗೆಯಿಂದ ಬಾರಿಸುತ್ತಾರೆ. ದೇವರ ಮೂರ್ತಿಯನ್ನು ಹೊತ್ತುಕೊಂಡ ಸಮಯದಲ್ಲಿ ಹೆಣ್ಣು ಮಕ್ಕಳು ಈ ವಾದ್ಯವನ್ನು ಬಾರಿಸುತ್ತಾರೆ. ಈಕೆಗೆ ಬುರ್ರ ಬುರ್ರ ಪೋಚಮ್ಮ ಎಂದು ಕರೆಯುತ್ತಾರೆ.

ವಾದ್ಯ ಅಳತೆ :

ಬುರ್ರ ಬುರ್ರ ವಾದ್ಯ

ಉದ್ದ ೧೪ ಸೆಂ.ಮಿ.

ಸುತ್ತಳತೆ ೩೦ ಸೆಂ.ಮಿ.

ಬುರ್ರ ಬುರ್ರ ಚರ್ಮ ಎಡಗಡೆಯಲ್ಲಿ ಎತ್ತರ ೧೦.೩ ಸೆಂ.ಮಿ.

ಬುರ್ರ ಬುರ್ರ ಚರ್ಮ ಬಲಗಡೆಯಲ್ಲಿ ಎತ್ತರ ೧೦.೩ ಸೆಂ.ಮಿ

ಕೊರಳಿಗೆ ಹಾಕಿಕೊಳ್ಳುವ ಹಗ್ಗ ೪೬.೭ ಸೆಂ.ಮಿ

ಹಲಗೆ :

ಉದ್ದ ೨೦.೫ ಸೆಂ.ಮಿ

ಎತ್ತರ ೨೦.೫ ಸೆಂ.ಮಿ

ಹಲಗೆಯ ಸುತ್ತಳತೆ ೬೬.೩ ಸೆಂ.ಮಿ

ಕೊರಳಿಗೆ ಹಾಕಿಕೊಳ್ಳುವ ಹಗ್ಗ ೩೫ ಸೆಂ.ಮಿ.

ಲಡ್ಡು ಅಥವಾ ಚಾಟಿ : ದುರುಗಮುರಗಿ ಸಮುದಾಯದವರು ಲಡ್ಡನ್ನು ತಾವೇ ತಯಾರುಮಾಡಿಕೊಳ್ಳುತ್ತಾರೆ. ಕಣಗಳ ಸಾಲಿನಲ್ಲಿ ಹಾಗು ಅಡವಿಯಲ್ಲಿ ಕತ್ತಾಳೆ ಗಿಡ ಕಂಡುಬರುತ್ತವೆ. ಈ ಕತ್ತಾಳೆ ಕತ್ತರಿಸಿ ತೆಗೆದುಕೊಂಡು ಹಳ್ಳದಲ್ಲಿ ನೆನೆ ಹಾಕುವರು. ಒಂದು ವಾರದ ನಂತರ ಅದರ ನಾರನ್ನು ತೆಗೆದುಕೊಂಡು ಬಿಸಿಲಿಗೆ ಒಣಗಿಸಲಾಗುವುದು. ಕತ್ತಾಳೆ ನಾರನ್ನು ಹಗರದ ರೀತಿಯಲ್ಲಿ ಸುತ್ತುವರು. ಲಡ್ಡು ಸರಳ ಸುತ್ತಿದ್ದರೆ ಮೈಯಿಗೆ ನೋವುಗಳ ಬರುವುದಿಲ್ಲ. ಆದರೆ ಲಡ್ಡನ್ನು ಹುರಿಮಾಡಿ ಸುತ್ತಿದರೆ ಅದರ ಶಬ್ಧ ಜೋರಾಗಿ, ಮೈಯಿಗೆ ಹೊಡೆದುಕೊಳ್ಳುವ ಸಂದರ್ಭದಲ್ಲಿ ಬಾರುಗಳು ಬೀಳುತ್ತವೆ. ಲಡ್ಡನ್ನು ದೇವರ ಮೂರ್ತಿ ಬಲಗಡೆಯಲ್ಲಿ ಇಡಲಾಗುವುದು. ಲಡ್ಡುಗೆ ಕುಂಕುಮ, ಭಂಡಾರ, ಹಚ್ಚಿ, ಪೂಜೆ ಮಾಡುತ್ತಾರೆ.

ನೈವೇದ್ಯಗಳು : ದೇವಿಗೆ ಹಣ್ಣು, ಕಾಯಿ, ಹೂವುಗಳು, ಹಾಗೂ ಕೋಳಿ, ಕುರಿಮಾಂಸ ಸಾರನ್ನು ನೈವೇದ್ಯವಾಗಿ ಅರ್ಪಿಸುತ್ತಾರೆ. ಭಿಕ್ಷಾಟನೆ ಮಾಡುವ ಪೋತರಾಜನು ದಿನಾಲೂ, ವಾರ, ತಿಂಗಳ, ವರ್ಷದ ದಿನಗಳಲ್ಲಿ ದೇವರ ಮೂರ್ತಿಗೆ ಪೂಜೆ ಮಾಡಿದ ನಂತರ ತನ್ನ ಕೈಲಾದಷ್ಟು ನೈವೇದ್ಯ ಅರ್ಪಿಸುತ್ತಾನೆ.

ಆರ್ಥಿಕ ಜೀವನ

ದುರುಗಮುರಗಿ ಸಮುದಾಯದವರ ಈ ಬಗೆಯ ಪಾರಂಪರಿಕ ವೃತ್ತಿಗೆ, ಈ ಹಿಂದೆ ಸಮಾಜದಲ್ಲಿ ಮರ್ಯಾದೆ ಸಿಗುತ್ತಿತ್ತು. ಅವರು ಊರಿಗೆ ಬಂದರೆ ಸಾಕು ಊರಿನ ಮುಖ್ಯಸ್ಥರು ಮತ್ತು ಊರಿನ ಜನರು ತಮ್ಮ ಎಲ್ಲಾ ಕೆಲಸಗಳನ್ನು ಬದಿಗಿಟ್ಟು. ಅವರ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು. ಅವರು ಬಂದು ಹೋಗುವವರಿಗೆ ಅವರಿಗೆ ಗೌರವ ಕೊಡುತ್ತಿದ್ದರು. ಅವರಿಗೆ ನಾವು ಗೌರವಿಸಬೇಕು ಎಂಬ ಮನೋಭಾವ ಭಕ್ತರಲ್ಲಿ ಹಾಗೂ ಊರಿನ ಜನರಲ್ಲಿ ಇತ್ತು. ಅವರು ಯಾವ ದೇವರ ಆರಾಧಕರೇ ಆಗಿರಲಿ ಅಥವಾ ದೇವಿ ಆರಾಧಕರೇ ಆಗಿರಲಿ, ಅವರನ್ನು ಕರೆಯಿಸಿ ಅವರ ಪ್ರದರ್ಶನ ನೋಡಿ ಹೋಗುವಾಗ ಅವರಿಗೆ ಹಣವನ್ನು

ಭಿಕ್ಷಾಟನೆ : ದುರುಗಮುರಗಿ ಸಮುದಾಯದವರು ಮನೆ ಮನೆಗಳಿಗೆ ಭಿಕ್ಷೆ ಬೇಡಲು ಹೋದಾಗ ೧೦ ಪೈಸೆ, ೨೫ ಪೈಸೆ, ೫೦ ಪೈಸೆ, ಕಾಳುಗಳು ಹಾಗೂ ಮನೆಯಲ್ಲಿ ಉಳಿದಿರುವ ಅನ್ನ, ರೊಟ್ಟಿಯನ್ನು ನೀಡಲಾಗುವುದು. ಇವರ ಭಿಕ್ಷಾಟನೆಯ ದಿನವಿಡಿಯ ಪ್ರತಿಫಲ ೧೦ ರೂಪಾಯಿಗಳಿಂದ ೧೫ ರೂಪಾಯಿಗಳವರೆಗೆ ಬರಬಹುದು. ತಾಲ್ಲೂಕು ಸ್ಥಳಗಳಲ್ಲಿ ಆದರೆ ೫೦ ರೂಪಾಯಿಗಳೆಂದರೆ ಹೆಚ್ಚಾಗಬಹುದು. ಇವರ ತಿಂಗಳ ಸರಾಸರಿ ವರಮಾನ ಕೇವಲ ೩೦೦ ರೂಪಾಯಿಗಳು ಮಾತ್ರ.

ಈ ಸಮುದಾಯದವರು ದಿನಗಳಲ್ಲಿ ಅಡಿಗೆಯನ್ನು ಮಾಡುವುದಿಲ್ಲ. ಅವರು ಅಡಿಗೆ ಬಗ್ಗೆ ಯಾವುದೇ ತೊಂದರೆಗಳನ್ನು ತೆಗೆದುಕೊಳ್ಳುವುದಿಲ್ಲ. ಬೇಟೆಯಲ್ಲಿ ತಂದಿರುವ ಉಡ, ಖವಜ, ಪಾರಿವಾಳ, ಬುರ್ಲಿ, ಮೀನು, ಕಾಡಬೆಕ್ಕು, ಹಕ್ಕಿಪಿಕ್ಕಿಗಳು ಮೊದಲಾದವುಗಳನ್ನು ತಂದು ಅವುಗಳ ಮಾಂಸವನ್ನು ಸುಟ್ಟು, ಕುದಿಸಿ ತಿನ್ನುವರು.

ಮೀನುಗಾರಿಕೆಯಲ್ಲಿ ದಿನಗೂಲಿ : ದುರುಗಮುರಗಿ ಸಮುದಾಯ ವ್ಯಕ್ತಿ ಮೀನು ಬೇಟೆಗೆ ಹೋದರೆ ಮೀನುಗಾರಿಕೆ ಸಂಘವತಿಯಿಂದ ಒಂದು ಕೆ.ಜಿ. ಮೀನುಗಳಿಗೆ ೧೦ ರೂಪಾಯಿಗಳು ಕೊಡಲಾಗುವುದು. ಬಲೆಯಲ್ಲಿ ಮೀನುಗಳು ಹೆಚ್ಚಿನ ರೀತಿಯಲ್ಲಿ ಬಂದರೆ ಹೆಚ್ಚಿನ ಲಾಭ ಬರುವುದು. ಕೆಲವು ದಿನಗಳಲ್ಲಿ ಮೀನು ಬೀಳುವುದಿಲ್ಲ.

ಮಹಿಳೆಯರ ದಿನಗೂಲಿ

ಕಳೆಯ ಕೆಲಸಕ್ಕೆ ೧೫ ರೂಪಾಯಿಗಳು
ಭತ್ತ ಸಸಿ ಹಚ್ಚುವ ಕೆಲಸಕ್ಕೆ ೧೫ ರೂಪಾಯಿಗಳು
ಬಿತ್ತುವುದರ ಕೆಲಸಕ್ಕೆ ೧೫ ರೂಪಾಯಿಗಳು
ಶೇಂಗಾ ಕೀಳುವುದರ ಕೆಲಸಕ್ಕೆ ೨೦ ರೂಪಾಯಿಗಳು
ಜೋಳಾ ಕೋಯ್ಯಿವುದರ ಕೆಲಸಕ್ಕೆ ೧೫ ರೂಪಾಯಿಗಳು

ಸಣ್ಣ ಮಕ್ಕಳ ದಿನಗೂಲಿ

ಹತ್ತಿ ಬಿಡಿಸುವುದರ ಕೆಲಸಕ್ಕೆ ೧೫ ರೂಪಾಯಿಗಳು

ಕೊಡಪಾನ ವ್ಯಾಪಾರ

ಕೊಡಪಾನ ದೊಡ್ಡದು ೨೦ ರೂಪಾಯಿಗಳು
ಕೊಡಪಾನ ಸಣ್ಣದು ೧೫ ರೂಪಾಯಿಗಳು
ತಾಳಿಕೆ ಬರುವಂತಹ ಕೊಡಪಾನ ದೊಡ್ಡದು ೪೦ ರೂಪಾಯಿಗಳು
ಸಣ್ಣ ಕೊಡಪಾನ ೩೦ ರೂಪಾಯಿಗಳು.

ಹಳೆ ಕೊಡಪಾನ ರಿಪೇರಿ

ಸಣ್ಣ ಕೊಡಪಾನ ರಿಪೇರಿಗೆ ೨ ರೂಪಾಯಿಗಳು
ದೊಡ್ಡ ಕೊಡಪಾನ ರಿಪೇರಿಗೆ ೩ ರೂಪಾಯಿಗಳ

ಪ್ಲಾಸ್ಟಿಕ್ ಬಕೇಟ್‌ಗೆ ೪ ರೂಪಾಯಿಗಳು

ಚಂಬು ಅಥವಾ ಬಿಂದಿಗೆ ೧ ರೂಪಾಯಿಗಳು

ಉಸಿರು ಬುಳ್ಳಡಿ ವ್ಯಾಪಾರ (ಬುಲೂನ್)

ಪೀಪಿ ೧ ರೂಪಾಯಿ

ದಿನದ ಖರ್ಚುಗಳು

೨ ರೂಪಾಯಿಗಳು ಬೆಲ್ಲ, ಟೀ ಪುಡಿ

೫೦ ಪೈಸೆ ಹಾಲು

೫೦ ಪೈಸೆ ಬೆಂಕಿ ಪಟ್ಟಣ

೨ ರೂಪಾಯಿ ಕಾಳಸ್ತ್ರಿ ಬೀಡಿಗಳು

೧ ರೂಪಾಯಿ ನಶಿಪುಡಿ

೧ ರೂಪಾಯಿ ಅಡಿಕೆ ಹಾಗೂ ಎಲೆ

೧ ರೂಪಾಯಿ ಕಡಕ ತಂಬಾಕು

೫೦ ಪೈಸೆ ಕಡ್ಡಿಪುಡಿ

೨ ಸರಾಯಿ ಪ್ಯಾಕೆಟ್‌ಗೆ ೧೯ ರೂಪಾಯಿಗಳು

೧ ರೂಪಾಯಿ ಸೀಮೆಎಣ್ಣೆ

ಇದರಲ್ಲಿ (ಅಕ್ಕಿ, ಬೇಳೆ, ತರಕಾರಿ) ಸೇರಿಸಿಲ್ಲ.

ಒಟ್ಟು ಖರ್ಚುಗಳು ೩೦ ರೂಪಾಯಿ ೫೦ ಪೈಸೆ. ಒಮ್ಮೊಮ್ಮೆ ದಿನ ಖರ್ಚುಗಳನ್ನು ಮಾಡುವುದಿಲ್ಲ. ಹಣವಿದ್ದಾಗ ಮಾತ್ರ ಖರ್ಚುಗಳನ್ನು ಮಾಡುತ್ತಾರೆ.

ಪೋತರಾಜನ ಖರ್ಚುಗಳು

೨ ರೂಪಾಯಿಗಳು ಕಾಳ ಹಸ್ತಿಯ ಬೀಡಿಗಳು

೧ ರೂಪಾಯಿ ಕಡಕ ತಂಬಾಕು

೧೯ ರೂಪಾಯಿಗಳು ಸರಾಯಿ ಪ್ಯಾಕೆಟ್

೩ ರೂಪಾಯಿಗಳು ಹೋಟೆಲ್‌ನಲ್ಲಿ ಚಹಾ ಸೇವನೆ

ಒಟ್ಟು ದಿನದ ಖರ್ಚು ೨೫ ರೂಪಾಯಿಗಳು.

ಮಹಿಳೆಯರ ಖರ್ಚುಗಳು

೧ ರೂಪಾಯಿಗಳು ನಶಿಪುಡಿ

೧ ರೂಪಾಯಿಗಳು ಅಡಿಕೆ ಹಾಗೂ ಎಲೆ

೫೦ ಪೈಸೆ ಕಡ್ಡಿಪುಡಿ

ಒಟ್ಟು ದಿನದ ಖರ್ಚು ೨ ರೂಪಾಯಿ ೫೦ ಪೈಸೆ

ಉಳಿತಾಯ : ದುರುಗಮುರಗಿ ಸಮುದಾಯದವರು ಪಕ್ಕದ ಜನ ಸಾಮಾನ್ಯರ ಹತ್ತಿರದಲ್ಲಿ ಸಾಲ ತೆಗೆದುಕೊಂಡು ಜೀವನ ಮಾಡುತ್ತಾರೆ. ಅದರಲ್ಲಿ ಉಳಿತಾಯವೆಂದರೆ ಒಂದು ರೂಪಾಯಿಯನ್ನು ಉಳಿತಾಯ ಮಾಡಿರುವುದಿಲ್ಲ. ಅಂದಿನ ದಿನದಲ್ಲಿ ಬೇಡಿಕೊಂಡು, ಕೂಲಿ ಕೆಲಸದ ಹಣದಿಂದ, ಹಾಗೂ ಇನ್ನಿತರೆ

ವೃತ್ತಿಗಳಿಂದ ಬಂದಿರುವ ಆದಾಯವನ್ನು ಆ ದಿನಗಳಲ್ಲಿ ಖರ್ಚನ್ನ ಮಾಡುತ್ತಾರೆ. ಬ್ಯಾಂಕ್‌ನಲ್ಲಿ ಇವರ ಖಾತೆ ಇಲ್ಲ. ಆದರೂ ಸಹ ದುರುಗಮುರಗಿ ಸಮುದಾಯದವರು ತಮ್ಮ ಕುಲ ದೇವತೆಗಳ ಮೇಲೆ ನಂಬಿಕೆ ಇಟ್ಟುಕೊಂಡು ಜೀವನ ಮಾಡುತ್ತಿದ್ದಾರೆ. ಹಾಗೂ ತಮ್ಮ ಕಸುಬಿಗಾಗಲಿ, ನಂಬಿಕೆಗಳಿಗಾಗಲಿ ಧಕ್ಕೆ ಬಾರದಂತೆ ಪಾಲಿಸಿಕೊಂಡು ಬರುತ್ತಿದ್ದಾರೆ. ಮೂಲ ವೃತ್ತಿಯನ್ನು ಬಿಡುವುದಿಲ್ಲ ಎಂಬು ಇವರ ಅಭಿಪ್ರಾಯ.

ಆಧುನಿಕ ಮಾಧ್ಯಮಗಳ ಪ್ರಭಾವ : ದುರುಗಮುರಗಿ ಸಮುದಾಯದ ಜನರು ಅಭಿರುಚಿಯಿಂದ ಬದಲಾಗುತ್ತಿದ್ದಾರೆ. ರೇಡಿಯೋ, ಟಿ.ವಿ. ಸಿನಿಮಾ ನಾನಾ ಬಗೆಯ ಆಧುನಿಕ ಮಾಧ್ಯಮಗಳು ಇವರನ್ನು ಪ್ರಭಾವಿಸುತ್ತಿವೆ. ಅವರಲ್ಲಿ ದಾನ ಭಾವ ಕಡಿಮೆಯಾಗುತ್ತಿದೆ. ಉದಾತ್ತವಾದ ಗುಣಗಳು ಕಡಿಮೆಯಾಗಿ ವ್ಯಾಪಾರಿ ಮನೋಭಾವ ಬೆಳೆಯುತ್ತಿದೆ. ಇವರ ದೈವದ ಆರಾಧನೆಗಳು ಕಡಿಮೆಯಾಗುತ್ತಿವೆ. ಈ ಸಮುದಾಯದವರು ಸಿಕ್ಕಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಮೊದಲು ಜನಸಂಖ್ಯೆ ಕಡಿಮೆ ಇತ್ತು. ಭೂಮಿ ಹೆಚ್ಚಿತ್ತು. ಈಗ ಇದ್ದ ಭೂಮಿ ಇದ್ದಷ್ಟೇ ಇದೆ. ಆದರೆ ಜನಸಂಖ್ಯೆ ನಿತ್ಯ ನಿತ್ಯ ಹೆಚ್ಚಾಗುತ್ತಾ, ನಡೆದುದರಿಂದ ಬಜಾರದ ಬೆಲೆಗಳು ಮುಗಿಲು ಮುಟ್ಟಿವೆ. ಹಾಗೂ ಜನ ಆವರಷ್ಟಕ್ಕೆ ಅವರಾಗಿರುವುದರಿಂದ ಸಮುದಾಯ ಭಿಕ್ಷಾಟನೆಯ ವೃತ್ತಿ ಪ್ರೋತ್ಸಾಹವಿಲ್ಲದೆ ಅವರು ನಿರಾಸೆ ಹೊಂದಿ ಬೇರೆ ಬೇರೆ ವೃತ್ತಿಗಳನ್ನು ಕೈಗೊಂಡಿದ್ದಾರೆ. ಕೆಟ್ಟು ಪಟ್ಟಣ ಸೇರು ಎಂಬ ಗಾದೆ ಮಾತಿನಂತೆ ದುರುಗಮುರಗಿಯರು ನಿರ್ಗತಿಕರಾಗಿ ಸುತ್ತ ಮುತ್ತಲಿನಲ್ಲಿರುವ ಪಟ್ಟಣಗಳನ್ನು ಸೇರುತ್ತಿದ್ದಾರೆ. ಉದಾಹರಣೆಯಲ್ಲಿ ಕಂಪ್ಲಿ ದುರುಗಮುರಗಿ ಸಮುದಾಯದವರು ಬಳ್ಳಾರಿಯಲ್ಲಿ ರಾಜೇಶ್ವರಿ ಕ್ಯಾಂಪ್‌ಗೆ ವಲಸೆ ಹೋಗುತ್ತಿದ್ದಾರೆ. ಆಧುನಿಕತೆಯ ಆಕರ್ಷಣೆಗೊಳಗಾಗಿ ಹೋಟೆಲ್‌ಗಳಲ್ಲಿ ಸಣ್ಣ ಮಕ್ಕಳು, ರೈಸ್‌ಮಿಲ್‌ನಲ್ಲಿ ಕೂಲಿ ಕೆಲಸ ಮಾಡಲು ಸೇರಿಕೊಳ್ಳುತ್ತಿದ್ದಾರೆ.

ದುರುಗಮುರಗಿ ಸಮುದಾಯದ ಜೀವನ ನೀತಿನಿಯಮಗಳು, ಆಚಾರ ವಿಚಾರಗಳ ಉಳಿಯಬೇಕಾದರೆ, ಜನತೆ ಹಾಗೂ ಸರ್ಕಾರ ಇವರಿಗೆ ಒಳ್ಳೆಯ ಕಣ್ಣಿನಿಂದ ಕಂಡು ಅವರ ಬದುಕಿಗೆ ಆಶ್ರಯವಾಗುವಂತಹ ಸಹಾಯ ನೀಡಿದರೆ ಮಾತ್ರ ಇವರ ಬದುಕು ಭದ್ರವಾಗಬಲ್ಲದು. ದುರುಗಮುರಗಿ ಸಮುದಾಯದ ಸಾಹಿತ್ಯ. ಭಿಕ್ಷಾಟನೆ ಆರಾಧನೆಗಳು ಕ್ಯಾಸೆಟ್ ಮಾರಾಟ ಮಾಡಿ ಬಂದಿರುವ ಹಣವನ್ನುಈ ಸಮುದಾಯದವರಿಗೆ ನೀಡಿದರೆ ಈ ಜನ ಯಾವ ಕಾಲಕ್ಕೂ ಉಳಿಯುವರು. ಜನಪದ ಸಂಸ್ಕೃತಿಯನ್ನು ಬೆಳಸಿದಂತೆ ಅವುಗಳನ್ನು ನಾವು ಮುಂದುವರಿಸಿಕೊಂಡು ಹೋಗಬೇಕು. ಅಂದಾಗ ಮಾತ್ರ ದುರುಗಮುರಗಿ ಸಮುದಾಯದವರು ಸುಂದರ ಜೀವನ ನಡೆಸಲು ಸಾಧ್ಯ. ನಮ್ಮ ಸರಕಾರದವರ ಒಂದು ವ್ಯವಸ್ಥೆಯನ್ನು ಮಾಡಿ ಅವರಿಗೆ ಪ್ರತಿ ತಿಂಗಳು ಪಿಂಚಣಿಯನ್ನು ನೀಡಬೇಕು. ನಿಶ್ಚಿತ ಸಹಾಯ ನಿಧಿಯೊಂದು ಬಂದಾಗ ಮಾತ್ರ ಅವರ ಜೀವನ ಸುಗಮವಾಗಿ ಸಾಗುತ್ತದೆ. ಆಗ ಸಮುದಾಯ ತಮ್ಮ ಕೆಲಸಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತಾರೆ. ಆಗ ಜನಪದ ಆರಾಧನೆಗಳು ಬೆಳೆಯಲು ಸಾಧ್ಯವಾಗುತ್ತದೆ. ಏನಾದರೂ ಸರಿ ಆಧುನಿಕರಣಕ್ಕೆ ಜನ ಮಾರು ಹೋಗಿದ್ದಾರೆ. ಅವರ ಯಾವ ಪ್ರಯತ್ನ ಮಾಡಿದರೂ ಸರಿ ಅವರಿಗೆ ಈ ಕಾಲದಲ್ಲಿ ಹಚ್ಚಿನ ಬೆಲೆ ಸಿಗುವುದಿಲ್ಲ.

ಪ್ರಚಲಿತ ದಿನಗಳಲ್ಲಿ ಕಸಬುಗಳು

ಭಿಕ್ಷಾಟನೆ : ಪೋತರಾಜ ಅಥವಾ ಪೂಜಾರಿ ಹಾಗೂ ಅವರ ಹೆಂಡತಿಯಾಗಲಿ, ಸಂಬಂಧಿಕರಾಗಿಲಿ ಬುಟ್ಟಿಯನ್ನು ಹೊತ್ತುಕೊಂಡಿರುತ್ತಾರೆ. ಬುಟ್ಟಿಯಲ್ಲಿ ಮಾರಮ್ಮ, ಸುಂಕಲಮ್ಮ, ಗಾಳೆಮ್ಮ ತ್ರಿಮೂರ್ತಿ ದೇವತೆಗಳು ಕಂಡು ಬರುವುದು, ಪೋತರಾಜನು ಮುಖವಾಡವನ್ನು ಹಾಕಿಕೊಳ್ಳುವುದಿಲ್ಲ. ಕಾಲಿಗೆ ಗೆಜ್ಜೆ ಕಟ್ಟಿಕೊಂಡು ತಲೆಗೂದಲು ಬಿಟ್ಟುಕೊಂಡು, ನಡುವಿನಲ್ಲಿ ಕೆಂಪು, ಅಥವಾ ಬಿಳಿ ಬಟ್ಟೆಯನ್ನು ಸುತ್ತಿಕೊಂಡು, ಮುಖದ ತುಂಬ ಕೆಂಪು ಕುಂಕುಮ, ಅರಿಶಿಣದ ಕುಂಕುಮ ಬಳಿದುಕೊಂಡು, ಕೊರಳಿನಲ್ಲಿ ಬೇವಿನ ಸೊಪ್ಪನ್ನು ಹಾಕಿಕೊಂಡಿರುತ್ತಾನೆ. ಗುಡಾರದ ಹೊರಗಡೆ ಬಂದಾಗ ಪೂಜಾರಿ ಆವೇಶದಲ್ಲಿ ಕುಣಿಯುತ್ತಾನೆ. ಬುರ್ರ ಬುರ್ರ ಸದ್ದಿನೊಂದಿಗೆ ಬರೀ ಮೈಯಲ್ಲಿ ಚಾಟಿ ಅಥವಾ ಲಡ್ಡನ್ನು ಮೈಗೆ ಬಾರಿಸಿಕೊಳ್ಳುತ್ತಾನೆ. ತೀವ್ರ ಗತಿಯಲ್ಲಿ ಕುಣಿಯುತ್ತಾ ಹಾ ಹಾ ಹಾ ಹಾ ಎಂದು ಭಯಂಕರವಾಗಿ ಅರ್ಭಟಿಸುತ್ತಾನೆ. ಲಡ್ಡಿನಿಂದ ಹೊಡೆದುಕೊಳ್ಳುವುದು ಮಾತ್ರವಲ್ಲ ಮುಂಗೈ ಮೇಲೆ ಚೂಪಾದ ಗಾಜಿನ ಬಳೆಗಳಿಂದ ರಕ್ತ ಚಿಮ್ಮಿಸುತ್ತಾನೆ. ಹಣ ಕೊಡುವವರೆಗೂ ರಕ್ತವನ್ನು ಚಿಮ್ಮಿಸುತ್ತಾನೆ. ಬಂದಿರುವ ರಕ್ತವನ್ನು ಮುಖಕ್ಕೆ ಹಚ್ಚಿಕೊಳ್ಳುತ್ತಾನೆ.

ಪೂಜಾರಿಗೆ ಒಂದು ಮನೆಯಲ್ಲಿ ಭಿಕ್ಷೆಯನ್ನು ನೀಡಿದರೆ, ಇನ್ನೊಂದು ಮನೆಯಲ್ಲಿ ಭಿಕ್ಷೆಯನ್ನು ನೀಡುವುದಿಲ್ಲ. ಭಿಕ್ಷೆ ನೀಡಿರುವ ಮಹಿಳೆಗೆ ಕುಂಕುಮ ಮೊರದಲ್ಲಿ ಹಾಕುತ್ತಾನೆ. ಕೂಡ್ಲಿಗಿ ಸಮುದಾಯದ ವ್ಯಕ್ತಿಯಾದ ಶ್ರೀ ವೆಂಕಟಪ್ಪನವರು ವೇಷ ಹಾಕಿಕೊಂಡು ಬಂದರೆ ಸಾಕು ಲಡ್ಡುನಿಂದ ಮೈಯ್ಯಿಗೆ ಬಾರಿಸಿಕೊಳ್ಳುವುದು, ನಂತರ ಆತನ ದೇವರನ್ನು ಹೊಗಳುತ್ತಾನೆ.

ಗ್ರಾಮಗಳಲ್ಲಿ ಜನರುಗಳು ಮಾರಮ್ಮ, ಸುಂಕಲಮ್ಮ, ದುರುಗಮ್ಮ ದೇವತೆಗಳಿಗೆ ದೇವರು ಹರಕೆಯನ್ನು ನೀಡುತ್ತಾರೆ. ಅವುಗಳೆಂದರೆ ಕೋಳಿಗಳು, ಕಾಳು, ವರ್ಷದಿಂದ ಕೂಡಿರುವ ಹಣವನ್ನು ಪೂಜಾರಿಗೆ ಅರ್ಪಿಸುತ್ತಾರೆ. ಸಂತೆ ದಿನಗಳಲ್ಲಿ ದೇವರ ಬುಟ್ಟಿಯನ್ನು ಹೊತ್ತುಕೊಂಡು ಹೋಗುವುದಿಲ್ಲ. ಪೂಜಾರಿ ಕೈಯಲ್ಲಿ ಒಂದು ಮೊರ ಹಾಗೂ ಘಂಟೆ ಇರುತ್ತದೆ. ಇದರ ಜೊತೆಯಲ್ಲಿ ಲಡ್ಡು ಇರುವುದು ಸಂತೆ ದಿವಸದಲ್ಲಿ ಪೂಜಾರಿ ಮಧ್ಯಪಾನ ಮಾಡಿಕೊಂಡು ತನ್ನ ಬಲಗೈಯಿಂದ ಸಾಕಷ್ಟು ರಕ್ತವನ್ನು ಸ್ರವಿಸುತ್ತಾನೆ.

ಒಮ್ಮೆ ಈ ದೃಶ್ಯ ನೋಡಿದರೆ ಈತನ ಕೈಯಲ್ಲಿ ಜಾದೂ ಇರಬಹುದೇ ಎಂದು ತಿಳಿಯಬಹುದು. ರಕ್ತ ಬಂದರೆ ಕೆಲವರಿಗೆ ಇದು ಹೇಸಿಕೆಯೆನ್ನಿಸಿದರೆ ಮತ್ತೆ ಕೆಲವರಿಗೆ ಮೋಜೆನ್ನಿಸಿ ದುಡ್ಡು, ಕಾಳುಕಡ್ಡಿ, ದವಸ ಧಾನ್ಯ ಮೊದಲಾದವುಗಳನ್ನು ಕೊಡುತ್ತಾರೆ.

ಈ ಸಮುದಾಯದಲ್ಲಿ ಹೆಚ್ಚಾಗಿ ಬೇಡಿಕೊಳ್ಳುವ ಕೆಲಸ ಹೆಂಗಸರದ್ದು. ಹಾಗೂ ಸಣ್ಣ ಮಕ್ಕಳು, ಹಬ್ಬಗಳಲ್ಲಿ ಸಮುದಾಯದವರು ಹೆಚ್ಚಾಗಿ ಅಡಿಗೆಯನ್ನು ಮಾಡುವುದಿಲ್ಲ. ಪ್ರತಿ ಮನೆಗೂ ಭಿಕ್ಷೆಯನ್ನು ಬೇಡಿ ತರುತ್ತಾರೆ. ಹೆಚ್ಚಿನದಾಗಿ ರಾತ್ರಿ ಅನ್ನ, ಹುಗ್ಗಿ, ತಂದು ಕೊಂಡು, ಮೂರು ದಿವಸಗಳ ಕಾಲ ಊಟ

ಮಾಡುತ್ತಾರೆ. ಇನ್ನೊಂದು ವಿಶೇಷವೆಂದರೆ ಭಿಕ್ಷೆ ತಂದಿರುವ ಕರಿಗಡುಬು ಹಾಗೂ ಹುಗ್ಗಿಯನ್ನು ಗುಡಾರಗಳಲ್ಲಿ ಒಣಗಿಸಿ, ಅದನ್ನು ಪಾತ್ರೆಯಲ್ಲಿ ಹಾಕಿ ಚೆನ್ನಾಗಿ ಕುದಿಸಿ ಅದರ ಗಂಜಿಯನ್ನು ಕುಡಿಯುತ್ತಾರೆ.

ದುರುಗಮುರಗಿಯವರು ಹೆಚ್ಚಾಗಿ ಪರಿಶ್ರಮ ಜೀವಿಗಳಲ್ಲ. ಹಾಗೆಂದು ಮೈಗಳ್ಳರಾಗಿ ಮೈ ಉಳಿಸಿಕೊಳ್ಳುವವರೂ ಅಲ್ಲ. ಯಾಕೆಂದರೆ ಇವರು ಲಡ್ಡು ಹೊಡೆದುಕೊಂಡು ಮೈಕೈಗಳಿಂದ ನಿರ್ವಿಕಾರವಾಗಿ ರಕ್ತ ಸುರಿಸಿಕೊಳ್ಳುವುದನ್ನು ಕಂಡರೆ ಯಾರೂ ಇವರನ್ನು ಮೈಗಳ್ಳರು ಎನ್ನಲಾರರು. ಹಟವಾದಿಗಳಂತೆ ಇವರು ದೇಹವನ್ನು ದಂಡಿಸಿಕೊಳ್ಳುತ್ತಾರೆ. ಅಲಲಲಾ ಎಂದು ಆವೇಶಭರಿತರಾಗಿ ಕೂಗುತ್ತಾ ಕುಣಿಯುತ್ತಾ ಹಾ..ಹಾ..ಹಾ..ಎಂದು ಆರ್ಭಟಿಸುತ್ತಾ ಮೈಮೇಲೆ ಬಂದವರಂತೆ, ಮೈಗೆಲ್ಲಾ ಛಟ್ ಛಟ್ ಎಂದು ಲಡ್ಡು ಬಡಿದುಕೊಳ್ಳುತ್ತಾ ಕೆಲವೊಮ್ಮೆ ಉನ್ಮಾದಿತರಾಗಿ ಲಡ್ಡನ್ನು ನೆಲಕ್ಕೊತ್ತಿ ಚಿಮ್ಮಿಸಿ ಮೈಗೆ ಠೊಳ್ ಠೊಳ್ ಎಂದು ಝಾಡಿಸಿ ಬಡಿದುಕೊಳ್ಳುತ್ತಿರುತ್ತಾರೆ. ಇದನ್ನು ಕಂಡರೆ ಇವರು ಖಂಡಿತವಾಗಿಯೂ ಧೀರರೆಂದೇ ಹೇಳಬೇಕಾಗುತ್ತದೆ.

ಈ ಸಮುದಾಯದವರು ಜಾತ್ರೆ, ಉತ್ಸವ, ಹಬ್ಬಗಳಲ್ಲಿ, ವೇಷ ಹಾಕಿಕೊಂಡು ಭಿಕ್ಷೆ ಬೇಡಲು ಹೋಗುತ್ತಾರೆ. ಸುಗ್ಗಿ ಸಮಯದಲ್ಲಿ ಮೊಲೆ ಕುಡಿಯುವ ಮಕ್ಕಳನ್ನು ಟೊಂಕಕ್ಕೆ ಕಟ್ಟಿಕೊಂಡು ಕಣದ ರಾಶಿಯ ಹತ್ತಿರ ಹೋಗಿ ಶೇಂಗಾ, ಜೋಳ, ತೊಗರಿ, ಸಜ್ಜೆ, ಮುಂತಾದ ಧಾನ್ಯವಸ್ತುಗಳನ್ನು ಬೇಡಲು ಹೋಗುತ್ತಾರೆ. ಇವರು ಒಂದು ನಿಮಿಷ ಸುಮ್ಮನೆ ಕೊಡುವ ಜನರಲ್ಲ, ತಮ್ಮ ಅನ್ನಕ್ಕಾಗಿ ಸಂಚರಿಸುವ ಜನ ಇತ್ತೀಚಿನ ದಿನಗಳಲ್ಲಿ ದೇವರ ಭಕ್ತಿ ಕಡಿಮೆಯಾಗಿರುವುದರಿಂದ ನಮ್ಮ ಉಪ ಜೀವನಕ್ಕೆ ತೊಂದರೆಯಾಗಿದೆ, ಎಂದು ಹೇಳುತ್ತಾರೆ.

ಸದ್ಯದ ಪರಿಸ್ಥಿತಿಯಲ್ಲಿ ಮೀನು ಬೇಟೆ ಮಾಡಲು ಹೋಗುತ್ತಿದ್ದಾರೆ. ಮತ್ತು ಊರಿಂದ ಊರಿಗೆ ಅಲೆಯುವ ಅಲೆಮಾರಿ ಬದುಕಿಗೆ ವಿದಾಯ ಹೇಳಿ ಒಂದು ಕಡೆ ನೆಲೆ ನಿಲ್ಲುವ ಯೋಚನೆಯಲ್ಲಿದ್ದಾರೆಂದು ತಿಳಿದುಬರುತ್ತದೆ. ಅಲೆಮಾರಿ ಸಮುದಾಯದವರಾಗಿರುವ ದುರುಗಮುರಗಿಯರ ತಮ್ಮದೇ ಆದ ಜೀವನ ವಿಧಾನಗಳು, ಧಾರ್ಮಿಕ ಆಚರಣೆಗಳನ್ನು ಹೊಂದಿದ್ದಾರೆ.

ಕಸುಬುಗಳು ದುರುಗಮುರಗಿಯರಲ್ಲಿ ಕೃಷಿ ಕೂಲಿ ಮಾಡುವವರ ಒಟ್ಟು ಜನಸಂಖ್ಯೆ ೧೨ ಇದ್ದು, ಮೀನುಗಾರಿಕೆ ದಿನಕೂಲಿಗಳನ್ನು ಅವಲಂಬಿಸಿರುವ ಒಟ್ಟು ಜನಸಂಖ್ಯೆ ೧೭೧ ಇದ್ದು, ಭಿಕ್ಷಾಟನೆ ಮಾಡುವವರ ಜನಸಂಖ್ಯೆ ೪೩ ಜಿಲ್ಲೆಯಲ್ಲಿ ಕಂಡು ಬರುವುದು. (ಕೋಷ್ಟಕ ೬ ರಲ್ಲಿ ನೋಡಬಹುದು)

ಬೇಟೆ : ಮಾಂಸಹಾರಿಗಳಾದ ದುರುಗಮುರಗಿಯವರು ಭಿಕ್ಷಾಟನೆಯಲ್ಲಿ ಬಿಡುವು ಮಾಡಿಕೊಂಡು ಗುಡಾರದ ಒಬ್ಬರಂತೆ ಬೇಟೆಗೆ ಹೋಗುತ್ತಾರೆ. ಖವಜ ಬೇಟೆ, ಹಂದಿ ಬೇಟೆ, ಮೀನು ಬೇಟೆ, ಗುಬ್ಬಿ ಬೇಟೆ, ಬೆಕ್ಕು ಬೇಟೆ, ತಾಡಿ ಗುರುಲು ಬೇಟೆ, ಅಳಿಲು ಬೇಟೆ, ಆಮೆ ಬೇಟೆ ಇತ್ಯಾದಿಗಳಲ್ಲಿ ಆಸಕ್ತಿಯಿದೆ. ಬೇಟೆಗೆ ಅನುಕೂಲವಾಗುವ ಆಯಾ ಕಟ್ಟಿನ ಸ್ಥಳದಲ್ಲಿ ಬಲೆಯನ್ನು ವ್ಯವಸ್ಥಿತವಾಗಿ ಕಟ್ಟಿರುತ್ತಾರೆ. ಬಲೆಯಲ್ಲಿ ಸಿಕ್ಕಿ

ಹಾಕಿಕೊಂಡಿರುವ ಪ್ರಾಣಿಗಳನ್ನು ತಮ್ಮ ಗುಡಾರದಲ್ಲಿ ತಂದು ಪ್ರತಿಯೊಬ್ಬರು ಹಂಚಿಕೊಳ್ಳುತ್ತಾರೆ. ಯಾವ ಕಾರಣಕ್ಕೂ ಜಗಳವಾಡದೆ ದೊರತಿರುವ ಪ್ರಾಣಿ ಪಕ್ಷಿಗಳ ಮಾಂಸವನ್ನು ಪಾಲಿಗೆ ಬಂದಂತೆ ಸ್ವೀಕರಿಸುತ್ತಾರೆ.

ಬೇಟೆಯಲ್ಲಿ ತಾವು ಅನುಸರಿಸುವ ನಿಯಮದಂತೆ ಆಃ..... ಹೂಃ...... ಬಂತು ಹಾ! ಹಾ! ಬಂತಲೇ ಹಂದಿ ಬಂತು ಎಂದು ಕೂಗುತ್ತಾ ಅದರ ಹಿಂದೆಯೇ ಬರುತ್ತಾರೆ. ಪ್ರಾಣಿಗಳು ಜೀವಂತ ಬಲೆಯಲ್ಲಿ ಬೀಳುವಂತೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ತಮ್ಮ ಬೇಟೆಯ ಸಂದರ್ಭದಲ್ಲಿ ನಾಯಿಗಳನ್ನು ಕರೆದುಕೊಂಡು ಹೋಗುತ್ತಾರೆ. ನಾಯಿಗಳಿಗೆ ಊಟವನ್ನು ಹಾಕಿ, ಹಸಿ ಮಾಂಸವನ್ನು ತಿನ್ನಿಸುತ್ತಾರೆ. ಇದರಿಂದ ನಾಯಿಗಳು ಬೇಟೆಯ ಸಂದರ್ಭದಲ್ಲಿ ಚುರುಕಿನಿಂದ ಇರುವವು. ಇದರಿಂದ ಇವರ ಬೇಟೆಗೆ ಸಹಾಯವಾಗುತ್ತದೆ.

ಬೇಟೆಗೆ ಬಂದಿರುವುದರಲ್ಲಿಯೇ ಹಿರಿಯ ವ್ಯಕ್ತಿಯ ಪಾಲು ಹಾಕುವ ವ್ಯವಸ್ಥೆ ಅವರಲ್ಲಿದೆ. ಯಾವುದೇ ತಕರಾರು ಇಲ್ಲದೆ ಪ್ರತಿಯೊಬ್ಬರೂ ತಮಗೆ ಬರಬೇಕಾದ ಪಾಲನ್ನು ತೆಗೆದುಕೊಂಡು ಹೋಗುತ್ತಾರೆ. ಕೊನೆಯಲ್ಲಿ ಹಿರಿಯನು ತೆಗೆದುಕೊಳ್ಳುತ್ತಾನೆ. ಬೇಟೆ ಸಂದರ್ಭದಲ್ಲಿ ಅಪಶಕುನವಾದರೆ ಬೇಟೆ ಬೀಳುವುದಿಲ್ಲ ಎಂಬ ಭಾವನೆಯಿವರಲ್ಲಿದೆ. ಬೇಟೆಯಲ್ಲಿ ಸಿಕ್ಕ ಪ್ರಾಣಿಗಳನ್ನು ಕೆಲವೊಮ್ಮೆ ಸಂತೆಯಲ್ಲಿ ಮಾರಾಟಮಾಡುತ್ತಾರೆ.

ಗುಬ್ಬಚ್ಚಿ ಬೇಟೆಯ ಆಯುಧ ಕ್ಯಾಟರಿ ಬಿಲ್

ಎತ್ತರ ೧೧.೬ ಸೆಂ.ಮಿ.

ಉದ್ದ ೩ ಸೆಂ.ಮಿ.

ರಬ್ಬರ್ ಸುತ್ತಳತೆ ಸೆಂ.ಮಿ.

ಗುಬ್ಬಚ್ಚಿ ಬೇಟಿಯನ್ನು ದುರುಗಮುರಗಿ ಸಮುದಾಯ ಸಣ್ಣ ಮಕ್ಕಳಲ್ಲಿ ಕಂಡು ಬರುವುದು. ಈ ಗುಬ್ಬಚ್ಚಿ ಬೇಟೆಯಲ್ಲಿ ಪಕ್ಷಿಗಳು ಮರದ ಮೇಲೆ, ತಂತಿಗಳ ಮೇಲೆ ಕಂಡು ಬಂದಾಗ ಈ ಕ್ಯಾಟರಿ ಬಿಲ್ ಮಧ್ಯದ ರಬ್ಬರ್‌ನಲ್ಲಿ ಸಣ್ಣ ಸಣ್ಣ ಕಲ್ಲುಗಳನ್ನು ಇಟ್ಟುಕೊಂಡು, ಪಕ್ಷಿಗಳಿಗೆ ಗುರಿ ಇಟ್ಟು ಹೊಡೆಯುತ್ತಾರೆ. ರಬ್ಬರ್ ಹಿಗ್ಗಿದ ರೀತಿಯಲ್ಲಿ ಕಲ್ಲುಗಳು ಮುಂದಕ್ಕೆ ಹಾದು ಹೋಗುವುದು. ಬೇಟೆಯಾಡಿದ ಪಕ್ಷಿಗಳನ್ನು ಬೆಂಕಿಯಲ್ಲಿ ಬೇಯಿಸಿ ತಿನ್ನುತ್ತಾರೆ.

ಅಳಿಲು ಉರುಲು ವಿಧಾನ : ದುರುಗ ಮುರಗ ಸಮುದಾಯದವರು ಅಳಿಲು ಉರುಲು ಬೇಟೆಯಾಡುತ್ತಾರೆ. ಹೆಚ್ಚಿನದಾಗಿ ಈ ಬಲೆ ರೇಶ್ಮೆಯ ೪೦ ನಂಬರ್‌ನಿಂದ ದಾರ (ವೈರ್) ಇರುವುದು. ಉದ್ದ ೨ ಮೀಟರ್ ಇದ್ದು, ಈ ದಾರದಿಂದ ಮಾಡಿರುವ ಬಲೆಯನ್ನು ಮರದ ಮಧ್ಯದಲ್ಲಿ ಸುತ್ತಿ, ಮರಕ್ಕೆ ಕಟ್ಟಲಾಗವುದು. ಅಳಿಲುಗಳು ಮರದ ಕೊಂಬೆಗಳಲ್ಲಿ ಹತ್ತುವಾಗ, ಬಲೆಯಲ್ಲಿ ಬೀಳುತ್ತವೆ. ಸಮುದಾಯದ ವ್ಯಕ್ತಿಗಳು ಅಳಿಲನ್ನು ಬೆಂಕಿಯಲ್ಲಿ ಬೇಯಿಸಿ ಸಾರು ಮಾಡಿಕೊಳ್ಳುತ್ತಾರೆ. ಇದು ಬಹಳ ರುಚಿ ಇರುವುದು ಎಂದು ಹೇಳುತ್ತಾರೆ.

ಆಮೆ ಬೇಟೆ : ಬಲೆಯ ಎತ್ತರ ೪೨ ಸೆಂ.ಮಿ, ಉದ್ದ ೧೮ ಮೀಟರ್ ರೇಷ್ಮೆದಾರ, ದಾರದ ಮೇಲ್ಗಡೆಯಲ್ಲಿ ಗಲುಗು, ಸೀಸಗಳನ್ನು ಕಟ್ಟಲಾಗುವುದು, ಕೆಳಗಡೆಯಲ್ಲಿ ಬಗರಿ ಇದ್ದು, ಬಿದಿರಿನ ಕಟ್ಟಿಗೆ

ಎರಡು ಕಡೆಯಲ್ಲಿ ೧೦.೬ ಸೆಂ.ಮಿ. ಇರುವುದು. ದುರುಗಮುರಗಿ ಸಮುದಾಯ ವ್ಯಕ್ತಿ ಆಮೆ ಬೇಟೆಗೆ ಹೋದಾಗ, ಸಣ್ಣ ಕರೆ ಅಥವಾ ಮಡುವುಗಳಲ್ಲಿ ಆಮೆ ಬಲೆಯನ್ನು ಹಾಕಲಾಗುವುದು. ಮಡುವಿನಲ್ಲಿ ೨ ಮೀಟರ್ ಎತ್ತರ ನೀರು ಕಂಡುಬರುವುದು, ಮಡುವಿನಲ್ಲಿ ಎರಡು ಕಡೆ ಬಿದಿರಿನ ಕಟ್ಟಿಗೆ ಕೆಸರಿನಲ್ಲಿ ಸಿಗಿಸಿ, ನೀರಿನ ಒಳಗಡೆಯಲ್ಲಿ ಬಿಡಲಾಗುವುದು. ಇವರು ದಿನದ ಸಂಜೆಯಲ್ಲಿ ಬಲೆಯನ್ನು ಬಿಟ್ಟರೆ ಮುಂಜಾನೆ ಎದ್ದು ತಕ್ಷಣ ಬಲೆಯನ್ನು ಬಿಚ್ಚಿಟ್ಟುಕೊಂಡು ತಮ್ಮ ಗುಡಾರಕ್ಕೆ ತರುತ್ತಾರೆ. ಆಮೆ ಒಮ್ಮೊಮ್ಮೆ ಬಲೆಯಲ್ಲಿ ಬೀಳುವುದಿಲ್ಲ ಎಂದು ಹೇಳುತ್ತಾರೆ.

ಸಿಡಿ ಬೋನು

ಉದ್ದ ೮.೫ ಸೆಂ.ಮಿ

ಸುತ್ತಳತೆ ೧೬.೫ ಸೆಂ.ಮಿ

ಉರುಲು ಹಗ್ಗ ಉದ್ದ ೨೬ ಸೆಂ.ಮಿ

ಛತ್ರಿ ತಂತಿಗಳು ಉದ್ದ ೨೭.೫ ಸೆಂ.ಮಿ

ಸಿಡಿಬೋನು ಕಬ್ಬಿಣದಿಂದ ತಯಾರು ಮಾಡಿಕೊಂಡಿರುತ್ತಾರೆ. ಸಮುದಾಯದ ವ್ಯಕ್ತಿ ಅಡವಿಗೆ ಹೋದಾಗ ಸಿಡಿ ಬೋನು ತೆಗೆದುಕೊಂಡು ಹೋಗುತ್ತಾನೆ. ಸಿಡಿ ಬೋನುಗಳನ್ನು ಪ್ರಾಣಿಗಳು ವಾಸ ಮಾಡುವಂತಹ ಸ್ಥಳದಲ್ಲಿ ಇಡಲಾಗುವುದು. ಇದರ ಒಳಗಡೆ ಅನ್ನವಾಗಲಿ, ಮುದ್ದೆಯಾಗಲಿ ಇಟ್ಟಿರುತ್ತಾರೆ. ಪ್ರಾಣಿಗಳು ಸಿಡಿ ಬೋನಿನಲ್ಲಿದ್ದಾಗ ಹೊರಗಡೆ ಬರುವುದಕ್ಕೆ ಆಗುವುದಿಲ್ಲ, ಹೆಚ್ಚಿನದಾಗಿ ಸಿಡಿ ಬೋನಿನಲ್ಲಿ ಬೆಕ್ಕು, ಮುಂಗೋಲಿ, ಉಡ, ಹಾವು, ಇಲಿ, ಹೆಗ್ಗಣಗಳು ಸಿಕ್ಕಿಹಾಕಿಕೊಳ್ಳುತ್ತವೆ.

ತಾಡಿ ಗುರುಲು

ಉದ್ದ ೮ ಮೀಟರ್

ಬಿದಿರು ಕಡ್ಡಿಗಳಿಂದ ಮಾಡಿರುತ್ತಾರೆ

೬೦ ನಂಬರ್ ರೇಶ್ಮೆದಾರ ಇರುವುದು

ಪ್ಲಾಸ್ಟಿಕ್ ದಾರ ಕೆಳಗಡೆಯಲ್ಲಿ ಇರುತ್ತದೆ

ಅಡವಿಯ ಪೊದೆಗಳಲ್ಲಿ ಈ ಬಲೆಯನ್ನು ಇಡಲಾಗುವುದು. ಬಲೆಯನ್ನು ವ್ಯವಸ್ಥಿತವಾಗಿ ಕಟ್ಟುತ್ತಾರೆ. ಬಲೆಯ ಪ್ಲಾಸ್ಟಿಕ್‌ದಾರ ಕೆಳಗಡೆಯಲ್ಲಿ ತಾವು ಸಾಕಿದ ಹಕ್ಕಿಯನ್ನು ಬಿಡಲಾಗುವುದು. ಆ ಹಕ್ಕಿ ವಿಶಿಷ್ಟವಾದ ಶಬ್ಧದ ಮೂಲಕ ಕೂಗಲು ಪ್ರಾರಂಭಿಸುತ್ತದೆ. ಆ ಶಬ್ದವನ್ನು ಕೇಳಿಕೊಂಡು ಅಡವಿ ಹಕ್ಕಿಗಳು, ಬೆಳ್ಳಿ ಹಕ್ಕಿ, ಪೆನ್ನಹಾರ, ಮುಚ್ಚುನಾರು, ಅಡವಿ ಬಾತುಕೋಳಿ, ಪಾಮಲಿ ನರಿ ಹಕ್ಕಿ ಶಬ್ದವನ್ನು ಆಲಿಸುತ್ತಾ ಬರುತ್ತದೆ. ಎದುರಿನಲ್ಲಿ ಬಲೆ ಇದೆ ಎಂಬುದು ಗಮನಕ್ಕೆ ಬರುವುದಿಲ್ಲ ಆ ಪ್ರಾಣಿ ಪಕ್ಷಿಗಳು ಬಲೆಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತವೆ. ಆಗ ದುರುಗಮುರಗಿ ಸಮುದಾಯದವರು ಅವುಗಳ ಕಾಲು ಮುರಿದು ತಮ್ಮ ಗುಡಾರಕ್ಕೆ ತಂದು, ಪ್ರತಿಯೊಬ್ಬರು ಪಾಲು ಹಂಚಿಕೊಳ್ಳುತ್ತಾರೆ.

ಖವಜ ಬೇಟೆ

ಬಲೆಯ ಉದ್ದ ೧ ಮೀಟರ್

ಎತ್ತರ ೭ ಸೆಂ.ಮಿ.

ಬಿದರಿ ಕಡ್ಡಿಗಳಿಂದ ಮಾಡಲಾಗುವುದು

ಒಳಗಡೆಯಲ್ಲಿ ರೇಶ್ಮೆದಾರ ಇರುವುದು.

ಈ ಬಲೆಯನ್ನು ಹುಲ್ಲಿನ ಮೇಲೆ ಇಡಲಾಗುವುದು. ಇದರ ಒಳಗಡೆಯಲ್ಲಿ ಕಾಳುಗಳನ್ನು ಹಾಕಲಾಗುವುದು. ಪಕ್ಷಿಗಳು ಆಹಾರಕ್ಕಾಗಿ ಬಂದಾಗ ಈ ಬಲೆಯಲ್ಲಿ ಸಿಕ್ಕಿ ಹಾಕಿಕೊಳ್ಳುವುದು ಉದಾಹರಣೆಗೆ ಖವಜಗ, ಗೊರವಕ್ಕಿ, ಬೆಳ್ಳಕ್ಕಿ, ಗೊಯಗ್ಗೆ.

ಹಂದಿ ಬೇಟೆ

ಬಲೆಯ ಉದ್ದ ೧೨ ಮೀಟರ್

ಉತ್ತರ ೨.೫ ಮೀಟರ್

ರೇಷ್ಮೆದಾರದಿಂದ ತಯಾರು ಮಾಡಲಾಗುವುದು.

ಮಾರುಕಟ್ಟೆ ಪ್ರಸ್ತುತ ಬೆಲೆ ೧೩೫೦ ರೂಪಾಯಿಗಳು. ಮೊದ ಮೊದಲು ಕೌದಿಯಿಂದ ಬಲೆಯನ್ನು ತಯಾರಿಸಿಕೊಳ್ಳುತ್ತಿದ್ದರು. ಈಗ ಹೆಚ್ಚಾಗಿ ರೇಷ್ಮೆ ನೂಲಿನಿಂದ ಬಲೆ ತಯಾರಿಸಿಕೊಳ್ಳುತ್ತಿದ್ದಾರೆ. ಹಾಗೂ ಮಾರುಕಟ್ಟೆಯಿಂದ ತೆಗೆದುಕೊಂಡು ಬರುತ್ತಾರೆ. ೮ ರಿಂದ ೧೭ ಜನರು ಹಂದಿ ಬೇಟೆಗೆ ಹೋಗುತ್ತಾರೆ. ಬೇಟೆಯ ಮೊದಲನೆಯ ಪ್ರಯೋಗದಂತೆ ಸೂರ್ಯನಿಗೆ ಎದುರಾಗಿ ಒಂದರ ಓಂದೆ ಒಂದರಂತೆ ಮೂರು ಬಲೆಗಳನ್ನು ಕಟ್ಟುತ್ತಾರೆ. ಬಲೆಗೆ ಇಬ್ಬರಂತೆ ಜನರು ಹಿಡಿದುಕೊಂಡಿರುತ್ತಾರೆ. ಇನ್ನು ಕೆಲವರು ಪಶ್ಚಿಮದ ಕಡೆಯಿಂದ ಪ್ರಾಣಿಗಳನ್ನು ಎಬ್ಬಿಸಿಕೊಂಡು ಬರುತ್ತಾರೆ. ಈ ನಿಯಮವನ್ನು ಅನುಸರಿಸುವುದರಿಂದ ಪ್ರಾಣಿಗಳು ಬಲೆಯಲ್ಲಿ ಸಿಕ್ಕಿ ಬೀಳುತ್ತವೆ ಎಂಬ ನಂಬಿಕೆ ಅವರಲ್ಲಿದೆ. ಬಲೆಗಳನ್ನು ಹಿಡಿದುಕೊಂಡವರು ಹಂದಿ ಬೇರೆ ಕಡೆಗೆ ಓಡಿ ಹೋಗದಂತೆ ನೋಡಿಕೊಳ್ಳುತ್ತಾರೆ. ಹಂದಿಯು ಬಲೆಯಲ್ಲಿ ಬಿದ್ದಾಗ ಅದನ್ನು ಹಿಡಿದು ಅದರ ಕಾಲು ಕಟ್ಟಿ ಬಿಡುತ್ತಾರೆ. ದುರುಗಮುರಗಿ ಸಮುದಾಯದವರು ಧೈರ್ಯವಂತರಾಗಿರುವುದರಿಂದ ತಮ್ಮ ಪ್ರಾಣದ ಹಂಗು ತೊರೆದು ಹಂದಿಯನ್ನು ಹಿಡಿಯುತ್ತಾರೆ.

ಹಂದಿ ಬೇಟೆ ಆಡುವಾಗ ಅದು ಸಿಕ್ಕಿಹಾಕಿಕೊಳ್ಳದಿದ್ದಾಗ ಮೂರು ಮೆಣಸಿನಕಾಯಿ, ಮೂರು ಹರಳು, ಒಂದಿಷ್ಟು ಉಪ್ಪು ಮತ್ತು ನಿಂಬೆ ಹಣ್ಣು ಹೋಳು ಮಾಡಿ, ನಾಯಿ ಮತ್ತು ಬಲೆಯ ಮೇಲಿಂದ ಇಳೆ ತೆಗೆದು ದೂರ ಎಸೆಯುತ್ತಾರೆ. ಹೀಗೆ ಮಾಡುವುದರಿಂದ ಹಂದಿಯ ಬಲೆಯಲ್ಲಿ ಬೀಳುತ್ತದೆಂಬ ನಂಬಿಕೆ ಅವರಲ್ಲಿದೆ. ಶಿವಪುರ, ಹೊಸಪೇಟೆ, ಸೊಂಡೂರು, ಗುಡ್ಡಗಳಲ್ಲಿ ವಾಸವಾಗಿರುವ ಹಂದಿಗಳನ್ನು ಇವರು ಬೇಟೆಯಾಡುತ್ತಾರೆ.

ಬೇಟೆಗೆ ಭರ್ಜಿ ಕೊಡ್ಲಿ, ಬಡಗಿ, ಕಬ್ಬಿಣದ ಸಲಿಕೆ, ಎರಡು ಮೀಟರ್ ಉದ್ದದ ಆರು ಬಿದಿರು ಬಡಿಗೆಗಳು, ಇತ್ಯಾದಿ ಆಯುಧಗಳನ್ನು ಉಪಯೋಗಿಸುತ್ತಾರೆ. ಬೇಟೆಗೆ ಹೋಗುವ ಸಂದರ್ಭದಲ್ಲಿ ನಿಯಮಗಳ ಪಾಲನೆ

ಮಾಡಿಕೊಂಡು ಹೋಗುತ್ತಾರೆ. ದುರುಗ ಮುರಗ ಸಮುದಾಯದ ವ್ಯಕ್ತಿಗಳು ಹಣ ಕೂಡಿಸಿಕೊಂಡು ಸರಾಯಿ ಸೇವೆಯನ್ನು ಮಾಡಿ ತಮ್ಮ ಗುಡಾರಕ್ಕೆ ಬರುತ್ತಾರೆ. ತಂದಿರುವ ಹಂದಿ ಬೇಟೆಯನ್ನು ಪ್ರತಿಯೊಂದು ಗುಡಾರಗಳಿಗೆ ಒಂದರಂತೆ ಪಾಲು ಹಾಕಿಕೊಂಡು ಊಟ ಮಾಡುತ್ತಾರೆ.

ಮೀನು ಬೇಟೆ : ದುರುಗಮುರಗಿ ಸಮುದಾಯದವರಿಗೆ ಮೀನು ಬೇಟೆ ಆಧಾರ ಸ್ತಂಭವಾಗಿರುವುದು. ಇದಕ್ಕೆ ಬೇಕಾದ ಬಲೆಯನ್ನು ತಾವು ತಯಾರಿಸಿಕೊಳ್ಳುತ್ತಾರೆ. ಮೀನು ಬೇಟೆ ೮೦ ಮೀಟರ್ ಉದ್ದ ೬ ಮೀಟರ್ ಎತ್ತರ, ಮೀನು ಬಲೆಯಲ್ಲಿ ಮೇಲುಗಡೆಯಲ್ಲಿ ಸಪ್ಪೆದಂಟಗಳನ್ನು ಹಾಗೂ ಗಲ್ಲುಗು ಕಟ್ಟಿರುತ್ತಾರೆ. ಕೆಳಗಡೆಯಲ್ಲಿ ಬಗರಿ ಮತ್ತು ಸೀಸೆಗಳನ್ನು ಕಟ್ಟಿರುತ್ತಾರೆ. ಇವರುಗಳು ಹಳ್ಳ, ಕೇರಿಗಳಲ್ಲಿ ಬಲೆಯನ್ನು ಬಿಡುತ್ತಾರೆ. ಅದರಲ್ಲಿ ಬಿದ್ದಿರುವ ಮೀನುಗಳು ತಂದು ತಮ್ಮ ಗುಡಾರಗಳಲ್ಲಿ ಹಂಚಿಕೊಳ್ಳುತ್ತಾರೆ. ಮೇಲಿನ ಎಲ್ಲಾ ಸಂಗತಿಗಳು ದುರುಗ ಮುರುಗಿ ಸಮುದಾಯದ ಬೇಟೆ ವಿಧಾನದ ಅಂಶಗಳಾಗಿವೆ.

ಮೀನು ವೃತ್ತಿಯಲ್ಲಿ ದುರುಗಮುರಗಿ ಸಮುದಾಯ ಜನರು ಶ್ರಮ ವಹಿಸಿ ಕೆಲಸ ನಿರ್ವಹಿಸುತ್ತಾರೆ. ಅವರ ಜೊತೆಯಲ್ಲಿ ಆಶ್ರಯಿತ, ಹಾಗೂ ದುರುಗಮುರಗಿ ಸಮುದಾಯದ ಜನರಿಗೆ ಆಧಾರ ಸ್ಥಂಭವಾಗಿರುವ ಶ್ರೀ ಮಾಧವ್‌ರಾವ್ ಒಬ್ಬರು. ಪ್ರಚಲಿತ ದಿನಗಳಲ್ಲಿ ಬಳ್ಳಾರಿ ಗುಡಾರ ಗುಡಿಸಿ ನಿವಾಸಿಗಳ ಸಂಘದ ಅಧ್ಯಕ್ಷರಾಗಿದ್ದಾರೆ.

ಶ್ರೀ ಮಾಧವರಾವ್ ಪರಿಚಯ : ಯಾವುದೇ ಒಂದು ಸಮುದಾಯ ಬೆಳಕಿಗೆ ಬರಲು ವ್ಯಕ್ತಿಗಳ ಸಹಾಯ, ಮಾರ್ಗದರ್ಶನ, ಅಗತ್ಯವಾಗಿರುತ್ತದೆ. ಅಂತೆಯೇ ಮೀನುಗಾರರ ಸಹಕಾರ ಸಂಘ ಉದಯವಾಯಿತು, ಅಂದಿನ ದಿನಗಳಿಂದ ಇಂದಿನ ದಿನಗಳವರೆಗೆ ಈ ಸಂಘ ಬಹಳ ಜನರಿಗೆ ಆಶ್ರಯವಾಗಿದೆ. ಈ ಹಿನ್ನೆಲೆಯನ್ನು ನೋಡಿದಾಗ ಶ್ರೀ ಮಾಧವ್‌ರಾವ್ ದುರುಗಮುರಗಿ ಸಮುದಾಯದವರಿಗೆ ಅವಿಶ್ರಾಂತವಾಗಿ ಶ್ರಮಿಸಿದ್ದಾರೆ. ಇವರು ಗೋಸಂಗಿ ಸಮುದಾಯದವರು ಅಲೆಮಾರಿಯಂತೆ ಜೀವನ ಸಾಗಿಸಿ, ಬಡತನದಲ್ಲಿ ಬೆಂದು, ಚಿಕ್ಕ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು ತಬ್ಬಲಿಯಾದವರು.

ಮರಿಯಮ್ಮನಹಳ್ಳಿ ಮೀನುಗಾರಿಕೆಯಲ್ಲಿ ಉಪಾಧ್ಯಕ್ಷರಾಗಿ ೧೯೮೦ ರಲ್ಲಿ ಸೇವೆ ಸಲ್ಲಿಸಿದರು. ನಂತರ ೧೯೮೧ ೮೨ ರಲ್ಲಿ ಅಧ್ಯಕ್ಷ ಪದವಿಯನ್ನು ಸ್ವೀಕರಿಸಿಕೊಂಡು ೬ ವರ್ಷಗಳು ಸೇವೆ ಸಲ್ಲಿಸಿದರು. ಜಿಲ್ಲಾ ವ್ಯಾಪ್ತಿಯಲ್ಲಿ ತುಂಗಭದ್ರ ಮೀನುಗಾರಿಕೆ ಸಂಘ ನೋಂದಾಣಿ ಆಯಿತು. ಇದರಲ್ಲಿ ಮಾಧವರಾವ್ ಅಧ್ಯಕ್ಷರಾಗಿ ಮುಂದುವರಿದರು. ೧೯೯೫.೯೬ ರಲ್ಲಿ ಸಹಕಾರಿ ಸಂಘ ಸ್ಥಾಪನೆ ಮಾಡಿದರು. ಈ ವ್ಯಾಪ್ತಿಯಲ್ಲಿ ವೆಂಕಟಾಪುರ ಕ್ಯಾಂಪ್ ಆಶ್ರಯ ಯೋಜನೆಗಳಿಗೆ ಪ್ರಥಮ ಕಾರ್ಯಕ್ಷೇತ್ರವನ್ನಾಗಿ ಹಮ್ಮಿಕೊಂಡು. ಸ್ವಾತಿಕುಂಟೆ, ಬುಕ್ಕಸಾಗರದರೆಗೂ ವ್ಯಾಪಿಸಲಾಯಿತು. ತುಂಗಭದ್ರ ಮೀನುಗಾರರ ಸಹಕಾರಿ ಸಂಘದಲ್ಲಿ ೫೦ ಜನ ದುರುಗಮುರಗಿ ಸದಸ್ಯರು, ಬುಡಗ ಜಂಗಮರು ೨೦ ಜನ ಸದಸ್ಯರು, ೧೨ ಜನ ಗೋಸಂಗಿ ಸಮುದಾಯದವರಿದ್ದಾರೆ. ೨೦೦೧-೨೦೦೨ರಲ್ಲಿ ತುಂಗಭದ್ರ ಮೀನುಗಾರರ ಸಹಕಾರಿ ಸಂಘದಲ್ಲಿ ಅಧ್ಯಕ್ಷತೆ

ಹೊಂದಿದ್ದಾರೆ. ಸಂಘದಲ್ಲಿ ೭ ಜನ ಕಾರ್ಯಕಾರಿ ಸಮಿತಿ ಮಂಡಳಿ ಇದೆ. ಒಟ್ಟು ೧೪೦ ಜನ ಸದಸ್ಯರನ್ನೊಳಗೊಂಡಿದೆ. ಇದರಲ್ಲಿ ದುರುಗಮುರಗಿ ಸಮುದಾಯದವರು ೬೨ ಸದಸ್ಯರು, ಬುಡಗ ಜಂಗಮರು ೨೫, ೨೦ ಗೋಸಂಗಿ ಸಮುದಾಯ ಸದಸ್ಯರು, ೧೩ ಜನ ಇತರೆ ಸಮುದಾಯ ಜನರುಗಳು ಮೀನುಗಾರಿಕೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಅಭಿವೃದ್ಧಿ ಕೆಲಸಗಳು : ಸರಕಾರಕ್ಕೆ ಮನವಿ ಮಾಡಿಕೊಂಡು ಶ್ರೀ ಮಾಧವರಾವ್ ಅವರು ಕಂಪ್ಲಿ ಎಂ.ಡಿ. ಕ್ಯಾಂಪ್‌ನಲ್ಲಿ ದುರುಗಮುರಗಿ ಸಮುದಾಯ ವಾಸಿಸುವ ಸ್ಥಳ ಹಾಗೂ ೩೦ ಆಶ್ರಯ ಮನೆಗಳನ್ನು ಕಲ್ಪಿಸಿದ್ದಾರೆ. ಇದರಲ್ಲಿ ದುರುಗಮುರಗಿ ಸಮುದಾಯ ೨೮ ಮನೆಗಳು ಗೋಸಂಗಿ (ಒಂದು ಪ್ರಚಲಿತ ಆಶ್ರಯ ಮನೆಯಲ್ಲಿ ಶಾಲೆಯನ್ನು ನೆಡಸಲಾಗುತ್ತಿದೆ) ಮೊಂಡರ ಸಮುದಾಯದ ತಲಾ ಒಂದು ಮನೆ. ಮೀನುಗಾರರ ಸಂಘದ ವತಿಯಿಂದ ಕಟ್ಟಿಲ್ಪಟ್ಟಿವೆ. ಇಲ್ಲಿ ಮೀನುಗಳ ಬಲೆಗೆ ಸಾಲ ನೀಡಲಾಗುವುದು ಹಾಗು ಶಾಲೆ ಮಕ್ಕಳಿಗೆ ತಿಂಗಳಿಗೆ ೧೫ ರೂಪಾಯಿಗಳು ಸಂಘದವತಿಯಿಂದ ಸಹಾಯ ಧನವನ್ನು ನೀಡಲಾಗುವುದು.

ಅಡಿಟಿಪ್ಪಣಿಗಳು

೧. ಚ.ನ. ಶಂಕರ್‌ರಾವ್, ಭಾರತೀಯ ಸಮಾಜ, ಪುಟ: ೪೦೦

೨. ಬುಡ್ಗ ಜಂಗಮವಾಣಿ ಸಂಚಿಕೆ, ಏಪ್ರಿಲ್ ೧೯೯೮

೩. ಅದೇ. ಪುಟ

೪. ಅದೇ. ಪುಟ

೫. ಕೆ.ಭೈರಪ್ಪ ಸಮಾಜ ಶಾಸ್ತ್ರ ಮೂಲ ತತ್ವಗಳು, ಪುಟ ೬೨.

೬. ಅದೇ. ಪುಟ

❖❖❖❖❖

ಅಧ್ಯಾಯ ೩

ಆಚರಣೆಗಳು

೧. ಜೀವನಾವರ್ತನ ಆಚರಣೆಗಳು

ಜನನ

ಋತುಮತಿ

ಮದುವೆ

ಶವ ಸಂಸ್ಕಾರ

೨. ವಾರ್ಷಿಕಾವರ್ತನ ಆಚರಣೆಗಳು

ಹಬ್ಬಗಳು

ಜಾತ್ರೆಗಳು

೩.ನ್ಯಾಯ ಪಂಚಾಯ್ತಿ

ಆಚರಣೆಗಳು

ಜನನ ಹಾಗು ನಾಮಕರಣ

ಎಲ್ಲಾ ಸಮುದಾಯಗಳಲ್ಲಿದ್ದಂತೆ, ದುರುಗಮುರಗಿಯವರಲ್ಲಿ ಸಹ ಅನೇಕ ಆಚರಣೆಗಳಿವೆ. ಅವುಗಳನ್ನು ಜೀವನಾವರ್ತನ ಆಚರಣೆಗಳು ಮತ್ತು ವಾರ್ಷಿಕಾವರ್ತನ ಆಚರಣೆಗಳೆಂದು ವಿಂಗಡಿಸಲಾಗಿದೆ. ಜೀವನಾವರ್ತನ ಆಚರಣೆಗಳು ಅವಶ್ಯಕ ವಿಧಿ ವಿಧಾನಗಳಿಂದ, ನಿಶ್ಚಿತ ಸಾಮಾಜಿಕ ಕಟ್ಟುಪಾಡುಗಳಿಂದ, ಜಾತಿಯೊಂದು ರೂಢಿಸಿಕೊಂಡು ಬಂದ ನಿಯಮಗಳ ಮೂಲಕ ಆಚರಿಸಲ್ಪಡುತ್ತವೆ. ವಾರ್ಷಿಕಾವರ್ತನ ಆಚರಣೆಗಳು ಹೆಚ್ಚಾಗಿ ಸಮೂಹ ನಿಷ್ಟವಾದವುಗಳು. ವರ್ಷಕ್ಕೊಂದಾವರ್ತಿ ಈ ಆಚರಣೆಗಳು ಪುನಾರಾವರ್ತನೆಯಾಗುತ್ತಿರುತ್ತವೆ.

ದುರುಗಮುರಗಿ ಸಮುದಾಯದಲ್ಲಿ ಜೀವನಾವರ್ತನ ಆಚರಣೆಗಳ ಸ್ವರೂಪವನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಮೊದಲಿಗೆ ಜನನಕ್ಕೆ ಸಂಬಂಧಿಸಿದ ವಿಧಿವಿಧಾನಗಳನ್ನು ನೋಡೋಣ. ಎಲ್ಲಾ ಕುಟುಂಬಗಳಲ್ಲಿ ಮೊದಲನೇ ತಾಯಿ ಬುಡಕಟ್ಟು ಸಮಾಜ. ಈ ಬುಡಕಟ್ಟು ಸಮಾಜ ಗರ್ಭಾವಸ್ಥೆಯಲ್ಲಿದ್ದಾಗ ಹಾಗೂ ಮಗು ಜನನವಾದಾಗ ಆಚರಿಸುವ ಸಂಪ್ರದಾಯ ತುಂಬಾ ಕಟ್ಟುನಿಟ್ಟಾಗಿದೆ. ಹೆಣ್ಣಿನ ಬದುಕು ಸಾರ್ಥಕವಾಗಬೇಕಾದರೆ ಅವಳು ತಾಯಿಯಾಗಿ ಮತ್ತೊಂದು ಜೀವಕ್ಕೆ ಜನ್ಮ ಕೊಟ್ಟಾಗಲೇ ಸಮಾಜ ಮುಂದುವರೆಯುವುದು. ದುರುಗಮುರಗಿ ಸಮುದಾಯದಲ್ಲಿ ಬಂಜೆ ಹೆಣ್ಣು ಕಂಡು ಬಂದರೆ, ಆ ಸಮುದಾಯದ ಕಳಂಕಕ್ಕೆ ಗುರಿಯಾಗುತ್ತಾಳೆ. ಹಾಗೂ ಬಂಜೆತನ ಅದೊಂದು ಕೊರತೆ ಎಂದು ಈ ಜನರು ಭಾವಿಸುತ್ತಾರೆ.

ದುರುಗಮುರಗಿ ಕುಟುಂಬದ ಮಹಿಳೆ ಗರ್ಭಿಣಿಯಾದ ಸುದ್ದಿಯನ್ನು ತವರು ಮನೆಯವರಿಗೆ ಮುಟ್ಟಿಸುತ್ತಾರೆ. ಈ ಸಮುದಾಯದವರು ಎಲ್ಲಿ ವಾಸಿಸುತ್ತಾರೋ. ಅಲ್ಲಿ ಗರ್ಭಿಣಿಯಾದ ಮಹಿಳೆಯ ಹೆರಿಗೆಯಾಗುವುದು.

ಅಂತಹ ಸಂದರ್ಭದಲ್ಲಿ ಹೆಣ್ಣಿನ ತಂದೆತಾಯಿಗಳು ಬಂದು, ಗರ್ಭಿಣಿ ಮಹಿಳೆಗೆ ಸಿಹಿತಿಂಡಿಗಳು ಕೊಡಿಸುತ್ತಾರೆ, ಹಾಗೂ ಗಂಡಿನ ಮಾವನಿಗೆ ಸರಾಯಿಯನ್ನು ಕುಡಿಸುತ್ತಾರೆ. ಇವರ ಜೊತೆಯಲ್ಲಿ ತಾವೂ ಕುಡಿಯುತ್ತಾರೆ. ನಂತರ ಮಗಳು ಆರೋಗ್ಯ, ಯೋಗಕ್ಷೇಮದ ಬಗ್ಗೆ ವಿಚಾರಿಸಿ ತಮ್ಮ ಊರಿಗೆ ವಾಪಸ್ಸು ಬರುತ್ತಾರೆ. ಗರ್ಭಿಣಿಗೆ ಸಾಮಾನ್ಯವಾಗಿ ಹೆಚ್ಚು ಊಟ ಕೊಡುತ್ತಾರೆ. ಆಗಾಗ ಗರ್ಭಿಣಿ ಮಹಿಳೆಗೆ ತಿಂಡಿ, ತಿನಿಸುಗಳನ್ನು ತಂದು ಕೊಡುತ್ತಾರೆ. ಒಮ್ಮೆ ತಾಯಿ ಮನೆಯಲ್ಲಿಯೇ ತಿಂಡಿ ತಿನಿಸು ಮಾಡಿಕೊಡುತ್ತಾಳೆ. ಸಾಧ್ಯವಾಗದಿದ್ದರೆ ಊರಲ್ಲಿ ಭಿಕ್ಷೆಗೆ ಹೋಗಿ ತನಗೆ ಬೇಕಾಗಿದ್ದ ಮನೆಯವರ ಬಳಿಯಿಂದ ಮಗಳು ಗರ್ಭಿಣಿಯೆಂದು ಹೇಳಿ, ಬೇಡಿಕೊಂಡು ತಂದು ತಿನ್ನಿಸುತ್ತಾಳೆ.

ಗರ್ಭಿಣಿ ಮಹಿಳೆಗೆ ಪ್ರತ್ಯೇಕ ಗುಡಾರ ಇರುವುದು. ಈ ಗುಡಾರದಲ್ಲಿ ಚಾಪೆ, ಮೊರ, ಬಿಸಿ ನೀರಿನ ಗಡಿಗೆ ಅಥವಾ ಪಾತ್ರೆ ಇರುವುದು. ಗರ್ಭಿಣಿ ಮಹಿಳೆಗೆ ಹೆರಿಗೆ ನೋವು ಬಂದಾಗ ಸಮುದಾಯದ ಜನರು ಸೇರಿಕೊಂಡು ತಮ್ಮ ಮನೆಯ ದೇವರುಗಳಾದ ಈರನಾಗಮ್ಮ, ಮುನಿಸ್ವಾಮಿ, ದೇವರನ್ನು ಈ ರೀತಿ ಪ್ರಾರ್ಥಿಸುತ್ತಾರೆ. 'ಅವ್ವ ತಾಯಿ ನನ್ನ ಮಗಳು ಹೆರಿಗೆ ನೋವು ಕಾಣಿಸಿಕೊಂಡಿದೆ. ನಿನ್ನ ಮಗಳು ಎಂದು ತಿಳಿದುಕೊಂಡು ಜೀವ ಉಳಿಸು ನಮ್ಮವ್ವ ಈರನಾಗಮ್ಮ ನಿನಗೆ ಹರಕೆ ಮಾಡಿಕೊಳ್ಳುತ್ತೇವೆ ' ಎಂದು ಬೇಡಿಕೊಳ್ಳುತ್ತಾರೆ. ಸಮುದಾಯದ ಯಜಮಾನರು ತಮ್ಮ ಗುಡಾರದ ಹೊರಗಡೆಯಲ್ಲಿ ಕುಳಿತುಕೊಂಡು ಹೆರಿಗೆ ಹೇಗಾಗುವುದೋ ಎಂಬ ಆತಂಕದಲ್ಲಿರುತ್ತಾರೆ.

ನವವಯಸ್ಕರು ಮೀನು ಬೇಟೆಗೆ ಹೋಗಿರುತ್ತಾರೆ, ಕೆಲವರು ಭಿಕ್ಷಾಟನೆ ಮಾಡಿಕೊಳ್ಳುವುದಕ್ಕೆ ಹೋಗಿರುತ್ತಾರೆ, ಗರ್ಭಿಣಿ ಮಹಿಳೆಗೆ ಹೆರಿಗೆಯ ಸಂದರ್ಭದಲ್ಲಿ ಸಹಾಯ ಮಾಡಲು ಈ ಸಮುದಾಯದ ಸೂಲಗಿತ್ತಿಯನ್ನು ಕರೆದುಕೊಂಡು ಗುಡಾರದಲ್ಲಿ ಹೋಗುವರು. ಅನುಭವಸ್ಥ ಮಹಿಳೆಯ ಗರ್ಭಿಣಿ ಮಹಿಳೆಗೆ ಹೆರಿಗೆ ಮಾಡಿಸುತ್ತಾಳೆ. ಪ್ರಥಮವಾಗಿ ಮಗುವಿಗೆ ಕರುಳು ಬಳ್ಳಿಯನ್ನು ಕುಡುಗೋಲಿನಿಂದ ಕತ್ತರಿಸುವರು. ಕರಳುಬಳ್ಳಿಗೆ ಮಾಸ ಎಂದು ಹೆಸರು, ನಂತರ ಕೂಸನ್ನು ಚಾಪೆ ಮೇಲೆ ಹಾಕುವರು. ಇದಕ್ಕಾಗಿ ಮೊದಲೇ ತರಿಸಿಟ್ಟಿದ್ದ ಮಣ್ಣಿನ ಹೊಸ ಗಡಿಗೆಯಲ್ಲಿ ಆ ಮಾಸನ್ನು ತುಂಬಿ ಮೇಲೊಂದು ಮುಚ್ಚುಳ ಅಥವಾ ಬೋಕಿಯನ್ನು ಮುಚ್ಚುತ್ತಾರೆ.

ಆ ಹೊಸ ಗಡಿಗೆಯನ್ನು ಪೂಜೆ ಮಾಡುತ್ತಾರೆ. ನಂತರ ಅದನ್ನು ಮನೆಯ ಹೊರಗೆ ತಂದು, ಬಚ್ಚಲಿನ ನೀರು ಹರಿದು ಹೋಗುವ ಕಡೆಯಲ್ಲಿ ತೆಗ್ಗು ತೋಡಿ ಅದನ್ನು ಹೂಳಿಟ್ಟು, ಅದರ ಮೇಲೆ ಮಣ್ಣು ಮುಚ್ಚುತ್ತಾರೆ. ಈ ಕಾರ್ಯ ಮುಗಿದು ಮೇಲೆ ಕುಲದೈವಕ್ಕೆ ಟೀ, ಚಹಾ, ತಿಂಡಿ, ಹಾಗೂ ಸರಾಯಿಯನ್ನು ಕುಡಿಸುವುದುಂಟು. ಸಮುದಾಯದಲ್ಲಿ ಹೆಣ್ಣು ಹುಟ್ಟಿದರೆ ಬೇಡಿಕೆ ಎಂದು ಹೇಳುತ್ತಾರೆ. ಮೂರು ದಿವಸಗಳು ಚಾಪೆ ಮೇಲೆ ಹಾಕಿರುವ ಮಗುವನ್ನು ನಂತರ ಮೊರದಲ್ಲಿ ಹಾಕಲಾಗುವುದು. ಅಂದಿನ ದಿನದಲ್ಲಿ ಗುಡಾರದ ಒಳಗಡೆಯಲ್ಲಿ ಸಗಣಿ ನೀರಿನಿಂದ ನೆಲಸಾರಿಸಿ ಸ್ವಚ್ಛತೆಯನ್ನು ಮಾಡಿಕೊಳ್ಳುತ್ತಾರೆ.

ಆ ದಿನ ಸಂಜೆ 'ಮಾಸ'ದ ಮಗಿಗೆ ಪೂಜೆ ಮಾಡಿ, ಅನ್ನ ಬೆಲ್ಲದ ಎಡೆ ತೋರಿಸಿ, ಆ ಎಡೆಯನ್ನು ಅಲ್ಲಿಯೇ ಇಟ್ಟು ಬಿಡುತ್ತಾರೆ. ಗರ್ಭಿಣಿ ಮಹಿಳೆಯು ಬಂದು ಇದಕ್ಕೆ ಪೂಜೆ ಸಲ್ಲಿಸಿ, ನಮಸ್ಕರಿಸುತ್ತಾಳೆ. ಅವಳ ಕೈಯಲ್ಲಿ ಮಾಸ ಕೊಯ್ದಿದ್ದ ಕುಡುಗೋಲು ಇರುತ್ತದೆ. ಅವಳು ಕೌದಿ ಹೊದ್ದುಕೊಂಡು ಬಂದು ಮಾಸದ ಮಗಿಯ ಪಕ್ಕ ಕುಡಗೋಲಿಟ್ಟು ಅದಕ್ಕೂ ಪೂಜೆ ಮಾಡುತ್ತಾಳೆ. ಮೊರದಲ್ಲಿ ಐದು ಹಿಡಿ ಅಕ್ಕಿ ಹಾಕಿ, ಮೊರದಲ್ಲಿ ಮಗು ಇಟ್ಟು ನಾಮಕರಣ ಮಾಡಲಾಗುವುದು. ಹುಟ್ಟಿದ ಮಗುವಿಗೆ ಬಲಗಡೆ ಹಾಗೂ ಎಡಗಡೆಯಲ್ಲಿ 'ಬರೆ'ಯನ್ನು ಹಾಕಲಾಗುವುದು.

ಗರ್ಭಿಣಿ ಮಹಿಳೆಗೆ ಮೂರು ದಿವಸದಲ್ಲಿ ಗೋಧಿ ನುಚ್ಚು ಮತ್ತು ತಿಳಿಗಂಜಿಯನ್ನು ನೀಡಲಾಗುವುದು. ಈ ಸಮುದಾಯದ ಜನರುಗಳು ತೊಟ್ಟಿಲು ಕಟ್ಟುವುದಿಲ್ಲ. ತೊಟ್ಟಿಲಿನಲ್ಲಿ ಮಗು ಮಲಗಿಸಿ ಹೆಸರಿಡುವ ಪದ್ಧತಿಯೇ ಇವರಲ್ಲಿಲ್ಲ. ಸೀರೆಯಿಂದ ಜೋಳಿಗೆ ಮಾಡಿ ಕೂಸನ್ನು ಮಲಗಿಸಿ ತೂಗುತ್ತಾರೆ. ಐದನೇ ದಿವಸದ ನಾಮಕರಣದಲ್ಲಿ ಸೂಲಗಿತ್ತಿಗೆ ೯ ಸೇರು ಅಕ್ಕಿ, ೧ ಪಾವು ಅಡಿಕೆ, ೧ ಚೆಟ್ಟೆ ಎಲೆ, ೨೫, ೫೦ ರೂಪಾಯಿಗಳನ್ನು ದೇಣಿಗೆ ನೀಡಲಾಗುವುದು. ಹೆರಿಗೆ ಮಾಡಿಸಿದ ಸೂಲಗಿತ್ತಿಗೆ ಸಾಕೆನಿಸುವಷ್ಟು ಊಟ, ಸರಾಯಿ ಕುಡಿಸಿ ಖುಷಿ ಮಾಡುತ್ತಾರೆ.

ಅಂದಿನ ದಿವಸದಲ್ಲಿ ಹುಗ್ಗಿ (ಪಾಸಿಮಂ) ಅನ್ನ, (ಭೂವ), ಸಾರು ಮಾಡಿಸಿ ತಮ್ಮ ಕುಲ ದೈವಕ್ಕೆ ಊಟವನ್ನು ನೀಡುತ್ತಾರೆ. ಹಿರಿಯರಿಗೆ ಸಾಯಂಕಾಲ ಸಮಯದಲ್ಲಿ ಸರಾಯಿಯನ್ನು ಕುಡಿಸುತ್ತಾರೆ. ನಂತರ ದಿನದಲ್ಲಿ ಕೋಳಿ ಮಾಂಸದ ಅಡಿಗೆಯನ್ನು ಮಾಡಿಸುತ್ತಾರೆ. ಮತ್ತು ಅನ್ನ, ಗಂಜಿ, ಕೊಡುತ್ತಾರೆ. ದಿನಗಳು ಕಳೆದಂತೆ ಈ ಮಹಿಳೆಗೆ ಸಪ್ಪೆ ಮಾಂಸದ ತುಂಡುಗಳನ್ನು ತಿನ್ನಿಸುತ್ತಾರೆ. ಜೊತೆಯಲ್ಲಿ ಅನ್ನ ಊಟ ಮಾಡಿಸುತ್ತಾರೆ. ಕೊಬ್ಬರಿ, ಬೆಲ್ಲ, ತುಪ್ಪ, ಸೇರಿಸಿ ಅಥವಾ ಪುಡಿ ಮಾಡಿ ದಿನಾಲು ಬೆಳಿಗ್ಗೆ ತಿನ್ನಿಸುತ್ತಾರೆ. ಇದಕ್ಕೆ 'ಖಾರ' ಎಂದು ಕರೆಯುತ್ತಾರೆ.

ದುರುಗಮುರಗಿ ಸಮುದಾಯದ ವಿಶೇಷವೆಂದರೆ ತುಂಬಿದ ಗರ್ಭಿಣಿಯರನ್ನು ಚೆನ್ನಾಗಿ ನೋಡಿಕೊಳ್ಳುವರು. ಅಂದರೆ ಗಂಡಿನ ಕಡೆಯವರು ಸೋದರ ಮಾವನ ತಂದೆಯವರು ಗರ್ಭಿಣಿಗೆ ಸಿಹಿ ತಿಂಡಿಗಳನ್ನು ತಿನಿಸುವರು. ಜಾತ್ರೆಯ ಸಮಯದಲ್ಲಿ ಮಹಿಳೆಗೆ ಬಳೆಗಳು, ಹೂವುಗಳು, ಇತ್ಯಾದಿಗಳನ್ನು ಕೊಡಿಸುತ್ತಾರೆ. ಹೆಣ್ಣಿನ ಸಂಬಂಧಿಕರಿಗೆ ಸರಾಯಿ ಕುಡಿಸುತ್ತಾರೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಗಂಡಿನ ತಂದೆ ಸೋದರ ಮಾವನವರು ಖರ್ಚು ಮಾಡಿಸುತ್ತಾರೆ. ತುಂಬಿದ ಗರ್ಭಿಣಿಗೆ ಹೆಣ್ಣು ಹುಟ್ಟಿದರೆ ತುಂಬಾ ಸಂತೋಷದಿಂದ ಇರುವರು.

ಗುಡಾರದ ಒಳಗೆ ಸೆಗಣಿಯಿಂದ ಸಾರಿಸಿ ಶುಚಿ ಮಾಡುತ್ತಾರೆ. ಬಾಣಂತಿಗೆ ಬಿಸಿ ನೀರಿನ ಸ್ನಾನಮಾಡಿಸಿ, ಹೊರಸಿನ ಮೇಲೆ ಕೌದಿ ಹಾಸಿ ಮಲಗಿಸುತ್ತಾರೆ. ಪಕ್ಕದಲ್ಲಿ ತುಂಡು, ತುಂಡು ಕಟ್ಟಿಗೆಯಿಂದ ಬೆಂಕಿ ಹಾಕಿರುತ್ತಾರೆ. ಬೆಂಕಿ ಮುಂದೆಗಡೆಯಲ್ಲಿ ಬಾಣಂತಿ ಕೂತು ಮೈಕಾಯಿಸಿ ಕೊಳ್ಳುತ್ತಾಳೆ. ಹೆರಿಗೆ ಸಮಯದಲ್ಲಿ ಬೆಂಕಿ ಮತ್ತು ಬಿಸಿನೀರಿನ ಪ್ರಾಮುಖ್ಯತೆಯನ್ನು ಕಡೆಗೆ ನೀಡುತ್ತಾರೆ. ಗರ್ಭಿಣಿ ಮಹಿಳೆಯ ಊಟದಲ್ಲಿ ಹೆಚ್ಚು

ಖಾರ ಹಾಕುವುದಿಲ್ಲ. ೧ ತಿಂಗಳು ಕಾಲ ಬಿಸಿ ನೀರನ್ನು ಕುಡಿಯಬೇಕು. ನಂತರ ಬರುವ ದಿನಗಳಲ್ಲಿ ತಣ್ಣೀರನ್ನು ಕುಡಿಯಬಹುದು. ಈ ಸಮುದಾಯದಲ್ಲಿ ವಿಶೇಷವೇನೆಂದರೆ ಬಾಣಂತಿಯು 'ಹಳ್ಳ' ಅಥವಾ 'ಕೆರೆ'ಯನ್ನು ದಾಟುವಂತಿಲ್ಲ.

ಮಗುವಿಗೆ ಆರೋಗ್ಯ ಕೆಟ್ಟರೆ ಬಾಣಂತಿಯ ಮೇಲೆ ಆರೋಪ ಮಾಡಲಾಗುವುದು. ಈ ಹಿನ್ನೆಲೆಯಿಂದ ಆ ಮಹಿಳೆಯೂ ಎಲ್ಲಿಯೂ ಹೋಗುವುದಿಲ್ಲ. ಈ ಸಮುದಾಯದ ಮಕ್ಕಳಿಗೆ ಹೆಸರುಗಳು ಗಂಡು ಹುಟ್ಟಿದರೆ ನಾಗಪ್ಪ, ಮಾರಪ್ಪ, ದುರುಗಪ್ಪ, ಜಂಬಣ್ಣ, ಮುನಿಸ್ವಾಮಿ ಇತ್ಯಾದಿಗಳು ಹೆಣ್ಣು ಹುಟ್ಟಿದರೆ ಮಾರಮ್ಮ, ದುರುಗಮ್ಮ ಜಂಬಕ್ಕ, ಈರನಾಗಮ್ಮ, ಸುಂಕಲಮ್ಮ, ಹುಲಿಗೆಮ್ಮ, ದ್ಯಾವಮ್ಮ ಇತ್ಯಾದಿ ಹೆಸರುಗಳನ್ನು ಇಡುವರು.

ಋತುಮತಿ

ಸಮುದಾಯದಲ್ಲಿ ಹೆಣ್ಣು ದೊಡ್ಡವಳಾದ ಸಂದರ್ಭದಲ್ಲಿ ಹೆಂಗಸರು ತಮ್ಮ ಗುಡಾರದಲ್ಲಿ ೬ ಅಡಿಗಳುಅಂತರದಲ್ಲಿ ಆಕೆಯನ್ನು ಕೂಡಿಸಿರುತ್ತಾರೆ. ಗುಡಾರ ಒಳಗಡೆಯಲ್ಲಿ ಹಳೇ ಚಾಪೆ, ಸೀಮೆ ಎಣ್ಣೆ ದೀಪದ ಬುಡ್ಡಿ ಇಟ್ಟು. ಅಂದಿನ ದಿವಸದಲ್ಲಿ ಅನುಭವಿ ಮಹಿಳೆಯಾಗಲಿ, ಮುದಕಿಯಾಗಲಿ ಬಂದು ಸ್ನಾನ ಮಾಡಿಸಿ ಬಟ್ಟೆಗಳನ್ನು ಉಡಲು ಕೊಡುತ್ತಾರೆ. ಮೈ ನೆರೆದ ಹುಡುಗಿ ಮನೆಯಲ್ಲಿ ಓಡಾಡುವಂತಿಲ್ಲ, ಕೆಲಸ ಮಾಡುವಂತಿಲ್ಲ, ಬೇರೆಯವರನ್ನು ಮುಟ್ಟುವಂತಿಲ್ಲ, ದುರುಗಮುರಗಿ ಸಮುದಾಯದಲ್ಲಿ ಋತುಮತಿ ಸಂದರ್ಭದಲ್ಲಿ ದೊಡ್ಡವಳಿಗೆ ಕೊಬ್ಬರಿ, ಬೆಲ್ಲ, ಸಿಹಿ ತಿಂಡಿಗಳು, ತಿನ್ನಿಸುವುದು, ಹೂವು, ಬಳೆಗಳು, ಇತ್ಯಾದಿಗಳಿಂದ ಸಿಂಗಾರ ಮಾಡಲಾಗುವುದು.

ಅಂದಿನ ದಿನದಲ್ಲಿ ಕುಲ ದೈವದವರ ಪಂಚಾಯ್ತಿ ನಡೆಯುವುದು. ಋತುಮತಿಯಾದ ಹುಡುಗಿಯ ತಂದೆ, ತಾಯಿಯರು ಪಂಚಾಯ್ತಿಯಲ್ಲಿ ಭಾಗವಹಿಸುತ್ತಾರೆ. ಕುಲದ ಮುಖಂಡ ಕೆಲವೊಂದು ಪ್ರಶ್ನೆಗಳನ್ನು ಕೇಳುತ್ತಾನೆ.

ಕುಲದ ಮುಖಂಡ : ಏನಪ್ಪ ನಿಮ್ಮ ಮಗಳು ದೊಡ್ಡವಳಾಗಿದಾಳಂತೆ, ನೀವು ಕುಲ ಪಂಚಾಯ್ತಿಗೆ ಏನು ಕೊಡುವಿರಿ ಎಂದು ಕೇಳುತ್ತಾನೆ.

ತಂದೆತಾಯಿಗಳು : ನೀವು ಏನೋ ಹೇಳುವಿರೋ ನಾವ್ ಕೊಡಲು ಸಿದ್ಧ ಎಂದು ಹೇಳುತ್ತಾರೆ. ಕುಲದ ಮುಖಂಡ ಕುಲ ದೈವದ ಪ್ರಕಾರ ದೊಡ್ಡವಳಾದಾಗ ೨೦೦ ರೂಪಾಯಿಗಳು ಕೊಡಬೇಕೆಂದು ಕುಲದಲ್ಲಿ ತೀರ್ಮಾನವಾಗಿದೆ ಎಂದು ಹೇಳುತ್ತಾನೆ. ತಂದೆ ತಾಯಿಗಳು ಕುಲ ದೈವಕ್ಕೆ ೨೦೦ ರೂಪಾಯಿಗಳನ್ನು ಕೊಡುತ್ತಾರೆ. ನಂತರ ಕುಲದ ಮುಖಂಡರಿಗೆ ಸರಾಯಿಯನ್ನು ಕುಡಿಸುತ್ತಾರೆ.

ಹುಡುಗಿ ದೊಡ್ಡವಳು ಆದ ಸುದ್ದಿಯನ್ನು ಎಲ್ಲರಿಗೂ ತಿಳಿಸುತ್ತಾರೆ. ಮುತ್ತೈದೆಯರು ಐದು ಮಂದಿ ಬಂದು ಅವಳ ತಲೆಗೆ ಎಣ್ಣೆ ಹಚ್ಚುತ್ತಾರೆ. ಹಿರಿಯ ಮಹಿಳೆಯೂ ಅವಳಿಗೆ ನೀರೆರೆಯುತ್ತಾಳೆ. ಅದಕ್ಕೆ

ಮುಟ್ಟರೆಯುವುದು ಎಂದು ಕರೆಯುತ್ತಾರೆ. ದೊಡ್ಡವಳಾದಗಳನ್ನು ಸ್ನಾನ ಮಾಡಿಸಿದ ನಂತರ ಮುತ್ತೈದೆಯು ಸ್ನಾನ ಮಾಡಬೇಕು. ಈ ಸಮುದಾಯದ ಒಳಪಂಗಡಗಳಲ್ಲಿ ಋತುಮತಿ ಮಹಿಳೆಯರನ್ನು ಅಂದಿನ ಕೆಲಸ ಕ್ರಮಗಳು ವಿಭಿನ್ನ ರೀತಿಯಲ್ಲಿ ಕಂಡುಬರುವವು. ಮಂಡಲೂರು ಕುಟುಂಬದಲ್ಲಿ ದೊಡ್ಡವಳು ಆದರೆ ೭ ದಿವಸದ ಕಾರ್ಯಕ್ರಮ ನಡೆಯುವುದು. ಆ ದಿನ ಕಾರ್ಯದಲ್ಲಿ ಮಡಿಲು ತುಂಬುತ್ತಾರೆ.

ದೊಡ್ಡವಳಾದ ಹೆಣ್ಣಿಗೆ ಪಾಯಸ ಊಟ ಮಾಡಿಸುತ್ತಾರೆ. ಹೆಣ್ಣಿನ ಸೋದರಮಾವ ಬರುವನು. ಆ ದಿನದಲ್ಲಿ ಗಂಡಿನ ತಂದೆತಾಯಿಗಳು ಹೆಣ್ಣು ನೋಡಿ ನಿಶ್ಚಿತಾರ್ಥ ಮಾಡಿಕೊಳ್ಳುವುದು. ಮುಂದಿನ ಬರುವ ದಿನಗಳಲ್ಲಿ ಮದುವೆ ಪ್ರಸ್ತಾವನೆ ಮಾಡಿಕೊಳ್ಳುತ್ತಾರೆ. ರಾವುಲೋಳ್, ದ್ಯಾಮನೂರು, ಕುಟುಂಬಗಳಲ್ಲಿ ಹೆಣ್ಣು ದೊಡ್ಡವಳಾದರೆ ಐದನೇ ದಿವಸದಲ್ಲಿ ಕಾರ್ಯವೂ ನಡೆಯುವುದು ಹಾಗೂ ಕೆಲವರು ಒಂಬತ್ತನೇ ದಿವಸ ಕಾರ್ಯಕ್ರಮ ನಡೆಯುವುದು, ಈ ಕಾರ್ಯವೂ ಸರಳ ರೀತಿಯಲ್ಲಿ ನಡೆಯುವುದು, ಋತುಮತಿ ಮಹಿಳೆಗೆ ಹೊಸ ಸೀರೆ, ಕುಪ್ಪಸ ತಂದು ಉಡಿಸುತ್ತಾರೆ. ಅವತ್ತು ಸಂಜೆ ಅವಳು ಈರನಾಗಮ್ಮ ದೇವಿಯ ಗುಡಾರದಲ್ಲಿ ಪೂಜೆ ಮಾಡಿ ನಮಸ್ಕರಿಸಿ ಬರುತ್ತಾಳೆ.

ರಾತ್ರಿ ಸಮಯದಲ್ಲಿ ದೊಡ್ಡವಳಾದ ಹೆಣ್ಣನ್ನು ಕಟ್ಟೆ ಮೇಲೆ ಅಥವಾ ಊರಿನಲ್ಲಿ ವಾಸಮಾಡುತ್ತಿರುವ ಜನರುಗಳು ಹತ್ತಿರ ಕುರ್ಚಿಯನ್ನು ತೆಗೆದುಕೊಂಡು ಕುರ್ಚಿ ಮೇಲೆ ಕುಳ್ಳರಿಸುತ್ತಾರೆ. ಮುತ್ತೈದೆಯರಿಂದ ಕಳಸ ತೆಗೆಯಲಾಗುವುದು. ಕಳಸಂ ಎಂದರೆ ಎಲೆ ಎಂದರ್ಥ. ದುರುಗಮುರಗಿ ಸಮುದಾಯದಲ್ಲಿ ಎಲೆ ಇಲ್ಲದೆ ಹೋದರೆ ಯಾವ ಕಾರ್ಯವೂ ಜರುಗುವುದಿಲ್ಲ. ಸಮುದಾಯದಲ್ಲಿ ಕಳಸಂ ಪ್ರಾಮುಖ್ಯತೆಯನ್ನು ಹೊಂದಿದೆ. ನಂತರ ಮುತ್ತೈದೆಯರು ಕಳಸಂ ಆರತಿಯನ್ನು ಮಾಡುತ್ತಾರೆ. ಹಾಗೂ ಅನ್ನದ ಆರತಿಯನ್ನು ಮಾಡುತ್ತಾರೆ. ಸಮುದಾಯದ ನೆಂಟರು ದೊಡ್ಡವಳಿಗೆ ಮುಯ್ಯಿ ಮಾಡುವ ಕಾರ್ಯವೂ ನಡೆಯುವುದು.ನೆಂಟರು ಸಿಹಿಯಾದ ತಿಂಡಿಗಳನ್ನು ತಂದಿರುತ್ತಾರೆ.

ಮದುವೆ

ದುರುಗಮುರಗಿಯರಲ್ಲಿ ಸರಳವಾದ ಮದುವೆ ಪದ್ಧತಿ ಬಳಕೆಯಲ್ಲಿದೆ. ಮದುವೆ ಗಂಡು ಹೆಣ್ಣುಗಳ ಜೀವನದಲ್ಲಿ ಅತಿ ಪ್ರಮುಖವಾದದ್ದು. ಗಂಡು ಪ್ರಪ್ರಥಮವಾಗಿ ಮದುವೆ ಶಾಸ್ತ್ರಕ್ಕೆ ಒಳಪಡುತ್ತಾನೆ. ಈ ಸಮುದಾಯದಲ್ಲಿ ಮದುವೆಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಇನ್ನೊಂದು ಕುಲದಲ್ಲಿ ಹಾಗೂ ಬೇರೆ ಸಮುದಾಯ ಜಾತಿಯಲ್ಲಿ ಮದುವೆ ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ. ತಮ್ಮದೇ ಆದ ಸಮಾಜ ರಚನೆಯನ್ನು ಹೊಂದಿದ್ದು, ಸಮಾಜದ ಒಳಗಡೆ ನೆರವೇರಲು ಕೆಲವಾರು ನಿಯಮಗಳನ್ನು ಅನುಸರಿಸುತ್ತಾರೆ.

ಆ ದಿನದಲ್ಲಿ ಸಿಹಿತಿಂಡಿ, ಸರಾಯಿಯನ್ನು ಹಂಚುತ್ತಾರೆ. ನಂತರ ಗಂಡಿನ ಕಡೆಯವರು ಹುಟ್ಟಿದ ಮುಗಿವಿಗೆ ನಮ್ಮ ಮನೆಗೆ ಸೊಸೆಯಾಗಿ ಬರಬೇಕು ಎಂದು ಕೇಳಿಕೊಳ್ಳುತ್ತಾರೆ. ಹಾಗೂ ಈ ಸಮುದಾಯಗಳಲ್ಲಿ ಹೆಣ್ಣುಗಳ ಸಂಖ್ಯೆ ಕಡಿಮೆ ಇರುವುದರಿಂದ ಹೆಣ್ಣಿನ ತಂದೆತಾಯಿಗಳಿಗೆ ಬೇಡಿಕೊಳ್ಳುತ್ತಾರೆ. ಹಾಗೂ ಹೆತ್ತ

ಹೆಣ್ಣಿನ ತಂದೆ ತಾಯಿಗಳು ಹುಟ್ಟಿದ ಹೆಣ್ಣು ಮಗುವಿಗೆ ಮದುವೆಯ ನಿಶ್ಚಿತಾರ್ಥ ಮಾಡುತ್ತಾರೆ. ಹುಡುಗಿ ವಯಸ್ಸಿಗೆ ಬಂದಾಗ ಯಾವುದೇ ರೀತಿಯಲ್ಲಿ ಸ್ವಾತಂತ್ರ್ಯವಿರುವುದಿಲ್ಲ. ಹೆಣ್ಣಿನ ತಂದೆತಾಯಿಗಳು ಹಾಗೂ ಗಂಡಿನ ಸಂಬಂಧಿಕರುಗಳು ಮದುವೆ ಪ್ರಸ್ತಾವನೆಯನ್ನು ಮಾಡುತ್ತಾರೆ.

ಮದುವೆಯಾಗುವ ಹುಡುಗಿ, ಕುಂಟನಾಗಲಿ, ಕುರುಡನಾಗಲಿ, ಆ ವರನನ್ನ ಮದುವೆ ಆಗಲೇಬೇಕು. ಒಂದು ಬಾರಿಯಾದರು ಹುಡುಗಿಯ ಒಪ್ಪಿಗೆಯನ್ನು ಕೇಳುವುದಿಲ್ಲ. ಹುಡುಗಿಯೂ ತಂದೆತಾಯಿಗಳು ಹೇಳಿದ ಮಾತು ವೇದವಾಕ್ಯ ಎಂದು ತಿಳಿದಿರುತ್ತಾಳೆ. ದುರುಗಮುರಗಿ ಸಮುದಾಯದಲ್ಲಿ ಬೆಸ ಬೆಡಗುಗಳೊಂದಿಗೆ ಮದುವೆ ಮಾಡಿಸುತ್ತಾರೆ. ಈ ಸಮುದಾಯಲ್ಲಿರುವ ಬೆಡಗುಗಳೆಂದರೆ

ರಾವುಲೋಳ್
ಸಿಂದ್ಯಾಲೋಳ್ ಅಥವಾ ಸಿಂಧೋಳ್
ಸಿಂದ್ಯಾವನೂರು ಅಥವಾ ಚಿಂಧೊಳ್ಳು,
ದ್ಯಾಮನೂರು
ಪೆದ್ದದ್ಯಾಮನೋಳ್
ಮಂಡಲೂರು

ಸಮ ಬೆಡಗಿನವರಲ್ಲಿ ಸೋದರತ್ವದ ಹಾಗೂ ಬೆಸ ಬೆಡಗುಗಳಲ್ಲಿ ನೆಂಟರ ಸಂಬಂಧವಿರುವುದು. ಬೇರೆ ಬೇರೆ ಗುಂಪುಗಳಿಂದ ಹೊರಗಿನ ನೆಂಟಸ್ತನ ನಡೆಯುವುದು ರೂಢಿಯಲ್ಲಿದೆಯಾದರೂ ಸಾಧಾರಣವಾಗಿ ತಮ್ಮ, ತಮ್ಮ ಕರುಳುಬಳ್ಳಿ ಸಂಬಂಧದಲ್ಲಿಯೇ ಹೆಣ್ಣುಗಳನ್ನು ಮಾಡಿಕೊಳ್ಳುತ್ತಾರೆ. ಹೆಚ್ಚಿನಿಂದಾಗಿ ಅಕ್ಕನ ಮಗಳು, ಸೋದರ ಅತ್ತೆಯ ಮಗಳನ್ನು ಮದುವೆ ಮಾಡಿಕೊಳ್ಳುತ್ತಾರೆ. ದುರುಗಮುರಗಿ ಸಮುದಾಯದಲ್ಲಿ ಹೆಚ್ಚಿನ ಪ್ರಮಾಣಗಳಲ್ಲಿ ಬಾಲ್ಯವಿವಾಹ ನಡೆಯುವುದು.

ಮದುವೆಯಲ್ಲಿ ಪ್ರಥಮ ಕಾರ್ಯವೆಂದರೆ ಕಳಸಂ ಶಾಸ್ತ್ರ, ಕಳಸಂ ಎಂದರೆ ಎಲೆ ಶಾಸ್ತ್ರ ಎಂದರ್ಥ. ಮದುವೆಯಂತಹ ಸಂದರ್ಭಗಳಲ್ಲೂ ಕಳಸಂ ಇಲ್ಲದೆ ಹೋದಾಗ ಮುಹೂರ್ತ ಮೀರುತ್ತಿದ್ದರೂ ಎಲೆಯನ್ನು ತರಿಸಿ ಕಾರ್ಯಕ್ಕೆ ಮುಂದಾಗುತ್ತಾರೆ. ಸಮುದಾಯದ ಕೆಲವೊಂದು ಕಾರ್ಯಕ್ರಮಗಳಲ್ಲಿ ಸಮುದಾಯದ ವ್ಯಕ್ತಿಗೆ ಎಲೆ ಸಿಗದೇ ಹೋದರೆ ಜಗಳಕ್ಕೆ ನಿಲ್ಲುತ್ತಾರೆ.

ಎಲೆಗಳು ಇರದಿದ್ದರೂ ಎಲೆಗಳನ್ನು ತರಿಸಿ, ಕೊಡಬೇಕು ಎನ್ನುವ ಮಾತು ಆಡದೇ ಇರಲಾರದು, ಕೆಲವು ಅಹಿತಕರ ಘಟನೆಯಿಂದ ಕಳಸಂ ದೊರೆಯದೆ ಹೋದಾಗ ಹಳೆಯ ಯಜಮಾನರು ಜೀವವನ್ನೇ ಬಿಟ್ಟ ಕೆಲವು ನಿದರ್ಶನಗಳುಂಟು. ಮದುವೆ ಕಾರ್ಯದಲ್ಲಿ ಮುಂಚಿತವಾಗಿ ಗಂಡಿನ ತಂದೆತಾಯಿಗಳು ಹಾಗೂ ಸಂಬಂಧಿಕರು ಹೆಣ್ಣಿನ ಮನೆ ಮುಂಭಾಗದಲ್ಲಿ ಗುಡಾರವನ್ನು ಹಾಕುವರು. ಗಂಡಿನ ಸಂಬಂಧಿಕರು ಹೆಣ್ಣನ್ನು ತಮ್ಮ ಕುಲದಲ್ಲಿ ಹಾಕಿಕೊಳ್ಳುವ ಸಂದರ್ಭಕ್ಕಾಗಿ ಗುಡಾರವನ್ನು ಹಾಕಿಕೊಳ್ಳುತ್ತಾರೆ.

ಹೆಣ್ಣಿನ ಸಂಬಂಧಿಕರಿಗೆ ಈ ವಿಷಯವನ್ನು ತಿಳಿಸಲಾಗುವುದು, ನಂತರ ಹೆಣ್ಣಿನ ತಂದೆತಾಯಿಗಳು, ಕುಲದ

ಯಜಮಾನರು ಗುಡಾರದ ಹತ್ತಿರ ಬರುತ್ತಾರೆ. ಹಾಗೂ ಕುಲ ಪಂಚಾಯ್ತಿ ನಡೆಯುವುದು. ಕುಲ ಪಂಚಾಯ್ತಿಯಲ್ಲಿ ಕುಲಬಾಂಧವರು ಸೇರಿಕೊಂಡು ಮದುವೆ ವಿಷಯದ ಬಗ್ಗೆ ಮಾತನಾಡುತ್ತಾರೆ.

ಕುಲದ ಯಜಮಾನ : ಏಕಪ್ಪಾ ಇಲ್ಲಿ ಗುಡಾರ ಹಾಕಿರುವೆ? ಎಂದು ಕೇಳುತ್ತಾರೆ.

ಗಂಡಿನ ತಂದೆ : ಇಲ್ಲ ನನ್ನಪ್ಪ ನನ್ನ ಮಗನಿಗೆ ಸೊಸೆಯನ್ನು ಮಾಡಿಕೊಳ್ಳುವುದರ ಸಲುವಾಗಿ ಗುಡಾರ ಹಾಕಿರುವೆ.

ಕುಲದ ಯಜಮಾನ : ಏನಪ್ಪ ನಿಮ್ಮ ಮಗಳನ್ನು ಸೊಸೆಯಾಗಿ ಮಾಡಿಕೊಳ್ಳುವುದರ ಸಲುವಾಗಿ ನಿಮ್ಮ ಮಾವಂದಿರು ಬಂದಿರುತ್ತಾರೆ ಒಪ್ಪಿಗೆಯನ್ನು ನೀಡುತ್ತೀಯ ಎಂದು ಕೇಳುತ್ತಾರೆ. ಹುಡಿಗಿ ತಂದೆ ತಾಯಿಗಳು ಈ ವಿಷಯದ ಬಗ್ಗೆ, ಮೊದಲನೇ ಬಾರಿಗೆ ಒಪ್ಪಿಕೊಳ್ಳುವುದಿಲ್ಲ.

ಗಂಡಿನ ತಂದೆ : ಗಂಡಿನವರು ಮತ್ತೆ ಹೆಚ್ಚಿನ ಒತ್ತಾಯವನ್ನು ಮಾಡುತ್ತಾರೆ. ಆತನ ಬಲವಂತದ ಮೇರಿಗೆಮತ್ತೆ ಹೆಣ್ಣಿನ ತಂದೆತಾಯಿಗಳು ಕುಲದ ಹಿರಿಯರ ಒತ್ತಾಯದ ಮೇರೆಗೆ ಮದುವೆಯನ್ನು ಒಪ್ಪಿಕೊಳ್ಳುತ್ತಾರೆ.

ಮದುವೆಯ ಮಾತುಕತೆಯಲ್ಲಿ ಕುಲ ಪಂಚಾಯ್ತಿ ನಡೆಯುವುದು. ಗಂಡಿನ ತಂದೆ-ತಾಯಿಗಳು ಹಾಗೂ ಸಂಬಂಧಿಕರು, ಮತ್ತು ಹೆಣ್ಣಿನ ತಂದೆ-ತಾಯಿಗಳು, ಸಂಬಂಧಿಕರು ಇರುತ್ತಾರೆ. ಕುಲ ಪಂಚಾಯತಿಯ ಹಿರಿಯ ವ್ಯಕ್ತಿಯು ರಾವುಲೋಳ್ ಹುಡುಗಿ ದ್ಯಾಮಾನೂರು ಹುಡುಗನಿಗೆ ಕೈಸೇರುವುದು ಎಂದು ಹೇಳುತ್ತಾರೆ. ಗಂಡಿನ ಕಡೆಯವರು ಹೆಣ್ಣಿನ ತಂದೆ-ತಾಯಿಗಳಿಗೆ ೧೦ ರೂ ಕಾಣಿಕೆಯನ್ನು ನೀಡುತ್ತಾರೆ. ಅಳಿಯನಿಗೆ ಹೊಸಬಟ್ಟೆಯನ್ನು ಹೆಣ್ಣಿನ ತಂದೆ ತಾಯಿಗಳು ಕೊಡಿಸಬೇಕು. ಹೆಣ್ಣಿನ ತಾಯಿಗೆ ಗಂಡಿನವರು ಒಂದು ಸೀರೆಯನ್ನು ಕಡ್ಡಾಯವಾಗಿ ತರಬೇಕು. ಆ ಸೀರೆಗೆ 'ತಾಯಿ ಹೊಟ್ಟೆಸೀರೆ' ಎಂದು ಕರೆಯುತ್ತಾರೆ. ಮದುಮಗಳಿಗೆ ಸುರಗಿ ನೀರು ಹಾಕುವ ಕಾರ್ಯದಲ್ಲಿ ಹೆಣ್ಣಿಗೆ ಮದ್ದಿಂಗಿತ್ತಿ ಸೀರೆಯನ್ನು ಗಂಡಿನವರು ತರಬೇಕಾಗುತ್ತದೆ. ಇದ್ದುದರಲ್ಲಿಯೇ ಈ ಸೀರೆ ದುಬಾರಿಯದು ಎಂದು ಅವರ ನಂಬಿಕೆ.

ಗುಡಾರ ಹಂದರ : ಮದುವೆ ನಡೆಯುವ ಸ್ಥಳವೆಂದರೆ ಹುಡುಗಿ ಮನೆ ಮುಂದುಗಡೆಯಲ್ಲಿ ಮದುವೆ ಹಂದರ ಹಾಕಿಕೊಳ್ಳುತ್ತಾರೆ ಹಾಗು ಗಂಡಿನ ಸಂಬಂಧಿಕರು ತಮ್ಮ ಕುಲದೇವರಾದ ಈರನಾಗಮ್ಮ, ಮುನಿಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ಗುಡಾರ ಹಂದರವನ್ನು ಹಾಕಿಕೊಳ್ಳುತ್ತಾರೆ. ಈ ಹಂದರ ತೀರ ಚಿಕ್ಕದಾಗಿ ಇರುವುದು. ಮದುವೆ ಎಂದ ಮೇಲೆ ಸಾಮಾನ್ಯ ಬಡತನದಿಂದ ಬೆಂದ ತಂದೆ-ತಾಯಿಗಳು, ಸವುದೆ-ಅಕ್ಕಿ, ಸಾಂಬಾರು ಪದಾರ್ಥಗಳನ್ನು ಜೋಡಿಸುವಾಗ ಹಾಗೂ ಗುಡಾರ ಒಳಗಡೆಯಲ್ಲಿ ಸಗಣಿ ನೀರಿನಿಂದ ಸಾರಿಸುತ್ತಾರೆ. ಸಮುದಾಯ ಜನರಗಳು ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿರುತ್ತಾರೆ. ಇಷ್ಟೆಲ್ಲಾ ಪೂರ್ವಭಾವಿ ಕೆಲಸಗಳು ಗುಡಾರ ಹಂದರದ ಮುಂದೆ ನಡೆಯುವುದು. ಗುಡಾರದ ಹಂದರಕ್ಕೆ ತೆಂಗಿನಕಾಯಿಯಿಂದ ಪೂಜೆಯನ್ನು ಮಾಡುವರು.

ಸುರಿಗೆ ನೀರು : ಮದುವೆಯ ಮಾರನೇ ದಿನದಲ್ಲಿ ನಡೆಯುವ ಕಾರ್ಯವೆಂದರೆ ಸುರಿಗೆ ನೀರು. ಗಂಡಿನವರು ತಮ್ಮ ಗುಡಾರ ಹಂದರ ಹತ್ತಿರದಲ್ಲಿ ಮದ್ಲಿಂಗನ ಶಾಸ್ತ್ರ ಮಾಡಿಸುವರು. ಐದು ಮಂದಿ ಮುತ್ತೈದೆಯರು ಸೇರಿಕೊಂಡು ಮದ್ಲಿಂಗಿತ್ತಿ ಕಾರ್ಯ ಮಾಡುವರು. ನಂತರ ಮುತ್ತೈದೆ ಮಹಿಳೆಯರು ಮತ್ತು ಗಂಡಿನ ಸಂಬಂಧಿಕರು ಸೇರಿಕೊಂಡು ನವ ದಂಪತಿಗಳಿಗೆ ಸುರಿಗೆ ಒಳಗಡೆಯಲ್ಲಿ ಕುಳ್ಳರಿಸುವರು. ಸುತ್ತುವರಿದ ಐದು ಎಳೆಗಳ ದಾರ ಇರುವುದು. ಅದರ ಒಳಗಡೆಯಲ್ಲಿ ಒಣಿಕೆ ಮೇಲೆ ಕೂಡಿಸಿ, ಮದ್ಲಿಂಗನಿಗೆ ಸ್ನಾನ ಮಡಿಸುತ್ತಾರೆ. ತಂದಿರುವ ಹೊಸ ಬಟ್ಟೆಗಳನ್ನು ಉಡಿಸಿ, ಗುಡಾರ ಹಂದರದ ಹೊರಗಡೆಯಲ್ಲಿ ಕೂಡಿಸುತ್ತಾರೆ. ಈ ಕಡೆ ಹೆಣ್ಣಿನ ಗುಡಾರದಲ್ಲಿ ಚಪ್ಪರ ಹಂದರ ಹೊರಗಡೆಯಲ್ಲಿ ಮದ್ಲಿಂಗಿತ್ತಿಯನ್ನು ಕರೆದುಕೊಂಡು ಸುರಿಗೆ ನೀರಿನಿಂದ ಸ್ನಾನ ಮಾಡಿಸುತ್ತಾರೆ. ಹೊಸ ಸೀರೆ, ಬಳೆ, ಚೈನವನ್ನು ಗಂಡಿನವರು ತಂದಿರುತ್ತಾರೆ. ಮುತ್ತೈದೆಯರು ಮದ್ಲಿಂಗಿತ್ತಿಯನ್ನು ಅಕ್ಕಿಕಾಳು ಶಾಸ್ತ್ರ ಮಾಡಲಾಗುವುದು. ನಂತರ ನೀರಿನಿಂದ ತಯಾರಿಸಿರುವ ಓಕಳಿಯನ್ನು ತೆಗದು ಹಾಕುವರು. ಹಾಗೂ ಐದು ಮಂದಿ ಮುತ್ತೈದೆಯರು ಕಳಸವನ್ನು ತೆಗೆಯುತ್ತಾರೆ. ಇದರ ಜೊತೆಯಲ್ಲಿ ಕುಂಕುಮ ನೀರಿನಿಂದ ಕಲಿಸಿರುವ ನೀರನ್ನು ನಿವಾಳಿಸಿ ಹಾಕಲಾಗುವುದು.

ಇದಾದ ನಂತರ ಮದುಮಗಳನ್ನು ಗಂಡಿನವರು ಗುಡಾರ ಹಂದರದಲ್ಲಿ ಕರೆ ತರುತ್ತಾರೆ. ಸೋದರಮಾವ ಹೆಣ್ಣನ್ನು ಎತ್ತಿಕೊಂಡು ಬರುವನು. ಅಲ್ಲಿ ಕುಲದ ವ್ಯಕ್ತಿಗಳು ಸಂಬಂಧಿಕರು ಇತರೆ ಜಾತಿಗಳವರು. ಮದುವೆಯಲ್ಲಿ ಸೇರಿಕೊಂಡಿರುತ್ತಾರೆ. ತಮ್ಮ ಕುಲದ ದೇವರುಗಳಾದ ಈರನಾಗಮ್ಮ ಮತ್ತು ಮುನಿಸ್ವಾಮಿ ದೇವರ ಎದುರಿಗೆ ನೆಲದ ಮೇಲೆ ಕಂಬಳಿಯನ್ನು ಹಾಸುತ್ತಾರೆ, ಕಂಬಳಿ ಸುತ್ತಲು ಪ್ರಮುಖ ಯಜಮಾನರುಗಳು ಕುಳಿತುಕೊಂಡು, ಅದರಲ್ಲಿ ಹಿರಿಯ ವ್ಯಕ್ತಿ ಹಾಗೂ ಆತನು ಹೆಂಡತಿ ಬುರ್ರ ಬುರ್ರ ವಾದ್ಯವನ್ನು ತಂದಿರುತ್ತಾಳೆ.

ಹಿರಿಯ ವ್ಯಕ್ತಿಯ ಕಂಬಳಿ ಮೇಲಗಡೆಯಲ್ಲಿ ೨ಸೇರು ಅಕ್ಕಿಯನ್ನು ಹಾಕುವನು. ಅಕ್ಕಿಯ ಮೇಲೆ ಎರಡು ಸೇರು ಅಡಿಕೆ, ನಾಲ್ಕು ಸೆಟ್ಟು ಎಲೆಗಳನ್ನು ಪದರಗಳ ರೀತಿಯಲ್ಲಿ ಜೋಡಿಸಲಾಗುವುದು. ಅದರ ಮುಂದುಗಡೆಯಲ್ಲಿ ಕಳಸ ಇರುವುದು.

ಅಕ್ಕಿಕಾಳುಶಾಸ್ತ್ರ : ಕಂಬಳಿ ಮೇಲೆ ಅಕ್ಕಿ ಹಾಗೂ ಎಲೆಗಳ ಎದುರಿನಲ್ಲಿ ಮದ್ಲಿಂಗ ಹಾಗೂ ಮದ್ಲಿಂಗಿತ್ತಿಯನ್ನು ಕೂಡಿಸಲಾಗುವುದು. ಮದ್ಲಿಂಗನಿಗೆ ಬಾಸಿಂಗವನ್ನು ತಲೆಗೆ ಕಟ್ಟಿರುತ್ತಾರೆ. ಹೊಸ ಬಟ್ಟೆಗಳನ್ನು ಹಾಕಿಕೊಂಡು ನಗುಮುಖದಲ್ಲಿ ಇರುವನು. ಹೆತ್ತ ತಂದೆತಾಯಿಗಳು ದುಃಖದಿಂದ ಇರುತ್ತಾರೆ. ಕುಲದ ಯಜಮಾನ ಹಾಗೂ ಆತನ ಹೆಂಡತಿ ಇರುತ್ತಾರೆ. ಕುಲದ ಯಜಮಾನನಿಗೆ ಪುರೋಹಿತ ಎಂದು ಕರೆಯುತ್ತಾರೆ. ಕುಲದ ಮುಖ್ಯಸ್ಥ ಮೊದಲ ಬಾರಿಗೆ ಹೆಣ್ಣಿನ ತಂದೆತಾಯಿಗಳನ್ನು ಕೇಳುತ್ತಾರೆ. ಪುರೋಹಿತ, ಮುಖ್ಯಸ್ಥ, ಪೂಜಾರಿ

ಪೂಜಾರಿ : ಏನಪ್ಪಾ, ನಿಮ್ಮ ಮಗಳನ್ನು ದ್ಯಾಮನ್ನರ ಹುಡಗನಿಗೆ ಒಪ್ಪಿಸುವುದೇ

ಹೆಣ್ಣಿನ ತಂದೆ-ತಾಯಿಗಳು : ತಂದೆ-ತಾಯಿ ದುಖದ ಮನಸ್ಸಿನಿಂದ ನಾವು ಒಪ್ಪಿಕೋಡಿದ್ದೇವೆ

[illegible]

ಪೂಜಾರಿ : 'ರಾವುಲೋಳ್ ಹುಡುಗಿ ದ್ಯಾವನ್ನರ ಕುಲಕ್ಕೆ ಹೋಗುವುದು' ಎಂದು ಜೋರಾಗಿ ಹೇಳುವನು. ಪಕ್ಕದಲ್ಲಿ ನಿಂತ ತನ್ನ ಮಡದಿ ಬುರ್ರ ಬುರ್ರ ವಾದ್ಯವೂ ಬಾರಿಸುತ್ತಾಳೆ. ತಾಳಿ ಕಟ್ಟುವ ಸಂದರ್ಬದಲ್ಲಿ ಕುಲದ ವ್ಯಕ್ತಿಗಳಿಗೆ ತಾಳಿಕಟ್ಟಲು ಅಪ್ಪಣೆ ನೀಡಿರಿ ಎಂದು ಕೇಳುತ್ತಾನೆ. ಹಾಗು ಕುಲದ ಸಂಬಂಧಿಕರುಗಳು ಒಪ್ಪಿಕೊಂಡೆವು ಎಂದು ಹೇಳುತ್ತಾರೆ. ಬುರ್ರ ಬುರ್ರ ವಾದ್ಯವನ್ನು ಅತ್ಯಂತ ತೀವ್ರಗತಿಯಲ್ಲಿ ಬಾರಿಸುತ್ತಿರುತ್ತಾರೆ. ಈ ಮದುವೆಯಲ್ಲಿ ಸನಾದಿ, ಬ್ಯಾಂಡುಗಳ ಸದ್ದಿರುವುದಿಲ್ಲ. ಇವರದೇ ಆದ ಈ ಬುರ್ರ ಬುರ್ರ ವಾದ್ಯ ಇರುವುದು. ನಂತರ ಸಮಯದಲ್ಲಿ ಪೂಜಾರಿ ಕೆಲವು ಹಿತ ನುಡಿಗಳನ್ನು ವಾದ್ಯದೊಂದಿಗೆ ಹೇಳುತ್ತಾನೆ.

ಪೂಜಾರಿ : ಮದ್ಲಿಂಗಪ್ಪ ಹುಡಗಿನ ಚೆನ್ನಾಗಿ ನೋಡಬೇಕು ಬೈಯ್ಯಬಾರದು, ಒಡೆಯಬಾರದು. ನೀನು ಹೆಂಡತಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಹುಡುಗಾ ಸಿನಿಮಾ, ಬೀಡಿ ಸೇದುವುದು, ನಾಟಕ ನೋಡುವುದು ಬಿಡಬೇಕು. ಕೆಟ್ಟವರ ಸಂಗವನ್ನು ಮಾಡಬಾರದು ಎಂದು ಹೇಳುತ್ತಾನೆ ಇದರ ಜೊತೆಯಲ್ಲಿ ಚೆನ್ನಾಗಿ ದುಡಿಯಬೇಕು, ಹೆಂಡತಿ ಮಕ್ಕಳು ತಂದೆ-ತಾಯಿಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು ತಿರಸ್ಕಾರ ಮಾಡಬಾರದು ಎಂದು ಹೇಳುತ್ತಾನೆ.

ಪೂಜಾರಿಯು ಮದ್ಲಿಂಗಿತಿಗೆ ಹೇಳುವ ಮಾತುಗಳು : ನೋಡವ್ವಾ ಗಂಡನ ಬಗ್ಗೆ ಮಕ ಕಟ್ಟಬೇಡಾ ಗಂಡನ ಹೆಸರು ಉಳಿಸು ಅತ್ತೆ ಮಾವನವರ ಒಳ್ಳೆಯ ಹೆಸರನ್ನು ತರಬೇಕು. ಗಂಡನನ್ನು ಮಕ್ಕಳನ್ನು ಚೆನ್ನಾಗಿ ಆರೈಕೆ ಮಾಡಬೇಕು. ಯಾರ ಮಾತೂ ಕೇಳಬಾರದು, ಯಾರ ಬಗ್ಗೆಯೂ ಹಗೆ ಇರಬಾರದು ಎಂದು ಹೇಳುತ್ತಾನೆ.

ಪೂಜಾರಿ ಹೇಳಿದ ಮಾತುಗಳ ನಂತರ ಗಂಡಿನ ಸಂಬಂಧಿಕರು ಹೆಣ್ಣಿಗೆ ತಾಳಿಯನ್ನು ಕಟ್ಟುವರು. ಈ ಸಮುದಾಯದಲ್ಲಿ ಗಂಡಿನ ಮೂಲಕ ತಾಳಿಯನ್ನು ಕಟ್ಟಿಸುವಂತಿಲ್ಲ. ಇತ್ತೀಚಿನ ದಿನಗಳಲ್ಲಿ ಈ ಸಂಪ್ರದಾಯವನ್ನು ತಿರಸ್ಕಾರ ಮಾಡಿದ ನಿದರ್ಶನಗಳಿವೆ. ವಕ್ತೃಗಳ ಪ್ರಕಾರ ನಮ್ಮ ಎರಡು ಮದುವೆಗಳಲ್ಲಿ ಗಂಡಿನ ಮೂಲಕ ತಾಳಿಯನ್ನು ಕಟ್ಟಿಸಲಾಯಿತು ಎಂದು ಹೇಳಿರುತ್ತಾರೆ. ಗಂಡು ಮತ್ತು ಹೆಣ್ಣಿನ ಎದುರಿಗೆ ಕಂಬಳಿ ಮೇಲೆ ಇಟ್ಟಿರುವ ಅಕ್ಕಿಗೆ ನಮಸ್ಕಾರ ಮಾಡಿ ಗಂಡಿನ ಗುಡಾರದ ಒಳಗಡೆಗೆ ಹೋಗುತ್ತಾರೆ. ನಂತರ ಹೊರಗಡೆಯಲ್ಲಿ ಗಂಡ-ಹೆಂಡತಿಯನ್ನು ಕುಂದಿರಿಸಿದಾಗ ಮುಯ್ಯಿ ಕಾರ್ಯವೂ ನಡೆಯುವುದು. ಕಂಬಳಿ ಮೇಲೆ ಅಡಿಕೆ ಮತ್ತು ಎಲೆಗಳನ್ನು ಬಂದಿರುವ ಸಂಬಂಧಿಕರಿಗೆಲ್ಲ ಹಂಚಲಾಗುವುದು. ಪೂಜಾರಿಗೆ ಕಿರುಕಾಣಿಕೆ ಹಾಗೂ ಸಾಯಂಕಾಲ ಸಮಯದಲ್ಲಿ ಸರಾಯಿಯನ್ನು ಕುಡಿಸುತ್ತಾರೆ.

ಮದುವೆ ಊಟ : ದುರುಗ ಮುರುಗಿ ಸಮುದಾಯದಲ್ಲಿ ಮದುವೆ ಊಟ ಸರಳವಾಗಿರುವುದು. ಅವರು ಹೆಚ್ಚಿನದಾಗಿ ಸಿಹಿ ಮತ್ತು ಮಾಂಸದ ಅಡಿಗೆಯನ್ನು ಬೃಹತ್ ಪ್ರಮಾಣದಲ್ಲಿ ಮಾಡುವಂತಿಲ್ಲ. ಬಂದಿರುವ ನೆಂಟರಿಗೆ ಪಾಯಸ, ಅನ್ನ, ತಿಳಿಸಾರು, ಬದನೆಕಾಯಿ ಪಲ್ಲೆ ಮಾಡಲಾಗುವುದು. ಮದುವೆ ಮುಗಿದ ನಂತರ ಸಮುದಾಯದ ಹಿರಿಯ ವ್ಯಕ್ತಿಗಳು ಸರಾಯಿ ಕುಡಿದುಕೊಂಡು ಬಂದಿರುವುದರಿಂದ ಬದನೆಕಾಯಿ ಪಲ್ಲೆ ತುಂಬಾ ಇಷ್ಟವಾಗುವುದು ಎಂದು ಹೇಳುತ್ತಾರೆ. ಸಾಯಂಕಾಲ ಸಮಯದಲ್ಲಿ ಬಂದಿರುವ ಸಂಬಂಧಿಕರಿಗೆ

ಇದೇ ಊಟವನ್ನು ಬಡಿಸುತ್ತಾರೆ. ಅಂದಿನ ದಿನದಲ್ಲಿ ಸಂತೋಷದಿಂದ ಇರುತ್ತಾರೆ. ಮರುದಿನ ಬೆಳಿಗ್ಗೆ ಮದ್ಲಿಂಗ ಮತ್ತು ಮದ್ಲಿಂಗಿತ್ತಿಯನ್ನು ಕೂಡಿಸುವ ಕಾರ್ಯವೂ ಇರುವುದು. ಐದು ಮಂದಿ ಮುತ್ತೈದೆಯರು ಅಕ್ಕಿ ಕಾಳನ್ನು ಮದ್ಲಿಂಗಿತ್ತಿಗೆ ಉಡಕ್ಕಿಯನ್ನು ತುಂಬಿ. ಮದ್ಲಿಂಗಿತ್ತಿ ಹಾಗೂ ಮದ್ಲಿಂಗಪ್ಪನಿಗೆ ಕಳಸವನ್ನು ಬೆಳಗುತ್ತಾರೆ. ಇನ್ನು ಬಂಧು-ಬಳಗದವರು ನಾವು ಊರಿಗೆ ಹೋಗುತ್ತೇವೆ ಎಂದು ಹೇಳುತ್ತಾರೆ. ಆದರೆ ಗಂಡಿನ ಸಂಬಂಧಿಕರು ಬೇಡ ಅನ್ನುತ್ತಾರೆ. ನೀವು ಮಾಂಸದ ಊಟವನ್ನು ಮುಗಿಸಿಕೊಂಡು ಹೋಗಿರಿ ಎಂದು ಹೇಳುತ್ತಾರೆ. ಮಾರುಕಟ್ಟೆಯಿಂದ ಕುರಿಮಾಂಸ ತಂದು ಊಟ ಮಾಡಿಸುತ್ತಾರೆ. ಹಿರಿಯ ವ್ಯಕ್ತಿಗಳು ಸರಾಯಿ ಕುಡಿದು, ಬುರ್ರ ಬುರ್ರ ವಾದ್ಯದೊಂದಿಗೆ ಕುಣಿಯುತ್ತಾರೆ. ಮಾರನೇ ದಿನವೇ ಸಂಬಂಧಿಕರ ಊರಿಗೆ ಪ್ರಯಾಣ ಬೆಳೆಸುತ್ತಾರೆ.

ಸೋಬನ ಕಾರ್ಯಕ್ರಮ : ದುರುಗ ಮುರುಗಿ ಸಮುದಾಯದಲ್ಲಿ ಬಾಲ್ಯವಿವಾಹ ಮಾಡಿಕೊಂಡ ಚಿಕ್ಕ ವಯಸ್ಸಿನ ಮಹಿಳೆಗೆ ಸೋಬನ ಕಾರ್ಯವೂ ಮಾಡುವಂತಿಲ್ಲ. ಹುಡುಗಿ ಋತುಮತಿಯಾದಾಗ, ಗಂಡಿನವರಿಗೆ ವಿಷಯವನ್ನು ತಿಳಿಸುತ್ತಾರೆ. ಗಂಡಿನ ಸಂಬಂಧಿಕರು ಮತ್ತು ಮುತ್ತೈದೆಯರು ಮಹಿಳೆಯನ್ನು ಕರೆದುಕೊಂಡು ಬರುವರು. ದೊಡ್ಡವಳಾದ ಹೆಣ್ಣನ್ನು ಚೆನ್ನಾಗಿ ಹಾರೈಕೆಯನ್ನು ಮಾಡಿಸುವರು. ಮದುವೆಯಾದ ಮದ್ಲಿಂಗ ನಗುಮುಖದಲ್ಲಿ ಇರುವನು. ಆ ದಿನ ಸಾಯಂಕಾಲ ಸಮಯದಲ್ಲಿ ದೊಡ್ಡವಳು ಮತ್ತು ಮದ್ಲಿಂಗನನ್ನು ಕುಂದಿರಿಸಿ ಕಾರ್ಯವೂ ನಡೆಸಲಾಗುವುದು. ಬಂದಿರುವ ಜನಗಳಿಗೆ ಎಲೆಗಳನ್ನು ಹಂಚಲಾಗುವುದು. ಈ ಸಮುದಾಯದಲ್ಲಿ ಮದುವೆಯಾದ ಐದನೇ ದಿನದಲ್ಲಿ ಅಥವಾ ಒಂಬತ್ತನೇ ದಿನದಲ್ಲಾಗಲಿ ಸೋಬನ ಕಾರ್ಯವು ನಡೆಯುತ್ತದೆ.

ಬೆಡಗುಗಳು ದುರುಗಮುರಗಿಯರ ನೆಲೆಗಳ ವಾರಿನ ಕುಟುಂಬಗಳ ಸಂಕ್ಯೆ ೧೦೮ ಇದ್ದು, ಪೆದ್ದ ದ್ಯಾಮನೋಳು ೨೦, ದ್ಯಾಮನೂರು ೧೦, ರಾವುಲೋಳ್ ೪೨, ಸಿಂಧ್ಯಾಲೋಳ್ ೨೭, ಮಂಡಲೋರ್ ೯ ಕುಟುಂಬಗಳು ಈ ಜಿಲ್ಲೆಯಲ್ಲಿ ಕಂಡು ಬರುವವು. (ಕೋಷ್ಟಕ ೭ ರಲ್ಲಿ ನೋಡಬಹುದು)

ಶವ ಸಂಸ್ಕಾರ

ದುರುಗಮುರಗಿ ಸಮುದಾಯದಲ್ಲಿ ದೇವಿಯನ್ನು ಹೊತ್ತು ತಿರುಗುತ್ತಾ ದೇವಿಯ ಮಹಿಮೆಯ ಗುಣಗಾನ ಮಾಡುತ್ತಾ ಊರಿಂದೂರಿಗೆ ಅಲೆಯುವ ದುರುಗಮುರಗಿಯರು ಅಲೆಮಾರಿ ಸಮುದಾಯರಾಗಿದ್ದಾರೆ. ಇವರು ಒಂದು ಕಡೆಯಲ್ಲಿ ವಾಸಿಸುತ್ತಾ ಅ ಸಮುದಾಯದಲ್ಲಿ ಯಾರೇ ಆಗಲಿ ಮರಣ ಹೊಂದಿದರೆ ಅಲ್ಲಿ ಅಂತ್ಯ ಸಂಸ್ಕಾರ ಮಾಡುವರು. ಒಬ್ಬ ವ್ಯಕ್ತಿ ಇನ್ನೇನು ಸಾಯುತ್ತಾನೆ ಎಂಬುದು ಖಚಿತವಾದಾಗ ಆ ಕುಟುಂಬದವರು ಸಾವಿಗೆ ಮುಂಚಿತವಾಗಿ ಗಂಡುಮಕ್ಕಳು ಮತ್ತು ಮತ್ತಿತರ ಸಂಬಂಧಿಕರು ಬಾಯಿಗೆ ನೀರು ಹೊಯ್ಯುತ್ತಾರೆ. ಸಾವಿನ ಸುದ್ದಿಯನ್ನು ರಕ್ತ ಸಂಬಂಧಿಗಳಿಗೂ ಸಮುದಾಯ ಜನರಿಗೂ ತಿಳಿಸಲಾಗುವುದು. ಸುದ್ದಿ ತಿಳಿಸಲು ಅವರೇ ಹೋಗುವರು.

ಮನುಷ್ಯ ಸತ್ತ ನಂತರ ಅವನ ಹೆಣವನ್ನು ನೆಲದ ಮೇಲೆ ಒಂದು ಹರಕು ಚಾಪೆಯ ಮೇಲೆ ಅಥವಾ ಹರಕು ಗೋಣಿ ಚೀಲದ ಮೇಲೆಯೋ, ಕೌದಿಯ ಮೇಲೆಯೋ ಉದ್ದಕ್ಕೆ ಮಲಗಿಸುತ್ತಾರೆ. ಹೆಣದ ಎರಡು ಕೈಗಳನ್ನು ಎದೆಯ ಮೇಲೆ ತಂದು ಜೋಡಿಸುತ್ತಾರೆ. ರಾತ್ರಿಯಲ್ಲಿ ಹೆಣವನ್ನು ಮನೆಯಲ್ಲಿಯೇ ಇಟ್ಟುಕೊಳ್ಳುವಂಥ ಸಂದರ್ಭದಲ್ಲಿ ಹೆಣದ ಹೊಟ್ಟೆ ಅಥವಾ ಎದೆಯ ಮೇಲೆ ಕುಡಗೋಲು, ಕಬ್ಬಿಣದ ಒಂದು ವಸ್ತುವನ್ನು ಇಡುತ್ತಾರೆ. ಹೀಗೆ ಕಬ್ಬಿಣದ ಹರಿತವಾದ ಆಯುಧವನ್ನು ಹೊಟ್ಟೆಯ ಮೇಲಿಟ್ಟರೆ ಹೆಣ ದೆವ್ವ ಆಗುವುದಿಲ್ಲವೆಂಬ ನಂಬಿಕೆ ಅವರಲ್ಲಿದೆ.

ಸುಡುಗಾಡಿಗೆ ಒಯ್ಯುವ ಮುನ್ನ ಹೆಣಕ್ಕೆ ಮೈತೊಳಸಿ ಹೊಸ ಬಟ್ಟೆ ಉಡಿಸುತ್ತಾರೆ. ಶವದ ತಲೆಯ ಹತ್ತಿರ ತೆಂಗಿನ ಕಾಯಿ ಒಡೆದು ಇರಿಸಲಾಗುವುದು. ಸತ್ತವರ ಶವದ ಮೇಲೆ ಹೂವು, ಗಂಧದ ಕಡ್ಡಿ ಹಚ್ಚಲಾಗುವುದು. ಪಕ್ಕದಲ್ಲಿ ಹೆಂಡತಿಯನ್ನು ಕೂಡಿಸಲಾಗುವುದು. ಬಂದವರು ಎಲೆ ಕೊಡುವಾಗ ಅವರು ವಿಧವೆಗೆ 'ಉಡಿ' ತುಂಬುವರು. ಮಹಿಳೆ ಮರಣ ಹೊಂದಿದ್ದರೆ ಒಂದು ಕೆಂಪು ಸೀರೆ ಉಡಸಿ ಎದೆಗೆ ಸೆರಗು ಹೊದಿಸುತ್ತಾರೆ. ಗಂಡಾಗಿದ್ದರೆ ಧೋತಿ ಉಡಿಸುತ್ತಾರೆ. ಶವದ ಮೇಲೆ ಬಿಳಿ ಬಟ್ಟೆಯನ್ನು ಹೊದಿಸಿ ಅದರ ಮೇಲೆ ಕುಂಕುಮ, ಹೂವಗಳನ್ನು ಅಲಂಕರಿಸುತ್ತಾರೆ. ನಂತರ ಕಟ್ಟಿಗೆಯ ಸಿದಿಗೆ ತೆಂಗಿನ ನಾರಿನಿಂದಾಗಲಿ ಅಥವಾ ಕತ್ತಾಳೆ ನಾರಿನಿಂದ ಹೆಣ ಬಿಗಿದು ಕಟ್ಟುತ್ತಾರೆ. ಸತ್ತವರು ಮದುವೆಯಾಗದಿದ್ದರೆ ಅವರ ಹೆಣವನ್ನು ಒಂದು ಕೋಲುನಿಂದಾಗಲಿ ಅಥವಾ ಚಾಪೆಯ ಮೂಲಕ ಸುಳಿಸುತ್ತಿಕೊಂಡು ಸುಡುಗಾಡಿಗೆ ಒಯ್ಯುತ್ತಾರೆ. ಇಂತಹ ವ್ಯಕ್ತಿಗಳಿಗೆ ಮೋಕ್ಷ ಕಾರ್ಯಕ್ರಮ ಮಾಡುವುದಿಲ್ಲ.

ಹೆಣವನ್ನು ಸುಡುಗಾಡಿಗೆ ಒಯ್ಯುವಾಗ ಇವರು ಅದನ್ನು ಮೆರವಣಿಗೆಯಂತೆ ಒಯ್ಯುವುದಿಲ್ಲ. ತಮ್ಮ ಬುರ್‍ರ ಬುರ್‍ರ ವಾದ್ಯವನ್ನು ಬಾರಿಸುವುದಿಲ್ಲ. ಮಡಕೆಯಲ್ಲಿ ಮಾಡಿದ ಅನ್ನ ನೀರನ್ನು ಒಂದು ಮುಚ್ಚಳದಲ್ಲಿ ಹಾಕಿ ಹೆಣದ ಮುಂದೆ ಹಿರಿಯ ಮಗನನ್ನಾಗಲಿ ಅಥವಾ ಕಿರಿಯ ಮಗನನಾ ಕೈಲಿ ಮಡಕೆಯನ್ನು ಕೊಡಲಾಗುವುದು. ಹೆಣದ ಚಟ್ಟವನ್ನು ನಾಲ್ಕು ಮಂದಿ ಹೊತ್ತುಕೊಂಡು ಹೋಗುತ್ತಾರೆ. (ಸತ್ತ ವ್ಯಕ್ತಿಯ ಮಕ್ಕಳು: ಸತ್ತ ವ್ಯಕ್ತಿಗೆ ಮಕ್ಕಳಿಲ್ಲದಿದ್ದರೆ ಅವನ ಸಮೀಪ ಸಂಬಂಧಿಗಳಿಬ್ಬರು ಚಟ್ಟವನ್ನು ಹೊರುತ್ತಾರೆ) ಸತ್ತ ವ್ಯಕ್ತಿಯ ಹೆಂಡತಿಯು ಶವದ ಹಿಂದೆ ಇರುತ್ತಾಳೆ. ಶವವನ್ನು ಹೊತ್ತು ತಂದವರು ಗುಂಡಿಯ ಒಳಗಡೆಯೂ ಶವ ಇಡುವರು. ಶವದ ಮುಂದೆ ಬಂದಿರುವ ಹಿರಿಯಮಗ ಅನ್ನ ನೀರು ತುಂಬಿದ ಮಡಕೆಯೊಂದಿಗೆ ಗುಂಡಿಯನ್ನು ಸುತ್ತುತ್ತಾನೆ. ಮೂರನೇ ಸುತ್ತಿನ ನಂತರ ಒಂದು ಕಬ್ಬಿಣದ ಪಿಕಾಸಿಯಿಂದ ಗಡಿಗೆಯ ತಳಭಾಗದಲ್ಲಿ ರಂಧ್ರ ಮಾಡುತ್ತಾರೆ. ಈ ಅನ್ನದ ನೀರು ಯಾರಿಗಾಗಲಿ ಮೈಮೇಲೆ ಚೆಲ್ಲಿದರೆ ಅದಕ್ಕೆ ದಂಡ ಕಟ್ಟಬೇಕು.

ಎಲ್ಲಾ ಸಮುದಾಯವರಂತೆ ಇವರೂ ಸಹ ಹೆಣವನ್ನು ಹೂಳುತ್ತಾರೆ. ಶವವನ್ನು ಸಂಪೂರ್ಣವಾಗಿ ಬತ್ತಲೆ ಮಾಡಿ, ಅದರ ತಲೆ ಪೂರ್ವಕ್ಕೂ, ಕಾಲುಗಳು ಪಶ್ಚಿಮಕ್ಕೆ ಇಡಲಾಗುವುದು. ಅಲ್ಲಿಗೆ ಬಂದಿರುವ

ಸಮುದಾಯದ ಜನರೆಲ್ಲರೂ ಶವದ ಮೇಲೆ ಒಂದೊಂದು ಹಿಡಿ ಮಣ್ಣನ್ನು ಹಾಕುತ್ತಾರೆ. ಆನಂತರ ಸಲಿಕೆಯಿಂದ ಗುಂಡಿಯನ್ನು ಸಂಪೂರ್ಣವಾಗಿ ಮುಚ್ಚುತ್ತಾರೆ. ನಂತರ ಸಂಬಂಧಿಕರೆಲ್ಲಾ ಅದಕ್ಕೆ ನಮಸ್ಕರಿಸುತ್ತಾರೆ. ಹೆಣದ ಮಣ್ಣಿನ ಮೇಲೆ ಲಕ್ಕಿ ತೊಪ್ಪಲು ಹಾಕಿ ಮೇಲೆ ಕಲ್ಲಿಟ್ಟು ಮುಚ್ಚುತ್ತಾರೆ. ಅದರ ಮೇಲೆ ಮಣ್ಣು ಹಾಕಲಾಗುವುದು. ಕುಣಿಯಲ್ಲಿ ಮಲಗಿಸುವಾಗ ಹೆಣದ ಮೈ ಮೇಲಿನ ಹೊಸಬಟ್ಟೆ ಬಿಚ್ಚಿ ಒಂದಿಷ್ಟು ಬಟ್ಟೆಯನ್ನು ಅದರ ಮೈಗೆ ಸುತ್ತುತ್ತಾರೆ. ಸೀರೆ ಧೋತ್ರಗಳನ್ನು ಸಂಬಂಧಿಕರು ತೆಗೆದುಕೊಳ್ಳುತ್ತಾರೆ. ಬಡತನವೇ ಇದಕ್ಕೆ ಕಾರಣವಾಗಿರಬಹುದು. ಹೆಣಕ್ಕೆ ಹೊಸ ಸೀರೆ ಉಡಿಸಿ ಮಣ್ಣಿನಲ್ಲಿ ಹೂಳುವುದು ವ್ಯರ್ಥವೆಂದು ಅದೇ ಸೀರೆ ಉಳಿದವರಿಗೆ ಉಟ್ಟುಕೊಳ್ಳಲು ಬರುತ್ತದೆ ಎಂದೂ ಇರಬಹುದು.

ಗಂಡ ಸತ್ತ ಹೆಂಡತಿಯ ಬಳೆಗಳು, ಮೂಗತಿಯನ್ನು ತೆಗೆಯಲಾಗುವುದು. ಆ ಮಹಿಳೆಗೆ ವಿಧವೆ ಎಂದು ಕರೆಯಲಾಗುವುದು. ಹರೆಯದಲ್ಲಿಯೇ ಗಂಡ ತೀರಿಕೊಂಡರೆ ಹೆಣ್ಣಿಗೆ ಮತ್ತೊಂದು ಮದುವೆ ಮಾಡುವ ಪದ್ಧತಿ ಇವರಲ್ಲಿದೆ. ಮಕ್ಕಳು ಹೆಚ್ಚಿಗೆ ಇದ್ದು ವಯಸ್ಸು ತೀರುತ್ತಾ ಬಂದಿದ್ದರೆ ;ಮರು ಮದುವೆಗೆ ಸ್ವತಹ ಹೆಣ್ಣು ಒಪ್ಪುವುದಿಲ್ಲ. ಮೊದಲ ತಾಳಿ ಸುಡುಗಾಡಿಗೆ ಬಿಟ್ಟ ಮೇಲೆ ಮತ್ತೊಂದು ಮದುವೆ ಯಾಕೆ? ಎಂದು ಹೆಣ್ಣು ಪ್ರಶ್ನಿಸುವುದುಂಟು. ಆದರೂ ಹರೆಯದ ಹೆಣ್ಣು ಗಂಡನನ್ನು ಕಳೆದುಕೊಂಡರೆ ಮತ್ತೊಂದು ಮದುವೆ ಮಾಡಿಕೊಳ್ಳುವ ಅವಕಾಶವಿರುವುದು ಗಮನಾರ್ಹ. ಎರಡನೇ ಮದುವೆ ಮಾತ್ರ ಮೊದಲನೆಯ ಮದುವೆಯಂತೆ ವಿಜೃಂಭಣೆಯಿಂದ ರಾಜಾರೋಷವಾಗಿ ನಡೆಯುವುದಿಲ್ಲ. ರಾತ್ರಿ ಉಡುಕಿ ಮದುವೆ ಮಾಡುವರು.

ಮಾರನೇ ದಿನ ತಮ್ಮ ಗುಡಾರಗಳಲ್ಲಿ ಸಗಣಿ ನೀರಿನಿಂದ ಸಾರಿಸುತ್ತಾರೆ. ನಂತರ ಸಮಯದಲ್ಲಿ ಕುಲ ಸಮುದಾಯ ಜನರುಗಳು ಸೇರಿಕೊಂಡು ಒಂದು ಕೋಳಿಯನ್ನು ತಂದು ಮಡಿಕೆಯಲ್ಲಿ ಸಾಂಬಾರು (ಸಾರು) ಮಾಡಿಕೊಂಡು ಎಲೆಯಲ್ಲಿ ತೆಗೆದುಕೊಂಡು ಬಳಿಗೆ ಹೋದಾಗ ಸಮುದಾಯದವರೆಲ್ಲ ಅವರ ಹಿಂದೆಯೇ ಹೋಗುತ್ತಾರೆ. ಸಮಾಧಿ ಇನ್ನು ಸ್ವಲ್ಪ ದೂರವಿದೆ ಎನ್ನುವಾಗ ಎಲೆಯಲ್ಲಿದ್ದ ಕೋಳಿ ಸಾರನ್ನು ಸಮಾಧಿ ಮೇಲೆ ಇಡುತ್ತಾರೆ. ತೆಂಗಿನಕಾಯಿ ಒಡೆದು, ಊದುಬತ್ತಿಯನ್ನು ಹಚ್ಚಿ ಅದಕ್ಕೆ ಪೂಜೆ ಮಾಡುತ್ತಾರೆ. ಆನಂತರ ಅವರ ಹಿಂದೆ ಬಂದವರು ಒಬ್ಬೊಬ್ಬರು ಒಂದೊಂದು ಗೇಣಿನಷ್ಟು ದೂರ ನಿಂತು ಪೂಜೆ ಮಾಡಿ ಕೈಮುಗಿಯುತ್ತಾರೆ. ಎಲ್ಲರೂ ಮರದ ಕೆಳಗಾಗಲಿ ಅಥವಾ ಪೊದೆಯ ಒಳಗಾಗಲಿ ಸ್ವಲ್ಪ ಹೊತ್ತು ಅಲ್ಲಿಯೇ ನಿಂತಿರುತ್ತಾರೆ. ಆ ಸಮಯದಲ್ಲಿ ಕಾಗೆ ಬಂದು ಕೋಳಿ ಸಾರನ್ನು ಮುಟ್ಟಿದರೆ ಸತ್ತ ವ್ಯಕ್ತಿ ಒಳ್ಳೆಯವನೆಂದು ನಂಬುತ್ತಾರೆ. ಬೇಗನೆ ಮುಟ್ಟಿದರೆ ಪುಣ್ಯವಂತ ಎಂದು ಹೇಳುತ್ತಾರೆ. ನಾಯಿ ಮುಟ್ಟಿದರೆ ಮಲ್ಲಯ್ಯಸ್ವಾಮಿ ಸ್ಥಾನ ಪಡೆದ ಎಂದು, ಹಂದಿಮುಟ್ಟಿದರೆ ಕೆಟ್ಟದು, ದೆವ್ವ ಆಗುವುದು ಎಂಬ ನಂಬಿಕೆ ಕಂಡುಬರುವುದು. ಆನಂತರ ಎಲ್ಲರೂ ಹಿಂತಿರುಗಿ ಬರುತ್ತಾರೆ.

ಸತ್ತವನಿಗೆ ಆತ ಸತ್ತ ಒಂಬತ್ತನೇ ದಿವಸವಾಗಲಿ ಇಲ್ಲವೆ, ಹನ್ನೊಂದನೆ ದಿನಕ್ಕೆ ಈ ಕಾರ್ಯಕ್ರಮವನ್ನು ಆಚರಿಸುವ ಪದ್ಧತಿ ಇದೆ. ಸತ್ತ ದಿನ ಇದ್ದ ದುಃಖ ಒಂದೆರಡು ದಿನಗಳಲ್ಲಿ ಬಹಳ ಕಡಿಮೆಯಾಗಿರುತ್ತದೆ.

ಮತ್ತೆ ಅಷ್ಟೇ ದುಃಖವು ತಿಥಿಯ ದಿನದಲ್ಲಿ ಮರುಕಳಿಸುತ್ತದೆ. ಈ ಕಾರ್ಯಕ್ರಮಕ್ಕೆ ಸಾಮಾನ್ಯವಾಗಿ ಸಮುದಾಯದಲ್ಲಿ ದೊಡ್ಡಕಾರ್ಯ ಮತ್ತು ತಿಥಿಕಾರ್ಯ ಎಂದು ಹೇಳುವ ಪದ್ಧತಿ ಇದೆ. ಸತ್ತವನ ಮನೆಯಲ್ಲಿ ಜನರು ತಮ್ಮ ದೊಡ್ಡಕಾರ್ಯಕ್ಕೆ ಸೌದೆ ಸೀಳುವುದು, ಕಿರಾಣಿ ಸಾಮಾನುಗಳನ್ನು ಸಾಂಬಾರು ಪದಾರ್ಥಗಳನ್ನು, ಹೊಸಗಡಿಗೆಯನ್ನು ಸಂತೆ ಮಾರುಕಟ್ಟೆಯಲ್ಲಿ ತರುವ ಮುಂತಾದ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ದೊಡ್ಡ ಕಾರ್ಯವು ದಿನದಲ್ಲಿ ನೆಂಟರಿಷ್ಟರು ಬರುವಂತೆ ಸುದ್ದಿ ಮುಟ್ಟಿಸಿ ಬರುವಂತೆ ಒಬ್ಬನನ್ನು ಅದಕ್ಕಾಗಿ ಕಳಿಹಿಸುತ್ತಾರೆ. ಕೆಲವರು ತಿಥಿ ಮಾಡುವವರ ಮನೆಯ ಹತ್ತಿರದಿಂದ ಸುಡುಗಾಡಿಗೆ ಹೊರಡಲು ಬರುತ್ತಾರೆ. ಮತ್ತೇ ಕೆಲವರು ತಡವಾಗಿ ಬಂದರೆ ನೇರವಾಗಿ ಸುಡುಗಾಡಿಗೆ ಬಂದು ಬಿಡುತ್ತಾರೆ.

ದೊಡ್ಡಕಾರ್ಯಗಳಲ್ಲಿ ಐದು ಸಾವಿರ ಅಥವಾ ಆರುಸಾವಿರ ರೂಪಾಯಿಗಳ ಖರ್ಚು ಬರಬಹುದು. ಅಂದಿನ ದಿನದಲ್ಲಿ ಗುಡಾರ ಮತ್ತು ಸಮಾಧಿ ಬಳಿಯಲ್ಲಿ ಸಗಣಿ ನೀರಿನಿಂದ ಸಾರಿಸುತ್ತಾರೆ. ಬಂದ ಬೀಗರಿಗೆ ಅಡಿಗೆಗಳು ಎರಡು ತರಹ ಮಾಡಿಸುವರು. ಒಂದು ಮಾಂಸದ ಊಟ ಇನ್ನೊಂದು ಸಿಹಿ ಊಟ. ಹೆಣವನ್ನು ಹೊತ್ತುಕೊಂಡಿರುವ ನಾಲ್ಕುವ್ಯಕ್ತಿಗಳಿಗೆ ಎಣ್ಣೆ ಸ್ನಾನವನ್ನು ಸತ್ತ ಸಂಬಂಧಿಕರು ಸ್ನಾನ ಮಾಡಿಸಬೇಕು ಮಾರುಕಟ್ಟೆಯಿಂದ ಹೊಸ ಮಡಿಕೆಗಳು ಅದರ ಮುಚ್ಚಳವನ್ನು ತರುವರು. ಈ ಸಂದರ್ಭದಲ್ಲಿ ಯಥೇಚ್ಛವಾಗಿ ಸರಾಯಿ ಹೆಂಡ ಕುಡಿದು ಬರುವರು.

ಅಂದು ಸಾಯಂಕಾಲ ರತಿ ಕಾರ್ಯಕ್ರಮ ನಡೆಸಲಾಗುವುದು. ಸಮಾಧಿಯ ಬಳಿಯಲ್ಲಿ ನೆಲಕ್ಕೆ ಸೆಗಣಿ ನೀರಿನಿಂದ ಸಾರಿಸುವುದು. ಸತ್ತ ವ್ಯಕ್ತಿಯ ಹಿರಿಯಮಗನಾಗಲಿ ಅಥವಾ ಕಿರಿಯ ಮಗನಾಗಲಿ ಸಮಾಧಿ ಬಳಿಗೆ ಹಣ್ಣು ಕಾಯಿ ತೆಗೆದುಕೊಂಡು ಹೋಗುತ್ತಾರೆ. ಜೊತೆಯಲ್ಲಿ ಹೊಸಗಡಿಗೆಯನ್ನು ತೆಗೆದುಕೊಂಡು ಹೋಗುತ್ತಾರೆ. ಅವರೊಡನೆಯೇ ಸಮುದಾಯ ಜನರೆಲ್ಲಾ ಹೋಗುತ್ತಾರೆ. ಮೃತನಾಗಿರುವವನು ಹೊಂದಿರುವ ಮೊದಲನೇ ಮಗನಾಗಲಿ ಕಿರಿಯ ಮಗನಾಗಲಿ ಅಥವಾ ಹೆಂಡತಿಯಾಗಲಿ ಹೊಸಗಡಿಗೆಯನ್ನು ತೆಗೆದುಕೊಂಡು ಗಂಗಾಸ್ನಾನಕ್ಕೆ (ಹರಿಯುವ ನೀರಿನ ಹೊಳೆ) ನೀರು ತುಂಬಿಕೊಂಡು ಬರುವರು. ಸಮಾಧಿಯ ಹತ್ತಿರ ಬಂದಾಗ ಸಮುದಾಯ ಜನರು ಹುಚ್ಚರಂತೆ ಬೊಗಳುವರು.

ಹಿರಿಯ ಮುಖಂಡ : ತಮ್ಮ ಇಷ್ಟದೇವರನ್ನು ಬೇಡಿಕೊಳ್ಳುವದು. ಈರನಾಗಮ್ಮ ಮುನಿಸ್ವಾಮಿ ನೀನು ಮನೆಯಲ್ಲಿ ದೇವರ ಆಗಬೇಕು ಯಾರ ಹತ್ತಿರ ದೆವ್ವವಾಗಿ ಹೋಗಬಾರದು. ಈ ರೀತಿಯ ಅಂಶಗಳು ಹೇಳುವುದು ನಂತರ ಸಮಾಧಿ ಬಳಿಯಲ್ಲಿದ್ದ ಗಡಿಗೆಯನ್ನು ತಲೆಯ ಮೇಲೆ ಹೊತ್ತುಕೊಂಡು ಬರುವಾಗ ತಮ್ಮ ಬುರ್ರ ಬುರ್ರ ವಾದ್ಯವನ್ನ ಬಾರಿಸುತ್ತಾ ನೃತ್ಯ ಮಾಡಿಕೊಂಡು ಬರುವರು.

ಗಂಗಾ ಸ್ನಾನ ಹತ್ತಿರ ಬಂದಾಗ ಮುಚ್ಚಳದ ಮೇಲೊಂದು ಪಾವು ಅನ್ನ ಮಾಡಿಕೊಂಡು ಬಂದಿರುವರು. ಅನ್ನದ ಮೇಲೆ ದೀಪದ ಹಣತೆಯನ್ನು ಗಂಗಾಸ್ನಾನದಲ್ಲಿ ಬಿಡಲಾಗುವುದು. ದೀಪವು ಗಂಗಾ ಸ್ನಾನದಲ್ಲಿ ಆರಬಾರದು. ಅದು ಮುಂದೆ ಸಾಗುತ್ತಾ ಹೋದಂತೆ ಸತ್ತ ವ್ಯಕ್ತಿಯು ದೇವರು ಆಗಿರುವನು ಎಂದು

ಭಾವಿಸಿಕೊಳ್ಳುವರು. ದೀಪ ಆರಿದರೆ ದೆವ್ವ ಆಗುತ್ತಾನೆ ಎಂಬ ಭ್ರಮೆಯನ್ನು ಇಟ್ಟುಕೊಂಡಿರುವರು. ಬರುವಾಗ ಗಡಿಗೆಯಲ್ಲಿ ನೀರು ತುಂಬಿಕೊಂಡು ಗುಡಾರದ ಹತ್ತಿರ ಬರುತ್ತಾರೆ. ಸಮುದಾಯದ ವ್ಯಕ್ತಿಗಳು ಸತ್ತಿರುವ ವ್ಯಕ್ತಿಯ ಮೇಲೆ ಹೊಸ ಗಡಿಗೆಯಲ್ಲಿ ಕಾಣಿಕೆಯನ್ನು ಸ್ವೀಕರಿಸಿಕೊಳ್ಳುವರು. ನಂತರ ದಿನಗಳಲ್ಲಿ ಸತ್ತ ವ್ಯಕ್ತಿಯ ಹೆಸರಿನಲ್ಲಿ ಒಂದು ಬೇಟೆಯನ್ನು ಬಿಡಲಾಗುವುದು. ಸತ್ತ ವ್ಯಕ್ತಿಯ ಸಂಬಂಧಿಕರು ಮುಂದೆ ನಿಂತು ಆ ಕುರಿಯ ವರವನ್ನು ಕೇಳಿದಾಗ ಅದರ ಉತ್ತರ ಕುರಿ ತಲೆಯನ್ನು ಅಲ್ಲಾಡಿಸಿದರೆ ಸತ್ತ ವ್ಯಕ್ತಿಯು ದೇವರು ಆಗಿರುವನು ಎಂಬ ನಂಬಿಕೆಯು ಇವರಲ್ಲಿದೆ. ಒಂದು ಬಾರಿ ಕುರಿ ವರವನ್ನು ಕೊಡಲಿಲ್ಲವೆಂದು ತಿಳಿದುಕೊಳ್ಳೋಣ. ಆ ವ್ಯಕ್ತಿ ದೆವ್ವ ಆಗಿರುವುದು ಎಂಬ ನಂಬಿಕೆ. ಒಟ್ಟಿನಲ್ಲಿ ಮರಣ ಹೊಂದಿದ ವ್ಯಕ್ತಿ ಮೇಲೆ ಕುರಿಯ ಬಲಿಯನ್ನು ಕೊಡುತ್ತಾರೆ. ಕುರಿಯ ಬಲಿ ಕೊಟ್ಟ ನಂತರ ತಂದಿರುವ ಹೊಸಗಡಿಗೆಯ ಮುಂದೆ ಕುರಿ ಕತ್ತರಿಸಿ ತಲೆ ಮತ್ತು ಕಾಲುಗಳನ್ನು ಇಡಲಾಗುವುದು. ಇಲ್ಲಿನ ವಿಶಿಷ್ಟವೆಂದರೆ ಕುರಿ ಕರುಳ ಸಾರನ್ನು ದೇವರಿಗೆ ಎಡೆಯನ್ನು ಹಾಕಲಾಗುವುದು. ಉಳಿದ ಮಾಂಸವನ್ನು ಅಡಿಗೆ ಮಾಡಲಾಗುವುದು. ರಾತ್ರಿ ೧೦ ಗಂಟೆಯಲ್ಲಿ ಹಿರಿಯ ಮಗನಾಗಲಿ ಅಥವಾ ಕಿರಿಯ ಮಗನಾಗಲಿ ಹೊಸ ಗಡಿಗೆಯನ್ನು ತೆಗೆದುಕೊಂಡು ಅದರಲ್ಲಿ ಕರುಳ ಸಾರನ್ನು ತುಂಬಿಕೊಂಡು ಗಂಗಾಸ್ಥಾನದಲ್ಲಿ ಬಿಟ್ಟುಬರುವುದು. ರಾತ್ರಿಯಲ್ಲಿ ಪ್ರತಿಯೊಬ್ಬರು ಸ್ನಾನಮಾಡಿಕೊಂಡು ಬರುವರು. ಮಾರನೇ ದಿನದಲ್ಲಿ ಸಮುದಾಯ ಯಜಮಾನರು ಹಾಗೂ ಸಂಬಂಧಿಕರು ಊರಿಗೆ ಹೋಗುವರು.

ಮರಣ ಸಂಬಂಧ ಕಲ್ಪನೆಗಳು : ದುರುಗಮುರಗಿ ಸಮುದಾಯದಲ್ಲಿ ವ್ಯಕ್ತಿ ಸಾವಿಗೆ ಭೂತ ಚೇಷ್ಟೆಯೇ ಕಾರಣ ಎಂದು ಅವರು ಭಾವಿಸುತ್ತಾರೆ. ಖಾಯಿಲೆಗಳು ಬಂದಾಗ ಅಂತಹ ಸಮಯದಲ್ಲಿ ಸಮುದಾಯ ವ್ಯಕ್ತಿಗಳಿಗೆ ಕನಸುಗಳು ಬರುವುದರಿಂದ ತಮ್ಮ ಕುಲದ ಯಜಮಾನರಲ್ಲಿ ಕೇಳಿಕೊಳ್ಳುವುದು. ಒಂದೊಂದು ರೀತಿಯಲ್ಲಿ ದೆವ್ವಗಳು ಕಂಡು ಬಂದರೆ ಈ ವ್ಯಕ್ತಿ ದೆವ್ವ ಆಗಿ ನನಗೆ ರಾತ್ರಿಯ ಕನಸಿನಲ್ಲಿ ಬಂದಿರುತ್ತಾನೆ ಎಂದು ತಿಳಿಸುತ್ತಾರೆ. ಸಮುದಾಯದವರು ಆ ಕುಲ ಪಂಚಾಯತಿಯಲ್ಲಿ ದೈವದ ಪ್ರಕಾರ ಬಲಿಯನ್ನು ಕೊಡಬೇಕೆಂದು ಅಜ್ಞೆಯನ್ನು ಹೊರಡಿಸಲಾಗುವುದು. ಸತ್ತಿರುವ ಸಂಬಂಧಿಕರು ಕೋಳಿಯನ್ನು ಬಲಿ ಕೊಡುತ್ತಾರೆ. ಇದನ್ನು 'ಗಿಡ ದೇವರು' ಎಂದು ಕರೆಯಲಾಗುವುದು.

ಗಿಡದೇವರು ಎಂದರೆ ಕುಲದ ಯಜಮಾನ ಸೇರಿಕೊಂಡು ಅಂದಿನ ರಾತ್ರಿ ಸಮಯ ೧೦ ಗಂಟೆಯಲ್ಲಿ ಕೋಳಿಯನ್ನು ತಂಗಡಿ ಗಿಡದ ಹತ್ತಿರ ಬಲಿಯನ್ನು ಕೊಡಲಾಗುವುದು. ಮೂರು ಕಲ್ಲುಗಳನ್ನು ಇಟ್ಟು ಅದಕ್ಕೆ ಪೂಜೆಯನ್ನು ಮಾಡುತ್ತಾರೆ. ಕೋಳಿಯಲ್ಲಿರುವ ಕರುಳು ಅದರ ಗುಂಡಿಗೆಯನ್ನು ಸಪ್ಪೆಯಲ್ಲಿ ಬೇಯಿಸಿ ಹೊಸಮುಚ್ಚುಳದಲ್ಲಿ ಸತ್ತಿರುವ ವ್ಯಕ್ತಿಗೆ ಎಡೆಯನ್ನು ಹಾಕಲಾಗುವುದು. ತದನಂತರ ಕುಲ ಪಂಚಾಯತಿಗೆ ಸರಾಯಿಯನ್ನು ಕುಡಿಸಬೇಕು. ಈ ಸಮುಯದಾಯ ಯಾರೇ ಆಗಲಿ ಮನೆಯ ಗುಡಾರ ಹತ್ತಿರ ಸತ್ತವ್ಯಕ್ತಿಯ ಮೇಲಿನ ಒಂದು ತೆಂಗಿನ ಕಾಯಿಯನ್ನು ಇಡಲಾಗುವುದು.

ಹಬ್ಬಗಳು : ಹಿಂದುಗಳು ಆಚರಿಸುವ ಹಬ್ಬಗಳನ್ನು ದುರುಗಮುರಗಿಯವರು ಆಚರಿಸುವುದಿಲ್ಲ. ಹಬ್ಬಗಳು ಬಂದಾಗಲೆಲ್ಲಾ ಭಿಕ್ಷೆಗೆ ಹೋಗುತ್ತಾರೆ. ಪೋತರಾಜ ವೇಷ ಕಟ್ಟಿಕೊಂಡು ತನ್ನ ಮೈಗೆ ಲಡ್ಡು ಹೊಡೆದುಕೊಳ್ಳುತ್ತಾ 'ಹಾ ಹಾ ಹ್ಹಾ ಹ್ಹಾ ತಾಯೀ ಬಂದಾಳ್ರೀ.... ಮಾರಮ್ಮಾ ಬಂದಾಳ್ರೀ, ದುರುಗಮ್ಮ ಬಂದಾಳ್ರೀ ಎಂದು ಭಯಂಕರವಾಗಿ ಅರ್ಭಟಿಸುತ್ತಾ, ಕುಣಿಯುತ್ತಾನೆ. ಅವನ ಹೆಂಡತಿ ಬುರ್ರ ಬುರ್ರ ವಾದ್ಯ ಬಾರಿಸುತ್ತಿರುತ್ತಾಳೆ. ಜನರು ಮಾಡುವ ಹಬ್ಬದಡಿಗೆಯನ್ನು ಭಿಕ್ಷೆ ಬೇಡಿ ಊಟ ಮಾಡುತ್ತಾರೆ. ದುರುಗಮುರಗಿ ಸಮಯದಾಯದವರು ದಸರಾ ಹಬ್ಬವನ್ನು ಸರಳ ರೀತಿಯಲ್ಲಿ ಆಚರಿಸುತ್ತಾರೆ.

ದಸರಾ ಹಬ್ಬದಲ್ಲಿ ಆಯುಧ ಪೂಜೆಯನ್ನು ತಮ್ಮ ಗುಡಾರದ ಎಲ್ಲಾ ದೇವರು ಮೂರ್ತಿಗಳನ್ನು ತೊಳೆದು, ಹಾಗು ಸೆಗಣಿಯಿಂದ ನೆಲಸಾರಿಸುವರು. ಅಂದು ವಿಶೇಷವಾಗಿ ಪೂಜೆಯನ್ನು ಮಾಡುತ್ತಾರೆ. 'ಹಬ್ಬ ಹರಿದಿನಗಳು ಧರ್ಮ ಶ್ರದ್ಧೆಯ ಸಾಧನೆ ವೃತ್ತಗಳು, ಸಾಂಸ್ಕೃತಿಕ ಸಂವರ್ಧಕ ಕಾಯಕಗಳು ಇವುಗಳ ಆಚರಣೆ ಎಲ್ಲಾ ಜನಾಂಗದಲ್ಲಿ ಕಂಡು ಬರುತ್ತದೆ. ದುರುಗಮುರಗಿ ಸಮುದಾಯದ ಜನರು ವರ್ಷದಲ್ಲಿ ಒಂದುಸಾರಿ ಇಲ್ಲವೇ ಎರಡು ಸಲ ಬಂದು ತಮ್ಮ ತಮ್ಮ ಸುಖ ದುಃಖಗಳುನ್ನು ವಿಚಾರಿಸಿಕೊಂಡು ಹೋಗುವರು.

ದಸರಾ ಹಬ್ಬ : ಭಾರತೀಯ ಹಬ್ಬಗಳಲ್ಲಿ ಒಂದಾದ ದಸರಾ ಹಬ್ಬವನ್ನು ದುರುಗಮುರಗಿ ಸಮುದಾಯದವರು ಆಚರಿಸುತ್ತಾರೆ. ನಾಡಿನ ಹಲವು ಪ್ರದೇಶಗಳಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವ ತಮ್ಮ ಸಮುದಾಯದ ಜನರು ಸೇರಿಕೊಂಡು, ಪರಂತರಾಗತವಾಗಿ ನಡೆದು ಬರುತ್ತಿರುವ ರೂಢಿಗಳಲ್ಲಿ ಒಂದಾಗಿದೆ. ಸಮುದಾಯದ ಹಿರಿಯರೆನೆಸಿಕೊಂಡವರು ತಮ್ಮ ಪೋತರಾಜನ ಮುಖ ಹಾಗೂ ದೇವರು ಮೂರ್ತಿಗಳ ಪೂಜೆಯನ್ನು ಮಾಡುತ್ತಾರೆ. ಹಬ್ಬದಲ್ಲಿ ಹೊಸ ಬಟ್ಟೆಗಳನ್ನು ತಂದು ದೇವರ ಜಗುಲಿಯ ಮೇಲಿಟ್ಟು, ಪೂಜಿಸಿ ಎಲ್ಲರಿಗೂ ಸಿಹಿ ಪದಾರ್ಥಗಳನ್ನು ಹಂಚುತ್ತಾರೆ.

ಸುಗ್ಗಿಕಾಲದಲ್ಲಿ : ದುರುಗಮುರಗಿ ಸಮುದಾಯ ಪೋತರಾಜನು ಸುಗ್ಗಿಕಾಲದಲ್ಲಿ ಭಿಕ್ಷೆಬೇಡುತ್ತಾ ಹೊಗುತ್ತಾನೆ. ಹಳ್ಳಿಯ ಕಣಗಳಲ್ಲಿ ಹಾಕಿರುವ ಶೇಂಗಾರಾಶಿ ಮತ್ತು ಜೋಳದರಾಶಿ ಹತ್ತಿರ ಹೋದಾಗ ದವಸ ಧಾನ್ಯಗಳನ್ನು ನೀಡುತ್ತಾರೆ. ಇತ್ತೀಚಿನ ದಿನಗಳಲ್ಲಿ ದವಸ ಧಾನ್ಯಗಳು ಕೊಡುವರ ಸಂಖ್ಯೆ ಕಡಿಮೆಯಾಗಿದೆ. ಒಟ್ಟಿನಲ್ಲಿ ಸುಗ್ಗಿಕಾಲದಲ್ಲಿ ಶೇಖರಿಸುವ ವಸ್ತುಗಳನ್ನು ಗುಡಾರದಲ್ಲಿ ಇಡಲಾಗುವುದು. ವರ್ಷದ ಗಾಳಿಕಾಲ ಅಥವಾ ಆಶಾಡ ದಿನಗಳಲ್ಲಿ ಶೇಖರಿಸುವ ವಸ್ತುಗಳನ್ನು ತಮ್ಮತಮ್ಮ ನಿತ್ಯದ ಊಟಕ್ಕೆ ಬಳಸಲಾಗುವುದು.

ಜಾತ್ರೆಗಳು : ಬಳ್ಳಾರಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿಯೊಂದು ಜಾತ್ರೆಗಳು ವಿಶಿಷ್ಟಸ್ಥಾನ ಪಡೆದುಕೊಂಡಿವೆ. ಅವುಗಳಲ್ಲಿ ಬಳ್ಳಾರಿ ದುರ್ಗಮ್ಮ, ಗುಡೇಕೋಟೆ ಕೊಡಿದುರ್ಗಮ್ಮ ಕುರುಹಟ್ಟಿ ಗ್ರಾಮದ ಮಾರಮ್ಮ ಇತ್ಯಾದಿಗಳ ಜಾತ್ರೆಗಳಲ್ಲಿ ಜನರು ಮೇಲು ಕೀಳೆನ್ನದೆ ಸಾಮೂಹಿಕವಾಗಿ ಜಾತ್ರೆಯಲ್ಲಿ ಬೆರೆಯುತ್ತಾರೆ. ಬಳ್ಳಾರಿ ಕನಕದುರ್ಗಮ್ಮ ಜಾತ್ರೆಯಲ್ಲಿ ದುರುಗಮುರಗಿ ಸಮುದಾಯದವರು ತಮ್ಮ ವೇಷಹಾಕಿಕೊಂಡು ಪ್ರದರ್ಶನ ಮಾಡುತ್ತಾರೆ. ಜಾತ್ರೋತ್ಸವಗಳು ಜನಪದ ಸಂಸ್ಕೃತಿ ಪರಂಪರೆಯ ಪ್ರಮುಖ ಆಧಾರ ಸ್ತಂಭಗಳಾಗಿರುವುದರಿಂದ ಗ್ರಾಮೀಣ ಬದುಕಿನ ಜೀವಂತ ನಾಡಿ-ಮಿಡಿತಗಳಾಗಿವೆ.

ಪ್ರತಿ ವರ್ಷ ಮಾರ್ಚ ತಿಂಗಳಿನಲ್ಲಿ ಕನಕ ದುರ್ಗಮ್ಮ ಜಾತ್ರೆ ನಡೆಯುವುದು. ಈ ಜಾತ್ರೆಯ ಸಂದರ್ಭದಲ್ಲಿ ಪೋತರಾಜನು ಸಿಡಿಬಂಡಿ ರಥೋತ್ಸವದ ಮೆರವಣಿಗೆಯಲ್ಲಿ ಭಾಗವಹಿಸುತ್ತಾನೆ. ದೇವಿ ಮಹಿಮೆಯಿಂದ ಲಡ್ಡು ತೆಗೆದುಕೊಂಡು ಮೈಯಿಗೆ ಬಾರಿಸಿಕೊಳ್ಳುವರು. ಹಾಗು ತನ್ನ ಬಲಗೈಯಲ್ಲಿ ರಕ್ತವನ್ನು ಚಿಮ್ಮಿಸಿ ಜನರ ಮುಂದುಗಡೆಯಲ್ಲಿ ಪ್ರದರ್ಶನ ಮಾಡುತ್ತಾನೆ. ಜನರ ಈ ದೃಶ್ಯವನ್ನು ನೋಡಿ ಭಿಕ್ಷೆ ಕೊಡಿತ್ತಾರೆ. ಭಿಕ್ಷೆಯಿಂದ ಬಂದಿರುವ ಹಣದಿಂದ ಜಾತ್ರೆಯನ್ನು ಮಾಡುತ್ತಾರೆ.

ದುರುಗಮುರಗಿ ಸಮುದಾಯದವರು ಈ ಜಾತ್ರೆಯಲ್ಲಿ ತಮ್ಮ ಗುಡಾರದಲ್ಲಿ ಕುರಿ, ಕೋಳಿ ಕೊಯ್ಯುತ್ತಾರೆ. ಅಂದು ಕುರಿ ಕರಳುಗಳ ಸಾರು ಮಾಡಿ ಊಟ ಮಾಡುತ್ತಾರೆ. ರುಂಡ ಮಾರನೆಯ ದಿನಕ್ಕಾಗಿ ತೆಗೆದಿಡುತ್ತಾರೆ. ಹೆಚ್ಚಿನಿಸಿದಾಗ ಮಾಂಸವನ್ನು ಬಿಸಿಲಿಗೆ ಒಣಗಿಸುತ್ತಾರೆ. ವರ್ಷಕ್ಕೊಮ್ಮೆ ಆಚರಿಸುವ ಈ ಜಾತ್ರೆ ಅವರಿಗೆ ಬಹಳ ಖುಷಿಕೊಡುತ್ತದೆ. ದುರುಗಮುರಗಿ ಸಮುದಾಯಕ್ಕೆ ದುರ್ಗಮ್ಮನ ಜಾತ್ರೆಯಂದರೆ ಬಲುಹಿಗ್ಗು.

ನ್ಯಾಯ ಪದ್ಧತಿ

ಬುಡಕಟ್ಟು ಸಮುದಾಯದ ದುರುಗಮುರಗಿಯವರು ಸಹ ತಮ್ಮ ಜನರಿಗೆ ತಮ್ಮದೇ ಆದಂಥ ವ್ಯವಸ್ಥೆಯನ್ನು ನ್ಯಾಯ ರೂಢಿಸಿಕೊಂಡಿದ್ದಾರೆ. ನ್ಯಾಯ ತೀರ್ಪುಗಳನ್ನು ಕಂಡು ಕೊಂಡಿದ್ದಾರೆ. ತಮ್ಮ ಮಂದಿಯ ತಕರಾರುಗಳನ್ನು ತಾವೇ ಬಗೆಪರಿಸಿಕೊಳ್ಳುತ್ತಾರೆ. ತಮ್ಮ ಸಮುದಾಯದಲ್ಲಿ ಬಂದಿರುವ ಸಾಮಾಜಿಕ, ಆರ್ಥಿಕ ಸಾಂಪ್ರದಾಯಿಕ ಸಮಸ್ಯಗಳಿಗೆ ತಾವೇ ಕುಲ ಪಂಚಾಯತಿ ವತಿಯಿಂದ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ. ತಮ್ಮಲ್ಲಿ ಹುಟ್ಟುವ ಹಲವು ರೀತಿಯ ಇಕ್ಕಟ್ಟಿನ ಪರಿಸ್ಥಿತಿಗಳನ್ನು ತಾವೇ ಕೊನೆಗಾಣಿಸುತ್ತಾರೆ. ಸಣ್ಣಪುಟ್ಟ ಸಮಸ್ಯೆಗಳು ಬಂದರೆ ಮನೆ ಯಜಮಾನ, ಅಣ್ಣ ತಮ್ಮಂದಿರು ಕೂಡಿ ಬಗೆಹರಿಸುತ್ತಾರೆ. ಗಂಡ-ಹೆಂಡತಿ, ಅತ್ತೆ-ಸೊಸೆ, ಅತ್ತಿಗೆ-ಮೈದುನ ನಡುವೆ ಜಗಳ ನಡೆದರೆ ಕುಟುಂಬದ ತಂದೆ ಬಗೆಹರಿಸುತ್ತಾನೆ. ಕುಟುಂಬದಲ್ಲಿ ಬಗೆ ಹರಿಯದ ಜಗಳಗಳನ್ನು ಕುಲಪಂಚಾಯತಿಯ ಬೀಗರು ಬಗೆಹರಿಸಲು ಪ್ರಯತ್ನಿಸುತ್ತಾರೆ. ಅವಾಗಲೂ ಸಾಧ್ಯವಾಗದಿದ್ದಾಗ ಕುಲದ ಹಿರಿಯ ಅನುಭವಸ್ಥರು ವ್ಯಕ್ತಿಗೆ ತಿಳಿ ಹೇಳಿ ಸಮಸ್ಯೆಯನ್ನು ಸರಿಪಡಿಸಲು ಯತ್ನಿಸುತ್ತಾರೆ. ನಾಗರಿಕತೆ ಮತ್ತು ಸಂಸ್ಕೃತಿ ಬೆಳೆದಂತೆ ನ್ಯಾಯ ನಿರ್ಣಯಿಸುವ ಪದ್ಧತಿಯಲ್ಲಿ ಬದಲಾವಣೆ ಆಗಿದೆ.

ಪಂಚಾಯ್ತಿಯೆಂದರೆ ನ್ಯಾಯ ತೀರ್ಮಾನಕ್ಕೆ ರಚಿತವಾದ ಐದು ಜನರ ಒಂದು ಸಮಿತಿ. ಸಮುದಾಯದಲ್ಲಿ ನ್ಯಾಯ ಪಂಚಾಯ್ತಿಯನ್ನು ಮಾಡಲು ಐದು ಜನರಿರಬೇಕೆಂಬ ನಿಯಮ ಇಲ್ಲ. ಒಬ್ಬರೆ ಮಾಡಬಹುದು ಹಾಗು ಎರಡು-ಮೂರು ಜನರು ಕೂಡಿ ನ್ಯಾಯವನ್ನು ಬಗೆಹರಿಸಬಹುದು. ದುರುಗಮುರಗಿ ಸಮುದಾಯದಲ್ಲಿ ನ್ಯಾಯ ಪಂಚಾಯ್ತಿ ಮಾಡುವುದೆಂದರೆ ಸತ್ಯವನ್ನು ಶೋಧಿಸಿ ತೆಗೆಯುವುದು. ಸಮಾನತೆ, ಸರ್ವರ ಹಿತ ಬಯಸುವುದು ಈ ನ್ಯಾಯ ಪಂಚಾಯಿತಿಯ ಉದ್ದೇಶವಾಗಿದೆ.

ಕೆಲವು ಸಂದರ್ಭಗಳಲ್ಲಿ ತಪ್ಪಿತಸ್ಥರಿಗೆ ದಂಡ ಹಾಕಲಾಗುವುದು. ಪದೇ ಪದೇ ತಪ್ಪು ಮಾಡಿದರೆ ಸಮಾಜದಿಂದ ಬಹಿಷ್ಕರಿಸುತ್ತಾರೆ. ಒಟ್ಟಾರೆ ಸರ್ವೇಜನೋ ಸುಖೀನೋ ಭವಂತು ಎಂಬುದು ಈ ಸಮುದಾಯದ ನ್ಯಾಯ ಪದ್ಧತಿಯ ಮುಖ್ಯ ಧ್ಯೇಯ ಸಮುದಾಯದ ಹಿರಿಯ ವಯಸ್ಸಿನ ಮುಖ್ಯ ನ್ಯಾಯಾಧೀಶನಾಗಿರುವನು.

೧. ಬಳ್ಳಾರಿ ಗದ್ದೆಯ ಸಮುದಾಯಗಳ ನ್ಯಾಯಪಂಚಾಯ್ತಿ ಮುಖ್ಯಸ್ಥ - ಸಿಂಗಾರಪ್ಪ

೨. ಕಂಪ್ಲಿಯಲ್ಲಿ ಮಾರಣ್ಣ, ದೊಡ್ಡಜಂಬಣ್ಣ ಮಗ ಜಂಬಣ್ಣ

೩. ತೆಕ್ಕಲುಕೋಟೆಯಲ್ಲಿ ಮುನಿಯಪ್ಪ, ಮೂಡಲು ರಾಮಣ್ಣ

೪. ಕೂಡ್ಲಿಗಿಯಲ್ಲಿ ವೆಂಕಟಪ್ಪ.

ನ್ಯಾಯ ಪಂಚಾಯ್ತಿಯಲ್ಲಿ ವೆಂಕಟಪ್ಪನವರು ಸೇರಿಕೊಳ್ಳುವುದಿಲ್ಲ. ಕಾರಣ ವೆಂಕಟಪ್ಪ ದೊಡ್ಡಮಾಂಸವನ್ನು ತಿನ್ನುವುದರಿಂದ ಆತನನ್ನ ಕುಲ ಪಂಚಾಯ್ತಿಯಲ್ಲಿ ಸೇರ್ಪಡೆ ಮಾಡಿಕೊಂಡಿಲ್ಲ. ಅಲ್ಲದೆ ಈತ ಸಮುದಾಯದ ಯಾವುದೇ ರೀತಿಯ ಸಮಾರಂಭಗಳಲ್ಲಿ ಭಾಗವಹಿಸುವಂತಿಲ್ಲ ಎಂದು ಹೇಳುತ್ತಾರೆ. ನ್ಯಾಯಪಂಚಾಯ್ತಿ ಸ್ಥಳಗಳೆಂದರೆ ಬಳ್ಳಾರಿ ಮತ್ತು ಕಂಪ್ಲಿ. ದುರುಗಮುರಗಿ ಸಮುದಾಯ ಪಂಚಾಯತಿ ನ್ಯಾಯ ತೀರ್ಮಾನ ಹೇಗೆ ಮಾಡುವರು? ಏನನ್ನು ಆಧರಿಸಿ ನಿರ್ಣಯಿಸುವರು? ಎಂಬುದಕ್ಕೆ ಯಾವ ಲಿಖಿತ ದಾಖಲೆಗಳು ದೊರೆಯುವುದಿಲ್ಲ.

ಈ ಹಿಂದೆ ಮಾಡಿದ ನ್ಯಾಯ ತೀರ್ಮಾನಗಳನ್ನ ಬರೆದಿಟ್ಟಿಲ್ಲ. ಅನುಭವದ ಆಧಾರದಿಂದ ನ್ಯಾಯವನ್ನು ಬಗೆ ಹರಿಸುತ್ತಾರೆ. ಹಾಗೂ ಸಮಾಜದ ರೀತಿ ನೀತಿ ರಿವಾಜು, ಆಚರಣೆಗಳು, ಸಮುದಾಯದ ಪರಂಪರೆ ಇತ್ಯಾದಿ ಅಂಶಗಳನ್ನು ಗಮನಿಸಿ ನ್ಯಾಯ ಪಂಚಾಯತಿ ಮಾಡುವರು. ನ್ಯಾಯದಾನ ಮಾಡುವುದು ಜನಪದದ ಪವಿತ್ರವಾದ ಪುಣ್ಯದ ಕೆಲಸವೆಂದು ಬಲವಾಗಿ ನಂಬಿಕೊಂಡಿದ್ದಾರೆ. ಇಲ್ಲಿ ಸುಳ್ಳು ಸಾಕ್ಷಿಗಳಿಗೆ ಅವಕಾಶವಿಲ್ಲ. ತರ್ಕಬದ್ಧವಾದಕ್ಕೆ ಬೆಲೆಯಿಲ್ಲ, ಮೋಸ ವಂಚನೆಗೆ ಸ್ಥಳಾವಕಾಶವಿಲ್ಲ.

ಸಾಂಪ್ರದಾಯಿಕ ನ್ಯಾಯ ಆಚರಣೆ : ದುರುಗಮುರಗಿ ಸಮುದಾಯದಲ್ಲಿ ಯಾರೇ ಅಪರಾಧ ಮಾಡಿದ್ದರೂ, ಅಪರಾಧ ರುಜುವಾತು ಪಡಿಸಲು ಸಂಪ್ರದಾಯಿಕ ಎರಡು ಪ್ರಮುಖ ವಿಧಾನಗಳನ್ನು ಅನುಸರಿಸುತ್ತಾರೆ. ಒಂದು ಮಾರಮ್ಮ ದೇವಿ ಪ್ರಮಾಣ, ಎರಡನೇಯದು ದಂಡ. ತಪ್ಪು ಮಾಡಿರುವ ವ್ಯಕ್ತಿ ಸಾಯುತನಕ ಭಿಕ್ಷೆ ಬೇಡಿಕೊಂಡು, ಸಾಲವನ್ನು ತೀರಿಸುವುದು.

ಸಮುದಾಯದಲ್ಲಿ ಮದುವೆ ಆಗಿರುವ ಮಹಿಳೆಯನ್ನು ಸಮುದಾಯದ ವ್ಯಕ್ತಿ ಅಪಹರಿಸಿಕೊಂಡು ಹೋದರೆ ಕುಲದಿಂದ ಬಹಿಷ್ಕಾರ ಹಾಕಲಾಗುವುದು. ಹಾಗೂ ಪುರುಷನಿಗೆ ವಿವಾಹವಾಗಿರದ ಸಂದರ್ಭದಲ್ಲಿ ಯಾರು ಹೆಣ್ಣನ್ನು ಕೊಡುವುದಿಲ್ಲ. ಆ ವ್ಯಕ್ತಿಗೆ ಹಲವಾರು ಸಮಸ್ಯಗಳು ಕಂಡು ಬರುತ್ತವೆ. ಈ ವಿಚಾರವಾಗಿ ಕುಲ ದೈವದಲ್ಲಿ ಪಂಚಾಯತಿ ನಡೆಯುವುದು. ಅಪಹರಣಕ್ಕೊಳಗಾದ ಮಹಿಳೆಯ ಗಂಡ ಆಕೆ ನನಗೆ ಬೇಡ ಎಂದು ತಿರಸ್ಕಾರ ಮಾಡುತ್ತಾನೆ. ಇಂತಹ ಸನ್ನಿವೇಶಗಳಲ್ಲಿ ಬಹಳ ವಾಗ್ವಾದ ನಡೆಯುವುದು. ಈ

ಸಮಸ್ಯೆಯಿಂದ ಹೆಣ್ಣು ಅಬಲೆಯಾಗುವ ಸಂದರ್ಭ ಬರುವುದು. ಅಪಹರಿಸಿಕೊಂಡು ಹೋದ ವ್ಯಕ್ತಿಗೆ ಕುಲಪಂಚಾಯತಿ ಪ್ರಕಾರವಾಗಿ ಒಂದೇಬಾರಿ ೪೨,೦೦೦ ರೂಪಾಯಿಗಳು ದಂಡ ಹಾಕಲಾಗುವುದು. ಈ ೪೨,೦೦೦ ರೂಪಾಯಿಗಳನ್ನು ಒಮ್ಮೆಲೇ ಕಟ್ಟವಂತಿಲ್ಲ. ದಿನಾಲೂ ಭಿಕ್ಷೆ ವೃತ್ತಿಯ್ನನ್ನಾಗಲಿ, ಇತರೆ ವೃತ್ತಿಗಳನ್ನು ಮಾಡಿಕೊಂಡು ಕುಲಪಂಚಾಯತಿಗೆ ಕಟ್ಟಬೇಕು. ಇದಕ್ಕೆ ತಂದೆ-ತಾಯಿಗಳು ಜಾಮೀನ ಇರುತ್ತಾರೆ. ಸಾಲಕ್ಕೆ ಒಪ್ಪಿಗೆಯನ್ನು ಪಡೆದುಕೊಂಡಿತ್ತಾರೆ.

ತಪ್ಪು ಮಾಡಿದ ವ್ಯಕ್ತಿ ಸಾಲ ತೀರಿಸುವುದಿಲ್ಲವೆಂದರೆ ತಂದೆ-ತಾಯಿಗಳೇ ಕಡ್ಡಾಯವಾಗಿ ದಂಡಕಟ್ಟಬೇಕು. ಮತ್ತು ಈ ಸಮುದಾಯದ ಬೇರೆ ಜಾತಿಯ ಮದುವೆ ಮಾಡಿಕೊಳ್ಳುವಂತಿಲ್ಲ, ಬೇರೆ ಜಾತಿಯಲ್ಲಿ ವಿವಾಹವಾದರೆ, ಆ ಕುಟುಂಬದ ಯಾವುದೇ ಸಂಪ್ರದಾಯ ಆಚರಣೆಗಳಲ್ಲಿ ಭಾಗವಹಿಸುವಂತಿಲ್ಲ. ಭಾಗವಹಿಸಿದರೆ ದಂಡ ಹಾಕಲಾಗುವುದು. ೫೦೦, ೬೦೦ ರೂಪಾಯಿಗಳನ್ನು ಸಣ್ಣ ತಪ್ಪುಗಳಿಗೆ ದಂಡ ಹಾಕುವರು. ಕುಲಪಂಚಾಯತಿಗೆ ಪ್ರತಿಭಟಿಸಿದರೆ ಕುಲದಿಂದ ಬಹಿಷ್ಕಾರ ಹಾಕಲಾಗುವುದು.

ಸಾಮಾಜಿಕ ನ್ಯಾಯ ಆಚರಣೆ : ದುರುಗಮುರಗಿ ಸಮುದಾಯದಲ್ಲಿ ತಪ್ಪು ಮಾಡಿದ ವ್ಯಕ್ತಿಯನ್ನು ಸಮಾಜದಿಂದ ಬಹಿಷ್ಕಾರ ಹಾಕಲಾಗುವುದು. ಅಪರಾಧಿಗೆ ಯಾವ ವಿಧದಲ್ಲಿ ಸಹಕಾರ ನೀಡುವುದಿಲ್ಲ. ಅವನ ಜತೆಗಿರುವ ಎಲ್ಲಾ ಸಂಬಂಧಗಳನ್ನು ಮುರಿದುಕೊಳ್ಳುವರು. ಮದುವೆ ಸಮಾರಂಭಗಳಲ್ಲಿ, ಮನೆಯಲ್ಲಿ ಮಂಗಳ ಕಾರ್ಯಕ್ರಮಗಳಲ್ಲಿ ಮರಣ ಹೊಂದಿದ ಸಮಯದಲ್ಲಿ ಸಮುದಾಯ ಸಂಬಂಧಿಕರುಗಳು ಕರೆಯುವಂತಿಲ್ಲ. ಒಂದು ಪಕ್ಷ ಸಂಬಂಧಿಕರು ಕರೆದರೆ, ಹಾಗು ಸಹಾಯ ಮಾಡಿದವರಿಗೆ ದಂಡ ಹಾಕಲಾಗುವುದು. ಮತ್ತು ಬಹಿಷ್ಕಾರ ಹಾಕಲಾಗುವುದು.

ಒಮ್ಮೆ ಸಮುದಾಯದಲ್ಲಿ ಯಾರೇ ಅಗಲಿ ಸರಾಯಿ ಕುಡಿದುಬಂದು, ಅವಾಚ್ಯ ಶಬ್ದಗಳನ್ನು ಮಾತನಾಡಿದರೆ ಬೆಳಿಗ್ಗೆ ಕುಲಪಂಚಾಯತಿ ನಡೆಯುವುದು. ಕುಲದ ಪ್ರಮುಖರು ಹೇಳುವುದು ವೇದ ವ್ಯಾಕ್ಯ. ಮುಖಂಡರ ಮಾತಿಗೆ ತಪ್ಪಿದರೆ ದೇವಿಯ ಮೇಲೆ ಆಣೆ ಪ್ರಮಾಣ ಮಾಡಿಸುವರು. ಹೀಗೆ ತಪ್ಪು ಒಪ್ಪಿಸುವಿಕೆ ನಡೆಯುತ್ತದೆ. ತಾನು ಅಪರಾಧಿಯಲ್ಲ ಎಂದು ವಾದಿಸುವ ವ್ಯಕ್ತಿಗೆ ಮಾರಮ್ಮನನ್ನಾಗಲಿ ದುರುಗಮ್ಮ ದೇವಿಯ ಮೂರ್ತಿಯನ್ನಾಗಲಿ ಮುಟ್ಟಿ ಆಣೆ ಮಾಡಬೇಕು. ಸಮುದಾಯದ ಜನರು ದೇವಿಯ ಮೂರ್ತಿಯ ಮೇಲೆ ಎಂದಿಗೂ ಆಣೆ ಮಾಡುವುದಿಲ್ಲ. ಹಾಗೆ ಮಾಡಿದರೆ ಅವಳು ತಮ್ಮನ್ನು ಸುಟ್ಟು ಬಿಡುತ್ತಾಳೆ ಎಂಬ ಭಯದ ನಂಬಿಕೆ ಇವರಲ್ಲಿ ಆಳವಾಗಿದೆ.

ದುರುಗಮುರಗಿ ಸಮುದಾಯ ಜನರು ಕೋರ್ಟು,ಕಚೇರಿಗಳಿಗೆ ತಮ್ಮ ನ್ಯಾಯವನ್ನು ಬೇಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಆದೇನಿದ್ದರೂ ತಮ್ಮ ಕುಲಪಂಚಾಯತಿಯಲ್ಲಿಯೇ ಬಗೆ ಹರಿಸಿಕೊಳ್ಳುತ್ತಾರೆ. ಸಮುದಾಯದಲ್ಲಿ ನ್ಯಾಯ ಪಂಚಾಯತಿ ಬೇಗೆ ಮುಗಿಯುವುದೇ ಇಲ್ಲ. ಇದು ಸತತ, ಮೂರು-ನಾಲ್ಕು ದಿನಗಳವರೆಗೆ ಕೆಲವೊಮ್ಮೆ, ವಾರದವರೆಗೂ ಎರಡು ಪಕ್ಷಗಳ ನಡುವೆ ಚರ್ಚೆ ನಡೆಯುವುದು. ಕುಡಿಯಲು, ತಿನ್ನಲು,

ಒಬ್ಬನು ಖರ್ಚು ಮಾಡುತ್ತಾನೆ. ಕೊನೆಗೆ ತಪ್ಪಿತಸ್ಥನೆಂದು ನಿರ್ಣಯಿಸಲ್ಪಟ್ಟವರು ವಿಧಿಸಿದ ದಂಡದ ಜೊತೆಗೆ ಖರ್ಚನ್ನು ಕೊಡಬೇಕಾಗುತ್ತದೆ.

ಜೈಲಿಗೆ ಹೋಗಿ ಬಂದ ವ್ಯಕ್ತಿಯನ್ನು ಕುಲದಿಂದ ಹೊರಗಿಡುತ್ತಾರೆ. ಹಾಗೆಯೇ ಬೇರೆ ಜಾತಿಯಲ್ಲಿ ಮದುವೆಯಾದವರನ್ನು ಬಹಿಷ್ಕರಿಸುತ್ತಾರೆ. ಹೀಗೆ ತಮ್ಮ ಸಮುದಾಯದಿಂದ ಬಹಿಷ್ಕಾರಗೊಂಡವರ ಜೊತೆ ಯಾರು ಸಂಬಂಧ ಬೆಳೆಸುವಂತಿಲ್ಲ. ಸಂಬಂಧ ಬೆಳಸಿದರೆ ಅಂಥವರನ್ನು ಕುಲದಿಂದ ಬಹಿಷ್ಕಾರ ಹಾಕಲಾಗುವುದು. ದುರುಗಮುರಗಿ ಸಮುದಾಯದ ಜನರು ಚಾಣಾಕ್ಷರು, ಸೂಕ್ಷ್ಮಮತಿಗಳು, ತೀಕ್ಷ್ಣಬುದ್ಧಿಯುಳ್ಳವರು, ಅನುಭವವುಳ್ಳವರು, ವಿವೇಕಿಗಳು, ವಿಚಾರವಂತರು, ಜ್ಞಾನಿಗಳು, ಸಮಾಜದ ರೀತಿ-ರಿವಾಜುಗಳನ್ನು ತಿಳಿದವರು, ರೂಢಿಸಂಪ್ರದಾಯಗಳನ್ನು ಅರಿತವರು. 'ಮಾತು ಬಲ್ಲವರು ಮಾತಿನ ಮಥಿತಾರ್ಥ ತಿಳಿಯಬಲ್ಲವರು ಮಾತ್ರ ನ್ಯಾಯ ಪಂಚಾಯತಿ ಮಾಡುವರು' ಕಲಿತವರಿಗಿಂತ ನುರಿತವರೇ ಮೇಲು ಸಮುದಾಯ ಮುಖಂಡರು ಓದು ಬಲ್ಲವರಿಗಿಂತ ಸಮರ್ಥವಾಗಿ ನ್ಯಾಯ ಪಂಚಾಯತಿ ಮಾಡುವರು. ಮುಲಾಜಿಲ್ಲದೇ ಮಾತನಾಡುವರು, ಪ್ರಾಮಾಣಿಕ ನ್ಯಾಯ ಪಂಚಾಯತಿ ಮಾಡಬಲ್ಲವರು.

❖❖❖❖❖

ಅಧ್ಯಾಯ ೪

ಭಾಷೆ, ಸಾಹಿತ್ಯ, ಉಪಕಸುಬುಗಳು

ಅ. ಭಾಷೆ

ಆ. ಜಾನಪದ ಸಾಹಿತ್ಯ

ಇ. ಉಪಕಸಬುಗಳು

ಭಾಷೆ, ಸಾಹಿತ್ಯ, ಉಪಕಸಬುಗಳು

ಭಾಷೆ

ದುರುಗಮುರಗಿ ಸಮುದಾಯದವರು ಮನೆ ಭಾಷೆ ತೆಲುಗು. ಭಾಷೆ ಮತ್ತು ಸಾಹಿತ್ಯದ ದೃಷ್ಟಿಯಿಂದ ತೆಲುಗಿನಲ್ಲಿ ದೊರೆತಿರುವ ಮೊದಲ ಸಾಹಿತ್ಯ ಕೃತಿ ಕ್ರಿ.ಶ ೧೧ ನೇ ಶತಮಾನದ ಆದಿಕಾಲದಲ್ಲಿದ್ದ ನನ್ನಯ್ಯ ಭಟ್ಟನ ಮಹಾಭಾರತ ಮತ್ತು ಆಂಧ್ರ ಶಬ್ದಚಿಂತಾಮಣಿ, ಅದರೆ ಅವುಗಳಿಗಿಂತ ಸುಮಾರು ಮುನ್ನೂರು ವರ್ಷಗಳ ಮುಂಚೆಯೇ ತೆಲುಗಿನ ಪದ್ಯರಚನೆಯಾಗಿತ್ತೆಂದು ಶಾಸನಗಳಿಂದ ತಿಳಿಯುತ್ತದೆ. ತೆಲುಗಿನಲ್ಲಿ ಮೊದಲ ಶಾಸನ ಕ್ರಿ.ಶ. ೬ನೇ ಶತಮಾನದ ಧನಂಜಯನ ಕಲಮುಳ್ಳ ಶಾಸನ[೧] ಆಗಿರುತ್ತದೆ.

ಕನ್ನಡ ನಾಡಿನಲ್ಲಿ ನೆಲೆಸಿರುವ ದುರುಗಮುರಗಿಯರು ಮಾತನಾಡುವ ತೆಲುಗಿನ ಮೇಲೆ ಕನ್ನಡದ ಪ್ರಭಾವ ಸಾಕಷ್ಟಾಗಿದೆ. ಈ ಪ್ರಭಾವ ಅವರ ಸಾಹಿತ್ಯದ ಮೇಲೂ ಆಗಿದೆ. 'ತೆಲುಗು ಸಾಹಿತ್ಯ ಪ್ರಾರಂಭವಾಗುವ ವೇಳೆಗೆ ಕನ್ನಡ ಸಾಹಿತ್ಯದಲ್ಲಿ ಹಲವು ಕೃತಿಗಳ ರಚನೆಯಾಗಿದ್ದವು. ಅಲ್ಲದೆ ಹಲವು ಲಕ್ಷಣ ಗ್ರಂಥಗಳು ರಚನೆಯಾಗಿದ್ದವು. ಶಬ್ದ ಭಂಡಾರವೂ ಬೆಳೆದಿತ್ತು. ಆದ್ದರಿಂದಲೇ ಕನ್ನಡದ ಪ್ರಭಾವವೇ ತೆಲುಗು ಭಾಷೆಯ ಮೇಲೆ ಆಗಿರುವುದು ಸಹಜವೇ ಆಗಿದ್ದಿತು.'[೨] ಹೀಗಾಗಿ ಕನ್ನಡ ಮತ್ತು ಆಂಧ್ರ ಜನರ ಸಾಮಾಜಿಕ ಮತ್ತು ಧಾರ್ಮಿಕ ಭಾಂಧವ್ಯಗಳಿಗೆ ಭಾಷಾ ಸಂಕರವೇ ಕಾರಣವಾಗಿದೆ.

ದುರುಗಮುರಗಿ ಸಮುದಾಯದ ಭಾಷೆಯಲ್ಲಿನ ತೆಲುಗು ಮತ್ತು ಕನ್ನಡದ ಅನುಸಂಧಾನದ ಕುರಿತು ಇಲ್ಲಿ ಹೆಚ್ಚಿನ ಒತ್ತು ಕೊಡಲಾಗಿದೆ.

ಈ ಕೆಳಗಿನಂತೆ ಒಂದಿಷ್ಟು ಉದಾಹರಣೆಗಳನ್ನ ನೋಡಬಹುದು.

೧. ಕುಟುಂಬದ ಸದಸ್ಯರನ್ನ ಸಂಬೋಧಿಸುವ ಶಬ್ಧಗಳು

೨. ಮನುಷ್ಯನಿಗೆ ಸಂಬಂಧಿಸಿದ ಪದಗಳು

೩. ಸ್ತ್ರೀಗೆ ಸಂಬಂಧಿಸಿದ ಪದಗಳು
೪. ದವಸ ಧಾನ್ಯಗಳಿಗೆ ಸಂಬಂಧಿಸಿದ ಪದಗಳು
೫. ಊಟಕ್ಕೆ ಸಂಬಂಧಿಸಿದ ಪದಗಳು
೬. ತರಕಾರಿಗೆ ಸಂಬಂಧಿಸಿದ ಪದಗಳು
೭. ಪ್ರಾಣಿಗಳಿಗೆ ಸಂಬಂಧಿಸಿದ ಪದಗಳು
೮. ಹೈನುಗಳಿಗೆ ಸಂಬಂಧಿಸಿದ ಪದಗಳು
೯. ಪಕ್ಷಿಗಳಿಗೆ ಸಂಬಂಧಿಸಿದ ಪದಗಳು
೧೦. ನಿತ್ಯೋಪಯೋಗಿ ವಸ್ತುಗಳಿಗೆ ಬಳಸುವ ಪದಗಳು

೧. ಕುಟುಂಬದ ಸದಸ್ಯರಿಗೆ ಕರೆಯುವ ಶಬ್ದಗಳು :

ತೆಲಗು	ಕನ್ನಡ
ಮ. ಅಮ್ಮ ಗಾವುಲು	ಅಮ್ಮ
ಮ. ನಾಯನ	ಅಪ್ಪ
ಮ. ಅವ್ವ	ಅಜ್ಜಿ
ಮ. ತಮ್ಮುಡು	ತಮ್ಮ
ಮ. ಅಣ್ಣ	ಅಣ್ಣ

೨. ಮನಷ್ಯನಿಗೆ ಸಂಬಂಧಿಸಿದ ಪದಗಳು

ತಲಗಾಯಿ	ತಲೆ
ಕುತ್ತಿಗೆ	ಕತ್ತು
ಮುಖ,ಕಂಡುಲು	ಮುಖ
ಚೇತುಲು	ಕೈ
ಈಸ	ಬೆನ್ನು

೩. ಸ್ತ್ರೀಗೆ ಸಂಬಂಧಿಸಿದ ಪದಗಳು

ಆಡಪಿಲ್ಲಿ	ಮಹಿಳೆ
ಬಟ್ಟಮಸಾನಾರು	ಸೆರಗು
ಕೊಕಾ	ಸೀರೆ
ತಾಳಿಬಟ್ಟು	ತಾಳಿ
ರಯಿಕೆ	ಕುಪ್ಪಸ

೪. ದವಸ ಧಾನ್ಯಗಳಿಗೆ ಸಂಬಂಧಿಸಿದ ಪದಗಳು

ಬಿಯಂ	ಅಕ್ಕಿ
ಜೊನ್ನುಲು	ಜೊಳ
ರಾಗಲು	ರಾಗಿ
ಗೊಧಿಂ	ಗೋಧಿ
ನೂಲು	ಎಳ್ಳು

೫. ಊಟಕ್ಕೆ ಸಂಬಂಧಿಸಿದ ಪದಗಳು

ಭೂವ	ಅನ್ನ
ಸಾರು	ಸಾರು
ರೊಟ್ಟು	ರೊಟ್ಟಿ
ಮುದ್ದ	ಮುದ್ದೆ
ಪಸಿಮ್	ಹುಗ್ಗಿ

೬. ತರಕಾರಿಗೆ ಸಂಬಂಧಿಸಿದ ಪದಗಳು

ಮೆಕ್ಕೆಕಾಯಿಲು	ಮೆಣಸಿನಕಾಯಿ
ಹುಳ್ಳಿಪಾಯಲು	ಈರುಳ್ಳಿ
ವಂಕಕಾಯಿ	ಬದನೆಕಾಯಿ
ಟಮೊಟೋಪಂಡಲು	ಟಮೋಟೋ
ಪುಂಡಿಕಾ	ಸೊಪ್ಪು

೭. ಪ್ರಾಣಿಗಳಿಗೆ ಸಂಬಂಧಿಸಿದ ಪದಗಳು

ಮೇಕಾ	ಮೇಕೆ
ಕೋಡಿಪುಂಜ	ಹುಂಜ
ಕೋಡಿ	ಕೋಳಿ
ಗೋರ್ಯೆ	ಕುರಿ
ಸಿಂಹಂ	ಸಿಂಹ

೮. ಹೈನುಗಳಿಗೆ ಸಂಬಂಧಿಸಿದ ಪದಗಳು

ಪಾಲು	ಹಾಲು
ಪೆರುಗು	ಮೊಸರು
ಮಜ್ಜಿಗಾ	ಮಜ್ಜಿಗೆ
ನೇತುಪಟ್ಟು	ತುಪ್ಪ

೯. ಪಕ್ಷಿಗಳಿಗೆ ಸಂಬಂಧಿಸಿದ ಪದಗಳು

ಕಮಜ	ಖವಜಗ
ತಲೆಕೊಂಗ	ಕೊಕ್ಕರೆ
ಬಾತುಕೋಳಿ	ಬಾತುಕೋಳಿ
ಪಾಡಿವಾಳ್	ಪಾರಿವಾಳ
ಉರುಲುಗವು	ಗುಬ್ಬಿ

೧೦. ನಿತ್ಯೋಪಯೋಗಿ ವಸ್ತುಗಳಿಗೆ ಬಳಸುವ ಪದಗಳು

ಶಾಪುಲೋಲ್	ಮೀನುಬಲೆ
ಪಾಜಿ	ಕವಜಬಲೆ

ದೇಗಂ,ಗಂಪು	ಬುಟ್ಟಿ
ಹೀರೆಗೋಲ್	ಲಡ್ಡು
ಕನ್ಯಾಪಿಲ್ಲಿ	ಮುತ್ತೈದು
ಹಡಕುನು ತಿನ್ನಿಬೋರು	ಭಿಕ್ಷಾಟನೆ
ಡೇರೆ	ಗುಡಾರ

ಇಂತಹ ಅನೇಕ ಶಬ್ದಗಳಿಂದ ತೆಲುಗು ಭಾಷೆಯ ಮೇಲೆ ಕನ್ನಡ ಭಾಷೆಯ ಪ್ರಭಾವ ಸಾಕಷ್ಟು ಆಗಿದೆ ಎಂಬುದು ತಿಳಿದು ಬರುತ್ತದೆ. ಜೊತೆಗೆ ಕನ್ನಡ ಮತ್ತು ತೆಲುಗು ಸೋದರ ಭಾಷೆಗಳಾಗಿರುವುದರಿಂದ ಹತ್ತಿರದ ಸಾಮ್ಯ ಕಂಡು ಬರುವುದು ಸ್ವಾಭಾವಿಕವಾಗಿದೆ.

ಜನಪದ ಸಾಹಿತ್ಯ

ಜನಪದ ಸಾಹಿತ್ಯ ಲೋಕಕ್ಕೆ ದುರುಗ ಮುರುಗಿ ಸಮುದಾಯ ವೈಶಿಷ್ಟ್ಯವಾದ ಕೊಡುಗೆ ನೀಡಿದೆ.ಈ ಸಮುದಾಯದ ಆಚಾರ ವಿಚಾರ ನಡೆ-ನುಡಿಗಳಲ್ಲಿ ಇವರ ಸಂಸ್ಕೃತಿ ಅಡಗಿದೆ. ಹಾಡು, ಕುಣಿತ, ವೇಷ-ಭೂಷಣ ಮದುವೆ-ಮುಂಜಿವೆ. ವಿಶಿಷ್ಠ ಸಂಸ್ಕಾರಾದಿಗಳು ಮತ್ತು ಸಂಸ್ಕೃತಿಯನ್ನು ಎತ್ತಿ ಹಿಡಿಯಬಲ್ಲ ಕುರುಹುಗಳಾಗಿವೆ. ತಮ್ಮದೇ ಆದ ಪ್ರತ್ಯೇಕತೆಯನ್ನು ಕಾಯ್ದುಕೊಂಡು ಬಂದಿರುವ ಈ ಜನರಿಗೆ ಅವರದೇ ಆದ ಸಮಾಜ ಸಂಪ್ರದಾಯದ ಜೊತೆಗೆ ಸಂಸ್ಕೃತಿಯನ್ನು ಪೋಷಿಸಿಕೊಂಡು ಹೋಗುವ ಮನೋಭಾವನೆಯೂ ಇದೆ. ಈ ಸಮುದಾಯ ದೈನಂದಿನ ಕಷ್ಟ,ಸುಖ, ಸಮಸ್ಯೆ ಜೀವಂತ ದರ್ಶನ ಜನಪದ ಗೀತೆಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಬದುಕಿನ ನೈಜ ಚಿತ್ರಣವನ್ನು, ಜೀವನಾನುಭವವನ್ನು ಈ ಜನಪದ ಗೀತೆಗಳಲ್ಲಿ ಕಾಣಬಹುದು.

ಜನಪದ ಗೀತೆಗಳು : ಜನಪದ ಸಾಹಿತ್ಯದಲ್ಲಿ ಅತ್ಯಂತ ಪ್ರಾಮುಖತೆಯನ್ನು ಪಡೆದ ಜನಪದ ಗೀತೆಗಳು ಆಯಾ ಸಮುದಾಯದ ಸಂಸ್ಕೃತಿಯನ್ನು ಎತ್ತಿ ಹಿಡಿಯಬಲ್ಲ ಕುರುಹುಗಳಾಗಿವೆ. ಏಕೆಂದರೆ 'ಜನಪದ ಗೀತೆಗಳು ಸಂಸ್ಕೃತಿಯ ಒಂದು ಅಂಗ.'[೩] ಇದು ಬಾಯಿಯಲ್ಲಿಯೇ ಬ್ರಹ್ಮಾಂಡವನ್ನು ತುಂಬಿಕೊಂಡಿರುವ ಅನಕ್ಷರಸ್ಥ ಸಮಾಜದ ಸಾಹಿತ್ಯ ಪ್ರಕಾರ. 'ಭಾವನ ಪ್ರಧಾನವಾದ ಗೀತೆ ಪ್ರಪಂಚದಷ್ಟು ವಿಸ್ತಾರವೂ, ವೈವಿಧ್ಯಪೂರ್ಣವೂ ಸಮೃದ್ಧವೂ ಆದ ಜನಪದ ಪ್ರಕಾರ ಮತ್ತೊಂದಿಲ್ಲ. ಬದುಕಿನ ನಾನಾ ಅನುಭವದ ಶತಶತ ಮುಖಗಳನ್ನು ಮೈತುಂಬಿಕೊಂಡು ಭಾವ ಪ್ರಪಂಚದ ಬಗೆಬಗೆಗಳನ್ನೆಲ್ಲಾ ಹೆಕ್ಕಿಕೊಂಡು ಸಾರ್ವಕಾಲಿಕ ಜೀವನ ಮೌಲ್ಯಗಳಿಂದಲೇ ಬೀಗಿನಿಂತ ಜನಪದ ಗೀತೆಗಳು ಯಾವುದೇ ರಾಷ್ಟ್ರದ ಬಹುದೊಡ್ಡ ಸಂಪತ್ತು. ಅವು ಸಂಸ್ಕೃತಿಯ ಮಹಾ ಪ್ರತೀಕ'[೪]

ಜನಪದರು ಬದುಕಿನ ವಾಸ್ತವ ಕಟು ಸತ್ಯಗಳನ್ನು ತಮಗಾದ ನೋವು-ನಲಿವುಗಳನ್ನು,ಸುಖ-ದುಃಖಗಳನ್ನು, ಬವಣೆಗಳನ್ನು ಹಾಡಾಗಿ ತೋಡಿಕೊಳ್ಳುತ್ತಾರೆ. 'ಒಂದು ಜನಪದ ಗುಂಪಿನ ಬಳಕೆಯಲ್ಲಿರುವ ಹಾಡುಗಳನ್ನು

ಸಮಗ್ರವಾಗಿ ಸಂಗ್ರಹಿಸಿ, ವಿಶ್ಲೇಷಿಸಿ, ವರ್ಗೀಕರಿಸಿ ನೋಡಿದಾಗ ಆ ಗುಂಪಿನ ಜೀವನ ವಿಧಾನ, ಶ್ರದ್ಧೆ,ನಂಬಿಕೆ, ಆಚರಣೆಗಳು ನೈಜ ಪರಿಚಯ ನಮಗಾಗುತ್ತದೆ.'[೫]

ಜನಪದ ಗೀತೆಗಳು ವ್ಯಕ್ತಿಯ ಸೃಷ್ಟಿಯಾಗಿರದೆ, ಸಾಮೂಹಿಕ ಸೃಷ್ಟಿಯಾಗಿದೆ. ಜನಪದರ ಬದುಕು ತುಂಬಾ ಅಮಾಯಕವಾಗಿದ್ದು, ಸಿಟ್ಟು-ಆವೇಶ ಬಂದಾಗ ಕೊಚ್ಚಿಬಿಡುವ, ಸಂತೋಷ, ಉನ್ಮಾದವಾದಾಗ ಕುಣಿದು ಕುಪ್ಪಳಿಸುವ ಹಾಗೂ ಯಾವುದನ್ನೂ ಬಚ್ಚಿಟ್ಟುಕೊಳ್ಳದ ನಿಸರ್ಗ ಸಹಜ ಮನಸ್ಸು ಅವರದು. ತಮ್ಮ ಸುತ್ತಣ ಪರಿಸರದಲ್ಲಿ ಸಹಜವಾಗಿ ಇವರು ಬೆರೆಯುವುದರಿಂದ ಮತ್ತು ಬಾಳುವುದರಿಂದ ಇವರ ಗೀತೆಗಳಲ್ಲಿ ಒಂದು ಪರಿಸರ ಬದ್ಧ ಗುಣವನ್ನು ಕಾಣುತ್ತೇವೆ. ತಮ್ಮ ಪರಿಸರದಲ್ಲಿ ತಮ್ಮ ಮೇಲೆ ಪ್ರಭಾವ ಬೀರಿದ, ಬೀರುವ ವಸ್ತುಗಳನ್ನು ಕುರಿತು ಸಾಮೂಹಿಕವಾಗಿಯೇ ಪ್ರತಿಸ್ಪಂದಿಸುತ್ತಾರೆ. ಅನೇಕ ನಾಗರಿಕ ಗುಂಪುಗಳಿಗಿಂತ ಜನಪದ ಗುಂಪುಗಳಲ್ಲಿ ತಮ್ಮ ಗಮನ ಅಥವಾ ಲಕ್ಷ್ಯವನ್ನು ನಿಯಂತ್ರಿಸುವ ಆರ್ಥಿಕ ಶಕ್ತಿಸಾಮರ್ಥ್ಯಗಳು ಇರುವುದನ್ನು ಕೆಲವು ಮಾನವ ಶಾಸ್ತ್ರಜ್ಞರು ಗುರುತಿಸಿದ್ದಾರೆ.[೬]

ಜನಪದಗೀತೆ ಸಾಮಾನ್ಯವಾಗಿ ಒಂದು ಸಮುದಾಯದ ಸಂಸ್ಕೃತಿಯ ದರ್ಪಣ. ಮಾನವನ ಸಂಸ್ಕೃತಿಯ ವಿಕಾಸದ ಹಂತಗಳನ್ನು ದರ್ಶಿಸುವ ಸಾಮರ್ಥ್ಯ ಅವುಗಳದು. ಆದ್ದರಿಂದಲೇ ರಾಗೌ ಅವರ ಪ್ರಕಾರ 'ಪುರಾತನ ಮಾನವನ ಗೀತೆಗಳು ಪುರಾತನ ರೀತಿಯಲ್ಲಿಯೇ ಬದುಕುತ್ತಿರುವ ಇಂದಿನ ಎಷ್ಟೋ ಜನರ ಮಾನಸಿಕತೆಯನ್ನು ಪ್ರತಿ ಬಿಂಬಿಸುತ್ತವೆ.[೭]

ವಿಶಿಷ್ಟ ಸಂಸ್ಕೃತಿ ಪರಂಪರೆಯನ್ನುಳ್ಳ ದುರುಗಮುರಗಿಯರು ತಮ್ಮ ಮಾತೃಭಾಷೆಯಾದ ತೆಲುಗು ಹಾಗು ಕನ್ನಡದಲ್ಲಿ ಹಾಡಾಗಿ ಹಾಡುತ್ತಾರೆ. ಭಿಕ್ಷಾಟನೆ ನರ್ತನ, ಗೀತೆಗಳು ದುರುಗಮುರಗಿ ಸಮುದಾಯಗಳಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿವೆ. ದಿನನಿತ್ಯದ ಭಿಕ್ಷಾಟನೆ, ಭಕ್ತಿಗೀತೆಗಳನ್ನಾಗಿಸುವ ಜೀವಿಗಳಾಗಿದ್ದಾರೆ. ಇವರು ಹಾಡಿನಲ್ಲಿಯೂ ಜೀವನ ಸೌಂದರ್ಯ, ಅನುಭವ ರಸಿಕತನ, ಅಭಿನಯ ಪ್ರೇಕ್ಷಕರ ಮುಂದೆ ಲಡ್ಡು ಬಾರಿಸುವ ಕ್ರಮ, ತನ್ನ ಹೆಂಡತಿ ಉರುಮೆ ಬಾರಿಸುವಾಗ ಮೈಹುರಿದುಂಬುತ್ತದೆ. ಅವರು ಹಾಡುವ ರೀತಿಯೇ ಅಷ್ಟೊಂದು ಸೊಗಸಾಗಿರುತ್ತದೆ.

ದುರುಗಮುರಗಿ ಸಮುದಾಯದ ಬದುಕಿನ ವಿವಿಧ ಘಟ್ಟಗಳಾದ ಜನನ, ಋತುಮತಿ ಕಾರ್ಯಕ್ರಮಗಳಲ್ಲಿ ಹಾಡುಗಳನ್ನು ಹಾಡುವುದಿಲ್ಲ. ಮದುವೆ ಸಂದರ್ಭದಲ್ಲಿಯಂತೂ ಪೋತರಾಜ ಮದುವೆ ಹಿತ ನುಡಿಗಳನ್ನು ಹಾಡಿನ ಮೂಲಕ ಹೇಳುತ್ತಾರೆ. ಸಮುದಾಯದಲ್ಲಿ ಸಣ್ಣಮಗು ದುಃಖಿಸಿದರೆ ಲಾಲಿ, ಜೋಗುಳ ಹಾಡುಗಳನ್ನು ಹೇಳುತ್ತಾರೆ. ಒಮ್ಮೆ ಭತ್ತದ ಸಸಿ ಕೂಲಿ ಕೆಲಸಕ್ಕೆ ಹೋದಾಗ ಮಹಿಳೆಯರು ಸಮಯ ಕಳೆಯುವುದರ ಸಲುವಾಗಿ ಸಂತೋಷದ ಹಾಡುಗಳನ್ನು ಹೇಳುತ್ತಾರೆ. ಒಟ್ಟಿನಲ್ಲಿ ಈ ದುರುಗಮುರಗಿ ಸಮುದಾಯ ಹಾಡುಗಳಲ್ಲಿ ಒಂದೇ ಬಗೆಯ ಮುಗ್ಧತೆ, ಸರಳತೆ ಹಾಗೂ ಕೋಮಲತೆ ಈ ಮೂರು ಗುಣಗಳು ಎದ್ದು ಕಾಣಿಸುತ್ತವೆ.

ಸಾಹಿತ್ಯದ ವರ್ಗೀಕರಣ

ಮದುವೆ ಹಿತನುಡಿಗಳ ಹಾಡು

ಲಾಲಿ-ಜೋಗುಳ ಹಾಡುಗಳು

ಭಿಕ್ಷಾಟನೆ ಹಾಡುಗಳು

ಶ್ರಮ ಪರಿಹಾರ ಗೀತೆಗಳು (ಕೆಲಸದ ಹಾಡುಗಳು)

ಪೋತರಾಜ ನಿಂಗಪ್ಪ ಹಾಡಿರುವ ಮಲ್ಲಮನ ನಾಟಕದ ಹಾಡುಗಳು.

ದುರುಗಮುರಗಿ ಸಮುದಾಯದಲ್ಲಿ ಮದುವೆಯೂ ಸರಳ ರೀತಿಯಲ್ಲಿ ನಡೆಯುವುದು. ಮದುವೆಯ ಹಿತ ನುಡಿಗಳು ಇನ್ನೂ ಬೇರೆ ಸಮುದಾಯಗಳಲ್ಲಿ ಹೇಳುವುದಿಲ್ಲ. ಈ ಹಿತ ನುಡಿಗಳು ಅಷ್ಟೊಂದು ಮಹತ್ವವನ್ನು ಪಡೆದುಕೊಂಡಿವೆ. ತಾಳಿಕಟ್ಟುವ ಸಂದರ್ಭದಲ್ಲಿ ಪೂಜಾರಿ ಮತ್ತು ಹೆಂಡತಿ ಉರುಮೆ ಬಾರಿಸಿದರೆ ಸಾಕು, ಪೂಜಾರಿಯ ಹಿತನುಡಿಗಳು ಪ್ರಾರಂಭವಾಗುತ್ತವೆ.

ಮದುವೆ ಹಿತನುಡಿಗಳ ಹಾಡು

ಪೂಜಾರಿ :- ಚಿನ್ನುಲು ಕಾರಟಿ ಪೆದ್ದಲು ಕಾರಟಿ

ಹೆಣ್ಣು :- ಡ್ರಂ ಡ್ರಂ......

ಪೂಜಾರಿ :- ಏಕಲು ಜಾತಿ ವಂಶಂ

ಹೆಣ್ಣು :- ಡ್ರಂ ಡ್ರಂ.......

ಪೂಜಾರಿ :- ರಾವುಲೋಳ್ ಪಿಲ್ಲ ದ್ಯಾಮನೂರ ಪೋದಿಯಂ

ಹೆಣ್ಣು :- ಡ್ರಂ ಡ್ರಂ......

ಪೂಜಾರಿ :- ದ್ಯಾಮನೂರು ಪಿಲ್ಲ ರಾವಲೋಳ್ ವಚ್ಚಂದಿ

ಹೆಣ್ಣು :- ಡ್ರಂ ಡ್ರಂ......

ಪೂಜಾರಿ :- ಸಿಂದ್ಯಾಲೋಳ್ ಪಿಲ್ಲ ಸಿಂದ್ಯಾನೂರು ಪೋಯಿಂದಿ

ಹೆಣ್ಣು :- ಡ್ರಂ ಡ್ರಂ.....

ಪೂಜಾರಿ :- ಸಿಂದ್ಯಾಲೋಳ್ ಪಿಲ್ಲ ದ್ಯಾಮನೂರು ವಚ್ಚಂದಿ

ಹೆಣ್ಣು :- ಡ್ರಂ ಡ್ರಂ.....

ಪೂಜಾರಿ :- ಇವದು ತಾಳಿ ಕಟ್ಟಿ ಅಕ್ಕಿ ಕಾಳು ಎಸೋದು

ಹೆಣ್ಣು :- ಡ್ರಂ ಡ್ರಂ......

ಪೂಜಾರಿ :- ಮಾರಮ್ಮ ತೇರು

ಹೆಣ್ಣು :- ಡ್ರಂ ಡ್ರಂ.....

ಪೂಜಾರಿ :- ಈ ಗುಳೆ ಕುಸಿ ದೇವರ ಕುಸಿ ದೇವರ ನಡಸಿ

ಹೆಣ್ಣು :- ಡ್ರಂ ಡ್ರಂ.....

ಪೂಜಾರಿ :- ಕೋಟೆಗೆ ದೇವುಡು ಪುಗುಡಿ ಸುಚ್ಚಿ

ಹೆಣ್ಣು :- ಡ್ರಂ ಡ್ರಂ......

ಪೂಜಾರಿ :- ಮಾರಮ್ಮ ಕಾರಟಿ, ದುರುಗಮ್ಮಕಾರಟೆ

ಹೆಣ್ಣು :- ಡ್ರಂ ಡ್ರಂ.......

ಪೂಜಾರಿ :- ಇಬದು ಇಬದು ಪೆಳ್ಳಿ ಚೇಸೇಡು

ಹೆಣ್ಣು :- ಡ್ರಂ ಡ್ರಂ.....

ಪೂಜಾರಿ :- ರಂಗ ಪೇಸುಲಿ ಪಕ್ಕು ನಾಲ್ಕು ರೂಪಾಯಿಲು ದಂಡ

ಹೆಣ್ಣು :- ಡ್ರಂ ಡ್ರಂ.....

ಪೂಜಾರಿ :- ಪದಿಮಂದಿ ತಲ್ಲಿ ಪಿಲ್ಲಿ

ಹೆಣ್ಣು :- ಡ್ರಂ ಡ್ರಂ.....

ಪೂಜಾರಿ :- ಹಾ, ಅಣ್ಣಾ ಮಾರಮ್ಮ

ಹೆಣ್ಣು :- ಡ್ರಂ ಡ್ರಂ....

ಪೂಜಾರಿ :- ಚನ್ನಲ ಕಾರಟಿಲ ಪೆದ್ದಕಾರಟಿ, ತಲಕಾರಟ

ಹೆಣ್ಣು :- ಡ್ರಂ ಡ್ರಂ.....

ಪೂಜಾರಿ :- ಅಪುಡು ಅಕ್ಕಿಕಾಳು ಎಸೆ

ಹೆಣ್ಣು :- ಡ್ರಂ ಡ್ರಂ...

ಪೂಜಾರಿ :- ಕಟ್ಟು ಕಟ್ಟು ತಾಳಿ ಕಟ್ಟೇರಿ ದೇವಿ

ಹೆಣ್ಣು :- ಬಾಲ ಬೇಲು

ಪೂಜಾರಿ :- ಶರಣ ಎಂದವರಿಗೆ ಮರಣ ಇಲ್ಲವೋ ದೇವಿ

ಹೆಣ್ಣು :- ಬಾಲ ಬೇಲು

ಪೂಜಾರಿ :- ಲಗ್ನ ಮಾಡಿಕೊಂಡು ಬಂದರೆ

ಹೆಣ್ಣು :- ಬಾಲ ಬೇಲು

ಪೂಜಾರಿ :- ಹತ್ತು ಮಂದಿ ಸಮ ಕುಂತು ತಾಳಿಕಟ್ಟಿರೇ

ಹೆಣ್ಣು :- ಬಾಲ ಬೇಲು

ಪೂಜಾರಿ :- ಒ ಮಂದಿಗೆ ದೈವಿದಾರು ಮಂದಿಗೆ

ಹೆಣ್ಣು :- ಹಾಂ ಹಾಂ

ಪೂಜಾರಿ :- ಹೌದುಲ್ಲ

ಹೆಣ್ಣು :- ಹಾಂ ಹಾಂ

ಪೂಜಾರಿ :- ಬುದ್ಧಿವಂತ ಹೆಣ್ಣುಮಗಳು

ಹೆಣ್ಣು :- ಬಾಲು ಬೇಲು

ಪೂಜಾರಿ :- ಹುಟ್ಟಿದ ಹೆಸರು ತಂದರೇ

ಹೆಣ್ಣು :- ಬಾಲು ಬೇಲು

ಪೂಜಾರಿ :- ತಂದೆ ಮಗಳು ಹೆಸರು ಬಂತು

ಹೆಣ್ಣು :- ಬಾಲು ಬೇಲು

ಪೂಜಾರಿ :- ದೇವರು ಕೊಟ್ಟರು ನೋಡವ್ವ

ಹೆಣ್ಣು :- ಬಾಲು ಬೇಲು

ಪೂಜಾರಿ :- ಗುಡಿಗಾ ಕುಂತಿದ್ದವ್ವ

ಹೆಣ್ಣು :- ಬಾಲು ಬೇಲು

ಪೂಜಾರಿ :- ಬಡವರ ಮೇಲೆ ಹರಕೆ ಕೊಡು

ಹೆಣ್ಣು :- ಬಾಲು ಬೇಲು

ಪೂಜಾರಿ :- ನಿನ್ನ ಗುಡಿ ಮುಂದೆ ತಾಳಿ ಕಟ್ತೇನಿ

ಹೆಣ್ಣು :- ಬಾಲು ಬೇಲು

ಪೂಜಾರಿ :- ಮಗಳು ಮನೆ ಜೋಪಾನ ಲೋ

ಹೆಣ್ಣು :- ಬಾಲು ಬೇಲು

ಪೂಜಾರಿ :- ಹೊಗೆ ಮನೆ ಮೇಲೆ ನೋಡು

ಹೆಣ್ಣು :- ಬಾಲು ಬೇಲು

ಪೂಜಾರಿ :- ಇಬ್ಬರ ಜೋಡಿ ಕೂಡಿಸುವುದು

ಹೆಣ್ಣು :- ಬಾಲು ಬೇಲು

ಪೂಜಾರಿ :- ಇ ತಾಳಿ ಹರಿದದ್ದು ಗುರುತ ಎಲ್ಲೋ

ಹೆಣ್ಣು :- ಬಾಲು ಬೇಲು

ಪೂಜಾರಿ :- ಇದು ಕೂಡಿದ ಗುರುತು ಎಲ್ಲೋ

ಹೆಣ್ಣು :- ಬಾಲು ಬೇಲು

ಪೂಜಾರಿ :- ಇದು ಹಗಲಿಸಿದ ಗುರತು ಎಲ್ಲೋ

ಹೆಣ್ಣು :- ಬಾಲು ಬೇಲು

ಪೂಜಾರಿ :- ಎಲ್ಲಾ ನೀ ಜೋಪಾನ ಎಲ್ಲೋ

ಹೆಣ್ಣು :- ಬಾಲು ಬೇಲು

ಪೂಜಾರಿ :- ಮಾಡಿದ ಕಟ್ಟಿದ ತಾಳಿ ಎಲ್ಲೋ

ಹೆಣ್ಣು :- ಬಾಲು ಬೇಲು

ಪೂಜಾರಿ :- ಓ ಆಯಿತ್ತು ಇಲ್ಲಿಗೆ ತಾಳಿ ಕಟ್ಟುವದು ಆಯಿತು

ಹೆಣ್ಣು :- ಬಾಲು ಬೇಲು

ಪೂಜಾರಿ :- ನಿನ್ನ ಲಗ್ನ ಮಾಡಿ

ಹೆಣ್ಣು :- ಹಾ ಹಾ ಹಾ ಹಾಂ

ಪೂಜಾರಿ :- ಹತ್ತು ಮಂದಿ ಊಟ ಮಾಡಿ ಎಲೆ ಕೊಟ್ಟು

ಹೆಣ್ಣು :- ಹಾ ಹಾ ಹಾ ಹಾಂ

ಪೂಜಾರಿ :- ನಿನ್ನ ಹೆಣ್ಣ ನಿನ್ನ ಮನೆಗೆ ಕಳಿಸು.ನೆ

ಹೆಣ್ಣು :- ಹಾ ಹಾ ಹಾ ಹಾಂ

ಪೂಜಾರಿ :- ಗಂಡನ ಮನಗೆ ಕಳಸುವೆ ನೋಡ ಕಲ್ಯಾಣ

ಹೆಣ್ಣು :- ನೋಡ ಕಲ್ಯಾಣಪೂಜಾರಿ:-ಮತ್ತೆ ಬೀಗರು ಬಿಟ್ಟರು ಹೋಗುಬೇಡ

ಹೆಣ್ಣು :- ಹೋಗಬೇಕು

ಪೂಜಾರಿ :- ಓ ಲಗ್ನ ಎಲ್ಲೋ ಆದ ಮೇಕಾ ನಮ್ಮ ಕುಲ ಪದ್ಧತಿ ಏನೈತಿ

ಹೆಣ್ಣು :- ಹಂ ಹಂ

ಪೂಜಾರಿ :- ಅಪ್ಪ ಎರೆಡು ಕುಲದವರು ಜಾತ್ರೆ ನಡೆಯುವುದೋ

ಹೆಣ್ಣು :- ಬಾಲು ಬಾಲು

ಪುಜಾರಿ :- ಒಂದು ಬ್ಯಾಟೆ ಕೊಯ್ಯಿಬೇಕು

ಹೆಣ್ಣು :- ಬಾಲು ಬೇಲು

ಪೂಜಾರಿ :- ಬ್ಯಾಟೆ ಕೊಯ್ಯಿದೆ

ಹೆಣ್ಣು :- ಬಾಲು ಬೇಲು

ಪೂಜಾರಿ :- ಮನೆಗೊಬ್ಬ ಕರೆದು ಕೊಂಡು ಬಂದು

ಹೆಣ್ಣು :- ಬಾಲು ಬೇಲು

ಪೂಜಾರಿ :- ನಿಮ್ಮ ಬೀಗರು ಬಿದ್ದರು ಎಷ್ಟು ಜನರೆ ಐಯೀದರೋ

ಹೆಣ್ಣು :- ಬಾಲು ಬೇಲು

ಪೂಜಾರಿ :- ಅಷ್ಟೇ ಜನ ಕೂಡಿ ಹಾಕಿ

ಹೆಣ್ಣು :- ಬಾಲು ಬೇಲು

ಪೂಜಾರಿ :- ಓ ಎಲ್ಲಾರು ಬೀಗರು ಬಿದ್ದರು ಕೂಡಿದ ಮೇಲೆ

ಹೆಣ್ಣು :- ಬಾಲು ಬೇಲು

ಪೂಜಾರಿ :- ಎಷ್ಟು ಜನ ಕುಡಿಯುತ್ತಾರೆ, ಆಕೆ ಕೊಂಡು

ಹೆಣ್ಣು :- ಹಾ ಹಾ ಹಾ ಹಾ ಹಾಂ

ಪೂಜಾರಿ :- ಸರಾಯಿ ಕುಡಿದ

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಸರಾಯಿ ಕುಡಿದ ಕೊಂಡು ಬಂದು

ಹೆಣ್ಣು :- ಹಾಂ ಹಾಂ

ಪೂಜಾರಿ :- ಎಲ್ಲಾರನು ಪತ್ರನು ಮೇಲೆ ಕರದುಕೊಂಡು ಬಂದು

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಬಂದು ಬೀಗದವರು ಏನೋ ಮಾಡುತ್ತಾನೆ.

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಅಪ್ಪ ನನಗೊಬ್ಬನಿಗೆ ತಿಂದರೆ ಚಂದ ಅಲ್ಲ

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಮನೆ ಮನೆಗೊಬ್ಬರನು ಕಾದುಕೊಂಡು ಬಂದುಹೆಣ್ಣು:-ಹಾಂ ಹಾಂ ಹಾಂ

ಪೂಜಾರಿ :- ಎಲೆ ಕೊಟ್ಟು ಊಟ ಮಾಡಿದ ಮೇಲೆ

ಹೆಣ್ಣು :- ಬಾಲ ಬೇಲು

ಪೂಜಾರಿ :- ಹತ್ತಮಂದಿ ಅನ್ನ /ಹೆಣ್ಣು:-ಅನ್ನದಾನ

ಪೂಜಾರಿ :- ಅನ್ನದಾನ ಗೋದಾನ

ಹೆಣ್ಣು :- ಗೋದಾನಪೂಜಾರಿ:-ಅನ್ನದಾನ ವಸ್ತ್ರದಾನ

ಹೆಣ್ಣು :- ವಸ್ತ್ರದಾನ

ಪೂಜಾರಿ :- ಬೀಗರು ಬಿದ್ದರು ತಣ್ಣಗೆ ಇರಬೇಕು

ಹೆಣ್ಣು :- ಬಾಲು ಬೇಲು

ಪೂಜಾರಿ :- ಓ ಅವಾಗ ಎಲ್ಲ ಮುಗಿದು ಮೇಕಾ

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಮತ್ತೆ ಇನ್ನು ಏನೂಹೇಳುತ್ತಾರೆ ಅಂದ್ರೆ

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಮಗಳಿಗೆ ಬುದ್ಧಿ ಇಲ್ಲ ಹುಡುಗ ಬಿದ್ಧಿಹೇಳಿಲ್ಲ

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಯಜಮಾನರ ತಿನ್ನುವುದಕ್ಕ ನೋಡಿದರೆ

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಸರಾಯಿ ಕುಡಿಯೋಕೆ ನೋಡಿದಿರಿ

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಕೋಳಿ ಮಾಂಸ ತಿನ್ನುವುದಕ್ಕೆ ನೊಡಿದಿರಿ

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಮತ್ತೆ ಈ;ಹುಡುಗಿ ಹುಡಗಗೆ ಬುದ್ದಿ ಯಾರ ಹೇಳಬೇಕು

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಗಂಡನ ಮನಗೆ ಅತ್ತೆ ಮಾವನರ ಸಿಟ್ಟ ಅಗದಿರಿ

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಅದಕ್ಕ ತೀರ್ಮಾನವಾಗಬೇಕು

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಹರೇ ಮಗಳು ಮಂಕ ಮಗಳು

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಮಗಳು ಏನೇನು ಅಂದರೆ

ಹೆಣ್ಣು :- ಹಾಂ ಹಾಂ ಹಾಂ

ಪೂಜಾರಿ :- ಅತ್ತೆ ಮಾವ ಸುಧಾರಿಸಿಕೊಂಡುಬೇಕು

ಹೆಣ್ಣು :- ಬಾಲು ಬೇಕು

ಪೂಜಾರಿ :- ಗಂಡು ಏನನ್ನು ಅಂದರೆ

ಹೆಣ್ಣು :- ಬಾಲು ಬೇಕು

ಪೂಜಾರಿ :- ಮಗಳು ಸುಧಾರಿಸ ಬೇಕು

ಹೆಣ್ಣು :- ಬಾಲು ಬೇಕು

ಪೂಜಾರಿ :- ಸಿಟ್ಟುವುದು ಅಲ್ಲಾ ಇದು

ಹೆಣ್ಣು :- ಬಾಲು ಬೇಲು

ಪೂಜಾರಿ :- ನಾಜುಕನ ಕಾಲ ಇದು

ಹೆಣ್ಣು :- ಬಾಲು ಬೇಕು

ಪೂಜಾರಿ :- ಶಾಂತ ಇರಬೇಕು

ಹೆಣ್ಣು :- ಬಾಲು ಬೇಕು

ಪೂಜಾರಿ :- ದೇವರ ಮೇಲೆ ಹಾನ

ಹೆಣ್ಣು :- ಬಾಲು ಬೇಕು

ಪೂಜಾರಿ :- ಒ ಲಗ್ನಮಾಡಿ ಆಕೆಗೇ ಬುದ್ದಿ ಹೇಳಿ ಈಕೆಗೆ ಬುದ್ದಿ ಹೇಳಿ

ಹೆಣ್ಣು :- ಹಾ ಹಾ ಹಾ ಹಾ

ಪೂಜಾರಿ :- ಆಯಿತಮ್ಮ ಮೂರ ದಿವಸ, ನಾಲ್ಕುದಿವಸ ಬಿದ್ದು

ಹೆಣ್ಣು :- ಹಾ ಹಾ ಹಾ ಹಾ

ಪೂಜಾರಿ :- ಅವಾಗ ತವರುಮನೆಯಿಂದ ಗಂಡನ ಮನೆಗೆ ಭಜನೆ ಮಾಡಿಕೊಂಡು ಹೋಗುತ್ತಾರೆ ನೋಡಿ

ಹೆಣ್ಣು :- ಹಾ ಹಾ ಹಾ ಹಾ

ಪೂಜಾರಿ :- ಅವಾಗ ಹೆಗಲಿ ಮೇಲೆ ಇಟ್ಟುಕೊಂಡು ಸೋದರ ಮಾವ

ಹೆಣ್ಣು :- ಹಾ ಹಾ ಹಾ ಹಾ

ಪೂಜಾರಿ :- ಲಗ್ನ ಗಂಡನ ಮಗನು ಇಟ್ಟುಕೊಂಡು

ಹೆಣ್ಣು :- ಹಾ ಹಾ ಹಾ ಹಾ

ಪೂಜಾರಿ :- ಸೋದರ ಮಾವ ಅವರು ಹೊತ್ತುಕೊಂಡು ತಾನು

ಹೆಣ್ಣು :- ಹಾ ಹಾ ಹಾ ಹಾ

ಪೂಜಾರಿ :- ಸೋದರ ಅತ್ತೆಯನ್ನು ಒಬ್ಬನಂತೂ ಹೊತ್ತುಕೊಂಡುತಾನ

ಹೆಣ್ಣು :- ಹಾ ಹಾ ಹಾ ಹಾ

ಪೂಜಾರಿ :- ನಡಿ ನಡಿ ಗಂಡನ ಮನೆಗೆ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಗಂಡನ ಮನೆಗೆ ಹೋಗು

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಸಾಕು ಸಾಕು ನೋಡಪ್ಪ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಈಗ ನಿಮ್ಮ ಮಾವನವರು, ಅತ್ತೆನವರು, ಮೈದನವರು ಬಂದು

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಹುಡುಗಿ ಬಂದು ಲಗ್ನಮಾಡಿಕೊಂಡು ಎಲ್ಲ ನಿಮ್ಮ ಮನೆಗೆ ವಕ್ಕದಂತೆ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ನಿಮ್ಮ ಮನೆ ಕಳಸುವಿ, ನಿಮ್ಮ ಬಾರ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಕೆಟ್ಟರೇ ನಿಮ್ಮ ಭಾರ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಸಾವಕಂದ್ರಿ ನಿಮ್ಮ ಭಾರ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಏನ್ನು ಪರಪಾಟು ಮಾಡಿ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಸುಮ್ಮನೆ ಮೇಲೆ ಬಂದ್ರೆ ನಮ್ಮ ಮೇಲೆ ಇಷ್ಟಾಲ್ಲಾ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಅದಕ್ಕ ಸಮಾಮಾಡಿ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಈ ಮಗಳು ಹದಿನೈದಿ ದಿವಸ ತಕ್ಕ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಊರಗಾ ಕಳಸಬಾರದು

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಮನೆಗೆ ಇದ್ದ ಅಕ್ಕಿ ಅಲ್ಲ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಮನೆಗೆ ಇದ್ದ ಜೋಳ ಅಲ್ಲ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಮನೆಗೆ ಇದ್ದ ಮೆಣಸಿನಕಾಯಿ ಅಲ್ಲ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಮನೆಗೆ ಟಮೊಟೋ ಅಲ್ಲ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಬಂದು ಎಂಟು ದಿವಸಗಳುದ್ದು

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಆಕೆಗೆ ಅಡಿಗೆ ಮಾಡಿ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಬಟ್ಟೆ, ಭೋಜನ ಮಾಡಿ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ತಣ್ಣಗೆ ಮಾಡಸಮ್ಮ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ನಾಲ್ಕು ಐದು ತಿಂಗಳ ಒಳಗು ಮತ್ತೇ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಮತ್ತೆ ನೋಡಪ್ಪ ಡೋಲು

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಹೆಗಲಿಗೆ ಜೋಳಿಗೆ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ಬಲಗಡೆಗೆ ಉರುಮೆ

ಹೆಣ್ಣು :- ಡ್ರಂ, ಡ್ರಂ, ಡ್ರಂ,

ಪೂಜಾರಿ :- ನಡೆ ನಡೆ ಊರಾಕೆ

ಜೋಗುಳ ಹಾಡುಗಳು

ಜನಪದ ಗೀತೆ ಪ್ರಕಾರಗಳಲ್ಲಿ ಶಿಶುಗೀತೆಯೂ ಒಂದು. ಮಾನವ ಜೀವನ ಎಂಬುವುದು ಮಕ್ಕಳ ಭೂತ ಭವಿಷ್ಯವನ್ನು ಅವಲಂಬಿತವಾಗಿರುತ್ತದೆ. ಅಂತೆಯೇ ಮಕ್ಕಳು ಭೂತ ಭವಿಷ್ಯಗಳನ್ನು ಬೆಸೆಯುವ ವಿಶಿಷ್ಟ ಶಕ್ತಿಗಳಾಗಿದ್ದಾರೆ. ವ್ಯಕ್ತಿ ಜೀವನದ ವಿವಿಧ ಸಂಗತಿಗಳಿಗೆ ಸಂಬಂಧಿಸಿದ ಗೀತೆಗಳ ಸರಣಿಯಲ್ಲಿ ಮಕ್ಕಳ ಗೀತೆಗಳು ಸೇರುತ್ತವೆ. ಇವುಗಳಲ್ಲಿ ಮಕ್ಕಳ ಮುಗ್ಧತೆ, ಕೋಮುಲಭಾವ ಹಾಗು ನಿಷ್ಕಲ್ಮಷ ಹೃದಯವು ವ್ಯಕ್ತವಾಗುತ್ತದೆ.

ದುರುಗ ಮುರುಗಿ ಸಮುದಾಯದ ಮಹಿಳೆಯರು ಲಾಲಿ ಜೋಗುಳ ಹಾಡುಗಳನ್ನ ತಮ್ಮದೇ ಶೈಲಿಯಲ್ಲಿ ಹಾಡುತ್ತಾರೆ. ಮಹಿಳೆಯರು ಗುಡಾರದಲ್ಲಿ ಅಡ್ಡವಾಗಿ ಹಾಕಿದ ಬಿದಿರುಗಳಿಗೆ ಹಳೇ ಸೀರೆಯ ಜೋಳಿಗೆಯನ್ನು ಕಟ್ಟುತ್ತಾರೆ. ಆ ಜೋಳಿಗೆಯಲ್ಲಿ ಮಗುವನ್ನು ಮಲಗಿಸುತ್ತಾ ಲಾಲಿ ಹಾಡು ಹಾಡುತ್ತಾರೆ.

ಲಾ ಲಾ ಮ್ಮ ಲಾಲಿ ಕಂದಾಲಿ, ಸುವಾಲಿ
ಅಲಾಲಿ ಕುಲಾಲಿ ಚವಾಡಿ ಲಾಲಿ, ಕುಲಾ ಲಾಡಿ
ಸಂದಮಾಮ ವಚ್ಚಾಡೆ
ಅಲಾಲಿ ಕುಲಾಲಿ ಚವಾಡೆ ಲಾಲಿ ಕಂಟಿ ಪಾಲಿ

ಸೆಕೆಯನಾ ಜೋಳೆಕಾನಾ ತೊಟ್ಟಲನಾ ಸಿನ್ನಿನಾನ್ಯ ಮುತ್ತವಾಲಿಮ್ಮ
ಅಲಾಲಿ ಕುಲಾಲಿ ಚವಾಡೆ ಲಾಲಿ ಕಂಟಿ ಪಾಲಿ
ಸಿಂದ್ಯಾಕೆ ಪೆಟ್ಟಲಿನು, ಬಾಳಕೆ ಪೆಟ್ಟಲಿನು
ಯವರೇನೇಲಪಟ್ಟರೇನಮ್ಮ ಮ್ಮ..
ನಿನ್ನ ಏವರೇ ಏನೇ ಕೊಟ್ಟರೇ
ಸಿಂಧೆಯಮ್ಮ ಗಾಳಿಮ್ಮ ರವಾನೇ
ಅಲಾಲಿ ಕುಲಾಲಿ ಚವಾಡೆ ಲಾಲಿ. ಕುಲಾ ಲಾಡೆ
ಕಂದಾಲಿ ಜೊ ಜೊ ಜೊ ... ಲಾ ಲಿ
ಕಂದಾಲಿ ಜೊ ಜೊ ಜೊ ಲಾ ಲಿ ಲೊ
ಅಲಾಲಿ ಕುಲಾಲಿ ರವಾಮ್ಮ ನಾ
ಅಲಾಲಿ ಕುಲಾಲಿ ರವಾಮ್ಮ ನಾ
ಏಡೋರಾಕ ಚಂದ್ರ ಮಾಮಾಲ್ಲ

ಭಿಕ್ಷಾಟನೆ ಹಾಡುಗಳು

ಹಾ ಹಾ ಹಾ ಹಾ ಏ ಬಹಳ ಉರುಮೆ ಬಡಿ ಬೇಡ
ಈ ಜನರು ಏಕೆ ಬಂದರೆ? ನಾ ಊರು ಆಡಕೆ ಬಂದಿನಿ
ಈ ಊರ ಭಕ್ತಿ ಎಂತಾ ನೋಡಾಕ ಬಂದೀನಿ
ಅವರ ಧರ್ಮ ಹೆಂಗೈತೆ ಕರ್ಮ ಹೆಂಗೈತೆ ನ್ಯಾಯ ಹೆಂಗೈತೆ
ಲಗ್ನ ಹೆಂಗೈತೆ, ಕಂಟಕ ಹೆಂಗೈತೆ, ಪೀಡ ಹೆಂಗೈತೆ
ನಾ ದುರ್ಗಾಮ್ಮ ಕಂಟಕ ಹೇಳಕೆ ಬಂದಿನಿ
ನಾ ಈ ಕೇಡೆ ಪೂಜಾರಿಯಲ್ಲ, ನನ್ನಂದು ಬಹಳ ದೂರ ಲೈತೆ
ಬಹಳ ದೂರದಿಂದ ಮಾರಮ್ಮ ಪೂಜಾರಿ ಮಾತ್ರ ಹೇಳುತ್ತೇನೆ
ನಿಮ್ಮ ಸವಾಜದತ್ತ ಕಿವಿ ಗೊಟ್ಟು ಕೇಳಿಬೇಕು
ಕಣ್ಣುತುಂಬು ನೋಡು ಬೇಕು, ನಾ ಮುತ್ತಿನಂಥ ಮಾತು
ಹೇಳಿಕೊಂಡು ಹೋಗುತ್ತೇನೆ
ನಮ್ಮದು ಯಾವ ಸೀಮೆ ಅಂದರೆ ಕೂಡ್ಲಿಗಿಯಿಂದ
ಕೊಟ್ಟೂರು, ಹರಪನಹಳ್ಳಿ, ಹುಲಿಗೆ, ಗಂಗಾವತಿ, ದಾವಣಗೆರೆ
ಹರಿಹರ, ರಾಣಿಬೆನ್ನೂರು, ಮಾಲೋಸೋರು, ಬ್ಯಾಡಗಿ, ಮೈಸೂರು
ಮೇಲೆಗಡೆ ಮಲೆನಾಡಿನ ಸೀಮೆಯ ಪೂಜಾರಿ

ಮಾರಮ್ಮ, ಲನಿಮ್ಮ ಊರಿಗೆ ಬಂದಾಳ್ರಿ, ದಾಳಮ್ಮ ಬಂದಾಳ್ರಿ
ಗೂಡುಗು ದುರುಗಮ್ಮ ಬಾಂದಾಳ್ರಿ, ಚೌಡಮ್ಮ ಬಂದಾಳೆ
ನಿಮ್ಮ ಮನೆ ಹರಕೆ ಇದ್ದವರು, ಮುಡಪ್ಪು ಇದ್ದವರು,
ಮೀಸಲು ಇದ್ದವರು ಬಹಳ ದಿನ ಇಟ್ಟಗಾ ಬ್ಯಾಡರಿ
ಇಂಗ ಮಾರಮ್ಮ ಪೂಜಾರಿಗೆ ;ಮುಡಪು ಕೊಡ
ಮೈಮೇಲೆ ಕಂಟಕ ಹೋಗುವುದು. ಅದು ಪದ
ಹೇಳುತ್ತೇನೆ. ಸ್ವಲ್ಪ ಕಿವಿ ಕೊಟ್ಟು ಕೇಳಿರಿ ತಾಯಿ
ಹಾ ಹಾ ಹಾ ಹಾ ವೇರಿ ಹಾ ಹಾ ಹಾ ಹಾ ದೇವಿ
ಹೆಣ್ಣು :- ಹಾ ಹಾ ಹಾ ಹಾ ಒಡೆಯ
ಪೂಜಾರಿ :- ಮಹಾದೇವಿ ಸತಿ
ಹೆಣ್ಣು :- ಹಾ ಹಾ ಹಾ ಹಾ ಒಡೆಯ
ಪೂಜಾರಿ :- ಬಂದಂತಹ ಕಂಟಕ
ಹೆಣ್ಣು :- ಹಾ ಹಾ ಹಾ ಹಾ ಒಡೆಯ
ಬಯಲು ಮಾಡಿಕೊಂಡು
ಹೆಣ್ಣು :- ಹಾ ಹಾ ಹಾ ಹಾ ಒಡೆಯ
ಪೂಜಾರಿ :- ಈ ಊರುನಲ್ಲಿ ಯಾರು ಕೊಟ್ಟರೆ ಅಂದರೆ
ತೆಲುಗಿನಲ್ಲಿ ಒಂದು ಸಾಮಾನು ಕೊಟ್ಟರೇ
ಹೆಣ್ಣು :- ಯಾವುದು ಒಡೆಯ
ಪುಜಾರಿ :- ಸೇರಣಿ ಗೆಜ್ಜೆ ಪೆಟ್ಟಿಗಿ ಕೊಟ್ಟಾರು ಅಪ್ಪ
ಯಾಕೆ ಕೊಟ್ಟಾರೆ ಅಪ್ಪ ಅಂದರೆ
ಅವರಿಗೆ ಮಕ್ಕಳಿಗೆ ಮೈಲಿ ಎದ್ದಿದ್ದವು
ಮಕ್ಕಳಿಗೆ ಬೇಡಿಕೊಡುವ ಸಾಮಾಲು
ಅವಳು ಕಾಯಿಗೆ ನಡುವಿಗೆ ಪಟ್ಟಿ
ಮೂಗಿಗೆ ಮೂಕತಿ
ಕೊರಳಿನಲ್ಲಿ ತಾಳಿ
ಏಕೆ ಕೊಟ್ಟಳು ಅಪ್ಪ ಅಂದರೆ ಅವರ ಮಕ್ಕಳ ಮೈಲಿ ಕಂಟಕ
ಬಂದಾನಿ ಈ ಗುಡಿಗೆ ನಮ್ಮಗೆ ಸಾಮಾನು ಕೊಟ್ಟರೆ ಅಪ್ಪ
ಆ ಸಾಮಾನು ಸುದ್ದಿ ಹೇಳುತ್ತೇನೆ ಕಿವಿ ಜಕೊಟ್ಟ ಕೇಳರಿ ತಂಗಿ

ಹೆಣ್ಣು :- ಯಾವುದು

ಪೂಜಾರಿ :- ಕೇಳಿದ ಮೇಲೆ ನಿಮ್ಮ ಮನೆಗೆ ಇದ್ದಂತಹ ಸಾಮಾನುಗಳು

ಏನೇ ಹರಕೆಯನ್ನು ಬೇಡಿಕೊಂಡಿರುವಿರಿ ಎಲ್ಲದು ಕೊಟ್ಟುಬಿಡುಬೇಕು

ಕೊಡಲಿದ್ದರೆ ನಿಮ್ಮ ಬಹಳ ಹೊಗೆ ಬರುತ್ತದೆ

ಸ್ವಲ್ಪ ಕಿವಿ ಕೊಟ್ಟು ಕೇಳಬೇಕು

ಪೂಜಾರಿ :- ತೆಲುಗಿಗೆ ಸಾಮಾನು ಕೊಟ್ಟರೆ ಹೇಳುತ್ತೇನೆ ಕೇಳಿರಿ

ಹೆಣ್ಣು :- ಯಾವುದು

ಪೂಜಾರಿ :- ಅಯಮ್ಮನ ಹೆಸರು ರುದ್ರವ್ವ

ಹೆಣ್ಣು :- ಯಾವುದು

ಪೂಜಾರಿ :- ರುದ್ರವ್ವ ಮೈಯಿಗೆ ಬಂದು ಸೇರುಣು ಪಟ್ಟಿಯನ್ನು ಕೊಟ್ಟಾಳು

ಹೆಣ್ಣು :- ಯಾವುದು

ಪೂಜಾರಿ :- ಮಹಾದೇವಿ ಸತಿ ತೆಲುಗ ಎಂಬ ಊರುಗ

ಹೆಣ್ಣು :- ತಂಬಾಲ ತಂ ಊರಿಗೆ

ಪೂಜಾರಿ :- ಮಕ್ಕಳ ಮೇಲಿ ಮೈಯಿಗಾ

ಹೆಣ್ಣು :- ದೇವಿ ತಂ ಬಾಲ ತಂ

ಪೂಜಾರಿ :- ನೀರಿಗೆ ಪಟ್ಟಿ ಕೊಟ್ಟರೆ

ಹೆಣ್ಣು :- ತಂ ಬಾಲ ತಂ

ಪೂಜಾರಿ :- ದೇಶ ಬಿಟ್ಟಿ ಬಂದಾಳೆ

ಹೆಣ್ಣು :- ತಂ ಬಾಲ ತಂ

ಪೂಜಾರಿ :- ರಾಜ್ಯ ಬಿಟ್ಟು ಬಂದಾಳೆ

ಹೆಣ್ಣು :- ತಂ ಬಾಲ ತಂ

ಪೂಜಾರಿ :- ಊರ ಬಿಟ್ಟು ಬಂದಾಳೆ

ಹೆಣ್ಣು :- ತಂ ಬಾಲ ತಂ

ಪೂಜಾರಿ :- ನಮ್ಮ ಊರಿಗೆ ಬಂದಾಳೆ

ಹೆಣ್ಣು :- ತಂ ಬಾಲ ತಂ

ಪೂಜಾರಿ :- ಊರು ಇಂತಹ ಜನರು

ಹೆಣ್ಣು :- ತಂ ಬಾಲ ತಂ

ಪೂಜಾರಿ :- ಹರಕೆ ಇದ್ದವುರ ಜನರು

ಹೆಣ್ಣು :- ತಂ ಬಾಲ ತಂ

ಪೂಜಾರಿ :- ದಡಾರ ಮಕ್ಕಳ ಹರಕೆ ಇದ್ದವುರ

ಹೆಣ್ಣು :- ತಂ ಬಾಲ ತಂ

ಪೂಜಾರಿ :- ಮಕ್ಕಳ ಹುಳಿಸ್ಯಾಳ

ಹೆಣ್ಣು :- ತಂ ಬಾಲ ತಂ

ಪೂಜಾರಿ :- ದೇಶಕ್ಕ ಗುರುತ ಆಗಬೇಕು

ಹೆಣ್ಣು :- ತಂ ಬಾಲ ತಂ

ಪೂಜಾರಿ :- ರಾಜ್ಯಕ್ಕೆ ಗುರುತ ಆಗಬೇಕು

ಹೆಣ್ಣು :- ತಂ ಬಾಲ ತಂ

ಪೂಜಾರಿ :- ಅಲ್ಲಿಗೆ ಸಾಕು ಬಿಡು

ಹೆಣ್ಣು :- ಯಾವುದು

ಪುಜಾರಿ :- ನಾನು ಒಂದೇ ಶಾಸ್ತ್ರ ಹೇಳಿದಿನಿ ಸಾಕು ಮಾಡ ತಂಗಿ

ಭಾಗ -- ೨

ಪೂಜಾರಿ :- ಮಹಾದೇವಿ ಸಾದಿ ಸತಿ ಹಸು ಮಕ್ಕಳ ಇದ್ದವುರು

ಮಹಾತಾಯಿ ಗುಡಿಯ ನಾನು ಹೇಳಿದ ಮಾತು ಕೇಳಿರಿ

ಮಹಾದೇವಿ ಸತಿ ನೋಡೆ ಬಾರವ್ವ ರಾಜ್ಯ ಕಲ್ಯಾಣ

ಹೆಣ್ಣು :- ನೋಡೆ ಬಾರವ್ವ ರಾಜ್ಯ ಕಲ್ಯಾಣ.

ಪೂಜಾರಿ :- ಕಿವಿ ಕೊಟ್ಟ ಕೀಳಾರಿ ರಾಜ್ಯ ಕಲ್ಯಾಣ

ಹೆಣ್ಣು :- ಕಿವಿ ಕೊಟ್ಟ ಕೀಳಾರಿ ರಾಜ್ಯ ಕಲ್ಯಾಣ

ಪೂಜಾರಿ :- ದೇವ ಬಿಡುಬಾರದು ರಾಜ್ಯ ಕಲ್ಯಾಣ

ಹೆಣ್ಣು :- ರಾಜ್ಯ ಕಲ್ಯಾಣ

ಪೂಜಾರಿ :- ರಾಜ್ಯಬೀಡು ಬೇಡ ರಾಜ್ಯ ಕಲ್ಯಾಣ

ಹೆಣ್ಣು :- ರಾಜ್ಯ ಕಲ್ಯಾಣ

ಪೂಜಾರಿ :- ರಾಜ್ಯವೇ ಮೇಲೆ ರಾಜ್ಯ ಕಲ್ಯಾಣ

ಹೆಣ್ಣು :- ರಾಜ್ಯ ಕಲ್ಯಾಣ

ಪೂಜಾರಿ :- ದೇಶವೇ ಬೇರೆ ರಾಜ್ಯ ಕಲ್ಯಾಣ

ಹೆಣ್ಣು :- ರಾಜ್ಯ ಕಲ್ಯಾಣ

ಪೂಜಾರಿ :- ಓ ಅದು ಬಿಡು ಅವರು ಮೇಲೆ ಕಂಟಕ ಏನುತೈ

ಹರಕೆ ಏನೆತ್ತೈ ಪೀಡೆ ಏನೆತ್ತೈ ಪಿಶಾಚಿ ಏನ್ನೈತೋ, ಈ
ಮುಂಗಾಣೆ ಕಾಯಿಲೆಗಳು ಬಂದ ಬಿಟ್ಟವು
ಈ ತಾಯತ ತಗೊಂಡು ಹೋಗಿ ಮಕ್ಕಳ ಮೈಮೇಲೆ
ಹಾಕಿ ಬಿಟ್ಟರಿ, ಮಕ್ಕಳ ಮೇಲೆ ಇದ್ದಂತಹ ಕಂಟಕ ಎಲ್ಲ ಹೋಗಿ ಬಿಡುವುದು.

ಶ್ರಮ ಪರಿಹಾರ ಗೀತೆಗಳು

ಜನಪದರು ತಮ್ಮ ನಿತ್ಯ ಜೀವನದಲ್ಲಿ ಬದುಕಿನ ಸುಖ ದುಃಖಗಳನ್ನು ಹಾಡಿನಲ್ಲಿ ತೋಡಿಕೊಂಡು, ಕೆಲಸದ ಭಾರದ ಜೊತೆಗೆ ಹೃದಯದ ಭಾರವನ್ನು ಹಗುರ ಮಾಡಿಕೊಳ್ಳುತ್ತಾರೆ. ಇವುಗಳನ್ನು ಶ್ರಮ ಪರಿಹಾರ ಗೀತೆಗಳೆಂದು ಕರೆಯಬಹುದು. ಈ ಹಾಡುಗಳಿಗೆ ಇತಿಮಿತಿ ಎಂಬುದಿಲ್ಲ. ಬಾಳಿನ ಆಸರಿಕೆ ಬೇಸರಿಕೆಯನ್ನು ಇವುಗಳ ಮುಖಾಂತರವಾಗಿ ಪರಿಹರಿಸಿಕೊಳ್ಳುವುದರಿಂದ ಈ ಹಾಡುಗಳು ತುಂಬಾ ವೈಶಿಷ್ಟ್ಯಪೂರ್ಣವಾಗಿವೆ.

ಸಮುದಾಯದ ಜನರು ದಿನದ ಕೂಲಿ ಕೆಲಸಕ್ಕೆ ಹೋದಾಗ ಒಂದೋ,ಎರಡೋ ಕಾಯಕದ ಬೇರೆ ಬೇರೆ ಪಂತಗಳಲ್ಲಿ ಬಗೆ ಬಗೆಯ ಗೀತೆಗಳನ್ನು ಹಾಡುತ್ತಾರೆ. ಅವರ ಜೊತೆಯಲ್ಲಿ ಬಂದಿರುವ ಕೂಲಿ ಮಹಿಳೆಯರು ಬಹಳ ಸಂತೋಷಪಡುವರು. ಶ್ರಮ ಜೀವನದಲ್ಲಿ ಸಂತೃಪ್ತಿ ಕಂಡ ದುರುಗಮುರಗಿ ಸಮುದಾಯ ಮಹಿಳೆಯರು ತುಂಬಾ ಕಷ್ಟಜೀವಿಗಳಾಗಿದ್ದಾರೆ. ಮಳೆ,ಗಾಳಿ, ಬಿಸಿಲೆನ್ನದೆ ಬೆವರು ಸುರಿಸಿ ಬದುಕನ್ನು ನೂಕುತ್ತಿರುವ ಮಹಿಳೆಯರು ಪ್ರಕೃತಿಯ ಶಿಶುಗಳಾಗಿದ್ದಾರೆ. ರಸಿಕರಾದ ದುರುಗಮುರಗಿಯರು ತಮ್ಮ ದೈನಂದಿನ ಕಷ್ಟಸಮಸ್ಯೆಗಳು ಮರೆತುಗೊಂಡು, ಗುಡಾರದ ಮುಂದೆ ಕುಣಿತವನ್ನು ಮಾಡುತ್ತಾರೆ. ಇವರಲ್ಲಿ ಶ್ರಮ ಜೀವನಕ್ಕೆ ಸಂಬಂಧಿಸಿದ ಒಂದೊಂದು ಹಾಡಿನಲ್ಲೂ ಜೀವನದ ಸೌಂದರ್ಯ, ಅನುಭವ ಹಾಗೂ ರಸಿಕತನ ಅಡಗಿರುವುದನ್ನು ಕಾಣಬಹುದು. ಗುಡಾರದಲ್ಲಿ ವಾಸಿಸುವ ಈ ಜನರು ತಮಗಾದ ನೋವನ್ನು ನಗುಮುಖದಿಂದ ಮರೆಯುತ್ತಾರೆ.

ಭಾಗ ೧.

ಸೆಂಚಿಯ ಬಟ್ಟಲದಾಗ ಬಾಳೆನ್ನು ಸಿರಿಯೇ
ಬಾಳನ್ನು ಸುರಿಯೇ ನಮ್ಮ ಕಂದಾನ ಪಡೆಯೇ
ಬಾಳನ್ನು ಸುರಿಯೇ ನಮ್ಮ ಕಂದಾನ ಪಡೆಯೇ
ಒಡೆಯ ತುಂಬಾರಿ ಅಮ್ಮ ಮಡಗರ ಅಪ್ಪನಿಗೆ
ಮಡಗರ ಅಪ್ಪನಿಗೆ ಅಮ್ಮ ಪಟ್ಟದ ರಾಣಿಗೆ
ಒಡೆಯ ತುಂಬಾರಿ ಅಮ್ಮ ಪಟ್ಟದ ರಾಣಿಗೆ

ಭಾಗ ೨

ಮೆಗೆಳಿ ಮನೆ ಮೇಲೆ ಮೆಗೆಳಿ ಮನೆ ಮೇಲೆ
ಧೀರಿಗೆ ಗಿಡ ನೋಡೆ, ಧೀರಿಗಿ ಸಣ್ಣ ಎಲೆ ಸಣ್ಣ ನಮ್ಮ ತಮ್ಮ

ಬಂದಾನ ಸಾಲಿಗೆ

ಧೀರಿಗಿ ಸಣ್ಣ ಎಲೆ ಸಣ್ಣ ನಮ್ಮ ತಮ್ಮ ಬಂದಾನ ಸಾಲಿಗೆ

ಹಾದಿಗೆ ಹೊಲದಾಗ ಗೋಧಿತೆನೆ ನೋಡಿ

ಗೊಧಿ ತನೆ ಸಣ್ಣ ನಮ್ಮ ತಮ್ಮ ಸಾಲಿಗೆ ಬಂದಾನ

ಭಾಗ ೩

ನಾ ತೊಕಿಕಿ ನಿನ್ನ ನೋಡಾಂಗ ಆಯಿತು. ಮುನ್ನುಡಾಂಗ ಆಯಿತು

ನೀರು ಕುಡಿದ್ದಾಕಿದಂಗ ಆಯಿತು, ನಾ ಕಾಣೆ ಇಲ ರಾಣ

ನೀನು ಕಾಣರೇ ನೀನು ಜೀವ ನಿಲ್ಲದ ಪ್ರಾಣ ನಿನ್ನದು ನಾನಾ ಕಾಣ

ಇಲ್ಲ ರಾಣ

ನಿನ್ನ ಕಾಳ ಮೆಟ್ಟ ನೋಡು ಮುನ್ನುಡಾಂಗ ಆಯಿತು

ನೀರು ಕುಡಿದದಾಂಗ ಆಯಿತು. ನಾ ಕಾಣೆ ಇಲ ರಾಣ

ನಿನ್ನ ಕಾಣನೇ ಧರ್ಮ ಪ್ರಾಣನ ನಿನ್ನದೇ ನಾ ಕಾಣೆ ಇಲ್ಲ ರಾಣ

ನೀನು ಕೋಟಂಗಿ ನೊಡು, ಮುನ್ನಡಾಂಗ ಆಯಿತು

ನೀರು ಕುಡಿದ ದಾಂಗ ಆಯಿತು ನಾ ಕಾಣೆ ಇಲ ರಾಣ

ನೀನು ಕಾಣರೇ ನೀನು ಜೀವ ನಿಲ್ಲದ ಪ್ರಾಣ ನಿನ್ನುದು ನಾನ ಕಾಣ

ಇಲ್ಲ ರಾಣ

ನಿನ್ನ ಪ್ಯಾಂಟ್ ನೋಡೆ ನಿನ್ನ ನೊಡಾಂಗ ಆಯಿತು. ಮುನ್ನಡಾಂಗ

ಆಯಿತು ನೀರು ಕುಡಿದಾಂಗಾಯ್ತು ಅಯಿತು. ನಾ ಕಾಣೆ ಇಲ ರಾಣ

ನೀ ಜೀವ ನಿಲ್ಲದ ಪ್ರಾಣ ನಿನ್ನದು ನಾ ಕಾಣೆ ರಾಣ

ಭಾಗ ೪

ನೀರಾ ಲಂಗ ವಚ್ಚನೇ ಓ ರಾಜ ಗುಮ್ಮಟ ಗಾಲೆ

ಮಾನಕೆಂದ ಧಿಗೇಲೆ ಓ ರಾಜ ಗುಮ್ಮಟ ಗಾಲೆ

ಬುಡ್ಡಮ ಸಣ್ಣದಿ ಮಾಮುಡು, ಭೂತ ಮಾಮಡು ಚಟಾಕಿ ಮಾಲೆ ಸಣ್ಣಲೇ

ಕೋಮಲೆ ಓ ರಾಜ ಗುಮ್ಮಟ ಗಾಲೆ

ನೀರಾ ಲಂಗ ವಚ್ಚನೇ ಓ ರಾಜ ಗುಮ್ಮಟ ಗಾಲೆ

ಮಾನ ಕಿಂದ ಧಿಗಲೆ ಓ ರಾಜ ಗುಮ್ಮಟ ಗಾಲೆ

ಮೇಸ್ತ್ರಿ ಅಂಗಡಿ ವೆಚ್ಚವೇ ಓ ರಾಜ ಗುಮ್ಮಟ ಗಾಲೆ

ರೇಖಾ ಅಂಗಡೆ ವಚ್ಚವೇ ಓ ರಾಜ ಗುಮ್ಮಟ ಗಾಲೆ

ಮಾನಕಿಂದ ವೀಗಲೇ ಓ ರಾಜ ಗುಮ್ಮಟ ಗಾಲೆ
ಬುಡ್ಡಮ ಸಣ್ಣದಿ ಮಾಮುಡು, ಭೂತ ಮಾಮಡು ಚಟಾಕುಡು ಮಾಲೆ ಸಣ್ಣಲೆ
ಕೊಮಾಲೆ ಓ ರಾಜ ಗುಮ್ಮಟ ಗಾಲೆ

ಮಲ್ಲಮ್ಮನ ನಾಟಕದ ಹಾಡುಗಳು

ಭಾಗ ೧.

ಎಲ್ಲಾರಿಗೆ ಎಲ್ಲಿರುವುದು ಓ ದುಃಖ ತುಂಬಿರುವುದು
ಹಾಳು ಧರುಣಿಯಲ್ಲಿ. ಸುಖ ಎಲ್ಲರಿಗೆ ಎಲ್ಲಿರುವುದು
ದುಃಖ ತುಂಬಿರುವುದು ಧರುಣಿಯಿಲ್ಲ.
ಎದು ಕುಲ ಸತ್ಯ ನಾಯಕ ಸತ್ಯಹರಿಚಂದ್ರ ನೋ...
ಎದು ಕುಲ ಸತ್ಯ ನಾಯಕ ಸತ್ಯಹರಿಚಂದ್ರ ನೋ...
ಸತಿ ಸೊತರವಾರನು ಮಾರಿ ಋಣವ ತಿರಿದವುದೋ...
ಋಣವ ತಿರಿಸಿದವನೋ...
ಏಕ ಚಕ್ರಧಿಪಾದ್ಯಿ ಎಕ ನರ ಚಕ್ರವರ್ತಿಯ್ಯಾ
ಈ ಭೂಮಿಯು ಸ್ವತ್ವ ವನವಾಸಕ್ಕೆ ಹೋದ
ವನವಾಸಕ್ಕೆ ಹೋದ....
ಸುಖ ಎಲ್ಲಾರಿಗೆ ಎಲ್ಲಿರುವುದು ಓ ದುಃಖ ತುಂಬಿರುವುದು
ಹಾಳು ಧರಣೆಯಲ್ಲ
ದಶರಥ ಪುತ್ರನ ಪ್ರಭುರಾಮ ಚಂದ್ರ ನೋ.....
ದಶರಥ ಪುತ್ರನ ಪ್ರಭುರಾಮ ಚಂದ್ರ ನೋ.....
ಪಿತೃವು ವಾಕ್ಯಕ್ಕೆ ತಾನು ವನವಾಸಕ್ಕೆ ಹೋದ
ವನವಾಸಕ್ಕೆ ಹೋದ
ಸುಖ ಎಲ್ಲಾರಿಗೆ ಎಲ್ಲಿರುವುದು ಓ ದುಃಖ ತುಂಬಿರುವುದು
ಹಾಳು ಧರುಣಿಯಿಲ್ಲ
ಪಾಂಡ ರಾಜನ ಪುತ್ರ ಧರ್ಮ ರಾಯ
ಸೀಮೆ ಭೂಮಿ ಸೋತು ವನವಾಸಕ್ಕೆ ಹೋದ
ವನವಾಸಕ್ಕೆ ಹೋದ
ಸುಖ ಎಲ್ಲಾರಿಗೆ ಎಲ್ಲಿರುವುದು ಓ ದುಃಖ ತುಂಬಿರುವುದು
ಹಾಳು ಧರುಣಿಯಿಲ್ಲ

ಸುಖ ದುಃಖದ ಎರಡು ಕಾಲ ಚಕ್ರದಂತೆ

ಸುಖ ದುಃಖದ ಎರಡು ಕಾಲ ಚಕ್ರದಂತೆ

ತಿರುಗುತ್ತ ಯಾವ ಪ್ರಾಜ್ಯಗೆ ಪ್ರಾಜ್ಯಗೆ

ಸುಖ ಎಲ್ಲಾರಿಗೆ ಎಲ್ಲಿರುವುದು ಓ ದುಃಖ ತುಂಬಿರುವುದು

ಹಾಳು ಧರುಣಿಯಿಲ್ಲ

ಭಾಗ ೨

ದಾರಿ ಬಿಟ್ಟು ಹೋಗುತಿಯ ಎಲ್ಲೋ

ಬರೀ ಮಾತಿನನೊಳಗೆ ನೂರು ವರ್ಷ ಕಾಲ ಕಳೆದಲ್ಲೋ

ಬರೀ ಮಾತಿನನೊಳಗೆ ನೂರು ವರ್ಷ ಕಾಲ ಕಳೆದಲೆ ಎಲ್ಲೋ

ನೂರು ವರ್ಷಕಾಲ ಕಳದೆ ಯಾರು ಬರುವರು ನಿನ್ನ ಹಿಂದೆ

ಮಾರ, ಹರನ ದಾನ್ಯ ಮಾಡದೆ, ಹಾರಿಹೋಯಿತು ನಿನ್ನ ಪ್ರಾಣ

ದಾರಿ ಬಿಟ್ಟು ಹೋಗುತಿಯ ಎಲ್ಲೋ

ಬರೀ ಮಾತಿನನೊಳಗೆ ನೂರು ವರ್ಷ ಕಾಲ ಕಳೆದಲೆ ಎಲ್ಲೋ

ಜಾರಿ ಬಿದ್ದೆ ಹೆಣ್ಣ ಮಣ್ಣ ಗರ್ವದಲ್ಲಿ

ಜಾರಿ ಬಿದ್ದೆ ಹೆಣ್ಣಮಣ್ಣ ಪ್ರಾಯದ ಗರ್ವದಿಂದ

ಕೊಳತು ನಾರಿನ ಬಾಳೆ ಸಿಪ್ಪೆಯಂತೆ

ಕೊಳತೆ ನಾರಿನ ಬಾಳ ಹಣ್ಣಿನಂತೆ ಸಿಪ್ಪೆಯಂತೆ

ಬಾಳೆ ಹಣ್ಣನಂತೆ, ಕೊಳತೆ ನಾರಿತು ಮಣ್ಣಿಗೆ ಹೋದೆ ಎಲ್ಲೋ

ದಾರಿ ಬಿಟ್ಟು ಹೋಗುತಿಯ ಎಲ್ಲೋ

ಬರೀ ಮಾತಿನನೊಳಗೆ ನೂರು ವರ್ಷಕಾಲ ಕಳೆದಲ್ಲೋ

ಭಾಗ ೩

ಮಲ್ಲಿನಾಥ ಧ್ಯಾನ್ಯ,ಮಲ್ಲಿನಾಥ ಧ್ಯಾನ್ಯ,

ಮಾಡ ಬೇಡಿ ನಿರಂತರ

ಮಾಡ ಬೇಡಿ ನಿರಂತರ

ಮಲ್ಲಿನಾಥ ಧ್ಯಾನ್ಯ,ಮಲ್ಲಿನಾಥ ಧ್ಯಾನ್ಯ,

ನಲಿನಾರಿ ದಾಡೆ ಬಾಡಿವೆಗೆ ನಾ ನೀರಿ ಮಲ್ಲಿನಾಥ ಧ್ಯಾನ್ಯ,

ಮಲ್ಲಿನಾಥ ಧ್ಯಾನ್ಯ,

ಮಲ್ಲಿನಾಥ ಧ್ಯಾನ್ಯ,

ಮಲ್ಲಿನಾಥ ಧಾನ್ಯ,

ಗಲ್ಲ ರುಂಡ ಹಾರ ಶ್ರೀರಾಮನೊಗೋರು

ಗಲ್ಲ ರುಂಡ ಹಾರ ಶ್ರೀರಾಮನೊಗೋರು

ನಮೃತಸಾರ, ನಮೃತಸಾರ, ನಮೃತಸಾರ

ನಮೃತಸಾರ, ನಮೃತಸಾರ, ನಮೃತಸಾರ

ನಿತ್ಯ ಮದುಪಾನ, ಮಲ್ಲಿನಾಥ ಧಾನ್ಯ

ನಿತ್ಯ ಮದುಪಾನ, ಮಲ್ಲಿನಾಥ ಧಾನ್ಯ

ನಿತ್ಯ ಮದುಪಾನ, ಮಲ್ಲಿನಾಥ ಧಾನ್ಯ

ಉಪಕಸಬುಗಳು

ದುರುಗಮುರಗಿ ಸಮುದಾಯ ತನ್ನ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದು ಬಂದಿರುವ ಉಪ ಕಸಬುಗಳು ಈ ಸಮುದಾಯ ಜನರು ಸಾಮಾಜಿಕ ಅಧ್ಯಯನಕ್ಕೆ ಬಲವಾದ ಆಕರಗಳಾಗಿವೆ. ಇವುಗಳು ಅವರ ದೈನಂದಿನ ಬದುಕಿನೊಂದಿಗೆ ನಿಕಟ ಸಂಬಂಧವನ್ನು ಪಡೆದಿದೆ. ಉಪ ಕಸಬುಗಳಿಗೂ ಹಾಗು ಸಮಾಜಕ್ಕೂ ಒಂದು ಬಗೆಯ ನೇರ ಸಂಬಂಧವಿದೆ. ಇಡೀ ಜನಪದ ಕಲಾಮುಖದಲ್ಲಿ ಒಳಗೊಳ್ಳುವ ಗುಡಾರ ಹೊಲಿಯುವುದು. ದೇವರ ಬುಟ್ಟಿಯ ಅಲಂಕಾರ, ಲಡ್ಡು ತಯಾರಿಕೆ, ಮೀನಿನ ಬಲೆಯ ತಯಾರಿಕೆ. ಇತ್ಯಾದಿಗಳು ಇದರಲ್ಲಿ ಸಮಾವೇಶವಾಗುತ್ತವೆ.

ಪ್ರತಿಯೊಂದು ಸಮುದಾಯ ಜನ ಜೀವನದ ಸಂಸ್ಕೃತಿಯೂ ಈ ಉಪ ಕಸಬುಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತವೆ. ಇವುಗಳು ಶ್ರೀಸಾಮಾನ್ಯನ ಜೀವನದ ವಿವಿಧ ಘಟ್ಟಗಳಲ್ಲಿ ಮದುವೆ,ಮುಂಜಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಅವನ ದೈನಂದಿನ ಆಗು ಹೋಗುಗಳಲ್ಲಿ ಮದುವೆ ಮುಂಜಿಗಳಲ್ಲಿ ಹುಟ್ಟು ಸಾವುಗಳಲ್ಲಿ ಸ್ತ್ರೀ ಪುರಷರಲ್ಲಿಯೂ ಹೊರಹೊಮ್ಮುತ್ತವೆ. ಇವುಗಳ ಮುಖ್ಯ ಗುರಿ ಮನಸ್ಸಿನ ನೆಮ್ಮದಿ. ಇಲ್ಲವೆ ಸಂತೋಷವೆ ಆಗಿದೆ, ಪ್ರತಿಯೊಂದು ಜಾತಿ, ಜನಾಂಗ ಹಾಗು ಪಂಗಡಗಳು ಈ ಜನಪದ ಕಲೆಗಳನ್ನು ತಮ್ಮದೇ ಅದ ರೀತಿಯಲ್ಲಿ ಉಳಿಸಿಕೊಂಡು ಬೆಳಸಿಕೊಂಡು ಬಂದಿವೆ.[೮] ಜನಪದ ಕಲೆಗಳೆಲ್ಲವೂ ಸಾಂಸ್ಕೃತಿಕ ಧಾರ್ಮಿಕ ಹಾಗು ಮನರಂಜನೆ ಅಲ್ಲದೆ ಜೀವನೋಪಾಯದ ಹಿನ್ನೆಲೆಯಲ್ಲಿ ಹುಟ್ಟಿಕೊಂಡು ಬಂದಿವೆ. ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿದ ಕಲೆಗಳು ಆಯಾ ಜನಾಂಗದ ಧಾರ್ಮಿಕ ಪರಂಪರೆಯನ್ನು ಕಾಪಾಡಿಕೊಂಡು ಬಂದಿವೆ. ಜೊತೆಗೆ ಮನರಂಜನೆಯನ್ನು ಮುಖ್ಯವಾಗಿಟ್ಟುಕೊಂಡ ಕಲೆಗಳು ಯಾವುದೇ ಭಾಷೆ, ವೇಷದಲ್ಲಿದ್ದರೂ ಅದರ ಮೂಲ ಉದ್ದೇಶ ಮನುಷ್ಯನನ್ನು ಸಂತೋಷಗೊಳಿಸುವುದು.

ಪ್ರಾರಂಭದಲ್ಲಿ ಕಲೆ ಆದಿಮಾನವನ ಬದುಕಿನ ಒಂದು ಅಂಗವಾಗಿ ಉಳಿದು ಬಂದಿತ್ತೆನ್ನಬಹುದು. ಅವನ ಒಂದೊಂದು ಚಟುವಟಿಕೆಗೂ ಅದಕ್ಕೆ ನಂಟಿತ್ತು. ಆದಿಮಾನವ ಕಲಾ ದೃಷ್ಟಿಯಿಂದ ಸೌಂದರ್ಯ ಪ್ರಜ್ಞೆಯಿಂದ ಮೂಡಿ ಬಂದ ಅಥವಾ ಹುಟ್ಟಿಕೊಂಡ ನೃತ್ಯಗಳು ಕೆಲವಾದರೆ, ಅವನ ಬದುಕಿನ ನಂಬಿಕೆಯಿಂದ, ಅವನು

ಅವಲಂಬಿಸಿದ್ದ ದೈವದ ಕಾರಣದಿಂದಾಗಿ ಜೀವ ತಳೆದ ನೃತ್ಯಗಳು ಕೆಲವೆನ್ನಬಹುದು. ಜನಪದ ಕಲೆಗಳ ಮೇಲೆ ಧರ್ಮದ ಪ್ರಭಾವವನ್ನು ದಟ್ಟವಾಗಿ ಗುರುತಿಸಬಹುದಾಗಿದೆ. ಅನೇಕ ಸಂದರ್ಭಗಳಲ್ಲಿ ಭಯ ಮತ್ತು ಧರ್ಮ ಆದಿಮಾನವನನ್ನು ಅನೇಕ ಅಂಶಗಳಿಗೆ ಅಂಟಿಕೊಳ್ಳುವಂತೆ ಮಾಡಿದ್ದವು. ಅವುಗಳ ಕಾರಣದಿಂದಾಗಿಯೇ ಅನೇಕ ಕಲೆಗಳು ತಲೆಯೆತ್ತಿದ್ದವು. ಬೇಟೆ, ಯುದ್ಧ, ವೈದ್ಯಕ್ಕೂ ಬಳಕೆಯಾಗುತ್ತಿತ್ತು. ಇಂದಿಗೂ ಗುಡ್ಡಗಾಡು ಜನರಲ್ಲಿ ಇವುಗಳನ್ನು ಸ್ವಲ್ಪಮಟ್ಟಿಗೆ ಗುರುತಿಸಬಹುದಾಗಿದೆ.[೬]

ಈ ಹಿನ್ನಲೆಯಲ್ಲಿ ದುರುಗಮುರಗಿ ಸಮುದಾಯದಲ್ಲಿಯೂ ಉಪಕಸಬುಗಳಾದ ಗುಡಾರ ಹೊಲಿಯುವುದು, ದೇವರ ಬಟ್ಟೆಯ ಅಲಂಕಾರ, ಲಡ್ಡು ತಯಾರಿಕೆ, ಮೀನು ಬಲೆಯ ತಯಾರಿಮಾಡಿಕೊಳ್ಳವಿಕೆ. ಈ ಮುಂತಾದ ಕಸಬು ಹುತ್ತವಿರಬೇಕೆಂದನಿಸುತ್ತದೆ. ಅವುಗಳು ಸಮೂಹ ಮಾಧ್ಯಮಗಳಾಗಿ ದುರುಗಮುರಗಿ ಸಮುದಾಯವು, ಸಮಾಜದವರಲ್ಲಿ ಬೆಳೆದು ಬಂದಿರುವುದನ್ನು ಪರಿಶೀಲಿಸಬಹುದು.

ಗುಡಾರ ಹೊಲಿಯುವುದು : ಪ್ಲಾಸ್ಟಿಕ್ ಚೀಲಗಳಿಂದ ಅಥವಾ ಈಚಲ ಮರದ ಎಲೆಗಳಿಂದ ಹಾಕಿದ ಗುಡಿಸಲುಗಳಿಗೆ ಗುಡಾರ ಎಂದು ಕರೆಯುವರು. ಕೆಲವುಸಲ ಗೋಣಿ ತಾಟುಗಳಿಂದಲೂ ಡೇರೆ ಹಾಕಿಕೊಂಡಿರುತ್ತಾರೆ. ಇಂತಹ ಗುಡಾರಗಳಿಗೆ ಒಂದು ದಪ್ಪ ಕಟ್ಟಿಗೆ ಅಥವಾ ಬಿದಿರಿನ ಬೊಂಬು, ಹಿಂದಗಡೆ ಹಾಗು ಮುಂದುಗಡೆಯಲ್ಲಿ ಆಸರೆಯಾಗಿರುತ್ತದೆ. ಅದರ ಸುತ್ತಲೂ ವಾಯಿಲೆ ಕಟ್ಟಿಗೆ ಹಾಗು ಕುಗ್ಗಡ ಕಟ್ಟಿಗೆಯಿಂದ ಬಗ್ಗಿಸಿ ಅದರ ಮೇಲಿನ ಪ್ಲಾಸ್ಟಿಕ್ ಚೀಲಗಳು ಮತ್ತು ಈಚಲಮರದ ಎಲೆಗಳನ್ನು ಮೇಲೆಗಡೆಯಲ್ಲಿ ಹಾಕುತ್ತಾರೆ. ಎರಡೂ ಬದಿಗೆ ಕೆಳಕ್ಕೆ ಜಗ್ಗಿ, ಗೂಟ ನೆಲಕ್ಕೆ ಹೊಡೆದ ಗೂಟಗಳಿಗೆ ಬಿಗಿಯಾಗಿ ಕತ್ತಾಳೆ ನಾರಿನಿಂದ ಕಟ್ಟುತ್ತಾರೆ. ಗಟ್ಟಿಯಾಗಿ ಮಳೆ ಬರುವುದರಿಂದ ವೈನ್ ಶಾಪ್‌ನಲ್ಲಿರುವ ರಟ್ಟುಗಳನ್ನ ಬಿಗಿಯಾಗಿ ನಿಲ್ಲುವಂತೆ ಮಾಡುತ್ತಾರೆ. ಮತ್ತು ಗೋಣಿಚೀಲಗಳು ಹರಿದಂತೆ ರಿಪೇರಿ ಮಾಡುತ್ತಾ ಹೋಗುತ್ತಾರೆ. ಯಾವ ಕಾರಣಕ್ಕೂ ಅದನ್ನೇ ಅವರು ಎಸೆದು ಬಿಡುವುದಿಲ್ಲ. ಗುಡಾರ ಹೊಲಿಯುವುದಕ್ಕಾಗಿ ಇವರಲ್ಲಿ ಸೂಜಿ ಇರುವುದು. ಈ ಗುಡಾರವನ್ನ ದುರುಗಮುರಗಿ ಸಮುದಾಯದ ಕೆಲವು ಗಂಡಸರು ಮಾತ್ರ ಹೊಲಿಯುತ್ತಾರೆ.

ದೇವರ ಬುಟ್ಟಿಯ ಅಲಂಕಾರ : ದುರುಗಮುರಗಿ ಸಮುದಾಯದವರು ದೇವರ ಬಗ್ಗೆ ಬಹಳ ಪ್ರೀತಿಯನ್ನು ಹೊಂದಿದ್ದು, ಅಲಂಕಾರ ಪ್ರಿಯರೂ ಎಂದು ಕರೆಯಬಹುದು. ಇವರ ದೇವರಿಗೆ ಪ್ರತ್ಯೇಕ ಗುಡಾರ ಇರುವುದು. ಗುಡಾರ ಒಳಗಡೆಯಲ್ಲಿ ಸಗಣಿಯಿಂದ ನೆಲ ಸಾರಿಸಿರುತ್ತಾರೆ. ದೇವರ ಬುಟ್ಟಿಯ ಬಿದಿರು ಬುಟ್ಟಿಯಿಂದ ಕೂಡಿರುವುದು. ಇವರ ಒಳಗಡೆ ಕುಲದೇವತೆಗಳಾದ ಈರನಾಗಮ್ಮ, ಮುನಿಸ್ವಾಮಿ ಬೆಳ್ಳಿಮೂರ್ತಿಗಳಿಂದ ಕೂಡಿರುವುದು ದೇವರ ಬುಟ್ಟಿಯನ್ನು ದಿನಾಲೂ ಹಳೇ ಬಟ್ಟೆಯಿಂದ ಸ್ವಚ್ಛತೆಯನ್ನು ಮಾಡುತ್ತಾರೆ.

ಮಂಗಳವಾರ ಮತ್ತು ಶುಕ್ರವಾರ ದಿವಸಗಳಲ್ಲಿ ದೇವರ ಬುಟ್ಟಿಯ ಕುಂಕುಮ, ಅರಿಶಿಣ, ಭಂಡಾರವನ್ನು

ಹಚ್ಚುತ್ತಾರೆ. ಪ್ರತಿಯೊಂದು ವಸ್ತುವಿಗೂ ಪೂಜೆಯನ್ನು ಮಾಡುತ್ತಾರೆ. ದುರುಗಮುರುಗಿಯರಲ್ಲಿಯ ಕಲೆ, ಪೂಜೆ ವಿಧಾನಗಳು, ವೇಷಭೂಷಣಗಳು ಸಂಸ್ಕೃತಿಯನ್ನು ಕಾಪಾಡಿಕೊಂಡು ಬರುವಲ್ಲಿ ಯಶಸ್ವಿಯಾಗಿವೆ.

ಜೋಳಿಗೆ ಹೊಲಿಯುವುದು : ಭಿಕ್ಷಾವೃತ್ತಿಗಳಾದ ದುರುಗಮುರಗಿಯರ ಜೋಳಿಗೆಯೂ ಹೆಂಡತಿ ಹೆಗಲಿನ ಮೇಲೆ ಇರುವುದು. ದುರುಗಮುರಗಿಯರು ತಮ್ಮ ಜೋಳಿಗೆಯನ್ನು ದೇವರೆಂದು ಭಾವಿಸುತ್ತಾರೆ. ಗಟ್ಟಿಯಾದ ಹಳೇ ಬಟ್ಟೆಯನ್ನು ತೆಗೆದುಕೊಂಡು ಎಲ್ಲಾ ಕಡೆಗೂ ಆರು ಅಡಿ ಇರುವಂತೆ ಕತ್ತರಿಸುತ್ತಾರೆ. ಆ ಬಟ್ಟೆಯ ನಡುವಿನ ಭಾಗದಲ್ಲಿ ಗಟ್ಟಿಯಾದ ಬಟ್ಟೆಯನ್ನು ಹಾಕಿ ಹೊಲಿಯುತ್ತಾರೆ. ಹೊಲಿಯುವಾಗ ಅರ್ಧ ಇಂಚಿಗೆ ಒಂದು ಎಳೆಯಂತೆ ಹೊಲಿಯುವ ವಿಧಾನವನ್ನು ಅನುಸರಿಸುತ್ತಾರೆ. ಈ ರೀತಿಯಲ್ಲಿ ಹೊಲಿದ ಜೋಳಿಗೆಯನ್ನು ಭಿಕ್ಷಾಟನೆಗೆ ತೆಗೆದುಕೊಂಡು ಹೋಗುತ್ತಾರೆ. ಜೋಳಿಗೆ ಮೇಲ್ಗಡೆಯಲ್ಲಿ ಎಳೆದು ಕಟ್ಟಿದ ರಂದ್ರ ಇರುವುದು. ರಂದ್ರದ ಮೂಲಕ ಹಳೇ ಬಟ್ಟೆಯನ್ನು ತೂರಿಸಿ ಕಟ್ಟುತ್ತಾರೆ. ಈ ಜೋಳಿಗೆ ಐದು ವರ್ಷ ಬಾಳಿಕೆ ಬರುತ್ತದೆ ಎಂದು ಇವರು ಹೇಳುತ್ತಾರೆ. ಹಬ್ಬ, ಹುಣ್ಣಿಮೆ, ಶುಭದಿನಗಳಂದು ಈ ಜೋಳಿಗೆಗೆ ವಿಶೇಷ ಪೂಜೆ ಸಲ್ಲಿಸಿ ಕೈಮುಗಿದು ತಮ್ಮ ಭಕ್ತಿಯನ್ನು ವ್ಯಕ್ತಪಡಿಸುತ್ತಾರೆ.

ಈ ಪದ್ಧತಿ ಅವರಲ್ಲಿ ಹಿಂದಿನಿಂದಲೇ ಬಂದಿರುತ್ತದೆ.

ಅಡಿಟಿಪ್ಪಣಿ

೧. ಟಿ.ಆರ್. ಭಾಸ್ಕರ್, ಸುಡುಗಾಡುಸಿದ್ದರು: ಒಂದು ಸಂಸ್ಕೃತಿಕ ಅಧ್ಯಯನ. ಪುಟ: ೧೮೬
೨. ಅದೇ. ಪುಟ
೩. ಪಿ.ಕೆ. ಖಂಡೋಬಾ, ಕರ್ನಾಟಕದ ಲಂಬಾಣಿಗಳು, ಪುಟ: ೨೦೧
೪. ಇಮ್ರಾಪುರ, ಜಾನಪದ ವಿಜ್ಞಾನ, ಪುಟ: ೯೧
೫. ಹಾ.ಮಾ.ನಾಯಕ, ಜಾನಪದ ಸ್ವರೂಪ. ಪುಟ: ೨೨
೬. ಡಾ. ಡಿ.ಬಿ.ನಾಯಕ್, ಲಂಬಾಣಿ ಜನಪದ ಸಾಹಿತ್ಯ, ಪುಟ: ೨೮
೭. ಡಾ. ಡಿ.ಬಿ.ನಾಯಕ್, ಲಂಬಾಣಿ ಜನಪದ ಸಾಹಿತ್ಯ, ಪುಟ: ೨೯
೮. ನೀಲಗಿರಿ ತಳವಾರ, ಜಾನಪದ ೧೯೯೮, ಪುಟ: ೯೨
೯. ಅದೇ. ಪುಟ

❖❖❖❖❖

ಅಧ್ಯಾಯ ೫

ವರ್ತಮಾನದಲ್ಲಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು

ಅ. ಮೀಸಲಾತಿ ಸಮಸ್ಯೆ

ಆ. ವಸತಿ ಸಮಸ್ಯೆ

ಇ. ಆರೋಗ್ಯದ ಬಗ್ಗೆ ಇರುವ ನಂಬಿಕೆಗಳು

ವರ್ತಮಾನದಲ್ಲಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು

ದುರುಗಮುರಗಿ ಸಮುದಾಯದ ಸಮಸ್ಯೆಗಳು ಇಂದು ನಿನ್ನೆಯವಲ್ಲ. ದುರುಗಮುರಗಿ ಸಮುಯದಾಯವು ಬಹಳ ಕಾಲದಿಂದ ಅಲೆಮಾರಿಯಾಗಿ ವಾಸಿಸುತ್ತಾ ಬಂದಿದೆ. ಸಮುದಾಯವನ್ನು ತೊಂದರೆಗಳು ನಿರಂತರವಾಗಿ ಕಾಡುತ್ತಿದ್ದು, ಅವರು ಕಷ್ಟಗಳನ್ನ ಅನಿವಾರ್ಯವಾಗಿ ಅನುಭವಿಸಬೇಕಾಗಿದೆ. ಸಮಸ್ಯೆಯೂ ಸಾಮಾನ್ಯವಾಗಿ ಒಂದು ಅಸಹಜ ಪರಿಸ್ಥಿತಿಯಾಗಿರುವುದು. ತೊಂದರೆಯು ಸಮಸ್ಯೆಯಾಗಿ ರೂಪುಗೊಂಡಾಗ ಅದನ್ನು ನಿವಾರಿಸುವುದು ತುಂಬಾ ತ್ರಾಸದಾಯಕ ಕೆಲಸವಾಗುವುದು. ಅದನ್ನು ಬಿಡಿಸಲು ಪ್ರಯತ್ನಸಬಹುದಾದರೂ, ಇಂತಿಷ್ಟು ಅವಧಿಯಲ್ಲಿ ಸಂಪೂರ್ಣ ಪರಿಹಾರ ಸಾಧ್ಯ ಎನ್ನುವ ಖಚಿತತೆಯನ್ನು ಕಂಡುಕೊಳ್ಳುವುದು ಕಷ್ಟಸಾಧ್ಯ.

ಅಲೆಮಾರಿಯಂತೆ ವಾಸಿಸುತ್ತಾ ಬಂದಿರುವ ದುರುಗಮುರಗಿ ಸಮುದಾಯ ತಮ್ಮ ವೃತ್ತಿ ಬದುಕಿನಲ್ಲಿ ಎದುರಿಸುತ್ತಿರುವ ವಾಸ್ತವಿಕ ಸಮಸ್ಯೆಗಳಿಗೂ, ಹಿಂದಿನ ಸಮಸ್ಯೆಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಸಮುದಾಯದ ಹಿಂದಿನ ಸಮಸ್ಯೆಗಳು ಸಮಾಜದ ಜೀವನದಲ್ಲಿ ಅನಿವಾರ್ಯ ಪ್ರಸಂಗಗಳಾಗಿದ್ದು ಹೆಜ್ಜೆಹೆಜ್ಜೆಗೂ ಗೋಚರವಾಗುತ್ತಿರಲಿಲ್ಲ. ಆದರೆ ಇಂದಿನ ಸಮಸ್ಯೆಗಳು ಸಮಾಜ ಜೀವನಕ್ಕೆ ಅನಿವಾರ್ಯ ಪ್ರಸಂಗಗಳೋಪಾದಿಯಲ್ಲಿ ಕಂಡುಬರುತ್ತವೆ. ಈ ಸಮುದಾಯದಲ್ಲಿ ಜನಸಂಖ್ಯೆಯೂ ಭರದಿಂದ ಬೆಳೆಯುತ್ತಿದೆ. ಸ್ವಾತಂತ್ರ ಬಂದರೂ ದುರುಗಮುರಗಿ ಸಮುದಾಯದ ರೂಪ ಬದಲಾವಣೆಯಾಗಿಲ್ಲ. ಸಮಸ್ಯಗಳ ಮಧ್ಯೆ, ಸಂಕಷ್ಟಗಳ ಮಧ್ಯ ನೆಲೆ ನಿಂತಿದ್ದಾರೆ.

ಅಲೆಮಾರಿಯಂತೆ ಗ್ರಾಮಗಳಲ್ಲಿ ಬಂದು ನೆಲೆಯುವುದು. ಗುಡಾರದಲ್ಲಿ ಇವರ ಬಡತನ ಸಮಸ್ಯೆ ಕಂಡು ಬರುವ ಚಿತ್ರಣವಾಗಿದೆ. ಈ ಸಮಸ್ಯೆಯಿಂದ ಮೂಲ ಆರ್ಥಿಕತೆಯಲ್ಲಿ ಕಡಿಮೆಯಾಗಿ, ಒಂದೊತ್ತಿನ ಊಟವೂ

ಸಿಗುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ವರ್ತಮಾನದಲ್ಲಿ ಹಲವಾರು ಸಮಸ್ಯೆಗಳಿಗೆ ಈ ಸಮುದಾಯ ಎದುರಿಸುತ್ತಿದೆ. ಇವುಗಳನ್ನು ಸಮರ್ಥವಾಗಿ ಪರಿಹರಿಸಬೇಕಾದರೆ ಅವುಗಳ ವಸ್ತುನಿಷ್ಠವಾದ ಮತ್ತು ಪಕ್ಷಪಾತರಹಿತವಾದ ಅಧ್ಯಯನ ಮಾಡಬೇಕಾದದ್ದು ಅಗತ್ಯ.

ಮೀಸಲಾತಿ ಸಮಸ್ಯೆ

ದುರುಗಮುರಗಿ ಸಮುದಾಯ ಪ್ರಾಚೀನ ಸಮಾಜದಲ್ಲಿ ಅಸ್ತಿತ್ವದಲ್ಲಿತ್ತು ಎಂಬ ಅಂಶಗಳು ತಿಳಿದು ಬರುತ್ತವೆ. ಬಳ್ಳಾರಿಯ ಪರಿಸರದಲ್ಲಿ ಹಲವಾರು ಹಳ್ಳಿಗಳಲ್ಲಿ ಪೋತಪ್ಪನ ದೇವಸ್ಥಾನಗಳಿವೆ. ಪೋತಪ್ಪನ ಪೂಜಾರಿಗಳು ಪೋತರಾಜರು, ದುರುಗಮುರುಗಿಯರಿಗೆ ಪೋತರಾಜ ಎಂತಲೂ ಕರೆಯಲಾಗುತ್ತದೆ. ಈ ಸಮುದಾಯವು ವೈವಿಧ್ಯಮಯವಾದ ಸಂಪ್ರದಾಯಗಳನ್ನು ತನ್ನ ಮಡಿಲಲ್ಲಿ ಪೋಷಿಸಿಕೊಂಡು ಬಂದಿದೆ. ಇನ್ನು ಅನೇಕ ಬುಡಕಟ್ಟುಗಳು ಪೂರ್ಣ ಪ್ರಮಾಣದಲ್ಲಿ ಬೆಳಕಿಗೆ ಬಾರದೆ ಸಮಾಜದ ಪರಿಚಯವನ್ನು ಪಡೆಯವೆ ಉಳಿದುಕೊಂಡು ಬಿಟ್ಟಿವೆ. ಸಮುಯದಾಯಗಳ ಬಗ್ಗೆ ಅಧಿಕಾರಿಗಳು, ಸಂಶೋಧಕರು, ಸಂಘ ಸಂಸ್ಥೆಗಳು ನಿಖರತೆಯನ್ನು ವ್ಯಕ್ತಪಡಿಸಬೇಕಾಗುವುದು. ನಿರ್ದಿಷ್ಟವಾದ ನೆಲೆಯಿಲ್ಲದೆ ಆರ್ಥಿಕವಾಗಿ ಹೀನಸ್ಥಿತಿಯಲ್ಲಿರುವ ಈ ಸಮುದಾಯವನ್ನು ಪರಿಶಿಷ್ಟ ಸೌಲಭ್ಯಗಳನ್ನು ಕಲ್ಪಿಸುವಲ್ಲಿಸುವತ್ತ ಯೋಚಿಸಬೇಕಿದೆ.

ಕುರಿಸಾಕಾಣಿಕೆ, ಮೀನು ಹಿಡಿಯುವುದು, ಪ್ಲಾಸ್ಟಿಕ್ ಕೊಡಗಳನ್ನು ಮಾರುವುದು, ಬಲೂನ್ ಮಾರುವುದು ಈ ಕೆಲಸಗಳನ್ನು ಹೊರತುಪಡಿಸಿ ಬಹುತೇಕ ಜನರು ಹೆಚ್ಚಾಗಿ ಭಿಕ್ಷಾಟನೆಯನ್ನು ಅವಲಂಬಿಸಿದ್ದಾರೆ. ಅಲೆಮಾರಿಗಳಾದ ಇವರು ಗುಡಾರಗಳಲ್ಲಿ ವಾಸಿಸುತ್ತಾರೆ. ಅನೇಕ ಬಾರಿ ಇವರು ಬಿಸಿಲು ಮಳೆಗೆ ಮೈಯೊಡ್ಡಿ, ತಲೆ ಮೇಲೆ ಸೂರಿಲ್ಲದೆ ಕಾಲಕಳೆಯಬೇಕಾದ ಸ್ಥಿತಿಯಲ್ಲಿದ್ದಾರೆ. ಯಾವುದೇ ಸಾಮಾಜಿಕ, ಆರ್ಥಿಕ, ರಾಜಕೀಯ ಭದ್ರತೆಯಿಲ್ಲದೆ ಈ ಸಮುದಾಯದ ಮಕ್ಕಳಿಗೆ ಶಿಕ್ಷಣದ ಅರಿವಂತೂ ಬಹುದೂರವೇ ಉಳಿದಿರುತ್ತದೆ. ಅನೇಕ ಬಾರಿ ಇಂತಹ ಸಮುದಾಗಳಿಗೆ ಸರಕಾರವು ವಿಶೇಷ ಯೋಜನೆಗಳನ್ನು ಪ್ರಕಟಿಸಿ ಸಹಾಯ ರೂಪದಲ್ಲಿ ಹಣವನ್ನು ಅಥವ ವೃತ್ತಿ ಸಮಾಗ್ರಿಗಳನ್ನು ಒದಗಿಸಿದರೂ ಸಹ ಅನರಕ್ಷರಸ್ಥರಾದ ಇವರಿಗೆ ಮಾಹಿತಿ ತಿಳಿಯದೆ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಹೀಗಾಗಿ ಶಿಕ್ಷಣದಲ್ಲಿ ತಿಳುವಳಿಕೆ ಮೂಡಿಸಲು ಈ ಸಮುದಾಯದ ಎಲ್ಲಾ ಮಕ್ಕಳಗೂ ವಿಶೇಷ ಯೋಜನೆಯ ಮೂಲಕ ಶಿಕ್ಷಣ ದೊರಕಿಸಿಕೊಡಬೇಕು. ಅವರಲ್ಲಿರುವ ಹಲಕೆಲವು ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ನೀಡಿ ಅವರ ಜೀವನ ಮಟ್ಟವನ್ನು ಸುಧಾರಿಸಲು ವಿಶೇಷ ಮೀಸಲಾತಿಯನ್ನು ಕಲ್ಪಿಸಿ ಕೊಡುವುದು ಅತ್ಯಂತ ಅಗತ್ಯವಾಗಿದೆ.

ವಸತಿ ಸಮಸ್ಯೆ

ದುರುಗಮುರಗಿ ಸಮುದಾಯದವರು ತುಂಬಾ ಹಿಂದಿನಿಂದ ಅಲೆಮಾರಿಗಳಾಗಿ ಭಿಕ್ಷೆ ಬೇಡುತ್ತಾ, ಜೀಟೆಯಾಡುತ್ತಾ ಬಂದಿದ್ದಾರೆ. ಇವರು ಒಂದಡೆಯಿಂದ ಇನ್ನೊಂದೆಡೆ ನೆಲೆ ನಿಂತು ತಮ್ಮ ಭಿಕ್ಷಾಟನೆ ವೃತ್ತಿಯನ್ನು ಮುಂದುವರೆಸಿದ್ದಾರೆ. ಪ್ರಚಲಿತ ದಿನಗಳಲ್ಲಿ ತಾವು ನೆಲೆಸಿರುವ ಗ್ರಾಮದ ಮುಖಂಡರ ಹತ್ತಿರ

ಜಾಗ (ಭೂಮಿ) ಕೇಳಿಕೊಂಡು, ಅಲ್ಲಿ ಗುಡಾರ ಹಾಕಿಕೊಂಡು ಜೀವನ ಮಾಡುತ್ತಾರೆ. ನೆಲೆ ನಿಲ್ಲಲು ಬೇಕಾದ ನಿಶ್ಚಿತ ಉತ್ಪಾದನಾ ಸಾಧನೆಗಳು ಇನ್ನು ಇವರಿಗೆ ದಕ್ಕಿಲ್ಲ. ಆಧುನಿಕ ಯುಗದಲ್ಲಿಂತೂ ಈ ಸಮುದಾಯ ವಿಘಟಿತ ಸಮಾಜದ ಮಧ್ಯೆ ದಿಕ್ಕೆಟ್ಟು ಹೋಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ವಾಸಿಸುತ್ತಿರುವ ದುರುಗಮುರಗಿ ಸಮುದಾಯದವರಿಗೆ ಸರಕಾರ ಸೌಲಭ್ಯಗಳು ನೀಡಿರುವುದಿಲ್ಲ. ಸರಕಾರ ಕಲ್ಪಿಸಿದ ಕೆಲವು ಯೋಜನೆಗಳ ಅರಿವು ಈ ಸಮುದಾಯಕ್ಕಿಲ್ಲ. ಹೊಸಪೇಟೆ ತಾಲೂಕಿನ ಕಂಪ್ಲಿಯಲ್ಲಿ ವಾಸ ಮಾಡುತ್ತಿರುವ ದುರುಗಮುರಗಿ ಸಮಯದಾಯದವರಿಗೆ ಮೀನುಗಾರಿಕೆ ಇಲಾಖೆಯ ವತಿಯಿಂದ ಮೀನುಗಾರರ ಸಹಕಾರ ಸಂಘದ ಅಧ್ಯಕ್ಷರಾದ ಮಾಧವರಾವ್ ಗೋಸಂಗಿಯವರು ಆಶ್ರಯ ಮನೆಗಳನ್ನು ಕಲ್ಪಿಸಿದ್ದಾರೆ. ಇನ್ನುಳಿದ ಗ್ರಾಮಗಳಲ್ಲಿ ವಾಸ ಮಾಡುತ್ತಿರುವ ದುರುಗಮುರಗಿಯರು ಗುಡಾರಗಳಲ್ಲಿ ವಾಸಿಸುತ್ತಾರೆ.

ಗುಡಾರ ಅಥವಾ ಡೇರಿ ಮಾಹಿತಿ : ಪ್ಲಾಸ್ಟಿಕ್ ಚೀಲಗಳಿಂದ ಅಥವಾ ಈಚಲ ಮರದ ಎಲೆಗಳಿಂದ ಹಾಕಿದ ಗುಡಿಸಲುಗಳಿಗೆ ಗುಡಾರ ಎಂದು ಕರೆಯುವರು. ಕೆಲವು ಸಲ ಗೋಣಿ ತಾಟುಗಳಿಂದಲೂ ಡೇರಾ ಹಾಕಿಕೊಂಡಿರುತ್ತಾರೆ. ಗುಡಾರ ಹಾಕಿಕೊಳ್ಳುವ ಮುನ್ನ ಒಂದು ದಪ್ಪ ಕಟ್ಟಿಗೆ ಅಥವಾ ಬಿದಿರನ ಬೊಂಬು, ಹಿಂದೆ ಹಾಗು ಮುಂದೆ ಆಸರೆಯಾಗಿರುತ್ತದೆ. ಅದರ ಸುತ್ತಲೂ ವಾಯಿಲೆ ಕಟ್ಟಿಗೆ ಹಾಗು ಕುಗಡ ಕಟ್ಟಿಗೆಯಿಂದ ಬಗ್ಗಿಸಿರುತ್ತಾರೆ. ಅದರ ಮೇಲಿನ ಪ್ಲಾಸ್ಟಿಕ್ ಚೀಲಗಳು ಮತ್ತು ಈಚಲಮರದ ಎಲೆಗಳನ್ನು, ಗೋಣಿಚೀಲಗಳನ್ನು ಎಳೆದು ಎರಡು ಬದಿಗೆ ಕೆಳಕ್ಕೆ ಜಗ್ಗಿ ಗೂಟ ನೆಲಕ್ಕೆ ಹೊಡೆದು, ಗೂಟುಗಳಿಗೆ ಬಿಗಿದು, ಕತ್ತಾಳೆ ನಾರಿನ ಹಗ್ಗದಿಂದ ಕಟ್ಟಿರುತ್ತಾರೆ. ಪ್ಲಾಸ್ಟಿಕ್ ಚೀಲಗಳು, ಬಟ್ಟೆಯನ್ನು ಎಳೆದು ಹಗ್ಗ ಕಟ್ಟಿ, ಈ ಗೂಟುಗಳಿಗೆ ಬಿಗಿದು ಕಟ್ಟುರುತ್ತಾರೆ. ನಡೆವೆ ಕಂಬಗಳನ್ನು ನಿಲ್ಲಿಸಿರುತ್ತಾರೆ. ಅದರ ಮೇಲಿನ ವಾಯಿಲೆ ಕಟ್ಟಿಗೆಗಳ ನಡುವೆಯೂ, ವೈನ್ ಶಾಪ್‌ನಲ್ಲಿರುವ ರಟ್ಟುಗಳು ಬಿಗಿಯಾಗಿ ನಿಲ್ಲುವಂತೆ ಮಾಡುತ್ತಾರೆ. ಇದಕ್ಕೆ ಬಾಗಿಲು, ಕಿಟಕಿಗಳಿರುವುದಿಲ್ಲ. ಬಾಗಿಲಿಗೆ ಹಳೇ ಬಟ್ಟೆಯನ್ನು ಪರದೆಯನ್ನಾಗಿಸಿ ಕಟ್ಟಿ ಇಳಿಬಿಡುತ್ತಾರೆ. ಮನುಷ್ಯ ಬಾಗಿಕೊಂಡು ಗುಡಾರದ ಒಳಗಡೆ ಹೋಗಬೇಕಾಗುತ್ತದೆ. ಒಳಗೆ ಸಹ ಅವನು ನಿಲ್ಲುವುದಕ್ಕೆ ಬರುವುದಿಲ್ಲ. ಗುಡಾರ ಸುತ್ತಲೂ ನೆಲದ ಮೇಲೆ ಒಂದಡಿ ಎತ್ತರಕ್ಕೆ ಬದು ಕಟ್ಟಿರುತ್ತಾರೆ. ಒಳಗೆ ನೀರು ಬಾರದಿರಲೆಂದು ಅದರ ಹೊರ ಮಗ್ಗಲಿಗೆ ಗಾರೆ ತೋಡಿ ನೀರು ಹರಿದು ಹೋಗುವಂತೆ ಬೇರೆ ದಾರಿ ಮಾಡಿರುತ್ತಾರೆ.

ಹೀಗಾಗಿ ಮಳೆ ಬಂದರೂ ಸಹ ನೀರು ಗುಡಾರ ಕೆಳಗೆ ಹೋಗದೆ, ಮಗ್ಗುಲಲ್ಲಿ ಹರಿದು ಹೋಗುತ್ತದೆ. ಗುಡಾರವು ಪೂರ್ವ ದಿಕ್ಕಿಗೆ ಮುಖಮಾಡಿರುತ್ತದೆ. ಇದರ ಒಳಗಡೆ ಅಡಿಗೆ ಮಾಡಲು, ಕಾಳುಕಡಿ ತುಂಬಿಡಲು, ಮಣ್ಣಿನ ಮಡಿಕೆಗಳು ಕಂಡು ಬರುವವು. ಗುಡಾರ ಒಳಗಡೆಯಲ್ಲಿ ಕತ್ತಾಳೆನಾರಿನ ಹಗ್ಗವನ್ನು ನೇತು ಹಾಕಿರುತ್ತಾರೆ. ಅದರ ಲೋಟ. ತಟ್ಟೆ, ಸಪ್ಪುಟು, ರೊಟ್ಟಿ ಮಾಡುವ ಹಂಚು ಕುರುಪಿಗಳು ಕುಡಗೋಲು ಇರುವುದು, ಬಲಗಡೆಯಲ್ಲಿ ಅವರು ಮಲಗುವ ಹಾಸಿಗೆಗಳು ಇಟ್ಟಿರುತ್ತಾರೆ.

ಕೋಳಿಗಳನ್ನು ಗುಡಾರದ ಹೊರಗಡೆಯಲ್ಲಿ ಬಿದಿರಿನ ಬುಟ್ಟಿಯಲ್ಲಿ ಮುಚ್ಚಿರುತ್ತಾರೆ. ಕುರಿಗಳು ಗುಡಾರ ಹೊರಗಡೆಯಲ್ಲಿ ಸಣ್ಣ ಸಣ್ಣ ಕಟ್ಟಿಗೆಗಳನ್ನು ನೆಲದಲ್ಲಿ ಕೂತು ಕತ್ತಾಳೆ ನಾರಿನಿಂದ ಕುರಿಗಳನ್ನು ಕಟ್ಟಿರುತ್ತಾರೆ. ದೇವರ ಗುಡಾರಗಳನ್ನು ನೋಡಿದಾಗ ಇದರಲ್ಲಿ ತಮ್ಮ ಆರಾಧನೆಯ ಕುಲದೇವರುಗಳನ್ನ ಮಾತ್ರ ಇರಸುತ್ತಾರೆ. ಅಮ್ಮನ ದೊಡ್ಡ ಪೆಟ್ಟಿಗೆ, ಭಾವ ಚಿತ್ರಗಳೂ, ಲಡ್ಡು, ಬುರ್ರ ಬುರ್ರ ವಾದ್ಯಗಳು ಗುಡಾರದಲ್ಲಿ ಇಟ್ಟಿರುತ್ತಾರೆ. ಗುಡಾರದ ಒಳಗಡೆ ಚಪ್ಪಲಿಯನ್ನು ಹಾಕುವಂತಿಲ್ಲ. ಗುಡಾರ ಒಳಗಡೆಯಲ್ಲಿ ಅಡಿಗೆ ಮಾಡುವುದಕ್ಕೆ ಆಗುವುದಿಲ್ಲ. ಮಕ್ಕಳ ಸಂಖ್ಯೆ ಜಾಸ್ತಿ ಇರುವುದರಿಂದ ಗುಡಾರಗಳಲ್ಲಿ ಮಲಗುವುದಕ್ಕೆ ಹಾಗುವುದಿಲ್ಲ. ಮಳೆ, ಸಿಡಿಲು ಬಂದಾಗ ಗುಡಾರದ ನಿವಾಸಿಗಳು ಗುಡಾರ ಬಗ್ಗೆ ಮುನ್ನಚ್ಚರಿಕೆ ವಹಿಸಬೇಕು. ಗುಡಾರಗಳಲ್ಲಿ ಹಾವು, ಚೋಳು, ಹುಳಗಳು ಬರುವುದು ಸಹಜ. ಈ ಎಲ್ಲ ಅಂಶಗಳ ನೋಡಿದಾಗ ಗುಡಾರದ ವಾಸ ಭಯಾನಕವಾದದ್ದು. ವಸತಿ ಸಮಸ್ಯೆಗೆ ಸಮರ್ಪಕವಾದ ಪರಿಹಾರವೇನು? ಎಂಬುದು ಈ ಸಮುದಾಯಕ್ಕೆ ಕಗ್ಗಂಟಾಗಿಯೇ ಉಳಿದಿದೆ.

ಬಳ್ಳಾರಿಯ ರಾಜೇಶ್ವರಿ ನಗರದಲ್ಲಿ ೧೮ ಕುಟುಂಬಗಳಿದ್ದು, ಗುಡಾರ ೧೬, ಗುಡಿಸಲು ೧, ಹಗರಿಬೊಮ್ಮನಹಳ್ಳಿಯಲ್ಲಿ ೨ ಕುಟುಂಬಗಳಿದ್ದು, ಗುಡಾರ ೨, ಹೊಸಪೇಟೆ ತಾಲ್ಲೂಕಿನ ಕಂಪ್ಲಿ ಹಾಗೂ ಕಮಲಾಪುರ ಗ್ರಾಮದಲ್ಲಿ ೪೨ ಕುಟುಂಬಗಳಿದ್ದು, ಗುಡಾರ ೧೨, ಗುಡಿಸಲು ೨, ಸರ್ಕಾರಿ ಮನೆಗಳು ೨೮, ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರು ಹಾಗೂ ಕೂಡ್ಲಿಗಿಯಲ್ಲಿ ೭ ಕುಟುಂಬಗಳಿದ್ದು, ಗುಡಾರ ೭, ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆ ಹಾಗೂ ಸಿರಗೇರಿಯಲ್ಲಿ ೬೯ ಕುಟುಂಬಗಳಿದ್ದು, ೬೯ ಗುಡಾರಗಳು ಕಂಡುಬರುವುದು. (ಕೋಷ್ಟಕ ೮ ರಲ್ಲಿ ನೋಡಬಹುದು)

ಆರೋಗ್ಯದ ಬಗ್ಗೆ ಇರುವ ನಂಬಿಕೆಗಳು

ಸ್ವಾತಂತ್ರ ಬಂದ ನಂತರ ದುರುಗಮುರಗಿ ಸಮುದಾಯದವರು ಆರೋಗ್ಯಭಿವೃದ್ಧಿಯ ದೃಷ್ಠಿಯಿಂದ ಸರಕಾರವು ಹಲವಾರು ವೈದ್ಯಕೀಯ ಸವಲತ್ತುಗಳನ್ನು ನೀಡಿದ್ದರೂ, ಅನ್ಯ ಕಾರಣಗಳಿಂದ ಅವುಗಳ ಪೂರ್ಣ ಉಪಯೋಗ ಪಡೆಯಲು ಈ ಸಮುದಾಯಗಳಿಗೆ ಆಗುತ್ತಿಲ್ಲ. ಇನ್ನೊಂದು ಕಡೆ ಸಮುದಾಯವನ್ನು ಆರೋಗ್ಯದ ಸಮಸ್ಯೆಗಳು ಆಗಿಂದಾಗ್ಗೆ ಕಾಡುತ್ತಾಲೇ ಇರುತ್ತವೆ.

ಜ್ವರ, ಕೆಮ್ಮು, ಸೀತಕೆಮ್ಮು ಒರೆಗಮ್ಮ, ಕೆಮ್ಮು-ನೆಗಡಿ, ಶೀತ, ಭೇಧಿ, ರಕ್ತಭೇಧಿ, ತಲೆನೋವು, ಅರೆತಲೆನೋವು. ಮೈಕೈನೋವು, ಹೊಟ್ಟೆನೋವು, ಹಲ್ಲುನೋವು, ವಸಡುನೋವು, ಕಣ್ಣು ನೋವು ಎದೆನೋವು, ಕಾಲುಧೂಳು, ತಲೆತಿರುಗು, ಕಣ್ಣುಕುಟರೆ, ಕಣ್ಣಿನಲ್ಲಿ ಕಳ್ಳಿಹಾಲು ಬಿದ್ದರೆ, ಕಿವಿಯಲ್ಲಿ ಗೊಗ್ಗೆ ಅರಳಿದರೆ ಕಾಲು ಬಿರಿದರೆ, ತುಟಿ ಬಿರಿದರೆ, ನಾಲಿಗೆ ಒಡೆದರೆ, ಕಣ್ಣು ಕೈಕಾಲು ಉರಿದರೆ, ಬಿಕ್ಕಳಿಗೆ, ಕಣ್ಣಿನಲ್ಲಿ ನೀರು ಸೋರಿದರೆ ತಮ್ಮ ನಾಟಿ ಔಷಧಿಗಳಿಂದ ಪರಿಹಾರ ಕಂಡುಕೊಳ್ಳುವರು. ಇವರು ಅನುಭವಸ್ಥ ಗಂಡಸರ ಹತ್ತಿರ ಉಪಚಾರ ಮಾಡಿಕೊಳ್ಳುತ್ತಾರೆ. ಹಳದಿ ರೋಗ ಕಾಮಲೆ, ಜಾಂಡೀಸ್, ಕೈಮದ್ದು, ಕೈಮಸುಗು,

ಉಳುಕಲ್ಲು, ಮೂಳೆ ರೋಗ, ಕಾಲರ, ಪ್ಲೇಗ್, ಪಾರ್ಶ್ವವಾಯು ಮೊದಲಾದ ಕಾಯಿಲೆಗಳು ಬಂದರೆ ವೈದ್ಯರ ಹತ್ತಿರ ಹೋಗುತ್ತಾರೆ. ನಾಗರಹಾವು, ಮಿಡಿ ನಾಗರಹಾವು, ಕೊಳಕು ಮಂಡಲ, ಉರಿಮಂಡಲ ಕೆರೆಹಾವು ಇತ್ಯಾದಿ ಕಚ್ಚಿದರೆ ಅಥವಾ ವಿಷ ಕುಡಿದರೆ ದುರುಗಮುರಗಿ ಸಮುದಾಯದವರು ಕಾಡು ಔಷಧಿಯನ್ನು ಉಪಯೋಗಿಸುತ್ತಾರೆ. ಹುಚ್ಚು ನಾಯಿ ಕಡಿದರೆ ಇವರಲ್ಲಿ ಮದ್ದು ಇದೆ. ಒಬ್ಬ ವ್ಯಕ್ತಿಗೆ ಹುಚ್ಚು ನಾಯಿ ಕಚ್ಚಿದರೆ, ಈ ಸಮುದಾಯದ ಪೂಜಾರಿ ಕಚ್ಚಿರುವ ಭಾಗದಲ್ಲಿ ಹಳೆಯ ಬಟ್ಟೆಯನ್ನು ತೆಗೆದುಕೊಂಡು ಒರೆಸುತ್ತಾನೆ. ನಂತರ ಒಣಗಿದ ಕೋರೆ ಹುಳ ತೊಗರಿ ಎಲೆಗಳ ಮೇಲೆ, ಒಣಗಿರುವ ಕಾಸಿ ಹುಲ್ಲಿನ ಮೇಲೆ, ಕಳ್ಳಿ ಗಿಡದ ಮೇಲೆ ಈ ಹುಳ ಕಂಡು ಬರುವುದು. ಇದರ ತಲೆಯನ್ನು ತುಂಡು ಮಾಡಿ ಬಿಸಾಡುತ್ತಾರೆ. ಅದರ ಹೊಟ್ಟೆಯನ್ನು ಒಣಗಿಸಿ ಕಚ್ಚಿರುವ ಭಾಗದಲ್ಲಿ ಹಚ್ಚುತ್ತಾರೆ. ಹಾಗು ಜೋಳದ ಕಾಳಿನ ತರಹ ನಾಲ್ಕು ಗುಳಿಗೆಗಳನ್ನು ಮಾಡಲಾಗುವುದು. ಈ ಗುಳಿಗೆಯಲ್ಲಿ ನಾಲ್ಕು ಭಾಗಮಾಡಿ ಒಂದು ಗುಳಿಗೆಯನ್ನು ಮಾತ್ರ ನುಂಗಬೇಕು, ನಂತರ ೫ ಗಂಟೆಗಳ ಸಮಯದಲ್ಲಿ ಮೂತ್ರದ ಮೂಲಕ ಒಳಗಿನ ವಿಷ ಕಂಡಿ, ಕಂಡಿ ತರಹ ಬೀಳುವುದು. ಒಂದು ಬಾರಿ ಔಷಧಿ ಕೊಟ್ಟು ನಂತರ ಇನ್ನೊಂದು ಬಾರಿ ಕೊಡಲಾಗುವುದು. ಇವರ ಇನ್ನೊಂದು ವಿಶೇಷವೆಂದರೆ ಹುಚ್ಚುನಾಯಿ ಕಚ್ಚಿರುವ ದಿನದಲ್ಲಿ ಔಷಧಿಯನ್ನು ನೀಡಲಾಗುವುದು.

ಹುಚ್ಚುನಾಯಿ ಕಡಿದಿರುವ ವ್ಯಕ್ತಿ ಮುದ್ದೆ, ಬೇಳೆಸಾರು, ೬ ತಿಂಗಳು ಊಟ ಮಾಡಬೇಕು. ಹಾಸಿಗೆ ಹತ್ತಿರ ಹೋಗಬಾರದು.(ಹೆಂಡತಿ ಜೊತೆ ಮಲಗಬಾರದು). ಮಳೆಯಲ್ಲಿ ನೆನೆಯಬಾರದು. ಈ ಅಂಶಗಳನ್ನು ಪರಿಪಾಲನೆ ಮಾಡಿದರೆ ಮಾತ್ರ ಬದುಕಬಹುದು ಎಂದು ಸಮುದಾಯದವರು ಹೇಳುತ್ತಾರೆ.

ಮಕ್ಕಳು ಒಂದೇ ಸಮನೆ ಆಳುತ್ತಿದ್ದರೆ ರಚ್ಚೆ ಹಿಡಿದಿದೆ ಎನ್ನುತ್ತಾರೆ. ಹೀಗೆ ಅಳುತ್ತಿದ್ದರೆ ಯಾರದೋ ಕೆಟ್ಟು ಕಣ್ಣು ತಗಲಿ ದೃಷ್ಠಿಯಾಗಿದೆ ಎಂದು ತಿಳಿಯುತ್ತಾರೆ. ದೃಷ್ಠಿನಿವಾರಣೆಗಾಗಿ ಪೊರಕೆಯ ಹಂಚಿ ಕಡಿಗಳನ್ನು ಎಡಗೈಲಿ ಹಿಡಿದುಕೊಂಡು ಹೊತ್ತಿಸಿ ಮಗುವಿನ ಮುಂದೆ ಇಳಿ ತೆಗೆಯುತ್ತಾರೆ. ನಂತರ ಉರಿಯುತ್ತಿರುವ ಕಡ್ಡಿಗಳನ್ನು ಒಂದು ಮೂಲೆಗೆ ಇಡಲಾಗುತ್ತದೆ. ಅವು ಪಟ ಪಟನೆ ಶಬ್ದಮಾಡುತ್ತಾ ಉರಿದು ಹೋಗುತ್ತವೆ.

ಹೀಗೆ ಶಬ್ದ ಮಾಡದೆ ಹೋದರೆ ದೃಷ್ಠಿಯಾಗಿಲ್ಲ ಎಂದು ತಿಳಿಯುತ್ತಾರೆ. ಅದರ ಬೂದಿಯನ್ನು ತೆಗೆದುಕೊಂಡು ಮಗುವಿನ ಹಣೆಗೆ ಹಚ್ಚುತ್ತಾರೆ. ಸಾಮಾನ್ಯವಾಗಿ ಯಜಮಾನರು ಹಾಗು ಹಳೆಕಾಲದ ಮುದುಕಿಯರು ದೃಷ್ಟಿಯಾಗಿರುವ ಮಗುವಿಗೆ ಉಪ್ಪು, ಮುದ್ದೆ, ಮೆಣಸಿನಕಾಯಿ, ಕಳಸದ ಎಲೆ, ಕಸಬರಿಕೆ ಕಡ್ಡಿ, ಮಗುವಿಗೆ ನಿವಾಳಿಸಿ, ಗುಡಾರದ ಹೊರಗಡೆಯಿರುವ ಒಲೆಗೆ ಹಾಕಿ ಸುಡುತ್ತಾರೆ. ದೃಷ್ಟಿಯಾಗುದೆಂದರೆ ಕೆಟ್ಟ ಕಣ್ಣು ತಗಲುವುದು ಎಂದರ್ಥ. ಒಮ್ಮೆ ದೃಷ್ಟಿಯನ್ನು ತಮ್ಮ ಕುಲದೇವರು ಗುಡಾರಗಳಲ್ಲಿ ತೆಗೆಯಲಾಗುವುದೆಂದರೆ. ಇದರಲ್ಲಿ ಬಳಸುವ ವಿಶೇಷವೆಂದರೆ ತೆಂಗಿನ ಕಾಯಿ ನಿವಾಳಿಸಿ ಈಡುಗಾಯಿ ಒಡೆಯುತ್ತಾರೆ. ಒಂದು ತಟ್ಟೆಯಲ್ಲಿ ಭಂಡಾರ ಹಾಕಿ, ಮತ್ತೊಂದರಲ್ಲಿ ರೊಟ್ಟಿ ಸುಡುವ ಹೆಂಚಿನ ಮಸಿ

ಹಾಕಿ ನೀರನ್ನು ಬೆರಸಿ ಎರಡು ತಟ್ಟೆಗಳಿಗೂ ಮಾಡಿರುವ ಅನ್ನವನ್ನಾಗಲಿ, ಮುದ್ದೆಯನ್ನಾಗಲಿ, ಅವರ ಮೇಲೆ ಎಣ್ಣೆ ಬತ್ತಿಯನ್ನಿಟ್ಟು ಇಳಿ ತೆಗೆಯುತ್ತಾರೆ. ಇದನ್ನು ಮಸಿನೀರು ಅಥವಾ ರತ್ನೀರು ಎಂದು ಕರೆಯುತ್ತಾರೆ.

ಈ ರತ್ನೀರಿನ ತಟ್ಟೆಯಲ್ಲಿನ ನೀರನ್ನ ತೆಗೆದುಕೊಂಡು ಹೋಗಿ ಮೂರು ಹಾದಿ ಕೂಡಿರುವ ಕಡೆಯಲ್ಲಿ ಹಾಕಿ ಬರುತ್ತಾರೆ. ಇದರೊಡನೆ ಕಣಗಲು ಹೂವನ್ನು ಹಾಕಿರುತ್ತಾರೆ. ಇಂತವುಗಳನ್ನು ಕಂಡ ಯಾರೆ ಆದರೂ ಅದನ್ನು ದಾಟಿಕೊಂಡು ಹೋಗದೆ, ಅದರ ಮೇಲೆ ಮೂರ ಸಾರಿ ಉಗಳಿ ಮುಂದೆ ಹೋಗುತ್ತಾರೆ. ಹೀಗೆ ಮಾಡುವುದರಿಂದ ಸೊಂಕು ತಗಲುವುದಿಲ್ಲ ಎಂಬ ನಂಬಿಕೆ ಅವರಲ್ಲಿದೆ. ತಾವು ವಾಸಿಸುವ ಗುಡಾರಗಳಲ್ಲಿ ತಮ್ಮ ರಕ್ಷಣೆಗಾಗಿ ಕುಲದೇವರನ್ನು ನಂಬಿಕೊಂಡಿರುತ್ತಾರೆ. ಇವರು ಜಾತ್ರೆ ಸಮಯದಲ್ಲಿ ವೇಷ ಹಾಕಿಕೊಂಡು ಪ್ರತಿವರ್ಷ ಮಾಡಬೇಕಾದ ಸಮಯದಲ್ಲಿ ಏನೋ ಕಾರಣದಿಂದಾಗಿ ವೇಷ ಹಾಕಲಿಲ್ಲವೆಂದರೆ, ದೇವಿಯು ಕೋಪದಿಂದಾಗಿ ನಮ್ಮ ಮಕ್ಕಳಿಗೆ ರೋಗಗಳು ಕಾಣಿಸಿಕೊಳ್ಳುತ್ತವೆ ಎಂದು ನಂಬುತ್ತಾರೆ.

ಮಕ್ಕಳಿಗೆ ದಡಾರ ಎದ್ದಾಗ (ಅಮ್ಮ ಎದ್ದಾವ) ಪ್ರತಿ ನಿತ್ಯ ಗುಡಾರದಲ್ಲಿ ಸಗಣಿಯಿಂದ ನೆಲವನ್ನು ಸಾರಿಸಿ, ಬೇವಿನ ಸೊಪ್ಪು ಹಾಕಿ ಕುದಿಸಿ, ಬಿಸಿನೀರಿನಿಂದ ಸ್ನಾನ ಮಾಡಿಸುತ್ತಾರೆ. ನೆನಸಿದ ಬಿಳಿ ಬಟ್ಟೆಯಿಂದ ಮಗುವಿಗೆ ಮೈ ಒರೆಸಿ, ಮಡಿ ಬಟ್ಟೆ ತೊಡಿಸುತ್ತಾರೆ. ಈ ಸಂದರ್ಭದಲ್ಲಿ ಬೇರೆಯವರ್‍ಯಾರಾದರೂ ಅಮ್ಮ ಇರುವ ಮನೆಗೆ ಬರಬೇಕಾದರೆ ಕಾಲ ಮೇಲೆ ನೀರು ಹಾಕಿಕೊಂಡು ಬರಬೇಕು. ಮಗುವಿನ ಪಕ್ಕದಲ್ಲಿ ಬೇವಿನ ಸೊಪ್ಪನ್ನು ಇಡಲಾಗುವುದು. ಬೇವಿನ ಸೊಪ್ಪಿನಿಂದ ಗಾಳಿ ಹೊಡೆಯುತ್ತಾರೆ. ದಡಾರ ಹೋಗುವರೆಗೆ ಆ ಮನೆಯವರು ಮಾಂಸವನ್ನು ತಿನ್ನಿಸುವಂತಿಲ್ಲ.

ಸಣ್ಣ ಮಕ್ಕಳಿಗೆ ಜ್ವರ ಬಂದಾಗ ಹೆದರಿ ಕೊಂಡಾಗ ತಾಮ್ರದ ತಗಡು ಮಾಡಿಸಿ ಕಟ್ಟುತ್ತಾರೆ. ಹಾಗು ಮಕ್ಕಳು ಎಡವಿ ಬಿದ್ದಾಗ, ಬಿದ್ದ ಜಾಗದ ಮೇಲೆ ಮೂರು ಸಾರಿ ಉಗುಳಿ ಮುಂದಕ್ಕೆ ಹೋಗುತ್ತಾರೆ. ಸೊಂಟದಲ್ಲಿ ಉಡುದಾರವಿಲ್ಲದವನು ಗುಡಾರದ ಒಳಗಡೆ ಪ್ರವೇಶಿಸುವಂತಿಲ್ಲ. ಕುಟಂಬದಲ್ಲಿ ಊಟ ಮಾಡುವಾಗ ತಾನೊಬ್ಬನೆ ಊಟ ಮಾಡಿ ಜೊತೆಗಿದ್ದವರೆಗೆ ಅನ್ನ ತುತ್ತು ಕೊಡದಿದ್ದರೆ ಅವರಿಗೆ ಕಣ್ಣು ಕುಟುರೆ ಏಳುತ್ತದಂತೆ. ಇದನ್ನು ಕಣ್ಣುಸಣ್ಣಾಗುವುದು ಎಂದು ಹೇಳುತ್ತಾರೆ. ಹೆಂಗಸರಿಗೆ ಎದೆಸೂಲೆ ಬಂದರೆ ಬೇವಿನ ಸೊಪ್ಪಿನ ಕಷಾಯವನ್ನ ಕುಡಿಸುತ್ತಾರೆ.

ಊಟ ಮಾಡುವ ಸಂದರ್ಭದಲ್ಲಿ ಕೆಟ್ಟ ಕಣ್ಣಿನವರು ನೋಡಿದರೆ, ಊಟದ ತಟ್ಟೆಯನ್ನು ದಾಟಿಕೊಂಡು ಹೋದರೆ ಕಾಲಧೂಳು ಆಗುತ್ತದೆ. ಕಾಲಧೂಳು ಎಂದರೆ ಹೊಟ್ಟೆ ನೋವು ಬರುವುದು, ಬಾಣಂತಿಯರು ಊಟಮಾಡುವ ಸಮಯದಲ್ಲಿ ಯಾರು ನೋಡಬಾರದೆಂಬ ಕಾರಣಕ್ಕಾಗಿ ಗುಡಾರದ ಮರೆಯಲ್ಲಿ ಕೂರಿಸಿ ಊಟ ಮಾಡಿಸುತ್ತಾರೆ. ದೆವ್ವ ಹಿಡಿದಿರುವ ಗಂಡಸರಾಗಲಿ ಹೆಂಗಸರಾಗಲಿ ತಮ್ಮ ಕುಲದೇವರುಗಳಾದ ಈರನಾಗಮ್ಮ, ಮುನಿಸ್ವಾಮಿ ದೇವರು ಗುಡಾರದಲ್ಲಿ ಕರಮುಕೊಂಡು ಒಳಗೆ ಹೋಗುತ್ತಾರೆ. ಪೂಜಾರಿ ಕೈಯಲ್ಲಿ ಬೇವಿನ ಸೊಪ್ಪನ್ನು ಹಿಡಿದುಕೊಂಡು ತಲೆಯ ಮೇಲೆ ಪಟ ಪಟ ಬಡಿಯುತ್ತಾರೆ. ಇದರಿಂದ

ದೆವ್ವಗಳು ಹೆದರಿಕೊಂಡು ಹೋಗುತ್ತವೆ ಎಂದು ಹೇಳುತ್ತಾರೆ. ಮಂತ್ರ ವಿದ್ಯೆಯ ಕುರಿತು ದುರುಗಮುರಗಿ ಸಮುದಾದವರು ಸರಿಯಾಗಿ ಮಾಹಿತಿಯನ್ನು ನೀಡಲಿಲ್ಲ. ಸಂಪ್ರದಾಯ, ಆಚರಣೆಗಳು, ಮಂತ್ರಗಳು ಪೂರ್ಣ ನಂಬಿಕೆಯ ಮೇಲೆ ನಿಂತಿವೆ ಎಂದು ಹೇಳಬಹುದು. ಯಾರಿಗಾದರೂ ಚೇಳು ಕಚ್ಚಿದರೆ ಆ ಭಾಗದಲ್ಲಿ ಹಾಸಿನ ಮರದ ನಾರಿನಿಂದ ಸುಟ್ಟು ಅದರ ಬೂದಿಯನ್ನು ಕಚ್ಚಿರುವ ಭಾಗಕ್ಕೆ ಹಚ್ಚುತ್ತಾರೆ. ಹಾವು ಕಚ್ಚಿದರೆ ಬೇವಿನ ಸೊಪ್ಪು ಹಾಕಿ ವಿಷವನ್ನು ಇಳಿಸುತ್ತಾರೆ. ದುರುಗಮುರಗಿ ಸಮುದಾಯ ವ್ಯಕ್ತಿಗಳ ಗಿಡ ಮೂಲಿಕೆಗಳು, ಬೇರುಗಳು ಕಾಡಿನ ಸೊಪ್ಪುಗಳನ್ನು ನಿರ್ಧಿಷ್ಟ ದಿನಗಳಲ್ಲಿ ಸಂಗ್ರಹಿಸುತ್ತಾರೆ. ಔಷಧಿ ಹಚ್ಚುವ ಸಮಯದಲ್ಲಿ ಘಳಿಗೆಗಳನ್ನು ನೋಡುತ್ತಾರೆ.

ಮಂಗಳವಾರ, ಶುಕ್ರವಾರ ಔಷಧಿ ಹಚ್ಚುವ, ಇನ್ನಿತರ ಕಾರ್ಯಗಳನ್ನು ಮಾಡುವ ಪ್ರಮುಖ ದಿನಗಳು ಎಂದು ಪರಿಗಣಿಸಿದ್ದಾರೆ. ಈ ದಿನಗಳಲ್ಲಿ ತಾಮ್ರ ತಗಡುಗಳನ್ನು ಸಣ್ಣ ಮಕ್ಕಳಿಗೆ ಕಟ್ಟಲಾಗುವುದು. ಮಧ್ಯರಾತ್ರಿಯಲ್ಲಿ ಸ್ಮಶಾನದಲ್ಲಿ ಕೋಳಿಯನ್ನು ಮೇಕೆಯನ್ನು ಕೆಲವೊಮ್ಮೆ ಬಲಿ ಕೊಡಲಾಗುವುದು.

ಒಂದು ಶುದ್ಧ ಅಲೆಮಾರಿ ಸಮುದಾಯವೊಂದನ್ನ ಮುಖ್ಯವಾಹಿನಿಗೆ ಎಳೆದು ತರಬೇಕೆಂದರೆ, ಅದೊಂದು ದೀರ್ಘ ಪ್ರಕ್ರಿಯಿಯೇ ಸರಿ. ಭಾರತದಂತಹ ದೇಶದಲ್ಲಿ ಈ ಬಗೆಯ ಪ್ರಯತ್ನಗಳು ಪವಾಡ ಸಾದೃಶ್ಯ ರೀತಿಯಲ್ಲಿ ನಡೆದರೆ ಮಾತ್ರ, ಇಂತಹ ಸಮುದಾಯಗಳು ತಮ್ಮ ಸಮಸ್ಯೆಗಳ ಆಳದಿಂದ ಈಚೆಗೆ ಬರಬಲ್ಲವು. ವರ್ತಮಾನದ ಭಾರತದಲ್ಲಿ ಸೇವಾವಲಯಗಳಲ್ಲಿ ಖಾಸಗೀಕರಣಕೊಂಡ ಹಿನ್ನೆಲೆಯಲ್ಲಿ, ಜನತಂತ್ರದ ವಿಡಂಬನಾಕೃತಿ ಮಾತ್ರ ನಮ್ಮ ಕಣ್ಣೆದುರು ನಿಂತಿದೆ. ಕೇವಲ ಮೇಲ್ವರ್ಗದ ಮಾತ್ರ ಅನುಕೂಲಗಳನ್ನು ಪಡೆದುಕೊಳ್ಳಬಹುದಾದ ಉಪಭೋಗಿ ಆರ್ಥಿಕ ವ್ಯವಸ್ಥೆ ರೂಪಗೊಂಡಿರುವ ಹಿನ್ನೆಲೆಯಲ್ಲಿ, ಶೋಷಿತ ಸಮುದಾಯಗಳು, ಅಂಚಿನ ಆದಿವಾಸಿಗಳು ಇನ್ನು ದೀನ ಸ್ಥಿತಿಗೆ ಹೋಗುವುದರಲ್ಲಿ ಎರಡು ಮಾತಿಲ್ಲ. ದೇಶಕ್ಕೆ ಸ್ವತಂತ್ರ ಬಂದ ಹೊಸತರಲ್ಲಿ ಕಂಡ ಅನೇಕ ಕನಸುಗಳು ಇಂದು ನಾಶವಾಗಿ ಹೋಗಿವೆ.

ದುರುಗಮುರಗಿಯಂತಹ ಅನೇಕ ಸಮುದಾಯಗಳು ತಾವು ಉದ್ಧಾರವಾಗುವ ಕನಸುಗಳನ್ನ ಅನಿವಾರ್ಯವಾಗಿ ಇಟ್ಟುಕೊಡುತ್ತಿವೆ. ದೇಶದ ಒಟ್ಟು ಆರ್ಥಿಕತೆಯ ಸ್ವರೂಪವನ್ನವಲಂಬಿಸಿ ಜನರ ಬದುಕು ರೂಪಗೊಳ್ಳುತ್ತದೆ. ಆಟಕ್ಕೆ ಮತ್ತು ಲೆಕ್ಕಕ್ಕೆ ಎರಡಕ್ಕೂ ಇಲ್ಲದ ಈ ಬಗೆಯ ಸಮುದಾಯಗಳ ಭವಿಷ್ಯದ ವಿಕಾಸವನ್ನು ಕುರಿತು, ಸ್ಪಷ್ಟ ಯೋಜನೆಗಳನ್ನು ರೂಪಿಸುವ ಹೊಣೆಯನ್ನು ಸರಕಾರ ಹೋರುವ ಸ್ಥಿತಿಯಲ್ಲಂತೂ ಇಲ್ಲ. ಜಾಗತೀಕರಣದ ಈ ಚಂಡಮಾರುತದಲ್ಲಿ ಅಲೆಮಾರಿಗಳ ದಿಕ್ಕೆಟ್ಟ ಸ್ಥಿತಿಯನ್ನು ಊಹಿಸಿಕೊಳ್ಳುವುದು, ಸಾಧ್ಯವಿಲ್ಲ.

❖❖❖❖❖

ಅಧ್ಯಾಯ ೬
ಸಮಾರೋಪ

ಸಮಾರೋಪ

ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬದುಕುತ್ತಿರುವ ದುರುಗುಮುರಗಿಯರ ನೆಲೆಗಳಿಗೆ ಭೆಟ್ಟಿಯಿತ್ತು, ಅವರ ಜೀವನ ವಿಧಾನ, ಕಸಬುಗಳು. ಸಾಹಿತ್ಯ, ರೂಢಿ, ನಂಬಿಕೆ, ಸಂಪ್ರದಾಯಗಳನ್ನು ಪರಿಶೀಲಿಸಿ ದುರುಗಮುರಗಿಯರು ಕುರಿತು ಈವರೆಗೆ ಬಂದ ಸಾಹಿತ್ಯವನ್ನ ಅವಲೋಕಿಸಿ, ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಈ ಸಂಪ್ರಬಂಧವನ್ನು ಬರೆಯಲಾಗಿದೆ. ಪ್ರಬಂಧ ನಿರೂಪಣೆಗೆ ನನ್ನ ಕ್ಷೇತ್ರಕಾರ್ಯದ ಸಾಮಾಗ್ರಿಯನ್ನೇ ಹೆಚ್ಚಾಗಿ ಬಳಸಿಕೊಂಡು, ಅವಶ್ಯಕತೆ ಕಂಡಲ್ಲಿ ಇತರ ಆಕರಗಳ ನೆರವನ್ನು ತೆಗೆದುಕೊಂಡು ಕೆಲವು ಮಹತ್ವ ಪೂರ್ಣ ಅಂಶಗಳನ್ನು ದಾಖಲಿಸಲಾಗಿದೆ.

ಅಲೆಮಾರಿ ಬುಡಕಟ್ಟು ಸಮುದಾಯವಾದ ದುರುಗ ಮುರಗಿಯರು ಆಂದ್ರದ ಕಡೆಯಿಂದ ಈ ಜಿಲ್ಲೆಗೆ ಬಂದವರು. ಇವರು ತಾವು ನೆಲೆಸಿರುವ ಪ್ರದೇಶಗಳಲ್ಲಿ ಗುಡಾರಗಳಲ್ಲಿ ಜೀವನ ನಡೆಸುತ್ತಿದ್ದಾರೆ. ಇವರ ಗುಡಾರಗಳಲ್ಲಿ ಅಪರೂಪಕ್ಕೆ ರೇಡಿಯೋ ಒಂದನ್ನು ಬಿಟ್ಟರೆ ಉಳಿದ ಆಧುನಿಕ ಉಪಕರಣಗಳು ಕಾಣಿಸುವುದಿಲ್ಲ. ಆಧುನಿಕವಾಗಬೇಕೆಂಬ ಇಚ್ಛೆ ಇದ್ದರೂ ಮಿತ ಆರ್ಥಿಕ ಸ್ಥಿತಿಯಿಂದ, ಆಧುನಿಕ ಉಪಕರಣಗಳನ್ನು ಜೀವನ ವಿಧಾನವನ್ನು ಹೊಂದಲಾಗಿಲ್ಲ. ದೈನಂದಿನ ಬದುಕನ್ನು ಸಾಗಿಸಲು ಬೇಕಾವ ಕೆಲವು ಪಾತ್ರೆ, ತಟ್ಟೆಗಳೇ ಇವರ ಸರ್ವಸ್ವ. ಕಿನ್ನರಿಜೋಗಿ, ಕೊರವ, ಗೋಸಂಗಿ, ಬುಡಗ ಜಂಗಮರೊಂದಿಗೆ ಧನಾತ್ಮಕ ಸಂಬಂಧವನ್ನು ಹೊಂದಿದ್ದಾರೆ.

ಇವರು ತಮ್ಮ ಹೊಟ್ಟೆಪಾಡಿಗೆ ಭಿಕ್ಷಾಟನೆಯ ಜೀವನವನ್ನು ನಡೆಸುತ್ತಾ ಬಂದಿದ್ದಾರೆ. ಧಾರ್ಮಿಕ ಆಚರಣೆಯಲ್ಲಿ ಗಾಢವಾದ ಭಯಭಕ್ತಿ ಹೊಂದಿರುತ್ತಾರೆ. ಇವರ ಕುಲದೇವರುಗಳಾದ ಈರನಾಗಮ್ಮ, ಮುನಿಸ್ವಾಮಿ ಇನ್ನಿತರ ದೇವತೆಗಳೇ ಈ ಸಮುದಾಯದ ದಿನ ನಿತ್ಯದ ಬದುಕಿಗೆ ಆಸರೆಯಾಗಿವೆ. ದೇವರ ಜೊತೆಗಿನ ಇವರ ಧಾರ್ಮಿಕ ಪರ್ಯಟನೆಯೇ ನಿತ್ಯ ಹಸಿವನ್ನು ಇಂಗಿಸುವ ಮಾರ್ಗ.

ಈ ಸಮುದಾಯದವರು ಪ್ರಚಲಿತ ದಿನಗಳಲ್ಲಿ ಭಿಕ್ಷಾಟನೆ ವೃತ್ತಿಯನ್ನು ಮುಂದುವರಿಸಿಕೊಂಡು, ಮಧ್ಯಾಹ್ನದ ಸಮಯದಲ್ಲಿ ಮೀನುಗಾರಿಕೆಗೆ ಮತ್ತು ದಿನಗೂಲಿಗೆ ಹೋಗುತ್ತಾರೆ. ಮಹಿಳೆಯರು ದಿನಗೂಲಿ, ಕೊಡಪಾನ ಮಾರಾಟ , ಮತ್ತು ಜಾತ್ರೆಗಳಲ್ಲಿ ಬಲೂನ್ ವ್ಯಾಪಾರ ಮಾಡುತ್ತಿದ್ದಾರೆ. ಸಮುದಾಯದ ಜನರಿಗೆ ಒಂದು ಕಾಲದಲ್ಲಿ ಬಹಳ ಗೌರವ ಸಿಗುತ್ತಿತ್ತು, ಆದರೆ ಈವತ್ತಿನ ದಿನಗಳಲ್ಲಿ ಆ ಬಗೆಯ ಗೌರವ ಸಿಗುತ್ತಿಲ್ಲ. ತಮ್ಮ ಭಿಕ್ಷಾಟನೆ ವೃತ್ತಿಯನ್ನು ಬಿಟ್ಟು ಬೇರೆ ಬೇರೆ ವೃತ್ತಿಗಳನ್ನು ಕೈಗೊಳ್ಳುತ್ತಿದ್ದಾರೆ. ಹೀಗಾಗಿ ದುರುಗಮುರಗಿ ಸಮುದಾಯದವರ ಮನೋಭಾವ ಮತ್ತು ವಿಚಾರಗಳು ಬದಲಾಗುತ್ತಿವೆ.

ಜನನ, ಋತುಮತಿ, ಮದುವೆ, ಸಾವು ಅಸ್ಪೃಶ್ಯತೆ ಸಂಬಂಧಿ ಆಚರಣೆಯಂತೆ ಕಂಡುಬರುವವು. ಹುಟ್ಟಿದ ಮಗುವಿಗೆ ಬರೆ ಹಾಕುವ ಪದ್ದತಿ ಇವರಲ್ಲಿದೆ. ಋತುಮತಿಯಾದ ದಿನದಲ್ಲಿ ನಿಶ್ಚಿತಾರ್ಥ ಮಾಡುತ್ತಾರೆ. ಮದುವೆ ಪ್ರಸಂಗಗಳಲ್ಲಿ ಸಮುದಾಯದ ವಿಶಿಷ್ಟವಾದ ಗುಡಾರ ಹಂದರ, ಸುರಿಗೆಯ ನೀರು, ಅಕ್ಕಿಕಾಳುಶಾಸ್ತ್ರ, ಮದುವೆಯ ಊಟ ಸರಳ ರೀತಿಯಲ್ಲಿ ನಡೆಯುವುದು. ಕುಲದ ಮುಖಂಡ ಹಾಗೂ ಆತನ ಹೆಂಡತಿ ಬುರ್ರ ಬುರ್ರ ವಾದ್ಯದೊಂದಿಗೆ ಹಿತನುಡಿಗಳು ಹೇಳುತ್ತಾ, ಪೌರೋಹಿತ್ಯವನ್ನು ವಹಿಸುವವರು. ಕುಟುಂಬದಲ್ಲಿ ಸತ್ತ ಹಿರಿಯರ ಹೆಸರಿನಲ್ಲಿ ತೆಂಗಿನ ಕಾಯಿ ತೆಗೆದಿಟ್ಟು, ಪೂಜೆ ಮಾಡಲಾಗುವುದು. ಇವರು ಕೆಲವು ಹಬ್ಬಗಳ ಆಚರಣೆ ಮಾಡುವುದಿಲ್ಲ, ಮಾಡಿದರೂ ದಸರಾ ಹಬ್ಬವನ್ನು ಮಾತ್ರ ಆಚರಿಸುತ್ತಾರೆ. ಬಳ್ಳಾರಿಯ ಕನಕದುರ್ಗಮ್ಮ ಜಾತ್ರೆಯಲ್ಲಿ ಪೋತರಾಜ ವೇಷ ಹಾಕಿಕೊಂಡು, ತನ್ನದೇ ವಿಶಿಷ್ಠ ಸೇವೆಯನ್ನು ಅರ್ಪಿಸುತ್ತಾರೆ. ಬಡತನದಲ್ಲಿ ಇದ್ದರೂ ಕನಕದುರ್ಗಮ್ಮ ದೇವಿ ಮೇಲೆ ಅಪಾರವಾದ ಭಕ್ತಿ ಹೊಂದಿರುತ್ತಾರೆ. ನ್ಯಾಯ ಪಂಚಾಯ್ತಿ ಸತ್ಯವನ್ನು ಪ್ರಕಟಿಸಿ, ನ್ಯಾಯ ನಿರ್ಣಯ ಮಂಡಿಸುತ್ತಾರೆ. ಹಾಗೂ ಒಮ್ಮೊಮ್ಮೆ ನ್ಯಾಯ ಪಂಚಾಯಿತಿ ವಾರಗಟ್ಟಲೇ ಬಗೆ ಹರಿಯುವುದಿಲ್ಲ.

ದುರುಗಮುರಗಿಯರು ತಮ್ಮ ಮಾತೃ ಭಾಷೆಯಾದ ತೆಲುಗು ಮಾತನಾಡುತ್ತಾರೆ. ಹೊರಗಡೆ ವ್ಯವಹಾರದಲ್ಲಿ ಕನ್ನಡ ಭಾಷೆ ಮಾತನಾಡುತ್ತಾರೆ. ಜನಪದ ಸಾಹಿತ್ಯದಲ್ಲಿ ಇವರ ಆಸಕ್ತಿ ಕಡಿಮೆಯಿದ್ದರೂ, ಮದುವೆ ಹಿತನುಡಿಗಳು, ಮಹಿಳೆಯರು ದಿನಗೂಲಿಯ ಸಮಯದಲ್ಲಿ ಕಾಲ ಕಳೆಯುವುದರ ಸಲುವಾಗಿ ಹಾಡುಗಳನ್ನು ಹಾಡುತ್ತಾರೆ. ಗುಡಾರ ಹೊಲಿಯುವುದು, ಮೀನಿನ ಬಲೆ ಎಣೆಯುವುದು ಇವರ ಉಪಕಸಬುಗಳು.

ಸಮುದಾಯ ಎದುರುಸುತ್ತಿರುವ ಸಮಸ್ಯೆಗಳೆಂದರೆ ಬಡತನ, ವಸತಿ. ಮೀಸಲಾತಿ, ಆಹಾರ ಸಮಸ್ಯೆ ಸರಕಾರದ ಯೋಜನೆಗಳ ಕುರಿತ ಅಜ್ಞಾನ, ಶೈಕ್ಷಣಿಕ ಸಮಸ್ಯೆ, ಇತ್ಯಾದಿ ಸಮಸ್ಯೆಗಳು ಇವರನ್ನ ಕಾಡುತ್ತಿವೆ. ಈ ಸಮಸ್ಯೆಗಳ ಬಗ್ಗೆ ಗುಡಾರ ಗುಡಿಸಿ ನಿವಾಸಿಗಳ ಕಲ್ಯಾಣ ಸಂಘ ಗಂಭೀರವಾಗಿ ಚಿಂತಿಸುತ್ತಿದೆ.

ದುರುಗಮುರಗಿಯರು ತಮ್ಮ ಸುತ್ತಲಿನ ಸಾಮಾಜಿಕ ಗುಂಪುಗಳೊಡನೆ ಸಾಮಾಜಿಕ, ಧಾರ್ಮಿಕ, ಹಾಗೂ ಆರ್ಥಿಕ ರಂಗಗಳಲ್ಲಿ, ಬೆರೆತು ಸಹಕಾರಯುತ ಸಹಬಾಳ್ವೆ ಮಾಡುತ್ತಿದ್ದಾರೆ. ಸಾಮಾಜಿಕ ಹಾಗೂ ಧಾರ್ಮಿಕ ರಂಗಗಳಲ್ಲಿ ಇವರು ಅಸ್ಪೃಶ್ಯ ವರ್ಗಗಳ ಸ್ಥಾನಮಾನಗಳನ್ನು ಪಡೆದಿದ್ದು ಆರ್ಥಿಕ ಹಾಗೂ ಶೈಕ್ಷಣಿಕ

ರಂಗಗಳಲ್ಲಿ, ಇವರು ತೀರ ಹಿಂದುಳಿದಿದ್ದಾರೆ. ಸರಕಾರ ಇವರ ಜನಸಂಖ್ಯೆಯ ಪ್ರಮಾಣವಲ್ಲಿ ಇವರಿಗೆ ಉದ್ಯೋಗ ಲಭಿಸಿಲ್ಲ. ಇದಕ್ಕೆ ಕಾರಣ ಶಿಕ್ಷಣದ ಕೊರತೆ, ಸರಕಾರ ಹಾಗೂ ಇನ್ನಿತರೆ ಸಾಮಾಜಿಕ ಸಂಘಟನೆಗಳು ಇವರ ವಿಕಾಸ ಯೋಜನೆಯಡಿ ತುರ್ತು ಗಮನ ಹರಿಸಬೇಕಾಗಿದೆ. ಇವರಿಗೆ ಊಟ, ವಸತಿ ಸೌಲಭ್ಯವುಳ್ಳ ಶಾಲೆಗಳನ್ನು ನಿರ್ಮಿಸಿ, ಅವರ ಶೈಕ್ಷಣಿಕ, ಹಾಗೂ ವೃತ್ತಿಗಳ ಮೇಲೆ ಗ್ರಾಮೋದ್ಯೋಗ ಅಭಿವೃದ್ಧಿ ಯೋಜನೆಗಳು ರೂಪಿಸುವ ಅವಶ್ಯಕತೆಯಿದೆ.

ಅಲೆಮಾರಿಗಳ ಚಾರಿತ್ರಿಕ ಬೆಳವಣಿಗೆ ಎಷ್ಟು ಸಂಕೀರ್ಣವೋ, ಅವುಗಳ ಅಭಿವೃದ್ಧಿ ಸಾಧಿಸುವ ಮಾರ್ಗವೂ ಅಷ್ಟೇ ಸಂಕೀರ್ಣವಾಗಿರುತ್ತದೆ. ಇಂಡಿಯಾದ ಸಮಾಜದ ಚಾರಿತ್ರಿಕ ವಿಕಾಸದ ಯಾವುದೋ ಹಂತದಲ್ಲಿ ನಿಶ್ಚಿತ ಆರ್ಥಿಕ ಸಂಪನ್ಮೂಲಗಳನ್ನ ಕಳೆದುಕೊಂಡು ಶಾಶ್ವತವಾಗಿ ಅಲೆಮಾರಿಗಳಾದ ದುರುಗಮುರಗಿಯರ ಸಂಕೀರ್ಣ ಬದುಕು ಅನೇಕ ಜಟಿಲ ಸಮಸ್ಯೆಗಳಿಗೆ ಕಾರಣವಾಗಿದೆ. ವರ್ತಮಾನದಲ್ಲಿ ಸರಕಾರ ರೂಪಿಸುವ ಯಾವ ಯೋಜನೆಗಳು ಸಾರ್ಥಕ ರೀತಿಯಲ್ಲಿ ಇವರಿಗೆ ತಲುಪುತ್ತಿಲ್ಲ. ಸಿದ್ಧ ಮಾದರಿಯ ಯೋಜನೆಗಳು ಪ್ರತಿಹಂತದಲ್ಲೂ ರಾಜಕೀಯ ಮಧ್ಯ ಪ್ರದೇಶದಿಂದಾಗಿ, ಇಲ್ಲವೆ ಅನುಷ್ಠಾನದಲ್ಲಿರುವ ಲೋಪಗಳಿಂದಾಗಿ ಈ ಬಗೆಯ ಸಮುದಾಯಗಳನ್ನ ತಲುಪುತ್ತಿಲ್ಲ. ಇಲ್ಲಿನ ಸಮುದಾಯಗಳ ಸಂಕೀರ್ಣ ಜೀವನ ವಿಧಾನಗಳಿಗೆ ತಜ್ಞ ಯೋಜನೆಗಳು ಮಾತ್ರ ತಲುಪಬಲ್ಲವು. ಅಲ್ಲದೆ ಅನುಷ್ಠಾನದ ವಿಧಾನಗಳೂ ಸಹ ತಾಯ್ ಮನಸ್ಸಿನಿಂದ ರೂಪಗೊಂಡಿರಬೇಕಾಗುತ್ತದೆ. ಏಕೆಂದರೆ ಆಧುನಿಕ ಜಗತ್ತಿಗೆ ಬೇಕಾದ ವೇಗ ಮತ್ತು ಪ್ರತಿಭಟಿಸುವ ಧ್ವನಿಗಳು ಈ ಸಮುದಾಯಗಳಾಗಿಲ್ಲ.

ಪ್ರಸ್ತುತ ಅಧ್ಯಯನ ದುರುಗಮುರಗಿಯರ ವರ್ತಮಾನದ ಬದುಕನ್ನು ಅನಾವರಣ ಮಾಡುವ ಪುಟ್ಟ ಪ್ರಯತ್ನವಾಗಿದೆ. ಇಲ್ಲಿ ಈ ಸಮುದಾಯದ ಸದ್ಯದ ಬದುಕಿನ ಯಥಾವತ್ತು ಚಿತ್ರಣವಿದೆ. ಇವರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳ ಧಾರಾಳ ಮಾಹಿತಿ ಲಭ್ಯವಿದೆ. ಈ ಅಧ್ಯಯನ ಕೇವಲ ಶೈಕ್ಷಣಿಕ ಕಾರಣಕ್ಕಾಗಿ ರೂಪಗೊಂಡಿದ್ದೇನಲ್ಲ. ಒಂದು ಶೈಕ್ಷಣಿಕವಲ್ಲದ, ಅಮಾಯಕ ಸಮುದಾಯವೊಂದರ ಅಭಿವೃದ್ಧಿಯ ಕನಸನ್ನೂ ಸಹ ಈ ಅಧ್ಯಯನ ಹೊಂದಿದೆ. ಇದು ಈ ಪ್ರಬಂಧದ ಹೆಚ್ಚುಗಾರಿಕೆಯೆಂದೇನು ನಾನು ಭಾವಿಸಿಲ್ಲ. ಸಮುದಾಯಗಳ ಅಧ್ಯಯನಗಳು ಆಯಾ ಸಮುದಾಯಗಳ ಕಷ್ಟ ಸುಖಗಳ ಒಂದು ಭಾಗವಾಗಿ ರೂಪಗೊಳ್ಳಬೇಕೆಂಬ ಶೈಕ್ಷಣಿಕೇತರ ಆಶಯ ಇಲ್ಲಿ ಕೆಲಸ ಮಾಡಿದೆ ಎನ್ನಿಸುತ್ತಿದೆ.

❖❖❖❖❖

ಅನುಬಂಧ

ಗ್ರಂಥಋಣ

ವಕ್ತೃ ವಿವರ

ಕೋಷ್ಟಕಗಳು

ಛಾಯಾ ಚಿತ್ರಗಳು

ಗ್ರಂಥ ಋಣ

೧. ಅಬ್ದುಲ್ ಅಜೀಜ್, ಕೆ. ಜಿ. ವಾಸುಕಿ, ಕರ್ನಾಟಕ ಆರ್ಥಿಕತೆ , ಸಂ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೨. ಓಬಳೇಶ ಘಟ್ಟಿ, ಉದಯೋನ್ಮುಖಿ ಭಾರತದಲ್ಲಿ ಶಿಕ್ಷಣ. ಕೇಂಬಿಡ್ಜ್ ಪಬ್ಲಿಷಿಂಗ್ ಕಂಪನಿ, ಬೆಂಗಳೂರು, ೧೯೯೬

೩. ಕೃಷ್ಣಮೂರ್ತಿ ಹಸೂರು, ಜನಪದ ಮತ್ತು ಬುಡಕಟ್ಟು ಗೀತೆಗಳು, ಸಾಹಿತ್ಯ ಅಕಾಡೆಮಿ, ರವೀಂದ್ರಭವನ ನವ ದೆಹಲಿ ೧೯೯೮

೪. ಕ್ಷೇಮಲಿಂಗ ರಾನೂರ್, ಯೋಜನೆ ಮತ್ತು ಬಡತನ ನಿವಾರಣೆ, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ ೧೯೯೯

೫. ಗೀತಾನಾಗಭೂಷಣ, ದುರುಗಮುರಗಿಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩

೬. ಜಗನ್ನಾಥ ಹೆಬ್ಬಾಳ್, ಜಾತ್ರೆಗಳು, ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೭. ಎಸ್.ಎ.ದಾಳೀಕರ, ರಾಜಕೀಯ ಪಕ್ಷಗಳು ಹಾಗೂ ಗ್ರಾಮೀಣ ಜನತೆ, ಪ್ರಸಾರಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ ೧೯೯೯

೮. ದೀಪಿಕಾ ಆಶಾ, ಮೀನುಗಾರಿಕೆ, ಸಾಹಿತ್ಯ ಬೆಂಗಳೂರು ೧೯೮೫

೯. ದೇ.ಜ.ಗೌ, ಜಾನಪದ ಸೌಂದರ್ಯ , ಸಹ್ಯಾದ್ರಿ ಪ್ರಕಾಶನ. ಮೈಸೂರು, ೧೯೮೯

೧೦. ಡಿ.ಬಿ. ನಾಯಕ್, ಲಂಬಾಣಿ ಜನಪದ ಸಾಹಿತ್ಯ, ಬಂಜಾರಾ ಪ್ರಕಾಶನ, ಗುಲ್ಬರ್ಗಾ ೨೦೦೦

೧೧. ಜೆ.ಎಂ.ನಾಗಯ್ಯ, ಬಳ್ಳಾರಿ ಜಿಲ್ಲೆಯ ಜನಗಳು, ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ. ಗುಲಬರ್ಗಾ

೧೨. ನೀಲಗಿರಿ ತಳವಾರ್, ಜಾನಪದ ೧೯೯೪, ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೬

೧೩. ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ. ೧೯೯೯ ೨೦೦೦. ಪ್ರಕಟಣೆ,ಜಿಲ್ಲಾ ಸಂಖ್ಯೆ ಸಂಗ್ರಹಣಾಧಿಕಾರಿಗಳ ಕಛೇರಿ ಬಳ್ಳಾರಿ

೧೪. ಭಗೀರಥ ಉಪ್ಪಾರ್, ಭಗೀರಥ ಸಂಕಲ್ಪ ನೆನಪಿನ ಸಂಪುಟ. ಧಾರ್ಮಿಕ ಟ್ರಸ್ಟ್, ಬೆಂಗಳೂರು ೧೯೯೯

೧೫. ಕೆ. ಭೈರಪ್ಪ, ಸಮಾಜಶಾಸ್ತ್ರದ ಮೂಲತತ್ವಗಳು, ಸುರೇಶ್ ಪಬ್ಲಿಕೇಶನ್ಸ್, ಗದಗ ೧೯೯೫
೧೬. ಕೆ. ಭೈರಪ್ಪ, ಭಾರತದಲ್ಲಿನ ಸಾಮಾಜಿಕ ಸಮಸ್ಯೆಗಳು, ಗುಲ್ಬರ್ಗಾ, ೧೯೯೭
೧೭. ಮಂಜುನಾಥ ಬೇವಿನಕಟ್ಟಿ, ಜನಪದ ಸಂಸ್ಕೃತಿ, ತೇಜಸ್ವಿ ಪ್ರಕಾಶನ, ಹ್ಯಾರಡ ೧೯೯೪
೧೮. ಹೆಚ್.ಎಂ.ಮಹೇಶ್ವರಯ್ಯ,ಎಂ.ಮಹೇಶ್ವರಯ್ಯ, ಸಂ. ಜಾನಪದ ಸಂವಹನ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೯೯
೧೯. ಎ.ಎಸ್. ಮೂರ್ತಿರಾವ್, ಡಿ.ವಿ.ಕೆ.ಮೂರ್ತಿ. ಕೃಷ್ಣಮೂರ್ತಿ ಸಂ. *ಸಾಹಿತ್ಯ ಮತ್ತು ನೃತ್ಯ*, ಮೈಸೂರು
೨೦. ರವೀಂದ್ರ ಕೊಪ್ಪರ, ಭಾರತೀಯ ಸಮಾಜದ ಅಧ್ಯಾಯನ, ೧೯೯೬
೨೧. ತೀ.ನಂ. ಶಂಕರ ನಾರಾಯಣ, ಕಾಡು ಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಂಗ, ಮೈಸೂರು ವಿಶ್ವ ವಿಧ್ಯಾಲಯ ೧೯೮೨
೨೨. ಚ.ನ. ಶಂಕರ್ ರಾವ್, ಭಾರತೀಯ ಸಮಾಜ, ಜೈಭಾರತ್ ಪ್ರಕಾಶನ, ಮಂಗಳೂರು ೧೯೯೫
೨೩. ಚ.ನ. ಶಂಕರ್‌ರಾವ್, ಭಾರತದ ಸಾಮಾಜಿಕ ಸಮಸ್ಯೆಗಳು, ಜೈಭಾರತ್ ಪ್ರಕಾಶನ, ಮಂಗಳೂರು ೧೯೯೫
೨೪. ಎಸ್.ಎಸ್.ಶಿವಣಶರಣ, ಜನಸಂಖ್ಯಾ ಸ್ಫೋಟ, ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ
೨೫. ಬಿ.ಶೇಷಾದ್ರಿ, ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರೀಕರಣ ಮತ್ತು ಜನಾಂದೋಲನ, ಪ್ರಸಾರಂಗ ಕನ್ನಡ ವಿಶ್ವವಿಧ್ಯಾಲಯ, ಹಂಪಿ, ೧೯೯೮
೨೬. ಬಿ. ಶೇಷಾದ್ರಿ, ಟಿ. ಆರ್. ಚಂದ್ರಶೇಖರ್,ಸಂ. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೮
೨೭. ಸವಿತಾ ನಾಯಕ, ಬುಡಕಟ್ಟು ಮಹಿಳೆಯರ ಪ್ರಸಾದನ ಕಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ ೨೦೦೦
೨೮. ಸುನಂದಮ್ಮ ಲಾವಣ್ಯ, ದಾಸ ಸಾಹಿತ್ಯದಲ್ಲಿ ಜಾನಪದ ಅಂಗಗಳು ಒಂದು ಅಧ್ಯಯನ, ಬೆಂಗಳೂರು ೧೯೯೪
೨೯. ಎಸ್.ಎಸ್. ಹಿರೇಮಠ, ಕರ್ನಾಟಕದಲ್ಲಿ ದಲಿತ ಸಂಸ್ಕೃತಿ ಪರಂಪರೆ ಭಾಗ ೨ ಜಾತ್ರೆಗಳು, ಸಮತಾ ಪ್ರಕಾಶನ, ಹೊಸಪೇಟೆ
೩೦. ಎಸ್.ಎಸ್.ಹಿರೇಮಠ, ಬಳ್ಳಾರಿ ಜಿಲ್ಲೆಯ ಆಧುನಿಕ ಸಾಹಿತ್ಯ, ಶ್ರೀ. ಸಿದ್ದವೀರ ಶಿವಾಚಾರ್ಯ ಜ್ಞಾನ ಪ್ರಕಾಶನ ಹೂವಿನ ಹಡಗಲಿ

ಇಂಗ್ಲೀಷ್ ಪುಸ್ತಕಗಳು

1. Henry Withhead: The Village Gods of South India, 1961
2. Elwin Verrier: The Religion of an India Tribe: Oxford university press, Bombay, 1955
3. W.T. Elmore: The Dravidian Gods in modern Hinduism, 1913
4. Encyclopaedia Britannica Vol-19, 1964
5. Nanjundiah H.V & Ananthakrishna Iyer, The Mysore Tribes and Caste: vol-1

❖❖❖❖❖

ವಕ್ತೃ ವಿವರ

ಪೂರ್ಣ ಹೆಸರು	ವಯಸ್ಸು	ವೃತ್ತಿ	ವಿಳಾಸ	ಸಂದರ್ಶನದ ದಿನಾಂಕ
೧. ಜಂಬಣ್ಣ	೪೦	ಕೂಲಿ ಕೆಲಸ ಮತ್ತು ಭಿಕ್ಷಾಟನೆ	ಜಂಬಣ್ಣ ತಂದೆ ಎಲ್ಲಪ್ಪ, ತೆಕ್ಕಲಕೋಟೆ ಬಳ್ಳಾರಿ ಜಿಲ್ಲೆ	೨೦.೧೧.೨೦೦೧
೨. ಶ್ರೀ ವೆಂಕಟಪ್ಪ	೬೦	ಭಿಕ್ಷಾಟನೆ	ಶ್ರೀವೆಂಕಟಪ್ಪ ದರ್ಗಾ ದೇವಸ್ಥಾನ ಹತ್ತಿರ ಕೂಡ್ಲಿಗಿ, ತಾ ಬಳ್ಳಾರಿ, ಜಿಲ್ಲೆ	೨೮.೧೦.೨೦೦೧
೩. ಹನುಮವ್ವ	೨೮	ಕೂಲಿ ಕೆಲಸ	ಹನುಮವ್ವ ದರ್ಗಾ ದೇವಸ್ಥಾನ ಹತ್ತಿರ ಕೂಡ್ಲಿಗಿ, ತಾ, ಬಳ್ಳಾರಿ, ಜಿಲ್ಲೆ	೨೮.೧೦.೨೦೦೧
೪. ಓಬಮ್ಮ	೧೨	ಕೂಲಿ ಕೆಲಸ	ಓಬಮ್ಮ ತಾಯಿ ಹನುಮವ್ವ ದರ್ಗಾ ದೇವಸ್ಥಾನ ಹತ್ತಿರ ಕೂಡ್ಲಿಗೆ, ತಾ ಬಳ್ಳಾರಿ, ಜಿಲ್ಲೆ	೨೮.೧೦.೨೦೦೧
೫. ನಾಗಪ್ಪ	೨೫	ಮೀನುಗಾರಿಕೆ	ನಾಗಪ್ಪ ತಂದೆ ಕಾಟಪ್ಪ ಎಂ.ಡಿ. ಕ್ಯಾಂಪ್, ಕಂಪ್ಲಿ ಹೊಸಪೇಟೆ ತಾ, ಬಳ್ಳಾರಿ, ಜಿಲ್ಲೆ	೩.೧೧.೨೦೦೧
೬. ಮಾರಮ್ಮ	೩೨	ಭಿಕ್ಷಾಟನೆ ಮತ್ತು ಕೂಲಿ ಕೆಲಸ	ಮಾರಮ್ಮ ತಾಯಿ ಮಾರಮ್ಮ ಶಿರಗೇರಿ, ಬಳ್ಳಾರಿ, ಜಿಲ್ಲೆ	೨೦.೧೧.೨೦೦೧

೭. ಯಲ್ಲಪ್ಪ	೩೦	ಮೀನುಗಾರಿಕೆ	ಯಲ್ಲಪ್ಪ ತಂದೆ ಜಂಬಣ್ಣ ಎಂ.ಡಿ.ಕ್ಯಾಂಪ್ ಕಂಪ್ಲಿ ಹೊಸಪೇಟೆ ತಾ, ಬಳ್ಳಾರಿ ಜಿಲ್ಲೆ	೨೬.೧.೨೦೦೨
೮. ಡಿ. ನಾಗಪ್ಪ	೩೦	ಮೀನುಗಾರಿಕೆ	ಡಿ.ನಾಗಪ್ಪ, ತಂದೆ ದುರುಗಪ್ಪ ಎಂ.ಡಿ. ಕ್ಯಾಂಪ್, ಕಂಪ್ಲಿ, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ	೨೬.೧.೨೦೦೧ ೨೬.೧.೨೦೦೨
೯. ಸಿಂಗಾರೆಪ್ಪ	೪೫	ಮೀನುಗಾರಿಕೆ	ಸಿಂಗಾರಪ್ಪ ತಂದೆ ರಾಜಣ್ಣ ರಾಜೇಶ್ವರಿ ನಗರ, ಬಳ್ಳಾರಿ	
೧೦. ಮಾರಕ್ಕ	೫೦	ಭಿಕ್ಷಾಟನೆ	ಮಾರಕ್ಕ ಗಂಡ ಶ್ರೀವೆಂಕಟಪ್ಪ ದರ್ಗಾ ಹತ್ತಿರ ದೇವಸ್ಥಾನ ಹತ್ತಿರ ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.	೨೬.೧.೨೦೦೨
೧೧. ಶ್ರೀನಿಂಗಪ್ಪ	೬೫	ಗಾಬಸಿಗಿಯುವುದು	ಶ್ರೀ ನಿಂಗಪ್ಪ ತಮ್ಮಲ ಹಳ್ಳಿ ಜಗಳೂರು ತಾ. ಚಿತ್ರದುರ್ಗ ಜಿಲ್ಲೆ	೨೩.೧.೨೦೦೨

ಕೋಷ್ಟಕಗಳು

ಕೋಷ್ಟಕ ೧

ದುರಗ ಮುರಗಿಯರ ನೆಲೆಗಳವಾರು ಜನಸಂಖ್ಯೆ ಮತ್ತು ವಯೋಗುಂಪುಗಳು

ವಯೋಗುಂಪುಗಳು

			ಜನಸಂಖ್ಯೆ			೦-೪			೫-೧೭			೧೮-೪೦			೪೦-೬೦			೬೧ರ ಮೇಲೆ		
ತಾಲ್ಲೂಕು	ನೆಲೆ	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧. ಬಳ್ಳಾರಿ	೧ ಬಳ್ಳಾರಿ	೧೮	೨೭	೩೩	೬೦	೫	೩	೮	೧೦	೧೫	೨೫	೧೭	೧೪	೩೧	೪	೧	೫	೧	೧	೨
೨. H.B.ಹಳ್ಳಿ	೨ H.B ಹಳ್ಳಿ	೨	೭	೪	೧೧	-	೧	೧	೪	-	೪	೩	೩	೬	-	-	-	-	-	-
೩. ಹೊಸಪೇಟೆ	೧ ಕಂಪ್ಲಿ	೩೬	೭೪	೫೮	೧೩೨	೧೫	೭	೨೨	೨೦	೧೫	೩೫	೩೧	೨೮	೫೯	೮	೭	೧೫	೧	೧	೨
	೨ ಕಮಲಾಪುರ	೩	೪	೮	೧೨	-	೧	೧	೧	೪	೫	೩	೩	೬	-	-	-	-	-	-
೪. ಕೂಡ್ಲಿಗಿ	೧ ಕೊಟ್ಟೂರು	೪	೧೩	೮	೨೧	೨	-	೨	೨	೪	೬	೧೦	೪	೧೪	೭	-	೭	-	-	-
	೨ ಕೂಡ್ಲಿಗಿ	೩	೮	೯	೧೭	-	-	-	೨	೪	೬	೧೦	೪	೧೪	೦೭	-	೭	-	-	-
೫. ಸಿರುಗುಪ್ಪ	೧ ತೆಕ್ಕಲಕೋಟೆ	೨೮	೫೪	೫೭	೧೧೧	೧೧	೧೦	೨೧	೧೧	೨೦	೩೧	೨೨	೨೧	೪೩	೪	೨	೬	೬	೪	೧೦
	೨ ಶಿರಿಗೇರಿ	೧೧	೩೧	೨೩	೫೪	೫	೬	೧೧	೧೪	೫	೧೪	೮	೮	೧೬	೪	೩	೭	-	೧	೧
	ಒಟ್ಟು	೧೦೮	೨೨೮	೨೦೦	೪೨೮	೩೮	೨೮	೬೬	೬೪	೬೭	೧೩೫	೯೪	೮೬	೧೮೯	೩೧	೧೩	೪೭	೦೮	೦೭	೧೫

ಕೋಷ್ಟಕ ೨

ದುರುಗ ಮುರಗಿಯರ ನೆಲೆಗಳ ವಾರು

ವೈವಾಹಿಕ ಸ್ಥಾನಮಾನ

ತಾಲ್ಲೂಕು	ನೆಲೆಗಳು	ಕುಟುಂಬ	ಅವಿವಾಹಿತರು ಗಂಡು	ಅವಿವಾಹಿತರು ಹೆಣ್ಣು	ಅವಿವಾಹಿತರು ಒಟ್ಟು	ವಿವಾಹಿತರು ಗಂಡು	ವಿವಾಹಿತರು ಹೆಣ್ಣು	ವಿವಾಹಿತರು ಒಟ್ಟು	ವಿಧವೆ / ವಿದುರರು ಗಂಡು	ವಿಧವೆ / ವಿದುರರು ಹೆಣ್ಣು	ವಿಧವೆ / ವಿದುರರು ಒಟ್ಟು
೧. ಬಳ್ಳಾರಿ	ಬಳ್ಳಾರಿ	೧೮	೨೦	೧೬	೩೬	೧೬	೧೬	೩೨	೧	೧	೨
೨. H.B.ಹಳ್ಳಿ	H.B.ಹಳ್ಳಿ	೨	೪	೧	೫	೩	೩	೬	-	-	-
೩. ಹೊಸಪೇಟೆ	೧. ಕಂಪ್ಲಿ	೩೯	೪೪	೨೩	೬೭	೨೮	೨೮	೫೬	೨	೫	೭
	೨. ಕಮಲಾಪುರ	೩	೨	೬	೮	೨	೨	೪	-	-	-
೪. ಕೂಡ್ಲಿಗಿ	೧. ಕೊಟ್ಟೂರು	೫	-	೫	೮	೮	೧೬	೨೪	-	-	-
	೨. ಕೂಡ್ಲಿಗಿ	೩	೫	೬	೧೧	೩	೩	೬	-	-	-
೫. ಸಿರುಗುಪ್ಪ	೧. ತೆಕ್ಕಲಕೋಟೆ	೨೮	೨೬	೩೦	೫೬	೨೭	೩೭	೫೪	೧	-	೧
	೨. ಶಿರಗೇರಿ	೧೧	೨೦	೧೧	೧೧	೧೧	೧೧	೨೨	೧	೧	೨
	ಒಟ್ಟು	೧೦೮	೧೨೬	೯೩	೨೧೯	೯೮	೯೮	೧೯೬	೪	೭	೧೨

ಕೋಷ್ಟಕ ೩

ದುರುಗ ಮುರಗಿಯರ ನೆಲೆಗಳವಾರು ಶೈಕ್ಷಣಿಕ ಮಟ್ಟ

		ಪ್ರಾಥಮಿಕ			ಮಾಧ್ಯಮಿಕ		
ತಾಲ್ಲೂಕು	ನಲೆ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಬಳ್ಳಾರಿ	ಬಳ್ಳಾರಿ	-	-	-	-	-	-
H.B.ಹಳ್ಳಿ	H.B. ಹಳ್ಳಿ	-	-	-	-	-	-
ಹೊಸಪೇಟೆ	೧. ಕಂಪ್ಲಿ	೧೫	೯	೨೪	-	-	
	೨. ಕಮಲಾಪುರ	-	೧	೧	-	೧	೧
ಕೂಡ್ಲಿಗಿ	೧. ಕೊಟ್ಟೂರು	-	-	-	-	-	-
	೨. ಕೂಡ್ಲಿಗಿ	-	-	-	-	-	-
ಸಿರುಗುಪ್ಪ	೧. ತೆಕ್ಕಲಕೋಟೆ	-	-	-	-	-	-
	೨. ಶಿರಗೇರಿ	-	-	-	-	-	-
	ಒಟ್ಟು	೧೫	೧೦	೨೫	-	೧	೧

ಕೊಷ್ಟಕ ೪

ಮರಗ ಮುರಗಿಯರು ನೆಲೆಗಳು ವಾರು ಸಾಕ್ಷರತೆಯ ಪ್ರಮಾಣ

ತಾಲ್ಲೂಕು	ನೆಲೆ	ಜನಸಂಖ್ಯೆ			೦-೪ ವಯೋಗುಂಪು			ಸಾಕ್ಷರವರು ಜನಸಂಖ್ಯೆ			ಸಾಕ್ಷರರು			ನಿರಕ್ಷರರು		
		M	F	T	M	F	T	M	F	T	M	F	T	M	F	T
೧. ಬಳ್ಳಾರಿ	೧. ಬಳ್ಳಾರಿ	೨೭	೩೩	೬೦	೫	೩	೮	೨೨	೩೦	೫೨	೨	-	೨	೨೨	-	೨೨
೨. H.B.ಹಳ್ಳಿ	೨. H.B.ಹಳ್ಳಿ	೭	೪	೧೧	-	೧	೧	೭	೩	೧೦	-	-	-	೭	೩	೧೦
೩. ಹೊಸಪೇಟೆ	೧. ಕಂಪ್ಲಿ	೬೪	೫೮	೧೨೨	೧೫	೭	೨೨	೬೪	೫೧	೧೧೫	೧೫	೯	೨೪	೪೯	೪೯	೯೧
	೨. ಕಮಲಾಪುರ	೪	೮	೧೨	-	೧	೧	೪	೭	೧೧	-	೨	೨	೪	೫	೯
೪. ಕೂಡ್ಲಿಗಿ	೧. ಕೊಟ್ಟೂರು	೧೩	೮	೨೧	೨		೨	೧೧	೮	೧೯	-	-	-	೧೧	೮	೧೯
	೨. ಕೂಡ್ಲಿಗಿ	೮	೯	೧೭	-	-	-	೮	೯	೧೭	-	-	-	೧೧	೮	೧೯
೫. ಸಿರುಗುಪ್ಪ	೧. ತೆಕ್ಕಲಕೋಟೆ	೫೪	೫೭	೧೧೧	೧೧	೧೦	೨೧	೪೫	೪೭	೯೨	-	-	-	೪೫	೪೭	೯೨
	೨. ಸಿರಗೇರಿ	೩೧	೨೩	೫೪	೫	೬	೧೧	೨೪	೧೭	೪೧	-	-	-	-	-	-
	ಒಟ್ಟು	೨೧೮	೧೯೬	೪೧೮	೩೮	೨೮	೬೬	೧೮೫	೨೭೨	೩೯೭	೧೫	೧೧	೨೬	೧೬೯	೧೨೦	೨೬೨

ಕೋಷ್ಟಕ ೫

ದುರುಗ ಮುರಗ ನೆಲೆಗಳವಾರು ಕುಲದೈವಗಳು

ಕುಲದೇವರುಗಳು

ತಾಲ್ಲೂಕು	ನೆಲೆ	ಕುಟುಂಬ	ಜಂಬಲಮ್ಮ	ಈರನಾಗಮ್ಮ	ಮುನಿಸ್ವಾಮಿ	ಚಾಮುಂಡಿ	ಮಾರಮ್ಮ
೧. ಬಳ್ಳಾರಿ	೧. ಬಳ್ಳಾರಿ	೧೮	೬	೧೨	-	-	-
೨. H.B.ಹ ಳ್ಳಿ	೧. H.B.ಹಳ್ಳಿ	೨	-	-	-	-	೨
೩. ಹೊಸಪೇಟೆ	೧. ಕಂಪ್ಲಿ	೩೯	೨೧	೧೧	೭	-	-
	೨. ಕಮಲಾಪುರ	೩	-	೩	-	-	-
೪. ಕೂಡ್ಲಿಗಿ	೧. ಕೊಟ್ಟೂರು	೪	-	-	-	-	೪
	೨. ಕೂಡ್ಲಿಗಿ	೩	-	-	-	-	೩
೫. ಸಿರುಗುಪ್ಪ	೧. ತೆಕ್ಕಲಕೋಟೆ	೨೮	-	೧೧	೧೭	-	-
	೨. ಶಿರಗೇರಿ	೧೧	೪	೫	೨	-	-
	ಒಟ್ಟು	೧೦೮	೩೧	೪೨	೨೬	-	೯

ಕೋಷ್ಟಕ ೬

ದುರುಗ ಮುರಗಿಯರ ನೆಲೆಗಳ ವಾರು ಕಸುಬುಗಳು

ತಾಲ್ಲೂಕುಗಳು	ನೆಲೆಗಳು	ಕುಟುಂಬಗಳು	ಕೃಷಿ ಕೂಲಿ			ಮೀನುಗಾರಿಕೆ			ಭಿಕ್ಷಾಟನೆ		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧. ಬಳ್ಳಾರಿ	೧. ಬಳ್ಳಾರಿ	೧೮	೩	-	೩	೧೮	೮	೨೯	-	-	-
೨. H.B. ಹಳ್ಳಿ	H.B. ಹಳ್ಳಿ	೨	-	-	-	-	-	-	೭	೩	೧೦
೩. ಹೊಸಪೇಟೆ	೧. ಕಂಪ್ಲಿ	೩೯	೫	೩	೮	೩೬	-	೫೨	-	-	-
	೨. ಕಮಲಾಪುರ	೩	-	-	-	೩	೨	೫	-	-	-
೪. ಕೂಡ್ಲಿಗಿ	೧. ಕೊಟ್ಟೂರು	೪	-	-	-	-	-	-	೧೦	೮	೧೮
	೨. ಕೂಡ್ಲಿಗಿ	೩	-	-	-	-	-	-	೮	೭	೧೫
೫. ಸಿರುಗುಪ್ಪ	೧. ತೆಕ್ಕಲಕೋಟೆ	೨೮	-	-	-	೩೪	೨೫	೫೯	-	-	-
	೨. ಸಿರಗೇರಿ	೧೧	೧	-	೧	೧೭	೬	೨೩	-	-	-
	ಒಟ್ಟು	೧೦೮	೯	೩	೧೨	೧೩೬	೪೧	೧೭೧	೨೫	೧೮	೪೩

ಕೋಷ್ಟಕ ೭


ದುರುಗ ಮುರಗಿಯರ ನೆಲಗಳ ವಾರು ಬೆಡಗುಗಳು

ತಾಲ್ಲೂಕು	ಗ್ರಾಮ	ಕುಟುಂಬ	ಪೆದ್ದದ್ಯಾಮನೋಳ್	ದ್ಯಾಮನೊರು	ರಾವಲೋಳ್	ಸಿಂದ್ಯಾಲೋಳ್	ಮಂಡಲೋರ್
೧. ಬಳ್ಳಾರಿ	ಬಳ್ಳಾರಿ	೧೮	-	೬	೧೨	-	-
೨. H.B.ಹ ಳ್ಳಿ	H.B.ಹ ಳ್ಳಿ	೨	೨೦	-	-	-	೨
೩. ಹೊಸಪೇಟೆ	೧. ಕಂಪ್ಲಿ	೩೯	-	-	೧೧	೮	-
	೨. ಕಮಲಾಪುರ	೩	-	-	೩	-	-
೪. ಕೂಡ್ಲಿಗಿ	೧. ಕೊಟ್ಟೂರು	೪	-	-	-	-	೪
	೨. ಕೂಡ್ಲಿಗಿ	೩	-	-	-	-	೩
೫. ಸಿರುಗುಪ್ಪ	೧. ತೆಕ್ಕಲಕೋಟೆ	೨೮	-	-	೧೧	೧೭	-
	೨. ಸಿರಗೇರಿ	೧೧	-	೪	೫	೨	-
	ಒಟ್ಟು	೧೦೮	೨೦	೧೦	೪೨	೨೭	೯

ಕೋಷ್ಟಕ ೮

ವಸತಿ ಮಾದರಿ

ತಾಲ್ಲೂಕು	ನೆಲೆ	ಕುಟುಂಬ	ಗುಡಾರ	ಗುಡಿಸಲು	ಸರ್ಕಾರಿ ಮನೆ
೧. ಬಳ್ಳಾರಿ	ಬಳ್ಳಾರಿ	೧೮	೧೭	೧	-
೨. H.B.ಹ ಳ್ಳಿ	H.B.ಹ ಳ್ಳಿ	೨	೨	-	-
೩. ಹೊಸಪೇಟೆ	೧. ಕಂಪ್ಲಿ	೩೯	೧೨	-	೨೭
	೨. ಕಮಲಾಪುರ	೩		೨	೧
೪. ಕೂಡ್ಲಗಿ	೧. ಕೊಟ್ಟೂರು	೪	೪	-	-
	೨. ಕೂಡ್ಲಿಗಿ	೩	೩	-	-
೫. ಸಿರುಗುಪ್ಪ	೧. ತೆಕ್ಕಲಕೋಟೆ	೨೮	೨೮	-	-
	೨. ಸಿರಗೇರಿ	೧೧	೧೧	-	-
	ಒಟ್ಟು	೧೦೮	೭೮	೩	೨೮



೧. ಬಳ್ಳಾರಿ ಕನಕ ದುರ್ಗಮ್ಮ



೨. ಸಿಂಗಾರೆಪ್ಪನ ಸಂದರ್ಶನ (೧ : ೧)



೬.. ವೆಂಕಟಪ್ಪ ಸಂತೆ ದಿವಸ ಭಿಕ್ಷೆಗೆ ಹೊರಟಿರುವುದು. ಕೂಡ್ಲಿಗಿ (೧ : ೨)



೪. ಗಾವು ಸಿಗಿಯುವ ಪೋತರಾಜರು ಗಂಗಾ ಹೊಳೆಯಲ್ಲಿ ಪೂಜೆ ಮಾಡುತ್ತಿರುವುದು. ಕುರಿಹಟ್ಟಿ ಗ್ರಾಮ ಕೂಡ್ಲಿಗಿ
(ತಾ) (೧ : ೬)



೫. ಮಾರಮ್ಮ ದೇವಿಯ ಎದುರುಗಡೆ ಮೇಕೆ ಕಿವಿಯಲ್ಲಿ ಗಾಳಿ ಊದುವುದು. ಕುರಿಹಟ್ಟಿ (೧ : ೪)



೬. ಗಾಳಿ ಊದಿದ ನಂತರ ಮೇಕೆಯು ಎಚ್ಚರ ತಪ್ಪಿರುವುದು. ಕುರಿಹಟ್ಟಿ ಗ್ರಾಮ (೧ : ೫)



೭. ಪೋತರಾಜ ಭರಮಪ್ಪ ಹಲ್ಲಿನಿಂದ ಮೊದಲು ಮೇಕೆಯ ಚರ್ಮ ಕೀಳುತ್ತಿರುವುದು. ಕುರಿಹಟ್ಟಿ ಗ್ರಾಮ (೧ : ೬)



೮. ಮೇಕೆಯ ಹಸಿ ಮಾಂಸವನ್ನು ಬಿಳಿ ವಸ್ತ್ರದಲ್ಲಿ ಹಾಕುತ್ತಿರುವುದು. ಕುರಿಹಟ್ಟಿ ಗ್ರಾಮ (೧ : ೭)



೯. ಗಾವು ಸಿಗದ ನಂತರ ಗಡಿಗೆಯಲ್ಲಿ ಅಮೃತರಸ ಕುಡಿಯುತ್ತಿರುವುದು (೧ : ೮)



೧೦. ಶಾಲೆ ಕಟ್ಟೆ ಮೇಲೆ ಗುಡಾರ ನಿವಾಸಿಗಳ ಸಂಘದ ಬಗ್ಗೆ ಸಮಾಲೋಚನೆಯಲ್ಲಿ ತೊಡಗಿರುವ ಡಾ.ಕೆ.ಎಂ.ಮೈತ್ರಿ (ಕ.ವಿ.ಹ) ಕಂಪ್ಲಿ (೨ : ೧)



೧೧. ಗುಡಾರದ ಕುಲದೇವರಗಳು. ಕಂಪ್ಲಿ (೨ : ೨)



೧೨. ಊರನಾಗಮ್ಮ ಹಾಗೂ ಪೋತರಾಜನ ಮುಖವಾಡ. ಶಿರಗೇರಿ (೨ : ೩)



೧೩. ಸಂತೆ ದಿವಸ ಸಣ್ಣ ಮಕ್ಕಳು ಬುರ್ರ ಬುರ್ರ ವಾದ್ಯ ಹಾಗೂ ಹಲಿಗೆಯನ್ನು ಬಾರಿಸುತ್ತಿರುವುದು. ಕೂಡ್ಲಿಗಿ (೨: ೪)



೧೪. ರಾಜಣ್ಣ ದುರಗಮುರಗಿ ತನ್ನ ಹೆಂಡತಿಯೊಂದಿಗೆ ನರ್ತಿಸುತ್ತಿರುವುದು. ಕಮಲಾಪುರ (೨ : ೫)



೧೫. ಭಿಕ್ಷೆ ಸ್ವೀಕರಿಸುತ್ತಿರುವ ನಾಗಪ್ಪ. ಕಂಪ್ಲಿ (೨ : ೬)



೧೬. ಭಿಕ್ಷಾಟನೆಯಲ್ಲಿ ತೊಡಗಿರುವ ಸಣ್ಣ ಮಕ್ಕಳು. ಶಿರಗೇರಿ (೨ : ೭)



೧೭. ಭಿಕ್ಷೆಗೆ ಸಜ್ಜುಗೊಂಡ ದುರಗಮುರಗಿಯರು. ತೆಕ್ಕಲಕೋಟೆ (೨ : ೮)



೧೮. ಸಂತೆ ದಿವಸ ಬಲಗೈ ಕೊಯ್ದುಕೊಂಡು ರಕ್ತ ಚಿಮ್ಮಿಸಿ ಭಿಕ್ಷೆ ಬೇಡುವ ಭಂಗಿ. ಕೂಡ್ಲಿಗಿ (೨ : ೯)



೧೯. ಮೊರದಲ್ಲಿನ ಗಾಜಿನ ಬಳೆಗಳು ಹಾಗೂ ಚಾಕು. ಕೂಡ್ಲಿಗಿ (೨ : ೧೦)



೨೦. ಮಹಿಳೆಯರು ಮೇಕೆಗಳನ್ನ ಸಾಗಿಸುತ್ತಿರುವುದು. ಬಳ್ಳಾರಿ (೨ : ೧೧)



೨೧. ಕೊಡಪಾನ ವ್ಯಾಪಾರ ಮಾಡುತ್ತಿರುವ ಬಾಲಕ. ಕಂಪ್ಲಿ (೨ : ೧೨)



೨೨. ಬೇಟೆಯಾಡಿದ ಅಡವಿ ಬೆಕ್ಕಿನ ಮಾಂಸ. ಕಮಲಾಪುರ (೨ : ೧೩)



೨೩. ಮೀನುಗಾರಿಕೆಯನ್ನ ಅವಲಂಬಿಸಿರುವ ದುರುಗಮುರಗಿ ಸಮುದಾಯದವರು. ತೆಕ್ಕಲಕೋಟೆ (೨ : ೧೪)



೨೪. ಬಳ್ಳಾರಿ ಜಿಲ್ಲೆಯ ಗುಡಾರ ಗುಡಿಸಿ ನಿವಾಸಿಗಳ ಕಲ್ಯಾಣ ಸಂಘದ ಅಧ್ಯಕ್ಷರಾದ ಶ್ರೀ ಮಾಧವ್‌ರಾವ್ ಹಾಗೂ ಕಾರ್ಯಕಾರಿ ಮಂಡಳಿ ಸದಸ್ಯರು. ಕಂಪ್ಲಿ (೨ : ೧೫)



೨೫. ನ್ಯಾಯ ಪಂಚಾಯ್ತಿ ಕಟ್ಟೆ. ಕಂಪ್ಲಿ (೩ : ೧)



೨೬. ಪಂಚಾಯ್ತಿ ಮಾಡುವ ಮುಖ್ಯಸ್ಥ ಸಿಂಗಾರೆಪ್ಪ ತಾಯಿಯೊಂದಿಗೆ (೩ : ೨)



೨೭. ಪಂಚಾಯ್ತಿ ಮಾಡುವ ಮುಖ್ಯಸ್ಥ ಮಾರಣ್ಣ ಹಾಗೂ ಮಕ್ಕಳು. ಶಿರಗೇರಿ (೩ : ೩)



೨೮. ಹುಚ್ಚುನಾಯಿ ಕಡಿತಕ್ಕೆ ಕೋರಿಹುಳದಿಂದ ತಯಾರಿಸಿದ ಔಷಧಿ. ಕಂಪ್ಲಿ (೫ : ೧)